

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

LBA

ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ

2026-27

Learning outcomes Based Assessment (LBA) Question Bank

ವಿಷಯ : ಪ್ರಥಮ ಭಾಷೆ ಕನ್ನಡ

ತರಗತಿ : 10

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ.
ಬನಶಂಕರಿ 3ನೇ ಹಂತ, ಬೆಂಗಳೂರು - 560085
ಮತ್ತು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಹಾವೇರಿ

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ

Learning outcomes Based Assessment (LBA) Question Bank

2026-27

ವಿಷಯ : ಪ್ರಥಮ ಭಾಷೆ ಕನ್ನಡ

ತರಗತಿ : 10

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ.

ಬನಶಂಕರಿ 3ನೇ ಹಂತ, ಬೆಂಗಳೂರು - 560085

ಮತ್ತು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಹಾವೇರಿ

ಪರಿಕಲ್ಪನೆ ಮತ್ತು ಮಾರ್ಗದರ್ಶನ /

Concept and Guidance

ಶ್ರೀಮತಿ ರಶ್ಮಿ ಮಹೇಶ್. ವಿ. ಭಾ. ಆ. ಸೇ

ಅಪರ ಮುಖ್ಯ ಕಾರ್ಯದರ್ಶಿಗಳು,

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಶ್ರೀಮತಿ ಡಾ. ಕೆ. ವಿದ್ಯಾಕುಮಾರಿ, ಭಾ.ಆ.ಸೇ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು	**ಶ್ರೀಮತಿ ಅನಿತಾ ನಾಜರೆ** ನಿರ್ದೇಶಕರು DSERT, ಬೆಂಗಳೂರು

ಡಯಟ್ ಸಹಕಾರ / DIET CO-OPERATION

ಶ್ರೀ ಝಡ್. ಎಂ. ಖಾಜಿ ಪ್ರಾಂಶುಪಾಲರು ಡಯಟ್ ಹಾವೇರಿ	**ಶ್ರೀ ಬಾಬು ಸುಣಗಾರ** ಉಪನ್ಯಾಸಕರು ಮತ್ತು ನೋಡಲ್ ಅಧಿಕಾರಿ ಡಯಟ್ ಹಾವೇರಿ

ಸಂಯೋಜನೆ / CO-ORDINATION

ಶ್ರೀಮತಿ ರಾಧಾ P.

ಹಿರಿಯ ಸಹಾಯಕ ನಿರ್ದೇಶಕರು

DSERT, ಬೆಂಗಳೂರು

ರಚನಾ ಸಂಪನ್ಮೂಲ ತಂಡ	ಪರಿಷ್ಕರಣಾ ಸಂಪನ್ಮೂಲ ತಂಡ
1. ಶ್ರೀ ಪಂಚಾಕ್ಷರಿ ಮೂರಮಟ್ಟಿ ಸರ್ಕಾರಿ ಪ್ರೌಢಶಾಲೆ ಚಿಕ್ಕಲಿಂಗದಹಳ್ಳಿ ತಾ. ಹಾವೇರಿ **2. ಶ್ರೀ ಸಿ.ಎಂ ಮಾರೇರ** ಸರ್ಕಾರಿ ಪ್ರೌಢಶಾಲೆ ನೆಲೋಗಲ್ಲ ತಾ. ಹಾವೇರಿ **3. ಶ್ರೀಮತಿ ಶಶಿಕಲಾ ಹೊಸಳ್ಳಿ** ಸರ್ಕಾರಿ ಪ್ರೌಢಶಾಲೆ ಹಳೇಮನ್ನಂಗಿ ತಾ. ಸವಣೂರ **4. ಶ್ರೀ ಯಲ್ಲಪ್ಪ ಮಳಲಿ** ಸರ್ಕಾರಿ ಪ್ರೌಢಶಾಲೆಚಲ್ಲಾಳ ತಾ. ಸವಣೂರ **5. ಶ್ರೀ ನಾಗರಾಜ ಪುರದ** ಸರ್ಕಾರಿ ಪ್ರೌಢಶಾಲೆ ದೂದಿಹಳ್ಳಿ ತಾ. ಹಿರೇಕೆರೂರ **6. ಶ್ರೀ ಸಿದ್ದೇಶ್ವರ ಅಂಬೀಗೇರ** ಸರ್ಕಾರಿ ಪ್ರೌಢಶಾಲೆ ಕುಳೆನೂರ ತಾ. ಹಾವೇರಿ **7. ಶಂಕರ ಹಾರನಹಳ್ಳಿ** ಸರ್ಕಾರಿ ಪ್ರೌಢಶಾಲೆ ಕಳ್ಳಿಹಾಳ ತಾ. ಹಾವೇರಿ **8. ಶ್ರೀ ಕೊಟ್ರೇಶ ಕುಂದೂರ** ಸರ್ಕಾರಿ ಉನ್ನತೀಕರಿಸಿದ ಶಾಲೆ ಹಳೇಬಂಕಾಪೂರ **9. ಶ್ರೀ ಪ್ರಭು ಬಂಗೇರ** ಸರ್ಕಾರಿ ಪ್ರೌಢಶಾಲೆ ಹಿರೇಮಣಕಟ್ಟಿ ತಾ. ಶಿಗ್ಗಾಂವ **10. ಶ್ರೀ ಪ್ರಕಾಶ ಚಿಕ್ಕೇರಿ** ಸರ್ಕಾರಿ ಪ್ರೌಢಶಾಲೆ ವರ್ದಿ ತಾ. ಹಾನಗಲ್ಲ **11. ಶ್ರೀ ಎಸ್. ಪಿ. ಮಠದ** ಎಸ್. ವ್ಹಿ. ಎಚ್. ಎಸ್. ಚಿಕ್ಕಬಾಸೂರ ತಾ. ಬ್ಯಾಡಗಿ **12. ಶ್ರೀ ನಿಂಗನಗೌಡ ಪಾಟೀಲ** ಸರ್ಕಾರಿ ಪ್ರೌಢಶಾಲೆ ಹನುಮಾಪೂರ ತಾ. ರಾಣೇಬೆನ್ನೂರ	**1 ಶ್ರೀ ಸಿ. ಎಂ. ಮಾರೇರ** ಸರ್ಕಾರಿ ಪ್ರೌಢಶಾಲೆ ನೆಲೋಗಲ್ಲ. ಹಾವೇರಿ **2. ಶ್ರೀ ಸಿದ್ದೇಶ್ವರ ಅಂಬಿಗೇರ** ಸರ್ಕಾರಿ ಪ್ರೌಢಶಾಲೆ ಕುಳೇನೂರ. ಹಾವೇರಿ
ಮಾರ್ಗದರ್ಶಕರು/ MENTORS	**ಪರಿಶೀಲಕರು/ REVIEWERS**
1. ಶ್ರೀ ನಿರಂಜನ ಗುಡಿ ರಾಜ್ಯ ಸಂಪನ್ಮೂಲ ಕನ್ನಡ ಭಾಷಾ ಶಿಕ್ಷಕರು ಜನತಾ ಬಾಲಿಕೆಯರ ಪ್ರೌಢಶಾಲೆ ಹಾನಗಲ್ಲ. ಹಾವೇರಿ ಜಿಲ್ಲೆ **2. ಶ್ರೀಮತಿ ಆಶಾ ಕೆ.ಸಿ** ರಾಜ್ಯ ಸಂಪನ್ಮೂಲ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಸಂಯುಕ್ತ ಪ್ರೌಢಶಾಲೆ ಜಕ್ಕೂರು. ಉತ್ತರ ವಲಯ 4. ಬೆಂಗಳೂರು ಉತ್ತರ ಜಿಲ್ಲೆ	**1. ಶ್ರೀ ನಿರಂಜನ ಗುಡಿ** ರಾಜ್ಯ ಸಂಪನ್ಮೂಲ ಕನ್ನಡ ಭಾಷಾ ಶಿಕ್ಷಕರು ಜನತಾ ಬಾಲಿಕೆಯರ ಪ್ರೌಢಶಾಲೆ ಹಾನಗಲ್ಲ. ಹಾವೇರಿ ಜಿಲ್ಲೆ **2. ಶ್ರೀಮತಿ ಆಶಾ ಕೆ. ಸಿ.** ರಾಜ್ಯ ಸಂಪನ್ಮೂಲ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಸಂಯುಕ್ತ ಪ್ರೌಢಶಾಲೆ ಜಕ್ಕೂರು. ಉತ್ತರ ವಲಯ 4. ಬೆಂಗಳೂರು ಉತ್ತರ ಜಿಲ್ಲೆ

3. ಮುನ್ನುಡಿ

ಶುಭಹಾರೈಕೆ

'ಬದಲಾವಣೆಯ ಶಿಕ್ಷಣ, ಭವಿಷ್ಯದ ನಿರ್ಮಾಣ'

ಜಗತ್ತು ನಿತ್ಯ ಪರಿವರ್ತನಾಶೀಲವಾದದ್ದು, ಇಂದು ನಾವು ಮಕ್ಕಳಿಗೆ 21ನೇ ಶತಮಾನದ ಕೌಶಲಗಳನ್ನು ಗಳಿಸಿಕೊಳ್ಳುವಂತೆ ಮಾಡುವ ಮೂಲಕ ಚೈತನ್ಯಶೀಲ ಸಮಾಜ ನಿರ್ಮಾಣ ಮಾಡುವ ಜವಾಬ್ದಾರಿ ನಮ್ಮದಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಯ ಬದುಕಿನಲ್ಲಿ ಭಾಷಾ ಕಲಿಕೆ ಮಹತ್ತ್ವದ ಪಾತ್ರ ವಹಿಸುತ್ತದೆ. ಭಾಷಾ ಕಲಿಕೆಯು ಕೇವಲ ಹೊಸ ಶಬ್ದಗಳನ್ನು ಮತ್ತು ವ್ಯಾಕರಣ ನಿಯಮಗಳನ್ನು ಕಲಿಯುವುದಷ್ಟೇ ಅಲ್ಲ, ಅದು ಜನಜೀವನ ಮತ್ತು ಸಂಸ್ಕೃತಿ ಹಾಗೂ ಮೌಲ್ಯಗಳನ್ನು ಬೆಸೆಯುವ ಕೊಂಡಿಯಾಗಿದೆ. ಅಷ್ಟೇ ಅಲ್ಲದೇ ಅದು ಒಂದು ಹೊಸ ಸಂಸ್ಕೃತಿ, ಆಲೋಚನಾ ಶೈಲಿ ಮತ್ತು ಜೀವನದ ಹೊಸ ದೃಷ್ಟಿಕೋನವನ್ನು ಪಡೆದುಕೊಳ್ಳುವ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ವಿಮರ್ಶಾತ್ಮಕ ಚಿಂತನೆ, ಸೃಜನಾತ್ಮಕ ಅಭಿವ್ಯಕ್ತಿ, ಉತ್ತಮ ಸಂವಹನ ಕೌಶಲ ಹಾಗೂ ಜೀವನ ಕೌಶಲಗಳನ್ನು ಗಳಿಸಿಕೊಳ್ಳುವುದಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡಬೇಕಿದೆ. ಅಲ್ಲದೇ, ಈ ಕಲಿಕೆಯ ಪಯಣದಲ್ಲಿ ಭಾಷಾ ಕೌಶಲಗಳು ಹಾಗೂ ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳು ಗಳಿಸಿಕೊಂಡಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು ಕೂಡ ಬಹಳ ಮುಖ್ಯ.

ಈ ನಿಟ್ಟಿನಲ್ಲಿ 2026–27ನೇ ಶೈಕ್ಷಣಿಕ ವರ್ಷದಲ್ಲಿ '**ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿ**' ಯನ್ನು ರಚಿಸಲಾಗಿದೆ. ವಿದ್ಯಾರ್ಥಿಯ ಭಾಷಾ ಗ್ರಹಿಕೆ, ಕಲಿಕೆ, ಬಳಕೆ, ಚಿಂತನೆ ಎಂಬುದರ ಹಿಂದಿರುವ ಮೂಲಭೂತ ಆಲೋಚನೆಗಳು ಮತ್ತು ಸಿದ್ಧಾಂತಗಳನ್ನು ಅವಲೋಕಿಸಿ, ಭಾಷಾ ಪಠ್ಯಕ್ರಮದ ಗುರಿಗಳು, ಸಾಮರ್ಥ್ಯಗಳು ಹಾಗೂ ಕಲಿಕಾಫಲಗಳನ್ನು ಆಧರಿಸಿದಂತೆ ತರಗತಿವಾರು, ಪ್ರಸ್ತುತ ಉಪಕ್ರಮವನ್ನು ಯೋಜಿಸಲಾಗಿದೆ.

ಸದರಿ ಉಪಕ್ರಮದಲ್ಲಿ ಪರಿಕಲ್ಪನಾ ತಿಳಿವಳಿಕೆ, ಭಾಷಾ ಪ್ರಾವೀಣ್ಯತೆ, ಮೌಲ್ಯ ಆಧಾರಿತ ಪ್ರಶ್ನೆಗಳು ಮತ್ತು ಸ್ಥಳೀಯ ಸನ್ನಿವೇಶಕ್ಕೆ ವಿಶೇಷ ಒತ್ತು ನೀಡಲಾಗಿದೆ. ಇದರಿಂದ ವಿದ್ಯಾರ್ಥಿಗಳು ಸಹಾನುಭೂತಿ, ಪ್ರಾಮಾಣಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯೊಂದಿಗೆ ಜ್ಞಾನವನ್ನು ಅನ್ವಯಿಸಲು ಕಲಿಯುತ್ತಾರೆ. ಈ ಸಂಪನ್ಮೂಲವು ಸ್ವ-ಮೌಲ್ಯಮಾಪನ ಮತ್ತು ತರಗತಿ ಅಭ್ಯಾಸಕ್ಕೆ ಪ್ರಮುಖ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಭಾಷಾ ಕಲಿಕೆಯು ಸಂವಹನದ ಗಡಿಗಳನ್ನು ಮೀರಿ, ವ್ಯಕ್ತಿಯ ವ್ಯಕ್ತಿತ್ವವನ್ನು ವಿಕಸನಗೊಳಿಸುವ ಮತ್ತು ಜಗತ್ತನ್ನು ವಿಶಾಲ ಮನೋಭಾವದಿಂದ ನೋಡಲು ನೆರವಾಗುವ ಅತ್ಯುತ್ತಮ ದೃಷ್ಟಿಕೋನವನ್ನು ಒದಗಿಸುತ್ತದೆ.

ವಿದ್ಯಾರ್ಥಿಗಳಲ್ಲಿ ಭಾಷಾ ಕೌಶಲಗಳನ್ನು ಸಮರ್ಥವಾಗಿ ಅಭಿವೃದ್ಧಿಪಡಿಸುವುದಕ್ಕಾಗಿ ಇಲ್ಲಿ ಸೂಚಿಸಿರುವ ಚಟುವಟಿಕೆಗಳು ಹಾಗೂ ಪ್ರಶ್ನೆಗಳನ್ನು ಕಲಿಕಾ ಫಲಗಳಿಗೆ ಆಧರಿಸಿ ಪ್ರತೀ ಅಧ್ಯಾಯಕ್ಕೂ ರೂಪಿಸಿದ್ದು, ಶಿಕ್ಷಕರು ಇವುಗಳ ತಾತ್ತ್ವಿಕತೆಯನ್ನು ಅರ್ಥೈಸಿಕೊಂಡು ಪರಿಣಾಮಕಾರಿಯಾಗಿ ತರಗತಿ ಪ್ರಕ್ರಿಯೆ ಮತ್ತು ಮೌಲ್ಯಾಂಕನ ಪ್ರಕ್ರಿಯೆ ನಿರ್ವಹಿಸಲು ಸಹಕಾರಿಯಾಗುತ್ತವೆ. ಈ ಪ್ರಶ್ನೆಕೋಠಿಯನ್ನು ಶಿಕ್ಷಕರು ತರಗತಿ ಪ್ರಕ್ರಿಯೆಯಲ್ಲಿ ಹಾಗೂ ಮೌಲ್ಯಮಾಪನದಲ್ಲಿ ಹಂತ-ಹಂತವಾಗಿ ನಿರಂತರವಾಗಿ (CCE) ಬಳಸಬೇಕಾಗುತ್ತದೆ.

ಈ ಮೂಲಕ ಭಾಷೆಯನ್ನು ಕುರಿತು ವಿದ್ಯಾರ್ಥಿಗಳಲ್ಲಿ ಆಸಕ್ತಿ, ಆತ್ಮವಿಶ್ವಾಸ ಮತ್ತು ಭಾಷಾ ಬಳಕೆಯ ಗುಣಮಟ್ಟವನ್ನು ಇನ್ನಷ್ಟು ವೃದ್ಧಿಸಲಿ ಎಂಬುದು ನಮ್ಮ ಹಾರೈಕೆ. ಈ ಉಪಕ್ರಮವನ್ನು ಅಭಿವೃದ್ಧಿಪಡಿಸಲು ಸಹಕರಿಸಿದ ಪಠ್ಯಕ್ರಮ ತಜ್ಞರು, ವಿಷಯ ತಜ್ಞರು, DIET ಬೋಧಕವರ್ಗ ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ, ಬೆಂಗಳೂರು

4. ಶಿಕ್ಷಕರಿಗೆ ಮಾರ್ಗದರ್ಶನ / Guidance for Teachers

1. ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಇಲಾಖೆಯ ಎಲ್ಲಾ ಹಂತದ ಅನುಷ್ಠಾನಾಧಿಕಾರಿಗಳು ಮೊದಲಿಗೆ ಪಠ್ಯಕ್ರಮದ ಗುರಿಗಳು, ಸಾಮರ್ಥ್ಯಗಳು ಮತ್ತು ಕಲಿಕಾಫಲಗಳ ಬಗ್ಗೆ ಸ್ಪಷ್ಟವಾಗಿ ಅರಿತುಕೊಳ್ಳಬೇಕು.
2. ಮಕ್ಕಳು ಆಯಾ ತರಗತಿ ಹಾಗೂ ವಿಷಯವಾರು ಸಾಧಿಸಬೇಕಾದ ಕಲಿಕಾಫಲಗಳಿಗೆ ಪೂರಕವಾಗಿ ಇಲ್ಲಿ ಚಟುವಟಿಕೆಗಳು ಹಾಗೂ ಪ್ರಶ್ನೆಗಳನ್ನು ನೀಡಲಾಗಿದೆ. ಶಿಕ್ಷಕರು ತಮ್ಮ ತರಗತಿ ಪ್ರಕ್ರಿಯೆಯಲ್ಲಿ ಮಕ್ಕಳು ಕಲಿಕಾಫಲಗಳನ್ನು ಸಾಧಿಸಲು ಪೂರಕವಾಗಿ ಇವುಗಳನ್ನು ಸಂದರ್ಭೋಚಿತವಾಗಿ ಬಳಸುವುದು.
3. ತರಗತಿ ಪ್ರಕ್ರಿಯೆಯಲ್ಲಿ ಹಂತ ಹಂತವಾಗಿ ಕಲಿಕಾಫಲ ಆಧಾರಿತ ಚಟುವಟಿಕೆಗಳನ್ನು ಬಳಸುವ ಮೂಲಕ ಮಕ್ಕಳನ್ನು ತೊಡಗಿಸಿಕೊಳ್ಳುವುದು ಹಾಗೂ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕಲಿಕಾಫಲ ಆಧಾರಿತ ಪ್ರಶ್ನಾಕೋಠಿಯಲ್ಲಿ ನೀಡಿರುವ ಪ್ರಶ್ನೆಗಳನ್ನು ಅವಶ್ಯಕತೆಗಳಿಗನುಗುಣವಾಗಿ ಅಭ್ಯಾಸ ಮಾಡಿಸುವುದು.
4. ವಿದ್ಯಾರ್ಥಿಗಳ ಕಲಿಕಾ ಅಂತರವನ್ನು ಗುರುತಿಸಿ ಸೂಕ್ತ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ತರಗತಿ ನಿರ್ದಿಷ್ಟ ಕಲಿಕೆಗೆ ಅಗತ್ಯ ಕ್ರಮವಹಿಸುವುದು.
5. ಪ್ರಶ್ನೆಕೋಠಿಯು ಜ್ಞಾನ, ಗ್ರಹಿಕೆ, ಅನ್ವಯ, ಅಭಿವ್ಯಕ್ತಿ, ಪ್ರಶಂಸೆ, ವಿಮರ್ಶಾತ್ಮಕತೆ ಹಾಗೂ ಹೈಯರ್ ಆರ್ಡರ್ ಪ್ರಶ್ನೆಗಳನ್ನು ಒಳಗೊಂಡಿದೆ. ಹೈಯರ್ ಆರ್ಡರ್ ಪ್ರಶ್ನೆಗಳು ಹೋಲಿಕೆ, ಸಾಮ್ಯತೆ ಮತ್ತು ವ್ಯತ್ಯಾಸ, ವಿಶ್ಲೇಷಣಾ ಸಾಮರ್ಥ್ಯ, ಮೌಲ್ಯಮಾಪನ ಮತ್ತು ಸೃಜನಶೀಲತೆಯಂತಹ ಆಯಾಮಗಳನ್ನು ಒಳಗೊಂಡಿರುತ್ತದೆ.
6. ಕೇವಲ ಅಂಕಗಳನ್ನು ನಮೂದಿಸುವುದಕ್ಕಾಗಿ, ಅಥವಾ ಪಠ್ಯವಸ್ತುವನ್ನು ಪೂರ್ಣಗೊಳಿಸುವುದಕ್ಕಾಗಿ ಕಲಿಕಾ ಫಲಾಧಾರಿತ ಮೌಲ್ಯಾಂಕನವನ್ನು ಜಾರಿಗೊಳಿಸದೇ, ವಿದ್ಯಾರ್ಥಿಗಳ ಸಾಮರ್ಥ್ಯ ವೃದ್ಧಿಗಾಗಿ ಹಾಗೂ ಕೌಶಲಗಳ ಪ್ರಾಪ್ತಿಗಾಗಿ ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನಾಕೋಠಿಯನ್ನು ಪರಿಣಾಮಕಾರಿಯಾಗಿ ಬಳಕೆ ಮಾಡುವುದು.
7. ಶಿಕ್ಷಕರು ಎಲ್ಲಾ ವಿಷಯಗಳಲ್ಲೂ ನಿಗದಿತ ಸಾಮರ್ಥ್ಯಗಳಿಸುವುದಕ್ಕಾಗಿ ಕಲಿಕಾನುಭವಗಳನ್ನು ನೀಡುವ ಹಾಗೂ ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಸಹಕರಿಸುವ ನಿಟ್ಟಿನಲ್ಲಿ ಚಿಂತಿಸಿ ಈ ಶೈಕ್ಷಣಿಕ ಉಪಕ್ರಮವನ್ನು ಕಾರ್ಯಗತಗೊಳಿಸಬೇಕಿದೆ.
8. ಆಯಾಯ ತರಗತಿಯಲ್ಲಿ ಕಲಿಕೆಯನ್ನು ಅನುಕೂಲಿಸುತ್ತಿರುವ ವಿಷಯವಾರು ಶಿಕ್ಷಕರು ತಮ್ಮ ತಮ್ಮ ವಿಷಯಗಳ ಪ್ರಶ್ನಾಕೋಠಿಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡು ಮಕ್ಕಳಲ್ಲಿ ಅಪೇಕ್ಷಿತ ಕಲಿಕಾಫಲಗಳ ಸಾಧನೆಗಾಗಿ ಶ್ರಮಿಸುವುದು.
9. ಇಲಾಖೆಯ Website ನಲ್ಲಿ ಲಭ್ಯವಿರುವ ಕಲಿಕಾಫಲ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿಯನ್ನು ಕೂಲಂಕಷವಾಗಿ ಅವಲೋಕಿಸುವುದು ಹಾಗೂ ಅವುಗಳನ್ನು ಕಲಿಕೆಯಲ್ಲಿ ಪರಿಣಾಮಕಾರಿಯಾಗಿ ಬಳಸುವುದು.
10. ಪ್ರಶ್ನೆಕೋಠಿಯನ್ನು ತರಗತಿ ಪ್ರಕ್ರಿಯೆ, ಮೌಲ್ಯಾಂಕನ, ಮೌಲ್ಯಮಾಪನ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ಬಳಸುವುದು ಹಾಗೂ ಮಾಹಿತಿಯನ್ನು SATSನಲ್ಲಿ ಕಾಲಕಾಲಕ್ಕೆ ಇಂದೀಕರಿಸುವುದು.

11. LBA, ರೂಪಣಾತ್ಮಕ ಮೌಲ್ಯಾಂಕನ, ಸಂಕಲನಾತ್ಮಕ ಮೌಲ್ಯಮಾಪನ ಹಾಗೂ ಇತರೆ ಪರೀಕ್ಷೆಗಳಲ್ಲಿ, LBA ಯಲ್ಲಿರುವಂತೆ ಎಲ್ಲಾ ಸ್ವರೂಪದ ಪ್ರಶ್ನೆಗಳನ್ನು ಒಳಗೊಂಡ ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದು ಹಾಗೂ ವಿಶ್ಲೇಷಣಾ ವರದಿಯನ್ನುಆಧರಿಸಿ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳುವುದು.

12. ಪ್ರಶ್ನೆಕೋಠಿಯಲ್ಲಿರುವ ಉತ್ತರ ಕೀಲಿಯನ್ನು ವಿಷಯ ಶಿಕ್ಷಕರು ಒಮ್ಮೆ ಅವಲೋಕಿಸಿ, ಖಚಿತಪಡಿಸಿಕೊಂಡು ವಿದ್ಯಾರ್ಥಿಗಳಿಗೆ ಅನುಕೂಲಾವಾಗುವಂತೆ ಅಪೇಕ್ಷಿತ ಉತ್ತರಗಳನ್ನು ಒದಗಿಸುವುದು.

5. ಕಲಿಕಾ ಫಲಗಳ ಪಟ್ಟಿ / List of Learning Outcomes
ಭಾಷೆ ಕನ್ನಡ- ಕಲಿಕಾ ಫಲಗಳು
ಮಾಧ್ಯಮಿಕ ಹಂತ (10ನೆಯ ತರಗತಿ)

ಪಠ್ಯಕ್ರಮದ ಗುರಿಗಳು	ಸಾಮರ್ಥ್ಯಗಳು	ಕಲಿಕಾ ಫಲಗಳು
CG-1: ಬರೆಹದ ಪ್ರಕಾರಗಳಾದ ಪ್ರಬಂಧ, ಪತ್ರ, ಲೇಖನ, ಚರ್ಚೆ, ಸಂದರ್ಶನ, ಸಾರ್ವಜನಿಕ ಭಾಷಣ ಹಾಗೂ ಇ-ಮೇಲ್, ಆಡಿಯೋ ಮತ್ತು ವಿಡಿಯೋ ಸಾಮಗ್ರಿಗಳ ಮೂಲಕ ಸಂವಹನ ನಡೆಸಲು ಪರಿಣಾಮ ಕಾರಿಯಾಗಿ ಭಾಷೆಯನ್ನು ಬಳಸುವುದು.	**C-1.1:** ಸಾಮಾಜಿಕ ಸಂದರ್ಭ ಗಳಿಗೆ ಪೂರಕವಾಗಿ ಭಾಷೆಯನ್ನು ಬಳಸುವುದು, ಚರ್ಚೆ ಮತ್ತು ಸಂವಾದಗಳ ಮೂಲಕ ಕಾರಣ ಸಹಿತ ಸಮ್ಮತಿ ಅಸಮ್ಮತಿಯನ್ನು ವ್ಯಕ್ತಪಡಿಸುವುದರ ಜೊತೆಗೆ ತೀರ್ಮಾನಕ್ಕೆ ಬರುವುದು.	**1.** ಸಾಮಾಜಿಕ ಆಚರಣೆ (ಹಬ್ಬಗಳು, ವಿವಾಹ) ಮತ್ತು ಸಾಮಾಜಿಕ ಸಮಸ್ಯೆಗಳ (ಮಾಲಿನ್ಯ, ಭ್ರಷ್ಟಾಚಾರ) ಕುರಿತಾದ ಇತರರ ಬರವಣಿಗೆಗೆ ಪ್ರತಿಕ್ರಿಯಿಸುತ್ತಾರೆ ಮತ್ತು ಅವನ್ನು ವಿಮರ್ಶಾತ್ಮಕ ವಾಗಿ ಪರಿಶೀಲಿಸುತ್ತಾರೆ.
	C-1.2: ಸ್ವಂತ ಅನುಭವ ಹಾಗೂ ಇತರರ ಅನುಭವಗಳನ್ನು ವಿವಿಧ ಶೈಲಿಗಳಲ್ಲಿ (ಕಥನಾತ್ಮಕ, ವಿವರಣಾತ್ಮಕ, ವಿಶ್ಲೇಷಣಾತ್ಮಕ, ಪ್ರತಿಪಾದನಾತ್ಮಕ) ಬರೆಯುವುದು.	**2.** ಯಾವುದೇ ಸುದ್ದಿ, ಚರ್ಚೆ, ಭಾಷಣ ಮತ್ತು ಪಠ್ಯದ ಮುಖ್ಯ ವಿಚಾರಗಳನ್ನು ಸೂಕ್ತ ಉದಾ ಹರಣೆಗಳೊಂದಿಗೆ ಬರೆವಣಿಗೆಯ ಮೂಲಕ ವಿವರಿಸುತ್ತಾರೆ.
	C-1.3: ದೈನಂದಿನ ಬದುಕಿನಲ್ಲಿ ಬಳಕೆಯಾಗುವ ಆಮಂತ್ರಣ ಪತ್ರ, ಭಾಷಣ, ಸಂದೇಶ, ಪ್ರಕಟಣೆ, ಘೋಷಣೆ, ಜಾಹೀರಾತುಗಳನ್ನು ಬರೆಯುವುದು ಹಾಗೂ ಶಾಲಾಪತ್ರಿಕೆ/ಸಂಚಿಕೆ/ನಿಯತಕಲಿ ಕೆಗಳಿಗಾಗಿ ಬರೆಯುವುದು.	**3.** ವಿಭಿನ್ನ ಮಾಹಿತಿಗಳು ಮತ್ತು ಅಭಿಪ್ರಾಯಗಳನ್ನು ಮೌಲೀಕರಿ ಸುವ ಮೂಲಕ ತಮ್ಮ ವಾದ ಗಳನ್ನು ಸಮರ್ಥನೀಯ ಅಂಶ ಗಳೊಂದಿಗೆ ಬರೆದು ಪ್ರಸ್ತುತ ಪಡಿಸುತ್ತಾರೆ.
		4. ಭಾಷಣ, ಆಮಂತ್ರಣ ಪತ್ರಿಕೆ, ಸಂದೇಶ, ಜಾಹೀರಾತು, ಪ್ರಕಟಣೆ ಮತ್ತು ಸೃಜನಶೀಲ ಘೋಷಣೆ ಗಳನ್ನು ಬರೆಯುತ್ತಾರೆ.
		5. ಪತ್ರಿಕೆ/ಸಂಚಿಕೆ/ ನಿಯತಕಾಲಿಕೆ ಗಳಿಗಾಗಿ ಹಾಗೂ ಪುಸ್ತಕ ವಿಮರ್ಶೆ, ವರದಿ, ಲೇಖನಗಳನ್ನು ಬರೆಯಲು ವಿವಿಧ ಮೂಲಗಳಿಂದ ಮಾಹಿತಿ ಯನ್ನು ಸಂಗ್ರಹಿಸುತ್ತಾರೆ ಮತ್ತು ಸಂಗ್ರಹಿಸಿದ ಮಾಹಿತಿಯ ಕುರಿತು ಉಲ್ಲೇಖ ನೀಡುತ್ತಾರೆ.

	C-1.4: ತಂತ್ರಜ್ಞಾನದ ಬಳಕೆಯೊಂದಿಗೆ ಮಾಹಿತಿಯನ್ನು ನೀಡಲು ಮತ್ತು ವಿಚಾರಗಳನ್ನು ಪರಿಣಾಮಕಾರಿಯಾಗಿ ಸಂವಹನ ಮಾಡಲು ಕರಡುಪ್ರತಿ (Script) ಸಿದ್ಧಪಡಿಸುವುದು.	**6.** ನೀಡಿದ ವಿಷಯಕ್ಕೆ ಕರಡು ಪ್ರತಿಗಳನ್ನು (Scripts) ಅಭಿವೃದ್ಧಿ ಪಡಿಸುವುದು ಮತ್ತು ಆಡಿಯೋ-ವಿಡಿಯೋ ಮಾಧ್ಯಮಗಳಲ್ಲಿ ಅವನ್ನು ಪ್ರಸ್ತುತಪಡಿಸುವುದು (Presentations).
CG-2: ಬರೆವಣಿಗೆಯ ವಿಭಿನ್ನ ಶೈಲಿಗಳ (ಕಥನಾತ್ಮಕ, ವಿವರಣಾತ್ಮಕ, ವಿಶ್ಲೇಷಣಾತ್ಮಕ, ಪ್ರತಿಪಾದನಾತ್ಮಕ) ವಿಶ್ಲೇಷಣೆಯ ಮೂಲಕ ವಿವಿಧ ಸಾಹಿತ್ಯದ ಪ್ರಕಾರಗಳಲ್ಲಿನ (ಪದ್ಯ, ಗದ್ಯ, ನಾಟಕ, ಪ್ರಬಂಧ, ಪ್ರವಾಸ ಕಥನ) ಸೌಂದರ್ಯಪ್ರಜ್ಞೆಯನ್ನು ಗುರುತಿಸುವುದು ಹಾಗೂ ಈ ಅಂಶಗಳನ್ನು ತಮ್ಮ ಬರೆವಣಿಗೆಯಲ್ಲಿ ಅಳವಡಿಸಿಕೊಳ್ಳುವುದು.	**C-2.1:** ವಿವಿಧ ಕಾಲಘಟ್ಟಗಳ (ಪ್ರಾಚೀನ, ಮಧ್ಯಕಾಲೀನ, ಸಮಕಾಲೀನ ಮುಂತಾದ) ಸಾಹಿತ್ಯ ಕೃತಿಗಳ ಲಕ್ಷಣಗಳನ್ನು ವಿವರಿಸುವುದು.	**7.** ವಿಭಿನ್ನ ಕಾಲಘಟ್ಟಗಳ ಸಾಹಿತ್ಯವನ್ನು ಓದುತ್ತಾರೆ. ಅವುಗಳಲ್ಲಿನ ಪದಬಳಕೆ, ವಾಕ್ಯರಚನೆ, ಶೈಲಿ, ರೂಪ ಹಾಗೂ ವಿಷಯ ವಸ್ತುವಿನ ಆಧಾರದ ಮೇಲೆ ಅವುಗಳ ವಿಶಿಷ್ಟ ಲಕ್ಷಣಗಳನ್ನು ಗುರುತಿಸುತ್ತಾರೆ.
	C-2.2: ಪಠ್ಯವನ್ನು ಸೂಕ್ಷ್ಮವಾಗಿ ಓದಿ ಅದರ ರೂಪ (ಪ್ರಕಾರ) ಮತ್ತು ಶೈಲಿಯನ್ನು ವಿಮರ್ಶಿಸುವ ಮೂಲಕ, ಅದರಲ್ಲಿನ ಸಂಭಾವ್ಯ ಅರ್ಥಗಳನ್ನು ಅನ್ವೇಷಿಸುವ ಮೂಲಕ ಸಾಹಿತ್ಯಿಕ ಪಠ್ಯವನ್ನು ವಿಶ್ಲೇಷಿಸುವುದು.	**8.** ಪಠ್ಯದಲ್ಲಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಆಯಾಮಗಳನ್ನು ಅಥವಾ ದೃಷ್ಟಿಕೋನಗಳನ್ನು ವಿಶ್ಲೇಷಿಸುತ್ತಾರೆ.
		9. ವಿವಿಧ ಬರೆವಣಿಗೆಯ ಶೈಲಿಗಳು ಮತ್ತು ಪ್ರಕಾರಗಳಲ್ಲಿ (ಪದ್ಯ, ಗದ್ಯ, ನಾಟಕ, ಪ್ರಬಂಧ, ಪ್ರವಾಸ ಕಥನ) ಕಂಡು ಬಂದಿರುವ ಪದಗಳ ಆಯ್ಕೆ ಮತ್ತು ವಾಕ್ಯ ರಚನೆಯ ವೈಶಿಷ್ಟ್ಯಗಳನ್ನು ವಿಶ್ಲೇಷಿಸುತ್ತಾರೆ.
	C-2.3: ಸೂಕ್ತ ಅಲಂಕಾರಗಳನ್ನು ಬಳಸಿಕೊಂಡು ಸಾಹಿತ್ಯಿಕ ಪಠ್ಯಗಳನ್ನು ರಚಿಸುವುದು. ವೈವಿಧ್ಯಮಯ ಸಾಹಿತ್ಯವನ್ನು ಓದುವ ಮೂಲಕ ಸಾಹಿತ್ಯಿಕ ಅಲಂಕಾರಗಳನ್ನು (ಉಪಮೆ, ರೂಪಕ, ದೃಷ್ಟಾಂತ, ಉತ್ಪ್ರೇಕ್ಷೆ, ಪ್ರತಿಮೆ, ಅನುಪ್ರಾಸ, ನುಡಿಗಟ್ಟು, ಗಾದೆ ಮತ್ತು ಒಗಟುಗಳನ್ನು) ಗುರುತಿಸುವುದು ಮತ್ತು ಅವುಗಳನ್ನು ಬರೆವಣಿಗೆಯಲ್ಲಿ ಬಳಸುವುದು.	**10.** ವಿವಿಧ ರೀತಿಯ ಸಾಹಿತ್ಯಿಕ ಅಲಂಕಾರಗಳನ್ನು (ಉಪಮೆ, ರೂಪಕ, ದೃಷ್ಟಾಂತ, ಉತ್ಪ್ರೇಕ್ಷೆ, ಪ್ರತಿಮೆ, ಅನುಪ್ರಾಸ, ನುಡಿಗಟ್ಟು, ಗಾದೆ, ಒಗಟು) ಬಳಸಿಕೊಂಡು ಕವಿತೆಗಳು, ಕಥೆಗಳು ಮತ್ತು ನಾಟಕಗಳನ್ನು ರಚಿಸುತ್ತಾರೆ.

CG-3: ತಾರ್ಕಿಕ ಚಿಂತನೆ, ವಾದ ಮಂಡನೆ ಮತ್ತು ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ವಿವಿಧ ಆಡಿಯೋ ಮತ್ತು ಲಿಖಿತ ಸಾಮಗ್ರಿಗಳನ್ನು ಪರಿಣಾಮಕಾರಿಯಾಗಿ ಬಳಸುವುದು.	**C-3.1:** ವಿವಿಧ ಆಡಿಯೋ ಮತ್ತು ಲಿಖಿತ ಸಾಮಗ್ರಿಗಳನ್ನು ವಿಶ್ಲೇಷಿಸುವುದು ಮತ್ತು ಅವುಗಳನ್ನು ಮೌಲೀಕರಿಸುವುದು.	**11.** ಆಡಿಯೋ ಮತ್ತು ಲಿಖಿತ ಸಾಮಗ್ರಿಗಳಲ್ಲಿನ ಒಟ್ಟಾರೆ ಅರ್ಥ ಮತ್ತು ಅದರ ಪ್ರಾಮುಖ್ಯತೆಯನ್ನು ಮೌಲೀಕರಿಸಲು ಪೂರಕವಾದ ಸಾಕ್ಷ್ಯಾಧಾರಗಳ ನ್ನು ಹುಡುಕಿ ಸಮರ್ಥಿಸುತ್ತಾರೆ.
	C-3.2: ಕಾರ್ಯ ಕಾರಣ ಸಂಬಂಧ ಹಾಗೂ ತಾರ್ಕಿಕ ಆಧಾರ ಗಳೊಂದಿಗೆ ವಾದಗಳನ್ನು ಮಂಡಿಸುವುದು.	**12.** ವಾದಕ್ಕೆ ಪೂರಕವಾದ ಪೂರ್ವಾಪರ ಸಂಗತಿಗಳನ್ನು (ಕಾರ್ಯ ಕಾರಣ ಸಂಬಂಧ) ಪಟ್ಟಿ ಮಾಡುತ್ತಾರೆ.
		13. ವಾದ ಮತ್ತು ಬರೆವಣಿಗೆಯಲ್ಲಿ ಪೂರ್ವಾಪರ ಸಂಗತಿಗಳು ಮತ್ತು ತೀರ್ಮಾನಗಳ ನಡುವೆ ಸಂಬಂಧ ವನ್ನು ಕಲ್ಪಿಸುತ್ತಾರೆ.
CG-4: ಭಾರತೀಯ ಬಹು ಸಾಂಸ್ಕೃತಿಕ ಮತ್ತು ಭಾಷಾ ಪರಂಪರೆ ಹಾಗೂ ಸಾಹಿತ್ಯದ ಶ್ರೀಮಂತಿಕೆಯನ್ನು ಆಸ್ವಾದಿಸುವುದು.	**C-4.1:** ವಿವಿಧ ಸಾಹಿತ್ಯ ಪ್ರಕಾರಗಳ ಪಠ್ಯಗಳನ್ನು ಓದುವ ಮೂಲಕ ಭಾರತೀಯ ಸಮಾಜದ ಬಹುಭಾಷಾ ಸ್ವರೂಪ ಮತ್ತು ಅದರ ಶ್ರೀಮಂತಿಕೆಯನ್ನು ಗುರುತಿ ಸುವುದು.	**14.** ಮಾತೃಭಾಷೆಯಲ್ಲದ ಇತರ ಭಾಷೆಗಳ ಸಾಹಿತ್ಯ ಪಾತ್ರಾಭಿನಯ ಗಳಲ್ಲಿ (Role-plays) ಭಾಗವಹಿಸು ತ್ತಾರೆ.
	C-4.2: ಕನ್ನಡ ಭಾಷಾ ಸಾಹಿತ್ಯದ ವಿವಿಧ ಕೃತಿಗಳಲ್ಲಿನ ಪರಸ್ಪರ ಸಂಬಂಧ, ಸಂಸ್ಕೃತಿ-ಪರಂಪರೆ ಮತ್ತು ಶ್ರೀಮಂತಿಕೆಯನ್ನು ಮೆಚ್ಚುವುದು.	**15.** ವಿಶೇಷ ಕನ್ನಡ ಭಾಷೆಯ (Feature Articles) ಲೇಖನಗಳನ್ನು ಓದುತ್ತಾರೆ ಮತ್ತು ಅವುಗಳ ನಡುವಿನ ಸಾಮ್ಯತೆ ಹಾಗೂ ವ್ಯತ್ಯಾಸಗಳನ್ನು ವಿಶ್ಲೇಷಿಸುತ್ತಾರೆ.
	C-4.3: ನಮ್ಮ ನಾಡಿನ ಅನನ್ಯತೆ (Identity) ಮತ್ತು ಸಂಸ್ಕೃತಿಯ ರಚನೆಯಲ್ಲಿ ಕನ್ನಡ ಭಾಷೆಯ ಪಾತ್ರದ ಕುರಿತು ತಿಳಿಯುವುದು.	**16.** ನಮ್ಮ ನಾಡಿನ ಅನನ್ಯತೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾರೆ ಹಾಗೂ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ.
	C-4.4: ಕೆಲವು ಭಾರತೀಯ ಭಾಷೆಗಳ ನಡುವಿನ ಸಾಮ್ಯತೆಗಳ ಬಗ್ಗೆ ಮೂಲಭೂತ ಜ್ಞಾನವನ್ನು ಪಡೆಯುವುದು. (ಉದಾಹರಣೆಗೆ: ಧ್ವನಿ ವ್ಯವಸ್ಥೆ, ವರ್ಣಮಾಲೆ, ಲಿಪಿಗಳು, ವ್ಯಾಕರಣ ರಚನೆಗಳು ಹಾಗೂ ಸಂಸ್ಕೃತ ಮತ್ತು ಇತರೆ	**17.** ಪ್ರಮುಖ ಭಾರತೀಯ ಭಾಷೆಗಳ ಧ್ವನಿ ವ್ಯವಸ್ಥೆಗಳನ್ನು ವಿಶ್ಲೇಷಿಸುತ್ತಾರೆ ಹಾಗೂ ಉಚ್ಚಾರ ಣೆಯಲ್ಲಿನ ಸೂಕ್ಷ್ಮ ವ್ಯತ್ಯಾಸ ಗಳನ್ನು ಪರಿಶೋಧಿಸುತ್ತಾರೆ.

	ಭಾಷೆಗಳಿಂದ ಸ್ವೀಕೃತಗೊಂಡ ಪದಸಂಪತ್ತು, ಅವುಗಳ ನಡುವಿನ ಪರಸ್ಪರ ಪ್ರಭಾವ ಮತ್ತು ವ್ಯತ್ಯಾಸಗಳು).	
		18. ಭಾರತೀಯ ಭಾಷೆಗಳ ಮೇಲಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪ್ರಭಾವಗಳನ್ನು ಹಾಗೂ ಸಂಸ್ಕೃತ ಮತ್ತು ಇತರ ಶಾಸ್ತ್ರೀಯ ಭಾಷೆಗಳ ಪ್ರಭಾವವನ್ನು ತಿಳಿಯುತ್ತಾರೆ.
	C-4.5: ಭಾರತದ ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ಬಳಸುವ ವಿವಿಧ ಭಾಷೆಗಳೂ ಸೇರಿದಂತೆ, ಬುಡಕಟ್ಟು ಭಾಷೆಗಳ ಸ್ವರೂಪ ಮತ್ತು ರಾಚನಿಕ ಅಂಶಗಳನ್ನು ತಿಳಿಯುವುದು. ಹಾಗೂ ನೆರೆ ಹೊರೆಯ ರಾಜ್ಯದ ಭಾಷೆಗಳ ಪ್ರಮುಖ ಪದಗಳು, ನುಡಿಗಟ್ಟುಗಳು ಮತ್ತು ಮುಖ್ಯ ಸಾಹಿತ್ಯ ಕೃತಿಗಳ ಪರಿಚಯ ಮಾಡಿಕೊಳ್ಳುವುದು.	**19.** ಪ್ರಾದೇಶಿಕ/ಬುಡಕಟ್ಟು ಭಾಷೆಗಳ ಕುರಿತು ಪ್ರಾಜೆಕ್ಟ್‌ಗಳನ್ನು ಮಾಡುವ ಮೂಲಕ ದೇಶದಲ್ಲಿನ ಭಾಷಾ ವೈವಿಧ್ಯತೆಯ ಜ್ಞಾನವನ್ನು ಪಡೆಯುತ್ತಾರೆ.

6. ಪರಿವಿಡಿ / Index

ಕ್ರ. ಸಂ.	ಪಾಠದ ಹೆಸರು	ಪುಟಗಳ ಸಂಖ್ಯೆ	
		ಪ್ರಶ್ನೆಗಳು	ಉತ್ತರಗಳು
1	ನಮ್ಮ ಭಾಷೆ	1-4	86-94
2	ವ್ಯಾಘ್ರಗೀತೆ	5-8	95-103
3	ಭಾಗ್ಯಶಿಲ್ಪಿಗಳು	9-13	104-117
4	ಎದೆಗೆ ಬಿದ್ದ ಅಕ್ಷರ	14-17	118-126
5	ಯುದ್ಧ	18-21	127-136
6	ಶಬರಿ	22-26	137-146
7	ಲಂಡನ್ ನಗರ	27-31	147-158
8	ಅಗ್ನಿಭೂತಿ ವಾಯುಭೂತಿಯರ ಕತೆ	32-35	159-166
9	ಸಂಕಲ್ಪಗೀತೆ	36-40	167-175
10	ಹಕ್ಕಿಹಾರುತಿದೆ ನೋಡಿದಿರಾ	41-46	176-186
11	ಕೌರವೇಂದ್ರನ ಕೊಂದೆ ನೀನು	47-54	187-199
12	ಛಲಮನೆ ಮರೆವೆಂ	55-58	200-209
13	ಹಸುರು	59-62	210-217
14	ಹಲಗಲಿ ಬೇಡರು	63-65	218-228
15	ವೀರಲವ	66-69	229-238
16	ಕೆಮ್ಮನೆ ಮೀಸೆವೊತ್ತೆನೇ	70-73	239-249
17	ವಸಂತ ಮುಖ ತೋರಲಿಲ್ಲ	74-75	250-251
18	ಭಗತ್‌ಸಿಂಗ್	75-76	251-252
19	ಉದಾತ್ತ ಚಿಂತನೆಗಳು	76-77	252-253
20	ವಚನಗಳು	77-78	254
21	ನಾನು ಪ್ರಾಸ ಬಿಟ್ಟ ಕತೆ	78-79	254-255
22	ಶುಕನಾಸನ ಉಪದೇಶ	79	256
23	ಹೆಚ್ಚುವರಿ ಪ್ರಬಂಧಗಳು ಮತ್ತು ಪತ್ರಲೇಖನಗಳು / ವಾರ್ಷಿಕ ಪರೀಕ್ಷೆ ಪ್ರಶ್ನೆ ಪತ್ರಿಕೆಗಳು	80-82	257-271
	ಒಟ್ಟು 828 ಪ್ರಶ್ನೆಗಳು 1753 ಅಂಕಗಳು		

ಸೂಚನೆ : DSERT –ಬೆಂಗಳೂರು ಇದರ ಹಕ್ಕು ಸ್ವಾಮ್ಯವನ್ನು ಹೊಂದಿರುತ್ತಾರೆ.

ಗದ್ಯಪಾಠ 1. ನಮ್ಮಭಾಷೆ - ಎಂ. ಮರಿಯಪ್ಪ ಭಟ್ಟ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	12	16	11	00	39
ಅಂಕಗಳು	14	24	40	00	78

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	15	6	5	7	4	2	39
ಅಂಕಗಳು	15	6	10	21	16	10	78

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-17) **(1 ಅಂಕ)**

1. ಕನ್ನಡ ವರ್ಣಮಾಲೆಯ ಪ್ರತಿ ವರ್ಗದ ಎರಡು ಮತ್ತು ನಾಲ್ಕನೆಯ ಅಕ್ಷರಗಳು (ಸ್ಮರಣೆ -ಸುಲಭ)
(ಎ) ಅಲ್ಪಪ್ರಾಣಾಕ್ಷರಗಳು (ಬಿ) ಮಹಾಪ್ರಾಣಾಕ್ಷರಗಳು
(ಸಿ) ಅನುನಾಸಿಕಾಕ್ಷರಗಳು (ಡಿ) ಯೋಗವಾಹಗಳು

2. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ (ಸ್ಮರಣೆ-ಸುಲಭ) ಜೂನ್ 2008.
(ಎ) ೫ (ಬಿ) ೬ (ಸಿ) ೭ (ಡಿ) ೧೦

3. ವರ್ಗೀಯ ವ್ಯಂಜನದ ಪಂಚಮಾಕ್ಷರಗಳಿವು (ಸ್ಮರಣೆ-ಸುಲಭ)
(ಎ) ಅನುನಾಸಿಕಗಳು (ಬಿ) ಮಹಾಪ್ರಾಣಾಕ್ಷರಗಳು
(ಸಿ) ಅಲ್ಪಪ್ರಾಣಾಕ್ಷರಗಳು (ಡಿ) ಯೋಗವಾಹಗಳು

4. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಾಕ್ಷರಗಳ ಸಂಖ್ಯೆ (ಸ್ಮರಣೆ-ಸುಲಭ) ಮಾರ್ಚ್ 2022.
(ಎ) ೦೨ (ಬಿ) ೦೫ (ಸಿ) ೦೬ (ಡಿ) ೦೭

5. ಕನ್ನಡ ವರ್ಣಮಾಲೆಯಲ್ಲಿನ 'ಟ' ವರ್ಗದ ಅನುನಾಸಿಕಾಕ್ಷರವಿದು (ಸ್ಮರಣೆ-ಸುಲಭ)
(ಎ) ಞ (ಬಿ) ಣ (ಸಿ) ನ (ಡಿ) ಮ

6. ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾದ ಪದವಿದು (ಗ್ರಹಿಕೆ-ಸುಲಭ) ಜೂನ್ 2023.
(ಎ) ಶಸ್ತ್ರ (ಬಿ) ಎಚ್ಚರ (ಸಿ) ಅದ್ಭುತ (ಡಿ) ಅಕ್ಷರ

7. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ (ಸ್ಮರಣೆ-ಸುಲಭ) ಮಾರ್ಚ 2024.
(ಎ) ೫ (ಬಿ) ೭ (ಸಿ) ೧೩ (ಡಿ) ೧೦

8. ವಿಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆ ಇದು
(ಗ್ರಹಿಕೆ-ಸುಲಭ) ಜೂನ್ 2024.
(ಎ) ಎಚ್ಚರ (ಬಿ) ಉಷ್ಣ (ಸಿ) ಕಣ್ಣಿಗೆ (ಡಿ) ಬಟ್ಟೆ

9. ಅನುಸ್ವಾರ, ವಿಸರ್ಗಗಳನ್ನು ಹೀಗೆನ್ನುವರು
(ಸ್ಮರಣೆ-ಸಾಧಾರಣ) ಮಾರ್ಚ 2025.
(ಎ) ಅನುನಾಸಿಕ (ಬಿ) ವ್ಯಂಜನ (ಸಿ) ಯೋಗವಾಹ (ಡಿ) ಸ್ವರ

10. ವರ್ಗೀಯ ವ್ಯಂಜನದಲ್ಲಿನ ಪ್ರಥಮ ಹಾಗೂ ತೃತೀಯಾಕ್ಷರಗಳು
(ಸ್ಮರಣೆ-ಸುಲಭ) ಮೇ 2025.
(ಎ) ಅಲ್ಪಪ್ರಾಣಾಕ್ಷರಗಳು (ಬಿ) ಮಹಾಪ್ರಾಣಾಕ್ಷರಗಳು
(ಸಿ) ಅನುನಾಸಿಕಾಕ್ಷರಗಳು (ಡಿ) ಅವರ್ಗೀಯವ್ಯಂಜನಾಕ್ಷರಗಳು

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಫ-17) **(1 ಅಂಕ)**

11. ಕ್, ಗ್ : ಅಲ್ಪಪ್ರಾಣಾಕ್ಷರಗಳು : : ಛ್, ಝ್ : ..... (ಗ್ರಹಿಕೆ-ಸುಲಭ)

12. ವರ್ಗೀಯ ವ್ಯಂಜನಾಕ್ಷರಗಳು : ೨೫ : : ಅವರ್ಗೀಯ ವ್ಯಂಜನಾಕ್ಷರಗಳು : .....
(ಗ್ರಹಿಕೆ-ಸುಲಭ) ಮಾರ್ಚ್ 2023, 2026, ಜೂನ್ 2022.

13. ಕ್, ಚ್, ಟ್, ತ್, ಪ್ : ವರ್ಗೀಯ ವ್ಯಂಜನಗಳು : : ಯ್, ರ್, ಲ್, ವ್, ಶ್ : .....
(ಗ್ರಹಿಕೆ-ಸುಲಭ)

14. ಸ್ವರಗಳು : ೧೩ : : ಯೋಗವಾಹಗಳು : ..... (ಗ್ರಹಿಕೆ-ಸುಲಭ)

15. ದೀರ್ಘಸ್ವರಗಳು : ೭ : : ಹ್ರಸ್ವಸ್ವರಗಳು : ..... (ಗ್ರಹಿಕೆ-ಸುಲಭ)

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

16. ಭಾಷೆ ಯಾವುದಕ್ಕೆ ಸಾಧನವಾಗಿದೆ? (ಸ್ಮರಣೆ-ಸುಲಭ)

17. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಪೇತು ಕೊಡುತ್ತವೆ?
(ಸ್ಮರಣೆ-ಸುಲಭ)

18. ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಯಾವಾಗ ಉಂಟಾಯಿತು?
(ಸ್ಮರಣೆ-ಸಾಧಾರಣ)

19. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು?
(ಸ್ಮರಣೆ-ಸುಲಭ) ಮೇ 2025, ಮಾರ್ಚ್ 2026.

20. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು? (ಸ್ಮರಣೆ-ಸುಲಭ)

21. ಒಂದು ಭಾಷೆ ಸತ್ವಪೂರ್ಣವಾಗಿರಬೇಕಾದರೆ ಅದನ್ನಾಡುವ ಜನ ಹೇಗಿರಬೇಕು?
(ಗ್ರಹಿಕೆ-ಸಾಧಾರಣ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :
(2 ಅಂಕ)

22. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳಾವುವು?
(ಗ್ರಹಿಕೆ-ಸಾಧಾರಣ) ಮೇ 2025, ಮಾರ್ಚ್ 2026. (ಕ.ಫ-15)

23. ಲಿಪಿಯ ಜಾಡು ಆರಂಭಗೊಂಡ ಬಗೆ ಹೇಗೆ? (ಗ್ರಹಿಕೆ-ಸಾಧಾರಣ) (ಕ.ಫ-15)

24. ಲಿಪಿಯ ಮೂಲಕ ಜ್ಞಾನ ಭಂಡಾರ ಯಾವ ರೀತಿ ಭದ್ರವಾಯಿತು? (ಗ್ರಹಿಕೆ-ಸಾಧಾರಣ) (ಕ.ಫ-15)

25. ಕನ್ನಡ ಭಾಷೆ ಹದಗೊಂಡದ್ದು ಹೇಗೆ? (ಗ್ರಹಿಕೆ-ಸಾಧಾರಣ) (ಕ.ಫ-18)

26. ಆಂಗ್ಲ ಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು? (ಗ್ರಹಿಕೆ-ಸಾಧಾರಣ) ಮಾರ್ಚ್ 2025. (ಕ.ಫ-18)

ಕೆಳಗಿನ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

27. ಎಂ. ಮರಿಯಪ್ಪ ಭಟ್ಟ. (ಸ್ಮರಣೆ-ಸುಲಭ) ಮಾರ್ಚ್ 2025.

ಕೆಳಗಿನ ಗಾದೆಯನ್ನು ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3 ಅಂಕ)**

28. ಮಾತೇ ಮೃತ್ಯು, ಮಾತೇ ಮುತ್ತು. (ಅಭಿವ್ಯಕ್ತಿ-ಸಾಧಾರಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

29. "ಸಂಸ್ಕೃತಿಯ ಇತಿಹಾಸ ಉಳಿಯಿತು." (ಅಭಿವ್ಯಕ್ತಿ-ಕಠಿಣ)

30. "ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ" (ಅಭಿವ್ಯಕ್ತಿ-ಸಾಧಾರಣ)

31. "ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ" (ಅಭಿವ್ಯಕ್ತಿ-ಸಾಧಾರಣ)

32. "ಒಬ್ಬ ತಾಯಿಯ ಗಾನದ ಶ್ರುತಿಯಂತೆ" (ಅಭಿವ್ಯಕ್ತಿ-ಕಠಿಣ)

33. "ಇದು ಎಲ್ಲ ಭಾಷೆಗಳಲ್ಲೂ ಕಾಣುವ ಸಹಜಶಕ್ತಿ" (ಅಭಿವ್ಯಕ್ತಿ-ಕಠಿಣ)

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)

34. ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು ಯಾವಾಗ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ) (ಕ.ಫ-3)

35. ಕನ್ನಡಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ? ವಿವರಿಸಿ. (ಅಭಿವ್ಯಕ್ತಿ-ಸಾಧಾರಣ) (ಕ.ಫ-16)

36. ದ್ವಿಭಾಷಾ ಪ್ರದೇಶಗಳಲ್ಲಿ ಬಳಸುವ ವಿವಿಧ ಭಾಷೆಗಳ ವಾಕ್ಯಗಳನ್ನು ಬರೆದು ಅರ್ಥೈಸಿರಿ. (ಅಭಿವ್ಯಕ್ತಿ-ಕಠಿಣ) (ಕ. ಫ. -19)

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (ಕ.ಫ-3) (ಗ್ರಹಿಕೆ - ಸಾಧಾರಣ) **(2+2=4 ಅಂಕ)**

37. ಕನ್ನಡ ಸಾಹಿತ್ಯ ಲೋಕದಲ್ಲಿನ ಬಿ. ಎಂ. ಶ್ರೀಯವರು 'ಶ್ರೀ' ಎಂದೇ ಪ್ರಖ್ಯಾತರು. ಅವರು ಬರೆದ 'ಇಂಗ್ಲಿಷ್ ಗೀತೆಗಳು' ಎಂಬುದು ಹಲವು ಇಂಗ್ಲಿಷ್ ಕವಿತೆಗಳ ಸೊಗಸಾದ ಕನ್ನಡ ಅನುವಾದದ ಕೃತಿ. ಹೊಸಗನ್ನಡದ ತಿಳಿಯಾದ ಭಾಷೆ ಹಳೆಯದನ್ನು ಆಧರಿಸಿಯೂ ಹೊಸ ರೂಪತಾಳಿದ್ದ ಸುಗಮ ಲಯಗಳು, ಹೊಸ ಬಗೆಯ ಕಾವ್ಯ ವಸ್ತುಗಳು ಇದರ ಮೂಲಕ ಪ್ರಯೋಗವಾದವು. ಸಂಗ್ರಹದ ಅರವತ್ತೂರು ಕವಿತೆಗಳಲ್ಲಿ ಮೂರು ಮಾತ್ರ ಶ್ರೀಯವರ ಸ್ವಂತ ಕವಿತೆಗಳು.

ಉಳಿದವೆಲ್ಲ ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಬ್ರೌನಿಂಗ್, ಬರ್ನ್ಸ್, ಬೈರನ್, ಕೋಲರಜ್ ಮೊದಲಾದವರ ಕವನಗಳ ಅನುವಾದ. ಕನ್ನಡದಲ್ಲಿ ಹೊಸ ರೀತಿಯಲ್ಲಿ ಬರೆಯಲು ಕಾತರರಾಗಿದ್ದ ಪ್ರತಿಭಾವಂತ ಯುವಕರಿಗೆ ಇವು ಹೆದ್ದಾರಿಯಾದವು. ಚೋಳಕನ್ನೇರು, ಬಿಂಕದ ಸಿಂಗಾರಿ, ಮುದ್ದು ಕುರಿಮರಿ, ಕಾರಿ ಹೆಗ್ಗಡೆಯಮಗಳು, ಬಾನಾಡಿ ಮೊದಲಾದ ಉಜ್ವಲ ಅನುವಾದಗಳು ಕನ್‌ನಡ ಕಾವ್ಯ ರಸಿಕರನ್ನು ಚಿಕಿತಗೊಳಿಸಿದವು. "ಆಂಗ್ಲ ಸಾಹಿತ್ಯ ಸಂಸ್ಕೃತಿಯು ದೇಸಿಯ ಭಾಷೆಗಳಲ್ಲಿ ಬರುವಂತಾಗಬೇಕು; ಎನ್ನುವುದು ಆಂಗ್ಲ ವಿದ್ಯಾಭ್ಯಾಸದ ಉದ್ದೇಶಗಳಲ್ಲೊಂದಾಗಿತ್ತು. ಆ ಶಿಕ್ಷಣದ ಋಣ ತೀರಿಸಿ ಸಾರ್ಥಕತೆ ಹೊಂದಿದ ಪ್ರಮುಖರೆಂದರೆ ಶ್ರೀಯವರು" ಎಂದು ಬೇಂದ್ರೆ ಕೃತಿಕಾರರನ್ನು ಮೆಚ್ಚಿ ಬರೆದರು. ಇಂಗ್ಲಿಷ್ ಕಾವ್ಯದ ಹೊಸ ಮಾದರಿಗಳನ್ನು ಕನ್ನಡದಲ್ಲಿ ತೋರಿಸಿ ಕೊಡುವ ಆಶಯ ಈ ಕೃತಿಯಿಂದ ನಿರೀಕ್ಷೆ ಮೀರಿ ನೆರವೇರಿತು.

ಪ್ರಶ್ನೆಗಳು :

ಅ. ಬೇಂದ್ರೆಯವರು ಶ್ರೀಯವರ ಕುರಿತು ಆಡಿದ ಮಾತುಗಳಾವುವು?

ಆ. 'ಇಂಗ್ಲಿಷ್ ಗೀತೆಗಳು' ಎಂಬ ಕೃತಿಯ ಮೂಲಕ ಯಾವ ಯಾವ ವಿಷಯ ಪ್ರಯೋಗವಾದವು?

ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : (ಕ.ಫ-4) **(5 ಅಂಕ)**

38. ನಿಮ್ಮನ್ನು ಹಾವೇರಿಯ ಬಸವೇಶ್ವರ ನಗರದ ನಿವಾಸಿ `ಪ್ರದೀಪ' ಎಂದು ಭಾವಿಸಿಕೊಂಡು, ಬಡಾವಣೆಯಲ್ಲಿ ಗ್ರಂಥಾಲಯ ಸ್ಥಾಪಿಸುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ)

ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :

(ಕ.ಫ-1) **(5 ಅಂಕ)**

39. ರಾಷ್ಟ್ರೀಯ ಹಬ್ಬಗಳ ಮಹತ್ತ್ವ . (ಅಭಿವ್ಯಕ್ತಿ- ಕಠಿಣ)

ಗದ್ಯಪಾಠ 2. ವ್ಯಾಘ್ರಗೀತೆ - ಎ. ಎನ್. ಮೂರ್ತಿರಾವ್

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	16	15	10	00	41
ಅಂಕಗಳು	18	24	36	00	78

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	15	9	4	8	3	2	41
ಅಂಕಗಳು	15	9	8	24	12	10	78

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-17) **(1 ಅಂಕ)**

1. ತೃತೀಯಾ ವಿಭಕ್ತಿಯ ಕಾರಕಾರ್ಥ (ಸ್ಮರಣೆ-ಸುಲಭ) ಮಾರ್ಚ್ 2020, 2024, ಜೂನ್ 2022, ಮೇ 2025.
(ಎ) ಕರ್ತ್ರಾರ್ಥ (ಬಿ) ಕರಣಾರ್ಥ (ಸಿ) ಅಪಾದಾನ (ಡಿ) ಸಂಪ್ರದಾನ

2. ಚತುರ್ಥೀ ವಿಭಕ್ತಿಯ ಕಾರಕಾರ್ಥವಿದು (ಸ್ಮರಣೆ-ಸಾಧಾರಣ) ಮಾರ್ಚ್ 2018, ಜೂನ್ 2022, 2026.
(ಎ) ಸಂಪ್ರದಾನ (ಬಿ) ಕರ್ಮಾರ್ಥ (ಸಿ) ಅಧಿಕರಣ (ಡಿ) ಸಂಬಂಧ

3. ಹಳಗನ್ನಡದ 'ಅಧಿಕರಣ' ಕಾರಕಾರ್ಥದ ವಿಭಕ್ತಿ ಪ್ರತ್ಯಯ (ಸ್ಮರಣೆ-ಸಾಧಾರಣ) ಸೆಪ್ಟೆಂಬರ್ 2020.
(ಎ) ಇಂದಂ (ಬಿ) ಒಳ್ (ಸಿ) ಅಂ (ಡಿ) ಅತ್ತಣಿಂದಂ

4. ಹಳಗನ್ನಡ ದ್ವಿತೀಯಾ ವಿಭಕ್ತಿ ಪ್ರತ್ಯಯವಿದು (ಸ್ಮರಣೆ-ಸಾಧಾರಣ) ಮಾರ್ಚ್ 2021.
(ಎ) ಮ್ (ಬಿ) ಒಳ್ (ಸಿ) ಅತ್ತಣಿಂ (ಡಿ) ಅಂ

5. 'ಸಾವಿತ್ರಿಯಲ್ಲಿ' ಈ ಪದದಲ್ಲಿರುವ ವಿಭಕ್ತಿಯ ಹೆಸರು (ಸ್ಮರಣೆ-ಸುಲಭ) ಮಾರ್ಚ್ 2022.
(ಎ) ದ್ವಿತೀಯಾ (ಬಿ) ತೃತೀಯಾ (ಸಿ) ಸಪ್ತಮೀ (ಡಿ) ಪಂಚಮೀ

6. 'ಸಾವಿತ್ರಿಗೆ' ಈ ಪದದಲ್ಲಿರುವ ವಿಭಕ್ತಿಯ ಹೆಸರು (ಸ್ಮರಣೆ-ಸುಲಭ) ಮಾರ್ಚ್ 2023.
(ಎ) ಪ್ರಥಮಾ (ಬಿ) ದ್ವಿತೀಯಾ (ಸಿ) ತೃತೀಯಾ (ಡಿ) ಚತುರ್ಥೀ

7. ಸಪ್ತಮೀ ವಿಭಕ್ತಿಯ ಕಾರಕಾರ್ಥ (ಸ್ಮರಣೆ-ಸಾಧಾರಣ) ಮಾರ್ಚ್ 2019, ಜೂನ್ 2023. 2024.
(ಎ) ಅಧಿಕರಣ (ಬಿ) ಕರ್ತ್ರಾರ್ಥ (ಸಿ) ಸಂಪ್ರದಾನ (ಡಿ) ಅಪಾದಾನ

8. ದ್ವಿತೀಯಾ ವಿಭಕ್ತಿಯ ಕಾರಕಾರ್ಥವಿದು (ಸ್ಮರಣೆ-ಸಾಧಾರಣ) ಮಾರ್ಚ್ 2026.
(ಎ) ಕರಣಾರ್ಥ (ಬಿ) ಅಧಿಕರಣ (ಸಿ) ಸಂಪ್ರದಾನ (ಡಿ) ಕರ್ಮಾರ್ಥ

9. 'ಸಾವಿತ್ರಿಯೊಳ್' ಈ ಪದದಲ್ಲಿರುವ ವಿಭಕ್ತಿ (ಸ್ಮರಣೆ-ಸುಲಭ) ಆಗಸ್ಟ್ 2024.

(ಎ) ದ್ವಿತೀಯಾ (ಬಿ) ತೃತೀಯಾ (ಸಿ) ಪಂಚಮೀ (ಡಿ) ಸಪ್ತಮೀ

10. 'ಲೋಕದೊಳ್' ಎಂಬ ಪದದಲ್ಲಿರುವ ವಿಭಕ್ತಿ (ಸ್ಮರಣೆ-ಸುಲಭ) ಮಾರ್ಚ್ 2025.
(ಎ) ಪ್ರಥಮಾ (ಬಿ) ತೃತೀಯಾ (ಸಿ) ಸಪ್ತಮೀ (ಡಿ) ಪಂಚಮೀ

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಫ-17) **(1 ಅಂಕ)**

11. ಒಳ್ : ಸಪ್ತಮೀ : : ಇಂ : ..... (ಗ್ರಹಿಕೆ-ಸುಲಭ)

12. ಸಪ್ತಮೀ : ಅಧಿಕರಣ : : ಪಂಚಮೀ : ..... (ಗ್ರಹಿಕೆ-ಸುಲಭ)

13. ಭರತಕ್ಷೇತ್ರದೊಳ್ : ಸಪ್ತಮೀ : : ನೆಲನಂ : ..... (ಗ್ರಹಿಕೆ-ಸಾಧಾರಣ)

14. ಸಾವಿತ್ರಿಯಿಂ : ತೃತೀಯಾ : : ಮರದೊಳ್ : ..... (ಗ್ರಹಿಕೆ-ಸಾಧಾರಣ) ಮಾರ್ಚ್ 2021.

15. ಊರಲ್ಲಿ : ಸಪ್ತಮೀ : : ಊರನ್ನು : ..... (ಗ್ರಹಿಕೆ-ಸಾಧಾರಣ) ಜೂನ್ 2019.

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

16. ಭಗವದ್ಗೀತೆಯನ್ನು ರಚಿಸಿದವರು ಯಾರು? (ಸ್ಮರಣೆ-ಸುಲಭ) ಜೂನ್ 2018.

17. ಹುಲಿಗೆ ಪರಮಾನಂದವಾಗಲು ಕಾರಣವೇನು? (ಗ್ರಹಿಕೆ-ಸುಲಭ) ಮೇ-2025, ಮಾರ್ಚ್ 2026

18. ಶಾನುಭೋಗರಿಗೆ ತಲೆಸುತ್ತಲು ಕಾರಣವೇನು? (ಗ್ರಹಿಕೆ-ಸುಲಭ)

19. ಶಾನುಭೋಗರ ಬ್ರಹ್ಮಾಸ್ತ್ರ, ಯಾವುದು? (ಸ್ಮರಣೆ-ಸುಲಭ) ಮಾರ್ಚ್ 2015, 2019, 2022, 2025, ಜೂನ್ 2017, 2019.

20. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು? (ಸ್ಮರಣೆ-ಸುಲಭ) ಮಾರ್ಚ್ 2017.

21. ಶಾನುಭೋಗರ ರಾಜಭಕ್ತಿಯ ಲಾಂಛನ ಯಾವುದು? (ಸ್ಮರಣೆ-ಸುಲಭ)

22. ಶಾನುಭೋಗರನ್ನು ಮೂರ್ಛೆಯಿಂದ ಎಚ್ಚರಿಸಿದವರು ಯಾರು? (ಸ್ಮರಣೆ-ಸುಲಭ)

23. ಶಾನುಭೋಗರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಯಾವ ಕಣಿವೆಯನ್ನು ದಾಟಿ ಹೋಗಬೇಕಾಗಿತ್ತು? (ಸ್ಮರಣೆ-ಸುಲಭ) ಸೆಪ್ಟೆಂಬರ್-2020.

24. ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಏಕೆ ಹೋಗಿದ್ದರು? (ಗ್ರಹಿಕೆ-ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :
(2 ಅಂಕ)

25. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಯೋಚಿಸಿದ ಮಾತುಗಳಾವುವು? (ಗ್ರಹಿಕೆ-ಸುಲಭ) ಮಾರ್ಚ್ 2019, 2025. (ಕ.ಫ-2)

26. ಹುಲಿಯು ಹಿಂದಿನಿಂದ ಹಾರಿಕೊಲ್ಲದಿರಲು ಕಾರಣವೇನು? (ಗ್ರಹಿಕೆ-ಸಾಧಾರಣ) ಮಾರ್ಚ್ 2017, ಜೂನ್ 2017, 2018. (ಕ.ಫ-8)

27. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.
(ಗ್ರಹಿಕೆ-ಸಾಧಾರಣ) ಜೂನ್ 2022. (ಕ.ಫ-2)

28. ಹುಲಿ ನಿರಾಶೆಯಿಂದ ಕೋಪಗೊಂಡು ಗರ್ಜಿಸಿ ಏಕೆ ಪಲಾಯನ ಮಾಡಿತು? (ಗ್ರಹಿಕೆ-ಸಾಧಾರಣ) ಮಾರ್ಚ್ 2019, 2020, ಸೆಪ್ಟೆಂಬರ್ -2020 (ಕ.ಫ-3)

ಕೆಳಗಿನ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

29. ಎ. ಎನ್. ಮೂರ್ತಿರಾವ್ (ಸ್ಮರಣೆ-ಸಾಧಾರಣ) ಮಾರ್ಚ್ 2015, 2020, ಜೂನ್ 2022.

ಕೆಳಗಿನ ಗಾದೆಯನ್ನು ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3 ಅಂಕ)**

30. ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ. (ಅಭಿವ್ಯಕ್ತಿ-ಸಾಧಾರಣ) ಜೂನ್ 2018, 2019.

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : (ಕ.ಫ-10) **(3 ಅಂಕ)**

31. "ಶಾನುಭೋಗರ ವದನಾರವಿಂದದಲ್ಲಿ ಮುಗುಳುನಗೆ ಮೂಡಿತು" (ಗ್ರಹಿಕೆ-ಸಾಧಾರಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

32. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ" (ಅಭಿವ್ಯಕ್ತಿ-ಸಾಧಾರಣ)

33. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು." (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2018.

34. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?" (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2022.

35. "ಹುಲಿ ಈಗ ಎಷ್ಟು ಹಸಿದಿರಬೇಕು." (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2026.

36. "ಮಡಿಯ ಬೇಕಾದರೆ ಮಾಡಿಯೇ ಮಡಿಯುತ್ತೇನೆ." (ಅಭಿವ್ಯಕ್ತಿ-ಕಠಿಣ)

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)

37. ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ. (ಅಭಿವ್ಯಕ್ತಿ-ಸಾಧಾರಣ) ಮೇ 2025. (ಕ.ಫ-3)

38. ಶಾನುಭೋಗರು ಬದುಕುಳಿದದ್ದು ಹುಲಿಯ ಧರ್ಮಶ್ರದ್ಧೆಯಿಂದ ಎಂಬುದನ್ನು ಸಮರ್ಥಿಸಿ. (ಅಭಿವ್ಯಕ್ತಿ-ಕಠಿಣ) ಮೇ 2025. (ಕ.ಫ-11)

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (ಕ.ಫ-3) (ಗ್ರಹಿಕೆ-ಸಾಧಾರಣ) **(2+2= 4 ಅಂಕ)**

39. ಬಸವಣ್ಣನವರು ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು ಕಟ್ಟಬಯಸಿದರು. ಸಾಮಾನ್ಯ ಜನತೆಯನ್ನು ಉದ್ದಾರೋನ್ಮುಖವಾಗಿಸಬೇಕಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ವಿಷಯಗಳನ್ನು ತಿಳಿಸಬೇಕು ಎಂಬುದನ್ನು ಮನಗಂಡು ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿ ಜನಸಾಮಾನ್ಯರಿಗೆ ಅಗಮ್ಯವಾಗಿದ್ದ ಧರ್ಮರಹಸ್ಯವನ್ನು ತಿಳಿಯಾದ ಅಚ್ಚಗನ್ನಡದಲ್ಲಿ ತಿಳಿಸಿಕೊಟ್ಟರು. ಧರ್ಮವೆಂದರೆ

ಅಗ್ರಾಹ್ಯವಾದ ಜಟಿಲ ಜಾಲವಲ್ಲ, ಒಂದು ವರ್ಗದ ಸ್ವತ್ತಲ್ಲ ಎಲ್ಲರ ಆಸ್ತಿಯಾಗಬೇಕು. ಎಲ್ಲರ ಅಭ್ಯುದಯಕ್ಕೆ ಕಾರಣವಾಗಬೇಕು ಎಂಬುದು ಬಸವಣ್ಣನವರ ನಿಲುವು ಆಗಿತ್ತು.

ದೇವಲೋಕ, ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸಿದರು. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಹೇಳಿ ಮರ್ತ್ಯಲೋಕ ಎಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ ಎಂದು ವ್ಯಾಖ್ಯಾನಿಸಿದರು. `ದೇವನೊಬ್ಬ ನಾಮ ಹಲವು' ಎಂದು ಬಹುದೇವೋಪಾಸನೆಯನ್ನು ಖಂಡಿಸಿದರು. ಕಾಯಕ ತತ್ತ್ವಕ್ಕೆ ಪ್ರಾಧಾನ್ಯತೆ ನೀಡಿದರು. ಅಂತರಂಗ ಬಹಿರಂಗಗಳ ಸಾಮರಸ್ಯವನ್ನು ತಿಳಿಸಿ, ನುಡಿಗೆ ತಕ್ಕ ನಡೆಯಿರಬೇಕು ಎಂದರು. ಸತ್ಯ ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಅಸ್ಪೃಶ್ಯತಾ ನಿವಾರಣೆ ಇಂದಿಗೂ ಅವಶ್ಯವೂ, ಅನಿವಾರ್ಯವೂ ಆಗಿದೆ. ಆದ್ದರಿಂದಲೇ ಬಸವಣ್ಣನವರು ಜಗತ್ತಿನ ಯಾವ ಕ್ರಾಂತಿಕಾರಿಗೂ ಮಿಗಿಲಾಗಿ ಕಾಣುತ್ತಾರೆ.

ಪ್ರಶ್ನೆಗಳು :

ಅ. ಧರ್ಮದ ಬಗೆಗೆ ಬಸವಣ್ಣನವರ ನಿಲುವನ್ನು ತಿಳಿಸಿ.

ಆ. ಬಸವಣ್ಣನವರು ಏಕೆ ಒಬ್ಬ ಕ್ರಾಂತಿಕಾರಿ ಎಂಬುದನ್ನು ಸಮರ್ಥಿಸಿ.

ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : (ಕ.ಫ-4) **(5 ಅಂಕ)**

(ಅಭಿವ್ಯಕ್ತಿ- ಸಾಧಾರಣ)

40. ನಿಮ್ಮನ್ನು ಧಾರವಾಡದ ಸರ್ಕಾರಿ ಬಾಲಿಕೆಯರ ಪ್ರೌಢಶಾಲೆಯ ೧೦ ನೇ ತರಗತಿ ವಿದ್ಯಾರ್ಥಿನಿ 'ಸ್ವರಾ' ಎಂದು ಭಾವಿಸಿಕೊಂಡು, ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ೧೦೦೦ ರೂಪಾಯಿಗಳನ್ನು ನೀಡುವಂತೆ ಕೋರಿ, ಹರಿಹರದ ಈಶ್ವರ ನಗರದಲ್ಲಿ ವಾಸವಾಗಿರುವ 'ರಾಕೇಶ ಜಿ.' ಎಂಬ ಹೆಸರಿನ ತಂದೆಗೆ ಒಂದು ಪತ್ರವನ್ನು ಬರೆಯಿರಿ.

ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :

(ಕ.ಫ-3) **(5 ಅಂಕ)**

41. ರಾಷ್ಟ್ರೀಯ ಭಾವೈಕ್ಯ. (ಅಭಿವ್ಯಕ್ತಿ-ಕಠಿಣ) ಮಾರ್ಚ್ 2019, ಜೂನ್ 2018.

ಗದ್ಯಪಾಠ 3. ಭಾಗ್ಯಶಿಲ್ಪಿಗಳು
- ಸಮಿತಿ ರಚನೆ / ಡಿ. ಎಸ್. ಜಯಪ್ಪಗೌಡ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	29	16	19	00	64
ಅಂಕಗಳು	31	34	67	00	132

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	10	18	15	12	7	2	64
ಅಂಕಗಳು	10	18	30	36	28	10	132

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-7) **(1 ಅಂಕ)**

1. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆ ಪದಗಳನ್ನು ಬಳಸುವಾಗ ಬಳಸುವ ಲೇಖನಚಿಹ್ನೆ (ಸ್ಮರಣೆ-ಸಾಧಾರಣ) ಮಾರ್ಚ್ 2026.
(ಎ) ಪ್ರಶ್ನಾರ್ಥಕ (ಬಿ) ಭಾವಸೂಚಕ (ಸಿ) ಆವರಣ (ಡಿ) ವಾಕ್ಯವೇಷ್ಟನ

2. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು (ಸ್ಮರಣೆ-ಸುಲಭ) ಮಾರ್ಚ್ 2020, 2022, 2026, ಜೂನ್ 2023, ಆಗಸ್ಟ್ 2024.
(ಎ) ಅರ್ಧವಿರಾಮ (ಬಿ) ಅಲ್ಪವಿರಾಮ (ಸಿ) ಉದ್ಧರಣ (ಡಿ) ಆವರಣ

3. ಸಂಭೋಧನೆ, ಹರ್ಷ, ಆಶ್ಚರ್ಯ, ದುಃಖ ಮುಂತಾದ ಭಾವನೆಗಳು ಉಂಟಾದಾಗ ಬಳಸುವ ಲೇಖನ ಚಿಹ್ನೆ (ಸ್ಮರಣೆ-ಸಾಧಾರಣ)
(ಎ) ಪೂರ್ಣವಿರಾಮ (ಬಿ) ಅಲ್ಪವಿರಾಮ (ಸಿ) ಪ್ರಶ್ನಾರ್ಥಕ (ಡಿ) ಭಾವಸೂಚಕ

4. ಬಟ್ಟೆಗಿರಣಿ ರಟ್ಟು ಪೆನ್ಸಿಲ್ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ. ಈ ವಾಕ್ಯದಲ್ಲಿ ಇರಬೇಕಾದ ಲೇಖನ ಚಿಹ್ನೆ (ಸ್ಮರಣೆ-ಸುಲಭ) ಸೆಪ್ಟಂಬರ್ 2020.
(ಎ) ಅಲ್ಪವಿರಾಮ (ಬಿ) ಅರ್ಧವಿರಾಮ (ಸಿ) ಆವರಣ (ಡಿ) ವಿವರಣ

5. ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಬಳಸಬೇಕಾದ ಲೇಖನ ಚಿಹ್ನೆ (ಸ್ಮರಣೆ-ಸಾಧಾರಣ) ಮಾರ್ಚ್ 2018, 2021, 2023.
(ಎ) ಉದ್ಧರಣ (ಬಿ) ಅರ್ಧವಿರಾಮ (ಸಿ) ಆವರಣ (ಡಿ) ಅಲ್ಪವಿರಾಮ

6. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ (ಸ್ಮರಣೆ-ಸಾಧಾರಣ) ಜೂನ್ 2019, 2022, 2024.
(ಎ) ಆವರಣ (ಬಿ) ವಿವರಣ (ಸಿ) ಉದ್ಧರಣ (ಡಿ) ವಾಕ್ಯವೇಷ್ಟನ

7. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು (ಸ್ಮರಣೆ-ಸಾಧಾರಣ) ಮಾರ್ಚ್ 2017, 2024, ಜೂನ್ 2017.
(ಎ) ಉದ್ಧರಣ (ಬಿ) ವಾಕ್ಯವೇಷ್ಟನ (ಸಿ) ಅರ್ಧವಿರಾಮ (ಡಿ) ಪೂರ್ಣವಿರಾಮ

8. ಯುದ್ಧಕ್ಕೆ ಹೋಗಿರುವ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ? ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ (ಸ್ಮರಣೆ-ಸುಲಭ) ಮಾರ್ಚ್ 2025.
(ಎ) ಪೂರ್ಣವಿರಾಮ (ಬಿ) ಪ್ರಶ್ನಾರ್ಥಕ (ಸಿ) ಭಾವಸೂಚಕ (ಡಿ) ಅರ್ಧವಿರಾಮ

9. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು (ಸ್ಮರಣೆ-ಸಾಧಾರಣ) ಜೂನ್ 2018.
(ಎ) ಪೂರ್ಣವಿರಾಮ (ಬಿ) ಅರ್ಧವಿರಾಮ (ಸಿ) ಆವರಣ (ಡಿ) ಅಲ್ಪವಿರಾಮ

10. ಸಿನಿಮಾ ಜಾಗದಲ್ಲಿ ನಿಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು! ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ (ಸ್ಮರಣೆ-ಸಾಧಾರಣ)
(ಎ) ಪೂರ್ಣವಿರಾಮ (ಬಿ) ಪ್ರಶ್ನಾರ್ಥಕ (ಸಿ) ಭಾವಸೂಚಕ (ಡಿ) ಅರ್ಧವಿರಾಮ

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

11. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು? (ಸ್ಮರಣೆ-ಸುಲಭ)

12. ನಾಲ್ವಡಿ ಕೃಷ್ಣರಾಜ ಒಡೆಯರ ತಾಯಿಯ ಹೆಸರೇನು? (ಸ್ಮರಣೆ-ಸುಲಭ)

13. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು? (ಸ್ಮರಣೆ-ಸುಲಭ)

14. ನಾಲ್ವಡಿ ಕೃಷ್ಣರಾಜ ಒಡೆಯರು ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದ್ದು ಯಾವಾಗ? (ಸ್ಮರಣೆ-ಸುಲಭ)

15. 'ಸಾಮಾಜಿಕ ಕಾನೂನುಗಳ ಹರಿಕಾರ'ರೆಂದು ಹೆಸರಾದವರು ಯಾರು? (ಸ್ಮರಣೆ-ಸುಲಭ)

16. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು? (ಸ್ಮರಣೆ-ಸುಲಭ) ಮಾರ್ಚ್ 2024.

17. ವಿಶ್ವೇಶ್ವರಯ್ಯನವರ ತಂದೆ ತಾಯಿಯರ ಹೆಸರೇನು? (ಸ್ಮರಣೆ-ಸುಲಭ)

18. ವಿಶ್ವೇಶ್ವರಯ್ಯನವರು ಜನಿಸಿದ್ದು ಯಾವಾಗ? (ಸ್ಮರಣೆ-ಸುಲಭ)

19. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು? (ಸ್ಮರಣೆ-ಸುಲಭ)

20. ವಿಶ್ವೇಶ್ವರಯ್ಯನವರಿಗೆ ವಿದ್ಯಾರ್ಥಿ ವೇತನ ನೀಡಿದ ಮೈಸೂರಿನ ದಿವಾನರು ಯಾರು? (ಸ್ಮರಣೆ-ಸುಲಭ)

21. ವಿಶ್ವೇಶ್ವರಯ್ಯನವರನ್ನು ಮುಕ್ತಕಂಠದಿಂದ ಹೊಗಳಿದ ಬ್ರಿಟಿಷ್ ಅಧಿಕಾರಿ ಯಾರು? (ಸ್ಮರಣೆ-ಸುಲಭ)

22. ಹೈದರಾಬಾದ್ ನಗರಕ್ಕೆ ಯಾವ ನದಿಗಳ ಪ್ರವಾಹದಿಂದ ನಷ್ಟ ಸಂಭವಿಸುತ್ತಿತ್ತು? (ಸ್ಮರಣೆ-ಸುಲಭ)

23. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು? (ಸ್ಮರಣೆ-ಸುಲಭ)

24. ವಿಶ್ವೇಶ್ವರಯ್ಯನವರಿಗೆ ಭಾರತ ಸರ್ಕಾರವು ನೀಡಿದ ಅತ್ಯುನ್ನತ ಪ್ರಶಸ್ತಿ ಯಾವುದು? (ಸ್ಮರಣೆ-ಸುಲಭ)

25. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು? (ಸ್ಮರಣೆ-ಸುಲಭ) ಮಾರ್ಚ್ 2020.

26. ವಿಶ್ವೇಶ್ವರಯ್ಯನವರು ಮೈಸೂರು ಬ್ಯಾಂಕ್ ಸ್ಥಾಪಿಸಿದ್ದು ಯಾವಾಗ? (ಸ್ಮರಣೆ-ಸುಲಭ)

27. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ? (ಸ್ಮರಣೆ-ಸುಲಭ)

28. ವಿಶ್ವೇಶ್ವರಯ್ಯನವರು ಇಹಲೋಕವನ್ನು ತ್ಯಜಿಸಿದ್ದು ಯಾವಾಗ? (ಸ್ಮರಣೆ-ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

29. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಾರ್ಯ ನಿರ್ವಹಿಸಿದ ಸ್ವಯಂ ಆಡಳಿತ ಕ್ಷೇತ್ರಗಳನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) ಮಾರ್ಚ್ 2022, 2026. (ಕ.ಫ-2)

30. ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿದ ನ್ಯಾಯವಿಧಾಯಕ ಸಭೆಯನ್ನು ಕುರಿತು ತಿಳಿಸಿ. (ಗ್ರಹಿಕೆ-ಸಾಧಾರಣ) (ಕ.ಫ-3)

31. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಾರ್ಯರೂಪಕ್ಕೆ ಬಂದ ನೀರಾವರಿ ಯೋಜನೆಗಳಾವುವು? (ಗ್ರಹಿಕೆ-ಸಾಧಾರಣ) (ಕ.ಫ-2)

32. ನೆಹರು ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಹೇಳಿದ ಮಾತುಗಳಾವುವು? (ಗ್ರಹಿಕೆ-ಸಾಧಾರಣ) ಮಾರ್ಚ್ 2022, 2024 (ಕ.ಫ-2)

33. ವಿಶ್ವೇಶ್ವರಯ್ಯನವರ ವಿದ್ಯಾಭ್ಯಾಸದ ಕುರಿತು ತಿಳಿಸಿ. (ಗ್ರಹಿಕೆ-ಸಾಧಾರಣ) (ಕ.ಫ-2)

34. ಸ್ವಯಂ ಚಾಲಿತ ಬಾಗಿಲುಗಳ ಅನ್ವೇಷಣೆಯಲ್ಲಿ ವಿಶ್ವೇಶ್ವರಯ್ಯನವರ ಕೊಡುಗೆ ಕುರಿತು ಬರೆಯಿರಿ. (ಗ್ರಹಿಕೆ-ಸಾಧಾರಣ) (ಕ.ಫ-3)

35. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರಜಾ ಪ್ರತಿನಿಧಿ ಸಭೆಯು ನೂತನ ರೂಪ ಪಡೆದ ರೀತಿಯನ್ನು ಬರೆಯಿರಿ. (ಗ್ರಹಿಕೆ-ಸಾಧಾರಣ) (ಕ.ಫ-3)

36. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಜಾರಿಯಾದ ಸಾಮಾಜಿಕ ಕಾನೂನುಗಳು ಯಾವುವು? (ಗ್ರಹಿಕೆ-ಸಾಧಾರಣ) (ಕ.ಫ-2)

37. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ. (ಗ್ರಹಿಕೆ-ಸಾಧಾರಣ) (ಕ.ಫ-2)

38. ವಿಶ್ವೇಶ್ವರಯ್ಯನವರ ಕಾಲದಲ್ಲಿ ಮೈಸೂರು ಮಾದರಿ ಹೊಸ ಆಡಳಿತ ಜನ್ಮತಾಳಿದ್ದು ಹೇಗೆ? (ಗ್ರಹಿಕೆ-ಸಾಧಾರಣ) (ಕ.ಫ-3)

39. ಕೈಕಾರಿಕೀಕರಣಕ್ಕೆ ವಿಶ್ವೇಶ್ವರಯ್ಯ ಅವರು ನೀಡಿದ ಕೊಡುಗೆಯನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) (ಕ.ಫ-2)

40. ವಿಶ್ವೇಶ್ವರಯ್ಯ ಅವರು ಹಣಕಾಸು ನೀತಿಯಲ್ಲಿ ಮಾಡಿದ ಮಾರ್ಪಾಡುಗಳಾವುವು? (ಗ್ರಹಿಕೆ-ಸಾಧಾರಣ) (ಕ.ಫ-2) ಜೂನ್ 2022

41. ವಿಶ್ವೇಶ್ವರಯ್ಯನವರ ಸಾಧನೆಗೆ ಸಂದ ಪ್ರಶಸ್ತಿ ಪುರಸ್ಕಾರಗಳನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) (ಕ.ಫ-2)

42. ವಿಶ್ವೇಶ್ವರಯ್ಯನವರು ರಚಿಸಿದ ಕೃತಿಗಳಾವುವು? (ಗ್ರಹಿಕೆ-ಸಾಧಾರಣ) (ಕ.ಫ-2)

43. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಹೇಳಿದ ಮಾತುಗಳಾವುವು? (ಗ್ರಹಿಕೆ-ಸಾಧಾರಣ) ಜೂನ್ 2024 (ಕ.ಫ-2)

ಕೆಳಗಿನ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

44. ಡಿ. ಎಸ್. ಜಯಪ್ಪಗೌಡ (ಸ್ಮರಣೆ-ಸಾಧಾರಣ) ಜೂನ್ 2024.

ಕೆಳಗಿನ ಗಾದೆಯನ್ನು ಮಹತ್ತ್ವ ದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3 ಅಂಕ)**

45. ಬೆಳೆಯುವ ಸಿರಿ ಮೊಳಕೆಯಲ್ಲಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2020, 2026.

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

46. "ಸಾಮಾಜಿಕ ಕಾನೂನುಗಳ ಹರಿಕಾರ." (ಅಭಿವ್ಯಕ್ತಿ-ಸಾಧಾರಣ)

47. "ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು." (ಅಭಿವ್ಯಕ್ತಿ-ಸಾಧಾರಣ)

48. "ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು." (ಅಭಿವ್ಯಕ್ತಿ-ಕಠಿಣ)

49. "ಮೈಸೂರು ಗ್ರಾಮ ನ್ಯಾಯಾಲಯ ಕಾಯ್ದೆ." (ಅಭಿವ್ಯಕ್ತಿ-ಕಠಿಣ) ಮಾರ್ಚ್ 2020.

50. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ." (ಅಭಿವ್ಯಕ್ತಿ-ಸಾಧಾರಣ) ಜೂನ್ 2022, 2023.

51. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು." (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2026.

52. "ಮೈಸೂರು ಮಾದರಿ' ಎಂಬ ಹೊಸ ಆಡಳಿತ ಮಾದರಿ ಜನ್ಮತಾಳಿತು." (ಅಭಿವ್ಯಕ್ತಿ-ಕಠಿಣ)

53. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು." (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2025, ಮೇ-2025.

54. "ಕೈಗಾರಿಕೀಕರಣ ಇಲ್ಲವೆ ಅವನತಿ." (ಅಭಿವ್ಯಕ್ತಿ-ಕಠಿಣ)

55. "ಶಿಕ್ಷಣವು ಸಂಜೀವಿನಿ ಎಂಬುದನ್ನರಿತ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು."

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ) (ಕ.ಫ-3)

56. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಮಾದರಿ ಮೈಸೂರು ರಾಜ್ಯವಾದ ಬಗೆಯನ್ನು ವಿವರಿಸಿ. (ಅಭಿವ್ಯಕ್ತಿ-ಸಾಧಾರಣ) ಆಗಸ್ಟ್ 2024.

57. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ)

58. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2023. ಆಗಸ್ಟ್ 2024.

59. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಕುರಿತು ವಿವರಿಸಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2023.

60. ವಿಶ್ವೇಶ್ವರಯ್ಯ ಅವರು ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಲ್ಲಿಸಿದ ಸೇವೆಯನ್ನು ವಿವರಿಸಿ. (ಅಭಿವ್ಯಕ್ತಿ-ಕಠಿಣ) ಸೆ-2020.

61. ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿದ ನ್ಯಾಯವಿಧಾಯಕ ಸಭೆ ಮತ್ತು ಜಾರಿಗೆ ತಂದ ಸಾಮಾಜಿಕ ಕಾನೂನುಗಳನ್ನು ಕುರಿತು ಬರೆಯಿರಿ. (ಅಭಿವ್ಯಕ್ತಿ-ಕಠಿಣ) ಸೆ-2020.

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (ಕ.ಫ-3) (ಗ್ರಹಿಕೆ-ಸಾಧಾರಣ) **(2+2=4 ಅಂಕ)**

62. ಮನಸ್ಸು ರೋಗವನ್ನು ಸೃಷ್ಟಿಸಬಲ್ಲದು, ಗುಣಪಡಿಸಬಲ್ಲದು! ತಾಳ್ಮೆ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾಮನೋಭಾವ - ಇವೇ ಮೊದಲಾದ ರಚನಾತ್ಮಕ ಭಾವನೆಗಳು ದೇಹಯಂತ್ರದ ಎಲ್ಲ ಭಾಗಗಳಲ್ಲಿ ಉತ್ಸಾಹಯುತ ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುತ್ತವೆ. ನಮ್ಮಲ್ಲಿ ಸಂತೋಷ, ತೃಪ್ತಿ ಹಾಗೂ ಸೃಜನಶೀಲ ಪ್ರವೃತ್ತಿಗಳನ್ನು ಎಚ್ಚರಗೊಳಿಸುತ್ತವೆ. ಹಾಗೆಯೇ ನಿಷೇಧಮಯ ಭಾವನೆಗಳಿಂದ ಭಯ, ಚಿಂತೆ, ದ್ವೇಷ, ಅಸೂಯೆ, ಸೋಲಿನ ಮನೋಭಾವ ಹಾಗೂ ಸಂಕುಚಿತ ಸ್ವಾರ್ಥದ ನಾನಾ ಅವತಾರಗಳು ಸಮಸ್ತ ದೇಹ ಮತ್ತು ಅಂಗಾಂಗಗಳಿಗೆ ಕೆಡುಕನ್ನುಂಟುಮಾಡಿ ರೋಗಕ್ಕೆ ಕಾರಣವಾಗುತ್ತವೆ. ಪ್ರಸನ್ನತೆ, ಶಾಂತತೆ, ಧೈರ್ಯ, ಆತ್ಮವಿಶ್ವಾಸ, ದೃಢನಿಶ್ಚಯ - ಇವೇ ಮೊದಲಾದ ಭಾವನೆಗಳು ಶರೀರದ ಸುಸ್ಥಿತಿಗೆ ಆರೋಗ್ಯವರ್ಧಕ ಟಾನಿಕ್ಕಿಗಿಂತಲೂ ಹೆಚ್ಚಿನ ಸಹಾಯ ಮಾಡುತ್ತವೆ! ಮನಸ್ಸಿನಲ್ಲಿ ಉದಿಸುವ ಯೋಚನೆ ಎಂಬ ದ್ರವ್ಯದಿಂದ ವಿಷವನ್ನೂ ತಯಾರಿಸಬಹುದು, ಅಮೃತವನ್ನೂ ತಯಾರಿಸಬಹುದು. ಮನಸ್ಸು ಕೆಲಸ ಮಾಡುವ ಸೂಕ್ಷ್ಮ ನಿಯಮವನ್ನು ತಿಳಿದುಕೊಂಡರೆ, ಶ್ರದ್ಧೆಯಿಂದ ಶ್ರಮಿಸಿದರೆ ವಿಷವನ್ನೂ ಅಮೃತವನ್ನಾಗಿಸಬಹುದು.

ಪ್ರಶ್ನೆಗಳು :

ಅ. ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುವ ಅಂಶಗಳನ್ನು ತಿಳಿಸಿ.

ಆ. ದೇಹ ಹಾಗೂ ಅಂಗಾಂಗಳಿಗೆ ಕೆಡುಕನ್ನುಂಟು ಮಾಡುವ ಅಂಶಗಳಾವುವು?

ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : (ಕ.ಫ-4) **(5 ಅಂಕ)**
(ಅಭಿವ್ಯಕ್ತಿ-ಸಾಧಾರಣ)

63. ನಿಮ್ಮನ್ನು ಉಡುಪಿಯ ಸರ್ಕಾರಿ ಪ್ರೌಢಶಾಲೆಯ 'ವರ್ಷಾ' ಎಂದು ಭಾವಿಸಿಕೊಂಡು, ಮಂಗಳೂರಿನ ಪಿಲಿಕುಳ 'ವಿಜ್ಞಾನ ವಸ್ತುಸಂಗ್ರಹಾಲಯ'ಕ್ಕೆ ಪ್ರವೇಶ ಬಯಸಿ ಅಲ್ಲಿನ ವ್ಯವಸ್ಥಾಪಕರಿಗೆ ಮನವಿ ಪತ್ರವನ್ನು ಬರೆಯಿರಿ.

ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :
(ಕ.ಫ-5) **(5 ಅಂಕ)**

64. ಮಹಿಳಾ ಸಬಲೀಕರಣ. (ಅಭಿವ್ಯಕ್ತಿ-ಕಠಿಣ) ಜೂನ್ 2018.

ಗದ್ಯಪಾಠ 4. ಎದೆಗೆ ಬಿದ್ದ ಅಕ್ಷರ - ದೇವನೂರ ಮಹಾದೇವ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	18	13	13	00	44
ಅಂಕಗಳು	20	20	46	00	86

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ.1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	15	10	4	9	4	2	44
ಅಂಕಗಳು	15	10	8	27	16	10	86

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-7) **(1ಅಂಕ)**

1. ಕ್ರಿಯಾಪದದ ಮೂಲ ರೂಪವನ್ನು ಹೀಗೆನ್ನುವರು (ಸ್ಮರಣೆ-ಸುಲಭ)
(ಎ) ಸರ್ವನಾಮ (ಬಿ) ಧಾತು (ಸಿ) ಸಂಧಿಪದ (ಡಿ) ನಾಮಪದ

2. 'ತಿಂದಾನು' ಪದವು ಈ ಕ್ರಿಯಾಪದಕ್ಕೆ ಸೇರಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2017
(ಎ) ನಿಷೇಧಾರ್ಥಕ (ಬಿ) ಸಂಭಾವನಾರ್ಥಕ (ಸಿ) ವಿಧ್ಯರ್ಥಕ (ಡಿ) ಸಾಮಾನ್ಯಾರ್ಥಕ

3. ಭವಿಷತ್‌ಕಾಲ ಸೂಚಕ ಪ್ರತ್ಯಯವಿದು (ಸ್ಮರಣೆ-ಸಾಧಾರಣ)
(ಎ) ದ (ಬಿ) ಉದ (ಸಿ) ಉತ್ತ (ಡಿ) ವ

4. ಸಂಭಾವನಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆಯಾಗಿರುವ ಪದ
(ಗ್ರಹಿಕೆ-ಸಾಧಾರಣ) ಜೂನ್ 2018.
(ಎ) ಮಾಡೋಣ (ಬಿ) ಮಾಡನು (ಸಿ) ಮಾಡೇವು (ಡಿ) ಮಾಡಲಿ

5. 'ನೋಡು' ಧಾತುವಿನ ನಿಷೇಧಾರ್ಥಕ ರೂಪ (ಸಾಧಾರಣ-ಸ್ಮರಣೆ) ಸೆಪ್ಟೆಂಬರ್ 2020.
(ಎ) ನೋಡಲಿ (ಬಿ) ನೋಡೇವು (ಸಿ) ನೋಡದು (ಡಿ) ನೋಡಿಯಾನು

6. 'ಮಾಡು' ಧಾತುವಿನ ವಿಧ್ಯರ್ಥಕ ರೂಪ (ಸಾಧಾರಣ-ಸ್ಮರಣೆ) ಮಾರ್ಚ್ 2023
(ಎ) ಮಾಡೇವು (ಬಿ) ಮಾಡಿಯಾರು (ಸಿ) ಮಾಡರು (ಡಿ) ಮಾಡಲಿ

7. 'ಓದಲಿ' ಪದವು ಈ ಕ್ರಿಯಾರೂಪಕ್ಕೆ ಸೇರಿದೆ (ಸ್ಮರಣೆ-ಸುಲಭ) ಮೇ 2025.
(ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ (ಸಿ) ನಿಷೇಧಾರ್ಥಕ (ಡಿ) ಸಂಭವಾರ್ಥಕ

8. ವರ್ತಮಾನಕಾಲ ಸೂಚಕ ಪ್ರತ್ಯಯವಿದು (ಸ್ಮರಣೆ-ಸುಲಭ) ಮಾರ್ಚ್ 2026.
(ಎ) ದ (ಬಿ) ಉವ (ಸಿ) ಉತ್ತ (ಡಿ) ವ

9. 'ಹೋದಾನು' ಪದವು ಈ ಕ್ರಿಯಾರೂಪಕ್ಕೆ ಸೇರಿದೆ (ಗ್ರಹಿಕೆ-ಸುಲಭ)
(ಎ) ನಿಷೇಧಾರ್ಥಕ (ಬಿ) ಸಮಾನಾರ್ಥಕ (ಸಿ) ವಿಧ್ಯರ್ಥಕ (ಡಿ) ಸಂಭಾವನಾರ್ಥಕ

10. ಅಕರ್ಮಕ ಧಾತುವಿಗೆ ಉದಾಹರಣೆಯಿದು (ಗ್ರಹಿಕೆ-ಸುಲಭ)
(ಎ) ನೋಡು (ಬಿ) ಹಾಡು (ಸಿ) ಮಾಡು (ಡಿ) ಓಡು

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಫ-7) **(1 ಅಂಕ)**

11. ಕೊಡು : ಸಕರ್ಮಕ ಧಾತು : : ಮಲಗು : ..... (ಗ್ರಹಿಕೆ-ಸುಲಭ) ಜೂನ್ 2023.

12. ಮಾಡಲಿ : ವಿಧ್ಯರ್ಥಕ : : ಮಾಡಳು : ..... (ಗ್ರಹಿಕೆ-ಸಾಧಾರಣ) ಮಾರ್ಚ್ 2018.

13. ತಿನ್ನುತ್ತೇನೆ : ವರ್ತಮಾನಕಾಲ : : ತಿನ್ನುವೆನು : ..... (ಗ್ರಹಿಕೆ-ಸುಲಭ) ಮಾರ್ಚ್ 2022.

14. ಮಲಗು : ಅಕರ್ಮಕಧಾತು : : ಕೊಡು : ..... (ಗ್ರಹಿಕೆ-ಸುಲಭ) ಜೂನ್ 2022.

15. ಮಾಡೋಣ : ವಿಧ್ಯರ್ಥಕ : : ಮಾಡಿಯಾನು : ..... (ಗ್ರಹಿಕೆ-ಸಾಧಾರಣ) ಮಾರ್ಚ್ 2020, ಜೂನ್ 2019, ಆಗಸ್ಟ್ 2024

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

16. ಮಂಚಮ್ಮ ಇಂದು ಎಲ್ಲಿ ಪೂಜಿತವಾಗುತ್ತಿದ್ದಾಳೆ? (ಸ್ಮರಣೆ-ಸಾಧಾರಣ)

17. ಡಾ. ಅಶೋಕ ಪೈಯವರ ಸ್ವಳ ಯಾವುದು? (ಸ್ಮರಣೆ-ಸುಲಭ)

18. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು? (ಸ್ಮರಣೆ-ಸುಲಭ) ಜೂನ್ 2022.

19. ಮನೆಮಂಚಮ್ಮ ಯಾರು? (ಸ್ಮರಣೆ-ಸುಲಭ) ಮಾ-2022. ಮೇ-2025.

20. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು? (ಸ್ಮರಣೆ-ಸುಲಭ)

21. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು? (ಸ್ಮರಣೆ-ಸುಲಭ) ಮಾರ್ಚ್ 2025.

22. ವಚನಕಾರರಿಗೆ ಯಾವುದು ದೇವರಾಗಿತ್ತು? (ಸ್ಮರಣೆ-ಸುಲಭ)

23. ಅಶೋಕ ಪೈ ಅವರ ವೃತ್ತಿ ಯಾವುದು? (ಸ್ಮರಣೆ-ಸುಲಭ) ಮಾರ್ಚ್ 2020.

24. ದೇವನೂರರ' ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ. (ಸ್ಮರಣೆ-ಸಾಧಾರಣ)

25. ಲೇಖಕರಾದ ದೇವನೂರ ಮಹಾದೇವ ಅವರು ಮನೋವೈದ್ಯ ಅಶೋಕ ಪೈ ಅವರನ್ನು ಭೇಟಿಯಾದದ್ದು ಎಲ್ಲಿ?

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :
(2 ಅಂಕ)

26 ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) ಮೇ 2025. (ಕ.ಫ-2)

27. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ. (ಗ್ರಹಿಕೆ-ಸಾಧಾರಣ) ಮಾರ್ಚ್ 2025. (ಕ.ಫ-8)

28. ಮಂಚಮ್ಮ ದೇವಿ ಮನೆಮಂಚಮ್ಮ ದೇವಿಯಾಗಿ ರೂಪುಗೊಂಡ ಬಗೆ ಹೇಗೆ? ತಿಳಿಸಿ. (ಗ್ರಹಿಕೆ-ಸಾಧಾರಣ) ಮಾರ್ಚ್ 2020. (ಕ.ಫ-8)

29. ಶಿವಾನುಭವ ಶಬ್ದಕೋಶ ಪುಸ್ತಕವನ್ನು ಓದಿದಾಗ ಲೇಖಕರಿಗಾದ ಅನುಭವವನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) (ಕ.ಫ-2)

ಕೆಳಗಿನ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

30. ದೇವನೂರ ಮಹಾದೇವ (ಸ್ಮರಣೆ-ಸಾಧಾರಣ) ಮಾರ್ಚ್ 2022, 2023, 2026.

ಕೆಳಗಿನ ಗಾದೆಯನ್ನು ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3 ಅಂಕ)**

31. ಕೂಡಿಬಾಳಿದರೆ ಸ್ವರ್ಗ ಸುಖ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2018.

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

32. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ." (ಅಭಿವ್ಯಕ್ತಿ-ಸಾಧಾರಣ) ಜೂನ್ 2022, ಸೆಪ್ಟೆಂಬರ್ 2020.

33. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ." (ಅಭಿವ್ಯಕ್ತಿ-ಸಾಧಾರಣ)

34. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು." (ಅಭಿವ್ಯಕ್ತಿ-ಸಾಧಾರಣ)

35. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ." (ಅಭಿವ್ಯಕ್ತಿ-ಸಾಧಾರಣ) ಜೂನ್ 2023.

36. "ನಿಲ್ಸಿ ನನ್ ಮಕ್ಕಳಾ" / "ಹಾಗಾದರೆ ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ?" (ಅಭಿವ್ಯಕ್ತಿ-ಕಠಿಣ)

37. "ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು" (ಅಭಿವ್ಯಕ್ತಿ-ಕಠಿಣ)

38. "ತಮ್ಮ ಪ್ರಜ್ಞೆ ಮುಂದೆ ಸುಳ್ಳು ಹೇಳಕ್ಕಾಗಲ್ಲ " (ಅಭಿವ್ಯಕ್ತಿ-ಕಠಿಣ)

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ: (4 ಅಂಕ) (ಕ.ಫ-3)

39. ದೇವನೂರ ಮಹಾದೇವರು ವಚನ ಸಾಹಿತ್ಯ ಕುರಿತು ಹೇಗೆ ವಿಮರ್ಶೆ ಮಾಡಿದ್ದಾರೆ? (ಅಭಿವ್ಯಕ್ತಿ-ಕಠಿಣ)

40 ಅಶೋಕ ಪೈ ಅವರು ಹೇಳಿರುವ ಸಂಶೋಧನಾ ಸತ್ಯ ಮತ್ತು ಜಾಗತೀಕರಣ ಕುರಿತು ವಿವರಿಸಿ. (ಅಭಿವ್ಯಕ್ತಿ-ಕಠಿಣ)

41. ಕವಿ ಸಿದ್ಧಲಿಂಗಯ್ಯನವರು ಹೇಳಿದ ಮಂಚಮ್ಮದೇವಿ ಮನೆಮಂಚಮ್ಮ ದೇವಿಯಾದ ಕತೆಯನ್ನು ವಿವರಿಸಿ. (ಅಭಿವ್ಯಕ್ತಿ-ಸಾಧಾರಣ)

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (ಕ.ಫ-3) (ಗ್ರಹಿಕೆ-ಸಾಧಾರಣ) **(2+2= 4 ಅಂಕ)**

42. ಸಿ. ವಿ. ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿ ಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದು ಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿಒತ್ತಿ

ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದಾನೆಂದರೆ, ಬೆನ್ನುತಟ್ಟಿ, ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪ್ರಶ್ನೆಗಳು :

ಅ. ಶಿಷ್ಯರನ್ನು ಕುರಿತ ರಾಮನ್ ಅವರ ಮನೋಭಾವನೆ ಹೇಗಿತ್ತು?

ಆ. ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : (ಕ.ಫ-4) **(5 ಅಂಕ)**

(ಅಭಿವ್ಯಕ್ತಿ-ಸಾಧಾರಣ)

43. ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ೧೦ ನೆಯ ತರಗತಿ ವಿದ್ಯಾರ್ಥಿನಿ 'ಸ್ವಾತಿ' ಎಂದು ಭಾವಿಸಿಕೊಂಡು, ಶಾಲಾ ವಾರ್ಷಿಕ ಸ್ನೇಹ ಸಮ್ಮೇಳನ ಆಚರಣೆಯನ್ನು ವಿವರಿಸಿ, ಹಾಸನದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ತೇಜು' ಎಂಬ ಹೆಸರಿನ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :

(ಕ.ಫ-5) **(5 ಅಂಕ)**

44. ತ್ಯಾಜ್ಯವಸ್ತು ನಿರ್ವಹಣೆ. (ಅಭಿವ್ಯಕ್ತಿ-ಕಠಿಣ) ಮಾರ್ಚ್ 2018, ಜೂನ್ 2019.

ಗದ್ಯಪಾಠ : 5. ಯುದ್ಧ - ಸಾರಾ ಅಬೂಬಕ್ಕರ್

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	16	8	18	00	42
ಅಂಕಗಳು	18	18	60	00	96

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ.2	ದೀ. ಉ. 3	ಒಟ್ಟು
ಪ್ರಶ್ನೆಗಳು	5	10	7	15	3	2	42
ಅಂಕಗಳು	5	10	14	45	12	10	96

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-7) **(1 ಅಂಕ)**

1. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳು ಒಂದು ಪೂರ್ಣ ಅಭಿಪ್ರಾಯದ ವಾಕ್ಯವಾಗಿದ್ದರೆ ಅದು (ಸ್ಮರಣೆ-ಸಾಧಾರಣ) ಮಾರ್ಚ್ 2015, 2019, 2022, ಜೂನ್ 2023.

(ಎ) ಸರಳವಾಕ್ಯ (ಬಿ) ಸಂಯೋಜಿತವಾಕ್ಯ

(ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕವಾಕ್ಯ

2. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿರುವ ವಾಕ್ಯ (ಸ್ಮರಣೆ-ಸಾಧಾರಣ) ಮಾರ್ಚ್ 2017, 2018, ಜೂನ್ 2022, 2024, ಆಗಸ್ಟ್ 2024.

(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ

(ಸಿ) ಪ್ರಶ್ನಾರ್ಥಕವಾಕ್ಯ (ಡಿ) ಮಿಶ್ರವಾಕ್ಯ

3. ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯ (ಸ್ಮರಣೆ-ಸುಲಭ) ಜೂನ್ 2017.

(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ

(ಸಿ) ಪ್ರಶ್ನಾರ್ಥಕವಾಕ್ಯ (ಡಿ) ಮಿಶ್ರವಾಕ್ಯ

4. ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು. ಈ ವಾಕ್ಯ ಪ್ರಕಾರ (ಸ್ಮರಣೆ-ಸುಲಭ) ಜೂನ್ 2018.

(ಎ) ಪ್ರಶ್ನಾರ್ಥಕವಾಕ್ಯ (ಬಿ) ಸಂಯೋಜಿತವಾಕ್ಯ

(ಸಿ) ಸಾಮಾನ್ಯವಾಕ್ಯ (ಡಿ) ಮಿಶ್ರವಾಕ್ಯ

5. ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯಿತು ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು. ಈ ವಾಕ್ಯ ಪ್ರಕಾರ (ಸ್ಮರಣೆ-ಸುಲಭ)

(ಎ) ಪ್ರಶ್ನಾರ್ಥಕವಾಕ್ಯ (ಬಿ) ಸಂಯೋಜಿತವಾಕ್ಯ

(ಸಿ) ಸಾಮಾನ್ಯವಾಕ್ಯ (ಡಿ) ಮಿಶ್ರವಾಕ್ಯ

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

6. ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು? (ಸ್ಮರಣೆ-ಸುಲಭ) ಮಾರ್ಚ್ 2018.

7. ಗಡಿ ಪ್ರದೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ? (ಸ್ಮರಣೆ-ಸುಲಭ)

8. ರಾಹಿಲನು ಯಾರು? (ಸ್ಮರಣೆ-ಸುಲಭ)

9. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು? (ಸ್ಮರಣೆ-ಸಾಧಾರಣ) ಜೂನ್ 2019.

10. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು? (ಸ್ಮರಣೆ-ಸಾಧಾರಣ)

11. ಸೈನ್ಯದಲ್ಲಿದ್ದ ವೈದ್ಯನ ಹೆಸರೇನು? (ಸ್ಮರಣೆ-ಸುಲಭ) ಮಾರ್ಚ್ 2020. ಆಗಸ್ಟ್ 2024.

12. ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಹೇಳಿದವರು ಯಾರು? (ಸ್ಮರಣೆ-ಸುಲಭ)

13. ರಾಹಿಲನಿಗೆ ಈಜಲು ಏಕೆ ತೊಂದರೆಯಾಗುತ್ತಿತ್ತು? (ಸ್ಮರಣೆ-ಸಾಧಾರಣ)

14. ಮುದುಕಿಯು ತಾನು ಈ ಊರಿಗೆ ಬಂದು ಎಷ್ಟು ವರ್ಷವಾಗಿದೆ ಎಂದು ತಿಳಿಸಿದಳು? (ಸ್ಮರಣೆ-ಸುಲಭ)

15. 'ಬ್ಲಾಕ್ ಔಟ್' ನಿಯಮ ಎಂದರೇನು? (ಸ್ಮರಣೆ-ಸಾಧಾರಣ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

16. ಡಾಕ್ಟರ್‌ಗೆ ವಿಮಾನದ ಪೈಲಟ್ ಹೇಳಿದ ಮಾತುಗಳಾವುವು? (ಗ್ರಹಿಕೆ-ಸುಲಭ) (ಕ.ಫ-2)

17. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು? (ಗ್ರಹಿಕೆ-ಸುಲಭ) ಮಾರ್ಚ್ 2018, 2024. (ಕ.ಫ-2)

18. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳಾವುವು? (ಗ್ರಹಿಕೆ-ಸಾಧಾರಣ) (ಕ.ಫ-8)

19. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ ಮಾತುಗಳಾವುವು? (ಗ್ರಹಿಕೆ-ಸಾಧಾರಣ) ಮೇ 2025. (ಕ.ಫ-8)

20. ರಾಹಿಲ್ ತಾನೋರ್ವ ಡಾಕ್ಟರ್ ಎಂದು ತಿಳಿಸಿದಾಗ ಮುದುಕಿಯ ಪ್ರತಿಕ್ರಿಯೆಯನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) (ಕ.ಫ-12)

21. ನಿರ್ಜೀವವಾಗಿರುವ ಮಗುವಿನ ಬಳಿ ಕುಳಿತು ಮುದುಕಿ ಸೈನಿಕರಿಗೆ ಏನು ಹೇಳಿದಳು? (ಗ್ರಹಿಕೆ-ಸಾಧಾರಣ) (ಕ.ಫ-2)

22. ಮುದುಕಿಯು ಸೈನಿಕರಿಂದ ರಾಹಿಲನನ್ನು ಹೇಗೆ ರಕ್ಷಿಸಿದಳು? (ಗ್ರಹಿಕೆ-ಸಾಧಾರಣ) ಮಾರ್ಚ್ 2020. (ಕ.ಫ-2)

ಕೆಳಗಿನ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

23. ಸಾರಾ ಅಬೂಬಕ್ಕರ್ (ಸ್ಮರಣೆ-ಸುಲಭ) ಮಾ-2019, ಜೂ-2018.

ಕೆಳಗಿನ ಗಾದೆಯನ್ನು ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3 ಅಂಕ)**

24. ಆಳಾಗಬಲ್ಲವನು ಅರಸನಾಗಬಲ್ಲ. (ಅಭಿವ್ಯಕ್ತಿ-ಸಾಧಾರಣ) ಜೂನ್ 2018.

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :
(ಕ.ಫ-9) **(3 ಅಂಕ)**

25. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"
(ಅಭಿವ್ಯಕ್ತಿ-ಸಾಧಾರಣ)

26. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ"
(ಅಭಿವ್ಯಕ್ತಿ-ಸಾಧಾರಣ)

27. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"
(ಅಭಿವ್ಯಕ್ತಿ-ಸಾಧಾರಣ)

28. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ, ಅದನ್ನೂ ನೋಡಿ!"
(ಅಭಿವ್ಯಕ್ತಿ-ಸಾಧಾರಣ)

29. "ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?"
(ಅಭಿವ್ಯಕ್ತಿ-ಕಠಿಣ)

30. "ಯಾರಪ್ಪಾ ನೀನು? ನಮ್ಮ ಕಡೆಯವನು ತಾನೇ?" (ಅಭಿವ್ಯಕ್ತಿ-ಕಠಿಣ)

31. "ಯಾರಮ್ಮಾ ಅದು? ಏನಾಗಿದೆ?" (ಅಭಿವ್ಯಕ್ತಿ-ಕಠಿಣ)

32. "ಹೊರಗೆ ಯುದ್ಧದ ಹೆಸರಿನಲ್ಲಿ ಮನುಷ್ಯ ಜೀವಿಗಳ ಸಾಮೂಹಿಕ ಕೊಲೆಯಾಗುತ್ತಿದೆ!" (ಅಭಿವ್ಯಕ್ತಿ-ಕಠಿಣ)

33. "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ?"
(ಅಭಿವ್ಯಕ್ತಿ-ಕಠಿಣ)

34. "ಆದರೂ ಈ ಮನೆಯಲ್ಲೊಮ್ಮೆ ನೋಡಿ ಬಿಡಿ" (ಅಭಿವ್ಯಕ್ತಿ-ಕಠಿಣ)

35. "ಇವರ ಮನೆ ಹಾಳಾಗ!" (ಅಭಿವ್ಯಕ್ತಿ-ಕಠಿಣ)

36. "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ" (ಅಭಿವ್ಯಕ್ತಿ-ಕಠಿಣ)

37. "ಈ ಮಳೆಯಲ್ಲಿ ಈ ಕತ್ತಲಲ್ಲಿ ನಾನು ಯಾರನ್ನು ಕರೆಯಲಿ?" (ಅಭಿವ್ಯಕ್ತಿ-ಕಠಿಣ)

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)
(ಕ.ಫ-3)

38. ರಾಹಿಲ ಮತ್ತು ಮುದುಕಿಯ ಮನದಲ್ಲಿ ಮೂಡಿ ಬಂದಿರುವ ಮಾನವೀಯತೆಯ ಸಹಕಾರವನ್ನು ಸಂಕ್ಷಿಪ್ತವಾಗಿ ಸ್ಪಷ್ಟೀಕರಿಸಿ. / ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯೂ ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2022, 2025.

39. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು? (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2022.

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (ಕ.ಫ-3) (ಅಭಿವ್ಯಕ್ತಿ-ಸಾಧಾರಣ) **(2+2=4 ಅಂಕ)**

40. ಎಲ್ಲ ಧರ್ಮಗಳೂ ಹಾಕಿಕೊಟ್ಟ ಒಂದು ರತ್ನಪಾಠವಿದೆ. ಸಾಧಕನಿಗೆ, ಅಂತರ್‌ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಎಲ್ಲ ಧರ್ಮಗಳೂ ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಹೇಳಿವೆ. ಧರ್ಮಶಾಲೆಗಳು, ವಿಹಾರಗಳು, ಅನ್ನಛತ್ರಗಳು- ಇವು ಏರ್ಪಟ್ಟಿರುವುದು ಇಂಥವರಿಗಾಗಿ ಹಾಗೂ ನಿರ್ಗತಿಕರಿಗಾಗಿ. ಅನೇಕ ದೇವಸ್ಥಾನಗಳಲ್ಲಿಯೂ, ಮಠಗಳಲ್ಲಿಯೂ ಇಂಥ ಏರ್ಪಾಟಿದೆ. ಇಂಥ ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಂಡವರೂ ಉಂಟು. ಇದು ಸಮಾಜದ ಕರ್ತವ್ಯವಾಯಿತು. ಆದರೆ ಸಾಧಕನ ಕರ್ತವ್ಯವೇನು? ಇನ್ನೊಬ್ಬರ ಮೇಲೆ ಅವನೆಂದಿಗೂ ಭಾರ ಹಾಕಿರಬಾರದು. ಇನ್ನೊಬ್ಬರು ತಾವಾಗಿಯೇ ಕೈಯೆತ್ತಿಕೊಡದೆ ಅವನು ಏನನ್ನೂ ಸ್ವೀಕರಿಸಬಾರದು. ಧಾತೃವಿನ ಮನವನ್ನು ಹತ್ತುಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು. ಕೇಳಿ ದೊರಕಿಸಿಕೊಂಡ ಸಾಮಗ್ರಿ-ಸೌಕರ್ಯಗಳ ಮೇಲೆ ನಿಂತ ಸಾಧನೆ-ತಪಸ್ಸು, ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ ಅದಕ್ಕೆ ಸ್ವಯಂಪೂರ್ಣತೆ ಇಲ್ಲ.

ಪ್ರಶ್ನೆಗಳು :

ಅ. ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು?

ಆ. ಸಾಧಕನಿಗಿರಬೇಕಾದ ಗುಣವಿಶೇಷತೆಗಳನ್ನು ತಿಳಿಸಿ?

ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : (ಕ.ಫ-4) **(5 ಅಂಕ)**
(ಅಭಿವ್ಯಕ್ತಿ-ಸಾಧಾರಣ)

41. ನಿಮ್ಮನ್ನು ಹಾವೇರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಪ್ರಕಾಶ' ಎಂದು ಭಾವಿಸಿಕೊಂಡು, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 'ಕನ್ನಡ ನಿಘಂಟು'ವಿನ ಹತ್ತು ಪ್ರತಿಗಳನ್ನು ಕಳುಹಿಸಿಕೊಡುವಂತೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ.

ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :
(ಕ.ಫ-5) **(5 ಅಂಕ)**

42. ಸಾಮಾಜಿಕ ಪಿಡುಗುಗಳು. (ಅಭಿವ್ಯಕ್ತಿ-ಕಠಿಣ)

ಗದ್ಯಪಾಠ : 6 . ಶಬರಿ - ಪು.ತಿ.ನ.

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	23	13	17	00	53
ಅಂಕಗಳು	25	23	59	00	107

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	20	7	7	12	5	2	52
ಅಂಕಗಳು	20	7	14	36	20	10	107

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-17) **(1 ಅಂಕ)**

1. 'ಘ್ರಾಣೇಂದ್ರಿಯ' ಪದವು ಈ ಸಂಧಿಗೆ ಸೇರಿದೆ (ಸ್ಮರಣೆ-ಸಾಧಾರಣ)
(ಎ) ಗುಣ (ಬಿ) ಸವರ್ಣ (ಸಿ) ಯಣ್ (ಡಿ) ಜಶ್ತ್ವ

2. ಸವರ್ಣದೀರ್ಘ ಸಂಧಿಗೆ ಈ ಪದವು ಸೇರಿದೆ (ಗ್ರಹಿಕೆ-ಸಾಧಾರಣ)
(ಎ) ಮಹರ್ಷಿ (ಬಿ) ವಧೂಪೇತ (ಸಿ) ಊರೂರು (ಡಿ) ಕೋಟ್ಯನುಕೋಟಿ

3. 'ಶರಚ್ಚಂದ್ರ' ಪದವು ಈ ಸಂಧಿಯದ್ದಾಗಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2020. 2023
(ಎ) ಶ್ಚುತ್ವ (ಬಿ) ಯಣ್ (ಸಿ) ವೃದ್ಧಿ (ಡಿ) ಜಶ್ತ್ವ

4. 'ಒಮ್ಮೊಮ್ಮೆ' ಪದದಲ್ಲಿರುವ ಸಂಧಿ (ಸ್ಮರಣೆ-ಸಾಧಾರಣ)
(ಎ) ಆಗಮಸಂಧಿ (ಬಿ) ಆದೇಶಸಂಧಿ (ಸಿ) ಲೋಪಸಂಧಿ (ಡಿ) ಅನುನಾಸಿಕ

5. 'ವಾಗ್ದೇವಿ' ಪದದಲ್ಲಿರುವ ಸಂಧಿ (ಸ್ಮರಣೆ- ಸಾಧಾರಣ) ಮಾರ್ಚ್ 2019, 2024.
(ಎ) ಅನುನಾಸಿಕ (ಬಿ) ವೃದ್ಧಿ (ಸಿ) ಆದೇಶ (ಡಿ) ಜಶ್ತ್ವ

6. 'ಉನ್ಮಾದ' ಪದವು ಈ ಸಂಧಿಗೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ)
(ಎ) ಸವರ್ಣದೀರ್ಘ (ಬಿ) ಗುಣ (ಸಿ) ಅನುನಾಸಿಕ (ಡಿ) ಜಶ್ತ್ವ

7. 'ಸೂರ್ಯೋದಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ (ಸ್ಮರಣೆ-ಸುಲಭ) ಸೆಪ್ಟೆಂಬರ್ 2020.
(ಎ) ಸವರ್ಣದೀರ್ಘ (ಬಿ) ವೃದ್ಧಿ (ಸಿ) ಗುಣ (ಡಿ) ಯಣ್

8. 'ಮಾತಂತು' ಪದವು ಈ ಸಂಧಿಗೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2021.
(ಎ) ಅನುನಾಸಿಕ (ಬಿ) ಲೋಪ (ಸಿ) ವೃದ್ಧಿ (ಡಿ) ಯಣ್

9. 'ಮಳೆಗಾಲ' ಪದವು ಈ ಸಂಧಿಗೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2022.

(ಎ) ಲೋಪ (ಬಿ) ಆಗಮ (ಸಿ) ಆದೇಶ (ಡಿ) ಗುಣ

10. 'ದಿಗಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2023, ಜೂನ್ 2022.

(ಎ) ಗುಣ (ಬಿ) ಜಶ್ತ್ವ (ಸಿ) ವೃದ್ಧಿ (ಡಿ) ಶ್ಚುತ್ವ

11. 'ದೇವೇಂದ್ರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಜೂನ್ 2023, ಮೇ -2025.

(ಎ) ಲೋಪ (ಬಿ) ಆಗಮ (ಸಿ) ಗುಣ (ಡಿ) ಆದೇಶ

12. 'ಮಹರ್ಷಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2018.

(ಎ) ಆದೇಶ (ಬಿ) ಗುಣ (ಸಿ) ಸವರ್ಣದೀರ್ಘ (ಡಿ) ಯಣ್

13. 'ಮದೋನ್ಮತ್ತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಜೂನ್ 2024.

(ಎ) ಲೋಪ (ಬಿ) ಆದೇಶ (ಸಿ) ಆಗಮ (ಡಿ) ಗುಣ

14. ಅನುನಾಸಿಕ ಸಂಧಿಗೆ ಉದಾಹರಣೆಯಿದು (ಗ್ರಹಿಕೆ-ಸಾಧಾರಣ) ಆಗಸ್ಟ್ 2024.

(ಎ) ದೇವೇಂದ್ರ (ಬಿ) ಮಳೆಗಾಲ (ಸಿ) ವಾಙ್ಮಯ (ಡಿ) ದಿಗಂತ

15. ಅನುನಾಸಿಕ ಸಂಧಿಗೆ ಉದಾಹರಣೆಯಾಗಿರುವ ಪದ (ಗ್ರಹಿಕೆ-ಸಾಧಾರಣ) ಆಗಸ್ಟ್ 2024.

(ಎ) ಅಜಂತ (ಬಿ) ವಿದ್ಯಾಭ್ಯಾಸ (ಸಿ) ಅತ್ಯಾದರ (ಡಿ) ಸನ್ಮಾನ

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಫ-17) **(1 ಅಂಕ)**

16. ಭೇದವಿಲ್ಲ : ಆಗಮಸಂಧಿ : : ಕಡುವೆಳ್ಪು : ..... (ಗ್ರಹಿಕೆ-ಸಾಧಾರಣ) ಮಾರ್ಚ್ 2026.

17. ಬುದ್ಧಿಯೊಡೆಯ : ಆಗಮಸಂಧಿ: : ಏಕೈಕ : ..... (ಗ್ರಹಿಕೆ-ಸಾಧಾರಣ)

18. ಅಷ್ಟೈಶ್ವರ್ಯ : ವೃದ್ಧಿಸಂಧಿ : : ಅತ್ಯವಸರ : ..... (ಗ್ರಹಿಕೆ-ಸಾಧಾರಣ)

19. ಶರಚ್ಚಂದ್ರ : ಶ್ಚುತ್ವಸಂಧಿ : : ಸಂಗ್ರಹಾಲಯ : ..... (ಗ್ರಹಿಕೆ-ಸಾಧಾರಣ) ಜೂನ್ 2018.

20. ನಿಜಾಶ್ರಮ : ಸವರ್ಣದೀರ್ಘಸಂಧಿ: : ವೇದಿಯಲ್ಲಿ ..... (ಗ್ರಹಿಕೆ - ಸಾಧಾರಣ)

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

21. ಭೂಮಿಜಾತೆ ಎಂದರೆ ಯಾರು? (ಸ್ಮರಣೆ-ಸುಲಭ)

22. ಶ್ರೀರಾಮನ ತಂದೆಯ ಹೆಸರೇನು? (ಸ್ಮರಣೆ-ಸುಲಭ)

23. ಸೌಮಿತ್ರಿ ಎಂದರೆ ಯಾರು? (ಸ್ಮರಣೆ-ಸಾಧಾರಣ)

24. ಶಬರಿಯು ಯಾರ ಆಶ್ರಮದಲ್ಲಿ ವಾಸವಿದ್ದಳು? (ಸ್ಮರಣೆ-ಸುಲಭ) ಮಾರ್ಚ್ 2019, ಜೂನ್ 2019.

25. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು? (ಸ್ಮರಣೆ-ಸುಲಭ) ಮಾರ್ಚ್ 2017, 2018.

26. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು? (ಸ್ಮರಣೆ-ಸುಲಭ)

27. ರಾಮನ ಬರುವಿಕೆಗಾಗಿ ಮತಂಗಾಶ್ರಮದಲ್ಲಿ ಕಾಯುತ್ತಿದ್ದವರು ಯಾರು? (ಸ್ಮರಣೆ-ಸುಲಭ) ಮಾರ್ಚ್ 2020.

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **(2 ಅಂಕ)**

28. ರಾಮನು ಗಿರಿವನವನ್ನು ಪ್ರಾರ್ಥಿಸಿದ ಬಗೆಯನ್ನು ಬರೆಯಿರಿ. (ಗ್ರಹಿಕೆ-ಸುಲಭ) (ಕ.ಫ-2)

29. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು? (ಗ್ರಹಿಕೆ-ಸುಲಭ) ಜೂನ್ 2024. ಆಗಸ್ಟ್ 2024. (ಕ.ಫ-3)

30. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳಾವುವು? (ಗ್ರಹಿಕೆ-ಸಾಧಾರಣ) (ಕ.ಫ-2)

31. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ. (ಗ್ರಹಿಕೆ-ಸುಲಭ) ಮಾರ್ಚ್ 2020, 2025. ಜೂನ್ 2023. (ಕ.ಫ-2)

32. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಹೇಳಿದ ಮಾತುಗಳಾವುವು? (ಗ್ರಹಿಕೆ-ಸಾಧಾರಣ) (ಕ.ಫ-2)

33. ಶಬರಿಯು ಶ್ರೀರಾಮನ ಗುಣಗಾನವನ್ನು ಮಾಡಿದ ರೀತಿ ತಿಳಿಸಿ. (ಗ್ರಹಿಕೆ-ಸಾಧಾರಣ) (ಕ.ಫ-2)

34. ಶಬರಿಯು ರಾಮನಿಗಾಗಿ ತಂದಿದ್ದ ಹೂವು, ಹಣ್ಣು, ತಳಿರುಗಳನ್ನು ಉದ್ದೇಶಿಸಿ ಹಾಡಿದ ಬಗೆಯನ್ನು ಬರೆಯಿರಿ. (ಗ್ರಹಿಕೆ-ಸಾಧಾರಣ) (ಕ.ಫ-2)

ಕೆಳಗಿನ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

35. ಪು. ತಿ. ನರಸಿಂಹಾಚಾರ್ (ಸ್ಮರಣೆ-ಸಾಧಾರಣ) ಮಾರ್ಚ್ 2017, 2018, ಜೂನ್ 2019, 2023 ಆಗಸ್ಟ್ 2024. ಸೆಪ್ಟೆಂಬರ್ 2020.

ಕೆಳಗಿನ ಗಾದೆಯನ್ನು ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3 ಅಂಕ)**

36. ತಾಳಿದವನು ಬಾಳಿಯಾನು. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2026.

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

37. "ಆವುದೀ ಮರುಳು? ನಮ್ಮೊಡೆಗೆ ಬರುತಿಹುದು." (ಅಭಿವ್ಯಕ್ತಿ-ಸಾಧಾರಣ)

38. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ." (ಅಭಿವ್ಯಕ್ತಿ-ಸಾಧಾರಣ)

39. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?" (ಅಭಿವ್ಯಕ್ತಿ-ಸಾಧಾರಣ)

40. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ?" (ಅಭಿವ್ಯಕ್ತಿ-ಸಾಧಾರಣ)

41. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು." (ಅಭಿವ್ಯಕ್ತಿ-ಕಠಿಣ) ಮಾರ್ಚ್ 2015, 2019.

42. "ರಾಮನೇ ಧೈರ್ಯಗೆಡೆ ಸ್ಥೈರ್ಯಕೆಡೆ ಯಾರು?" (ಅಭಿವ್ಯಕ್ತಿ-ಕಠಿಣ)

43. "ಅಯ್ಯೋ ಏನೂ ಅಣಿಯೆ ಇಲ್ಲ" (ಅಭಿವ್ಯಕ್ತಿ-ಕಠಿಣ)

44. "ನಿನ್ನಾದರದೊಳು ಸುಖಿ ನಾವು" (ಅಭಿವ್ಯಕ್ತಿ-ಕಠಿಣ)

45. "ಇಂಥ ಶಿಷ್ಯೆಯರ್ತಿ ಪಡೆದ ನಿನ್ನ ಗುರುಗಳೆಂಥರೋ" (ಅಭಿವ್ಯಕ್ತಿ-ಕಠಿಣ)

46. "ಮನ ಒಪ್ಪಿದರೂ ಎದೆಯೊಪ್ಪದಲಾ!" (ಅಭಿವ್ಯಕ್ತಿ-ಕಠಿಣ)

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)

47. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ. / ಶ್ರೀರಾಮನ ಆಗಮನದಿಂದ ಶಬರಿಯ ಚಿಂತೆ ತೀರಿಹೋದ ಸಂದರ್ಭವನ್ನು ವಿವರಿಸಿ.
(ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2026, ಜೂನ್ 2017. (ಕ.ಫ-3)

48. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ? ತಿಳಿಸಿ.
(ಅಭಿವ್ಯಕ್ತಿ-ಸಾಧಾರಣ) ಜೂನ್ 2017, 2018. (ಕ.ಫ-3)

49. 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ.
(ಅಭಿವ್ಯಕ್ತಿ-ಸಾಧಾರಣ) ಜೂನ್ 2018. (ಕ.ಫ-3)

50. ಶಬರಿ ಗದ್ಯಪಾಠದಲ್ಲಿ ಬರುವ ರಾಮ ಮತ್ತು ಶಬರಿಯ ನಡುವಿನ ಸಂಭಾಷಣೆಯನ್ನು ಆಂಗ್ಲ ಭಾಷೆಯಲ್ಲಿ ಬರೆದು ಅಭಿನಯಿಸಿರಿ.
(ಅಭಿವ್ಯಕ್ತಿ-ಸಾಧಾರಣ) (ಕ.ಫ.-14)

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (ಕ.ಫ-13) (ಗ್ರಹಿಕೆ-ಸಾಧಾರಣ) **(2+2=4 ಅಂಕ)**

51. ಒಳ್ಳೆಯ ಪುಸ್ತಕಗಳು ಶಿಕ್ಷಕರಿಗಿಂತ ಉತ್ತಮ ಮಾರ್ಗದರ್ಶನವನ್ನು ನೀಡಬಲ್ಲವು ಎಂದು ತಜ್ಞರೊಬ್ಬರು ಅಭಿಪ್ರಾಯಪಡುತ್ತಾರೆ. ಪುಸ್ತಕಗಳನ್ನು ಓದುವುದರಿಂದ ಅನುಭವ ಹೆಚ್ಚುತ್ತದೆ. ವ್ಯಕ್ತಿತ್ವ ಪರಿಪಕ್ವಗೊಳ್ಳುತ್ತೆ. ಹೇಗೆ ಓದಬೇಕು ಎಂಬುದರ ಬಗ್ಗೆ ಈಗಾಗಲೇ ಸಾಕಷ್ಟು ಸಂಶೋಧನೆಗಳು ನಡೆದಿವೆ. ಮನೋವಿಜ್ಞಾನಿಗಳು ಹಾಗೂ ಶಿಕ್ಷಣ ತಜ್ಞ ಪ್ರಕಾರ "ಓದಲು ಧೃಢವಾದ ಸಂಕಲ್ಪವಿರಬೇಕು. ಕಲಿಯಬೇಕೆನ್ನುವ ಹಂಬಲ ಮತ್ತು ಕಲಿಯುವೆ ಎಂಬ ಆತ್ಮವಿಶ್ವಾಸ ಹುಟ್ಟದಿದ್ದರೆ ಓದಿನಲ್ಲಿ ಅಭಿರುಚಿ ಹುಟ್ಟುವುದಿಲ್ಲ. 'ಎಷ್ಟು ಓದಿದರು ನೆನಪಲ್ಲೇ ಉಳಿಯುವುದಿಲ್ಲ' ಎಂದು ಹಳಿಯುತ್ತ ಪುಸ್ತಕವನ್ನು ದೂರ ಎಸೆಯುವ ಬದಲಾಗಿ ಮತ್ತೆ ಮತ್ತೆ ಓದಿ ಸ್ಮರಣಶಕ್ತಿಯನ್ನು ಉದ್ದೀಪನಗೊಳಿಸಿಕೊಳ್ಳಲು ಪ್ರಯತ್ನಿಸಬೇಕು".

ಓದಿನ ಮುಖ್ಯ ಉದ್ದೇಶ ಅರ್ಥಮಾಡಿಕೊಳ್ಳುವುದು. ಪರೀಕ್ಷೆಯಲ್ಲಿ ಪಾಸಾಗುವ ಉದ್ದೇಶದಿಂದ ಕಾಟಾಚಾರಕ್ಕೆ ಓದಿದ ಯಾವ ಅಂಶವೂ ನಿಮ್ಮ ಮನಸ್ಸಿನಲ್ಲಿ ಉಳಿಯದು. ಈ ಅರ್ಥವ್ಯಾಪ್ತಿಯಲ್ಲಿ ಓದು ಅಧ್ಯಯನ ಮಟ್ಟಕ್ಕೇರುವುದು. ನಿಮ್ಮ ಅಧ್ಯಯನ ಅಥವಾ ಓದು ಸಫಲವಾಗಿದೆಯೇ ಎಂಬುದನ್ನು ನೀವೇ ಪರೀಕ್ಷಿಸಿಕೊಳ್ಳಬಹುದು. ಓದಿದ ತರುವಾಯ ಪುಸ್ತಕವನ್ನು ಮುಚ್ಚಿಟ್ಟು ಓದಿದ್ದನ್ನು ಮತ್ತೆ ನೆನಪು ಮಾಡಿಕೊಳ್ಳಬೇಕು. ಕೇವಲ ಓದಿದರೆ ಪ್ರಯೋಜನವಿಲ್ಲ. ಓದಿದ್ದನ್ನು ಮನನ ಮಾಡಿಕೊಂಡರೆ ಮಾತ್ರ ಹೆಚ್ಚು ಪ್ರಯೋಜನವಾಗುತ್ತದೆ ಎಂಬುದನ್ನು ಅರ್ಥೈಸಿಕೊಂಡು ಓದಿನ ಸಫಲತೆಯನ್ನು ಪರೀಕ್ಷಿಸಿಕೊಳ್ಳಬಹುದು.

ಪ್ರಶ್ನೆಗಳು :

ಅ. ನಮ್ಮ ಓದಿನ ಸಫಲತೆಯನ್ನು ಪರೀಕ್ಷಿಸುವುದು ಹೇಗೆ?

ಆ. ನಮ್ಮ ಓದು ಹೇಗಿರಬೇಕು?

ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : (ಕ.ಫ-4) **(5 ಅಂಕ)**
(ಅಭಿವ್ಯಕ್ತಿ-ಸಾಧಾರಣ)

52. ನಿಮ್ಮನ್ನು ಬೆಂಗಳೂರಿನ ರಾಜಾಜಿನಗರದ 'ಅನನ್ಯಾ' ಎಂದು ಭಾವಿಸಿಕೊಂಡು ನಿಮ್ಮ ಬಡಾವಣೆಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಮಂಜೂರು ಮಾಡುವಂತೆ ಕೋರಿ ಬೆಂಗಳೂರಿನ ಮಹಾನಗರಪಾಲಿಕೆಯ ಮೇಯರ್‌ಗೆ ಪತ್ರವನ್ನು ಬರೆಯಿರಿ.

ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :
(ಕ.ಫ-5) **(5 ಅಂಕ)**

53. ಗ್ರಂಥಾಲಯಗಳ ಮಹತ್ತ್ವ. (ಅಭಿವ್ಯಕ್ತಿ-ಕಠಿಣ)

ಗದ್ಯಪಾಠ : 7 ಲಂಡನ್ ನಗರ - ವಿ. ಕೃ. ಗೋಕಾಕ್

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	16	20	18	00	54
ಅಂಕಗಳು	18	34	62	00	114

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	15	10	7	15	5	2	54
ಅಂಕಗಳು	15	10	14	45	20	10	114

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-17) **(1 ಅಂಕ)**

1. 'ಜುಳುಜುಳು' ಇಲ್ಲಿರುವ ವ್ಯಾಕರಣಾಂಶ (ಸ್ಮರಣೆ-ಸುಲಭ)
(ಎ) ಜೋಡುನುಡಿ (ಬಿ) ಅನುಕರಣಾವ್ಯಯ (ಸಿ) ದ್ವಿರುಕ್ತಿ (ಡಿ) ಅವ್ಯಯ

2. 'ಮನೆಮಠ' ಇಲ್ಲಿರುವ ವ್ಯಾಕರಣಾಂಶ (ಸ್ಮರಣೆ-ಸುಲಭ)
(ಎ)) ಅನುಕರಣಾವ್ಯಯ (ಬಿ) ಜೋಡುನುಡಿ (ಸಿ) ದ್ವಿರುಕ್ತಿ (ಡಿ) ಅವ್ಯಯ

3. 'ಮೊಟ್ಟಮೊದಲು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ (ಸ್ಮರಣೆ-ಸುಲಭ)
ಮಾರ್ಚ್ 2019.
(ಎ) ಅವ್ಯಯ (ಬಿ) ಜೋಡುನುಡಿ (ಸಿ) ಅನುಕರಣಾವ್ಯಯ (ಡಿ) ದ್ವಿರುಕ್ತಿ

4. 'ಕೆನೆಮೊಸರು' ಇಲ್ಲಿರುವ ವ್ಯಾಕರಣಾಂಶ (ಸ್ಮರಣೆ-ಸುಲಭ) ಜೂನ್ 2018.
(ಎ) ಜೋಡುನುಡಿ (ಬಿ)ಅನುಕರಣಾವ್ಯಯ (ಸಿ) ದ್ವಿರುಕ್ತಿ (ಡಿ) ಅವ್ಯಯ

5. 'ಬಟ್ಟಬಯಲು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ (ಸ್ಮರಣೆ-ಸುಲಭ)
ಮಾರ್ಚ್ 2018.
(ಎ) ಅನುಕರಣಾವ್ಯಯ (ಬಿ) ಜೋಡುನುಡಿ (ಸಿ) ದ್ವಿರುಕ್ತಿ (ಡಿ) ಅವ್ಯಯ

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನುಬರೆಯಿರಿ : (ಕ.ಫ-17) **(1 ಅಂಕ)**

6 ಓಡುಓಡು : ದ್ವಿರುಕ್ತಿ : : ಧೀರಶೂರ : ..... (ಗ್ರಹಿಕೆ-ಸುಲಭ)
ಜೂನ್ 2024.

7. ಕಟ್ಟಕಡೆಗೆ : ಕಡೆಗೆಕಡೆಗೆ : : ಬಟ್ಟಬಯಲು : ..... (ಗ್ರಹಿಕೆ-ಸುಲಭ)
ಮಾರ್ಚ್ 2018.

8. ಕೆನೆಮೊಸರು : ಜೋಡುನುಡಿ : : ಗರಿಗರಿ : ..... (ಗ್ರಹಿಕೆ-ಸುಲಭ)
ಸೆಪ್ಟೆಂಬರ್ 2020.

9. ಮಕ್ಕಳುಮರಿ : ಜೋಡುನುಡಿ : : ಓಡಿಓಡಿ : ..... (ಗ್ರಹಿಕೆ-ಸುಲಭ)
ಮಾರ್ಚ್ 2022.

10. ಬಟ್ಟಬಯಲು : ದ್ವಿರುಕ್ತಿ : : ಹುಳಹುಪ್ಪಡಿ : ..... (ಗ್ರಹಿಕೆ-ಸುಲಭ) ಜೂನ್ 2022, 2023.

11. ಹಾಲ್ಜೇನು : ಜೋಡುನುಡಿ : : ಬೇಡಬೇಡ: ..... (ಗ್ರಹಿಕೆ-ಸುಲಭ) ಮಾ-2023.

12. ಕೆನೆಮೊಸರು : ಜೋಡುನುಡಿ : : ಸಾಕುಸಾಕು : ..... (ಗ್ರಹಿಕೆ-ಸುಲಭ) ಮಾರ್ಚ್ 2024.

13. ಹುಳಹುಪ್ಪಡಿ : ಜೋಡುನುಡಿ : : ತುತ್ತತುದಿ : ..... (ಗ್ರಹಿಕೆ-ಸುಲಭ) ಆಗಸ್ಟ್ 2024.

14. ತುತ್ತತುದಿ : ದ್ವಿರುಕ್ತಿ : : ಹಾಲ್ಜೇನು : ..... (ಗ್ರಹಿಕೆ-ಸುಲಭ) ಜೂನ್ 2019, ಮೇ 2025

15. ಸತಿಪತಿ : ಜೋಡುನುಡಿ : : ದೊಡ್ಡದೊಡ್ಡ : .....(ಗ್ರಹಿಕೆ-ಸುಲಭ) ಜೂನ್ 2019, ಮೇ 2025.

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

16. ಲಂಡನ್ನಿನ ರಸ್ತೆಗಳಲ್ಲಿ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು? (ಸ್ಮರಣೆ-ಸಾಧಾರಣ)

17. ಲೇಖಕರು ವರ್ಣಿಸಿದ ಲಂಡನ್ನಿನ ಪೇಟೆಯಲ್ಲಿರುವ ಸ್ವೀಷನರಿ ಅಂಗಡಿಯ ಹೆಸರೇನು? (ಸ್ಮರಣೆ-ಸುಲಭ) ಆಗಸ್ಟ್ 2024.

18. ಲಂಡನ್ ನಗರದಲ್ಲಿ ಪ್ರಸಿದ್ಧಿ ಪಡೆದ ಸಿಂಪಿಗಳು ಯಾರು? (ಸ್ಮರಣೆ-ಸಾಧಾರಣ) (ಕ.ಫ-2)

19. ಲಂಡನ್ ನಗರದಲ್ಲಿ ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು? (ಸ್ಮರಣೆ-ಸುಲಭ) ಮಾರ್ಚ್ 2019, ಜೂನ್ 2018.

20. 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ? (ಸ್ಮರಣೆ-ಸುಲಭ) ಜೂನ್ 2019.

21. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಒಣಿ ಯಾವುದು? (ಸ್ಮರಣೆ-ಸುಲಭ) ಮಾರ್ಚ್ 2024, 2026, ಜೂನ್ 2022, 2023, 2024.

22. ಖನೇ ಎಡ್ವರ್ಡನು ತಂದ ಶಿಲೆಗೆ ಇರುವ ಹೆಸರೇನು? (ಸ್ಮರಣೆ-ಸಾಧಾರಣ)

23. ಖನೇ ಎಡ್ವರ್ಡನು ಯಾವ ಅರಸರಿಂದ 'ಸ್ಕೋನ್ ಆಫ್ ಸ್ಕೋನ್' ಎಂಬ ಶಿಲೆಯನ್ನು ಕಿತ್ತುಕೊಂಡು ತಂದಿದ್ದನು? (ಸ್ಮರಣೆ-ಸಾಧಾರಣ)

24. ಪ್ರವಾಸವನ್ನು ಕುರಿತು ಬೇಕನ್ನನು ಹೇಳಿದ ಮಾತು ಯಾವುದು? (ಸ್ಮರಣೆ-ಸಾಧಾರಣ)

25. 'ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟಿದ್ದೇ' ಎಂದ ಆಂಗ್ಲ ಕವಿ ಯಾರು? (ಸ್ಮರಣೆ-ಸಾಧಾರಣ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

26. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು? (ಗ್ರಹಿಕೆ-ಸುಲಭ) ಮಾರ್ಚ್ 2026, ಜೂನ್ 2019. (ಕ.ಫ-2)

27. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ? (ಗ್ರಹಿಕೆ-ಸಾಧಾರಣ) ಮಾರ್ಚ್ 2022. ಸೆಪ್ಟೆಂಬರ್ 2020. (ಕ.ಫ-2)

28. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
(ಗ್ರಹಿಕೆ-ಸಾಧಾರಣ) ಮಾ-2022, 2024. (ಕ.ಫ-3)

29. ಪೊಯೆಟ್ಸ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?
(ಗ್ರಹಿಕೆ-ಸಾಧಾರಣ) (ಕ.ಫ-2)

30. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು? (ಗ್ರಹಿಕೆ-ಸಾಧಾರಣ) ಜೂನ್ 2019, 2016, 2022, ಸೆಪ್ಟೆಂಬರ್ 2020. (ಕ.ಫ-3)

31. ಲಂಡನ್ ನಗರದಲ್ಲಿರುವ ಇಂಡಿಯಾ ಆಫೀಸ್‌ನ್ನು ಕುರಿತು ತಿಳಿಸಿ.
(ಗ್ರಹಿಕೆ-ಸಾಧಾರಣ) (ಕ.ಫ-2)

32. ಲಂಡನ್ ನಗರದ ವೆಸ್ಟ್ ಮಿನ್‌ಸ್ಟರ್ ಅಬೆ ಮಂದಿರದಲ್ಲಿನ ರಾಜವಿಭಾಗದ ಕುರಿತು ಬರೆಯಿರಿ. (ಗ್ರಹಿಕೆ-ಸಾಧಾರಣ) (ಕ.ಫ-2)

ಕೆಳಗಿನ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

33. ವಿ. ಕೃ. ಗೋಕಾಕ್ (ಸ್ಮರಣೆ-ಸುಲಭ) ಜೂನ್ 2017.

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : (ಕ.ಫ-10) **(3 ಅಂಕ)**

34. "ವೂಲವರ್ಥ ಸ್ಟೇಷನರಿ ಅಂಗಡಿ ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ." (ಗ್ರಹಿಕೆ-ಸಾಧಾರಣ)

ಕೆಳಗಿನ ಗಾದೆಯನ್ನು ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3 ಅಂಕ)**

35. ದೇಶ ಸುತ್ತು ; ಕೋಶ ಓದು. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2019, ಜೂನ್ 2018.

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :
(ಕ.ಫ-9) **(3 ಅಂಕ)**

36. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"
(ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2023.

37. "ಹೊತ್ತು! ಹೊತ್ತು! ಹೊತ್ತೇ ಹಣ" (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2024, ಆಗಸ್ಟ್ 2024.

38. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!" (ಅಭಿವ್ಯಕ್ತಿ-ಸಾಧಾರಣ)

39. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ" (ಅಭಿವ್ಯಕ್ತಿ-ಸಾಧಾರಣ)
ಮಾರ್ಚ್ 2018, 2025, ಜೂನ್ 2023.

40. "ಗಾಡಿಗಳು ದಢದಢ ಹೋಗುತ್ತಿರುತ್ತವೆ! ವಿಚಿತ್ರ ಸೃಷ್ಟಿ!" (ಅಭಿವ್ಯಕ್ತಿ-ಕಠಿಣ)

41. "ಈ ದೊಡ್ಡ ಬೀದಿಯು ಸಾಮ್ರಾಜ್ಯದ ಬೀದಿ" (ಅಭಿವ್ಯಕ್ತಿ-ಕಠಿಣ)

42. "ಹೆಜ್ಜೆ ಹೆಜ್ಜೆಗೆ ಇತಿಹಾಸದ ಅಡಿಗಲ್ಲುಗಳು ದೊರೆಯುತ್ತವೆ" (ಅಭಿವ್ಯಕ್ತಿ-ಕಠಿಣ)

43. "ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ" (ಅಭಿವ್ಯಕ್ತಿ-ಕಠಿಣ)

44. "ಅಡಿಗಡಿಗೆ ಇತಿಹಾಸವನ್ನು ದಾಟುತ್ತೇವೆ! ಎಂಥ ವಿಚಿತ್ರ!" (ಅಭಿವ್ಯಕ್ತಿ-ಕಠಿಣ)

45. "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ"
(ಅಭಿವ್ಯಕ್ತಿ-ಕಠಿಣ) ಮಾರ್ಚ್ 2024, ಜೂನ್ 2024.

46. "ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು" (ಅಭಿವ್ಯಕ್ತಿ-ಕಠಿಣ)ಮೇ 2025.

47. "ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿ ಕೊಡುವವರು ಹೆಣ್ಣು"

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)
(ಕ.ಫ-3)

48. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳನ್ನು ಸಂಗ್ರಹಿಸಿ ಬರೆಯಿರಿ. (ಅಭಿವ್ಯಕ್ತಿ-ಕಠಿಣ)

49. 'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ಎಂಬುದನ್ನು ವಿವರಿಸಿ. (ಅಭಿವ್ಯಕ್ತಿ-ಕಠಿಣ)

50. `ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರದಲ್ಲಿನ ರಾಯಲ್ ಚಾಪೆಲ್ ಮತ್ತು ಸ್ಟೋನ್ ಆಫ್ ಸ್ಕೋನ್ ಗಳ ವಿಶೇಷತೆಯನ್ನು ಕುರಿತು ಬರೆಯಿರಿ. (ಅಭಿವ್ಯಕ್ತಿ-ಕಠಿಣ) ಮಾರ್ಚ್ 2020.

51. ವೂಲವರ್ಥ ಸ್ಟೇಷನರಿ ಅಂಗಡಿ ಹಾಗೂ ಲಂಡನ್ನಿನಲ್ಲಿ ಹೆಣ್ಣನ್ನು ಸತ್ಕರಿಸುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ. (ಅಭಿವ್ಯಕ್ತಿ-ಕಠಿಣ) ಮಾರ್ಚ್ 2020.

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (ಕ.ಫ-3) (ಗ್ರಹಿಕೆ-ಸಾಧಾರಣ) **(2+2=4 ಅಂಕ)**

52. ಅಯ್ಯೋ! ನನಗೆ ವೇಳೆ ಸಾಲದು ಎಂದು ಕೊರಗುವವರು ಬಹಳ ಮಂದಿ ಇದ್ದಾರೆ. ವೇಳೆ ಎನ್ನುವುದು ಬಂಡವಾಳ ಹೂಡಿಕೆಯಿದ್ದಂತೆ. ಯಾರು ಇರುವ ಸಮಯವನ್ನು ಸರಿಯಾಗಿ, ಸಮರ್ಪಕವಾಗಿ ನಿರ್ವಹಿಸಬಲ್ಲರೋ ಅವರು ಜೀವನವನ್ನು ಚೆನ್ನಾಗಿ ನಿರ್ವಹಿಸಬಲ್ಲರು. 'ಹೊತ್ತೇ ಮುತ್ತು' ಅಲ್ಲವೇ? ಸಮಯ ಪ್ರಜ್ಞೆ ಇರುವವರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ. ಯಾರಲ್ಲಿ ಜೀವನದ ಬಗ್ಗೆ ಸ್ಪಷ್ಟವಾದ ಗುರಿಯಿರುವುದಿಲ್ಲವೋ ಅಂತಹವರು ಸಮಯವನ್ನು ಬೇಕಾಬಿಟ್ಟಿಯಾಗಿ ಪೋಲು ಮಾಡುತ್ತಿರುತ್ತಾರೆ. ವಿದ್ಯಾರ್ಥಿಗಳು ಜೀವನದಲ್ಲಿ ಧ್ಯೇಯಗಳನ್ನು ಹೊಂದುವುದರ ಜೊತೆಗೆ ಯಾವ ಕೆಲಸಕ್ಕೆ ಆದ್ಯತೆ ನೀಡಬೇಕು ಎಂಬ ವಿವೇಕವನ್ನು ಹೊಂದಿರಬೇಕು. ಟಿ.ವಿ.ಯಲ್ಲಿ ಎಷ್ಟೇ ಒಳ್ಳೆಯ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದರೂ ಪರೀಕ್ಷೆ ಸಮಯದಲ್ಲಿ ನೋಡುವುದು ಸರಿಯಲ್ಲ. ಸಮಯದ ಅಪವ್ಯಯಕ್ಕೆ ಹೆಚ್ಚಾಗಿ ಆಲಸ್ಯವೇ ಕಾರಣವಾಗುತ್ತದೆ. ತಡವಾಗಿ ಎದ್ದು ಗಡಿಬಿಡಿಯಲ್ಲಿ ಹೊರಟು ಶಾಲೆಗೆ ಅಥವಾ ಕಾಲೇಜಿಗೆ ಓಡುವುದರಿಂದ ಉದ್ವಿಗ್ನತೆ ಹೆಚ್ಚಾಗುತ್ತದೆ. ಪರೀಕ್ಷೆಯ ಸಮಯದಲ್ಲಿ ರಾತ್ರಿ ಬಹಳ ಹೊತ್ತಿನವರೆಗೆ ಓದುವುದರಿಂದ ಬೆಳಗ್ಗೆ ಬೇಗ ಏಳಲಾಗದೆ ಸರಿಯಾದ ಸಮಯಕ್ಕೆ ಪರೀಕ್ಷಾ ಸ್ಥಳವನ್ನು ಸೇರಲಾಗುವುದಿಲ್ಲ. ಅಷ್ಟೇ ಅಲ್ಲ ಆ ಗಡಿಬಿಡಿಯಲ್ಲಿ ರಾತ್ರಿ ಓದಿದ್ದೆಲ್ಲಾ ಮರೆತುಹೋಗಬಹುದು. ಇದಕ್ಕೆ ಮದ್ದೆಂದರೆ

ವೇಳಾಪಟ್ಟಿಯೊಂದನ್ನು ತಯಾರಿಸಿಕೊಂಡು ಅದನ್ನು ಅನುಸರಿಸುವುದು. ಇದರಿಂದ ಯಾವ ಕೆಲಸವನ್ನು ಯಾವಾಗ, ಎಷ್ಟು ಮಾಡಬೇಕೆಂಬುದು ತಿಳಿಯುತ್ತದೆ.

ಪ್ರಶ್ನೆಗಳು :

ಅ. ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ತಡವಾಗಿ ಏಳುವುದರಿಂದಾಗುವ ಪರಿಣಾಮವನ್ನು ತಿಳಿಸಿ.

ಆ. ವೇಳೆಯನ್ನು ಬಂಡವಾಳ ಹೂಡಿಕೆಗೆ ಏಕೆ ಹೋಲಿಸಿದ್ದಾರೆ?

ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : (ಕ.ಫ-4) **(5 ಅಂಕ)**

(ಅಭಿವ್ಯಕ್ತಿ-ಸಾಧಾರಣ)

53. ನಿಮ್ಮನ್ನು ಗದಗದ ಸರ್ಕಾರಿ ಪ್ರೌಢಶಾಲೆಯ 'ಸುಪ್ರೀತ' ಎಂದು ಭಾವಿಸಿಕೊಂಡು ನಿಮ್ಮ ಮುಂದಿನ ವ್ಯಾಸಂಗಕ್ಕಾಗಿ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಕೋರಿ ತಹಶೀಲ್ದಾರ್‌ರವರಿಗೆ ಪತ್ರವನ್ನು ಬರೆಯಿರಿ.

ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :

(ಕ.ಫ-5) **(5 ಅಂಕ)**

54. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ. (ಅಭಿವ್ಯಕ್ತಿ-ಕಠಿಣ)

ಗದ್ಯಪಾಠ : 8. ಅಗ್ನಿಭೂತಿ ವಾಯುಭೂತಿಯರ ಕಥೆ – ಶಿವಕೋಟ್ಯಾಚಾರ್ಯ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	9	18	9	00	36
ಅಂಕಗಳು	11	25	33	00	69

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ.1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	15	6	4	6	3	2	36
ಅಂಕಗಳು	15	6	8	18	12	10	69

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-17) **(1 ಅಂಕ)**

1. ತದ್ಧಿತಾಂತ ಭಾವನಾಮ ಪದವಿದು (ಗ್ರಹಿಕೆ-ಕಠಿಣ)
(ಎ) ಬಳೆಗಾರ (ಬಿ) ಕನ್ನಡಿಗ (ಸಿ) ಜಾಣತನ (ಡಿ) ಹಾವಾಡಿಗ

2. ತದ್ಧಿತಾಂತಭಾವನಾಮಕ್ಕೆ ಉದಾಹರಣೆಯಾದ ಪದವಿದು (ಗ್ರಹಿಕೆ-ಕಠಿಣ) ಜೂನ್ 2026.
(ಎ) ಚೆಲುವಿಕೆ (ಬಿ) ಅಂಜಿಕೆ (ಸಿ) ಆಕೆಗಿಂತ (ಡಿ) ಸಿರಿವಂತ

3. 'ಕೊರೆತ' ಪದ ಈ ವ್ಯಾಕರಣಾಂಶಕ್ಕೆ ಸೇರಿದೆ (ಸ್ಮರಣೆ-ಕಠಿಣ) ಮಾರ್ಚ್ 2024.
(ಎ) ಕೃದಂತನಾಮ (ಬಿ) ಕೃದಂತಭಾವನಾಮ
(ಸಿ) ಕೃದಂತಾವ್ಯಯ (ಡಿ) ತದ್ಧಿತಾಂತಭಾವನಾಮ

4. 'ಜಾಣತನ' ಎಂಬುದು ಈ ವ್ಯಾಕರಣಾಂಶವಾಗಿದೆ (ಸ್ಮರಣೆ-ಕಠಿಣ) ಮಾರ್ಚ್ 2025.
(ಎ) ತದ್ಧಿತಾಂತಭಾವನಾಮ (ಬಿ) ತದ್ಧಿತಾಂತನಾಮ
(ಸಿ) ತದ್ಧಿತಾಂತಾವ್ಯಯ (ಡಿ) ಕೃದಂತಭಾವನಾಮ

5. 'ಅಂಜಿಕೆ' ಪದ ಈ ವ್ಯಾಕರಣಾಂಶಕ್ಕೆ ಸೇರಿದೆ (ಸ್ಮರಣೆ-ಕಠಿಣ)
(ಎ) ಕೃದಂತನಾಮ (ಬಿ) ಕೃದಂತಭಾವನಾಮ
(ಸಿ) ಕೃದಂತಾವ್ಯಯ (ಡಿ) ತದ್ಧಿತಾಂತಭಾವನಾಮ

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನುಬರೆಯಿರಿ : (ಕ.ಫ-17) **(1 ಅಂಕ)**

6. ಕನ್ನಡಿಗ : ತದ್ಧಿತಾಂತನಾಮ : : ಪೆರ್ಮೆ : ..... . (ಗ್ರಹಿಕೆ-ಕಠಿಣ) ಮಾರ್ಚ್ 2026.

7. ನಿನಗಾಗಿ : ತದ್ಧತಾಂತಾವ್ಯ : : ಜಾಣತನ : ..... . (ಗ್ರಹಿಕೆ-ಕಠಿಣ)

8. ಸಿರಿತನ : ತದ್ಧಿತಾಂತಭಾವನಾಮ : : ನೆನಪು : ..... . (ಗ್ರಹಿಕೆ-ಕಠಿಣ) ಮೇ 2025.

9. ನೆನಪು : ಕೃದಂತಭಾವನಾಮ : : ಕಪ್ಪು : ..... . (ಗ್ರಹಿಕೆ-ಕಠಿಣ) ಮಾ-2017.

10. ಮಾಟ : ಕೃದಂತಭಾವನಾಮ : : ಮಾಡಿದ : ..... . (ಗ್ರಹಿಕೆ-ಕಠಿಣ) ಮೇ 2025.

11. ಜಾಣತನ : ತದ್ಧಿತಾಂತ ಭಾವನಾಮ : : ಚಂದ್ರನಂತೆ : ..... . (ಗ್ರಹಿಕೆ-ಕಠಿಣ)

12. ಬರೆದ : ಕೃದಂತನಾಮ : : ಬರೆದು : ..... . (ಗ್ರಹಿಕೆ-ಕಠಿಣ)

13. ಕನ್ನಡಿಗ : ತದ್ಧಿತಾಂತ ನಾಮ : : ಶಾಲೆಯವರೆಗೆ : ..... . (ಗ್ರಹಿಕೆ-ಕಠಿಣ)

14. ಬಾಳುವ : ವರ್ತಮಾನ ಕೃದಂತ : : ಬರೆಯದ : ..... . (ಗ್ರಹಿಕೆ-ಕಠಿಣ)

15. ಮಾಡಿದ : ಕೃದಂತನಾಮ : : ಮಾಟ : ..... . (ಗ್ರಹಿಕೆ-ಕಠಿಣ)

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

16. ಕೌಸಂಬಿಯ ಅರಸ ಯಾರು? (ಸ್ಮರಣೆ-ಸುಲಭ)

17. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು? (ಸ್ಮರಣೆ-ಸುಲಭ)

18. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು? (ಸ್ಮರಣೆ-ಸುಲಭ) ಮಾರ್ಚ್ 2026.

19. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು? (ಗ್ರಹಿಕೆ-ಸಾಧಾರಣ) ಮಾರ್ಚ್ 2025, ಮೇ2025.

20. ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಯಾವುದು? (ಸ್ಮರಣೆ-ಸುಲಭ)

21. ರಾಜಗೃಹ ಪಟ್ಟಣದ ಅರಸ ಯಾರು? (ಸ್ಮರಣೆ-ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :
(2 ಅಂಕ)

22. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಿದ್ದೇಕೆ? (ಗ್ರಹಿಕೆ-ಸಾಧಾರಣ) ಮಾರ್ಚ್ 2026. (ಕ.ಫ-3)

23. ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಂದ ಕಲಿತ ವಿದ್ಯೆಗಳಾವುವು? (ಗ್ರಹಿಕೆ-ಸಾಧಾರಣ) (ಕ.ಫ-2)

24. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ವಿದ್ಯಾಭ್ಯಾಸದ ನಂತರ ಮಾವನೆಂದು ಹೇಳಲುಕಾರಣವೇನು? (ಗ್ರಹಿಕೆ-ಸಾಧಾರಣ) (ಕ.ಫ-3)

25. ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು? (ಗ್ರಹಿಕೆ-ಸಾಧಾರಣ) ಮೇ 2025. (ಕ.ಫ-3)

ಕೆಳಗಿನ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

26. ಶಿವಕೋಟ್ಯಾಚಾರ್ಯ (ಸ್ಮರಣೆ-ಸಾಧಾರಣ)

ಕೆಳಗಿನ ಗಾದೆಯನ್ನು ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3 ಅಂಕ)**

27. ಕೈಕೆಸರಾದರೆ ಬಾಯಿ ಮೊಸರು. (ಅಭಿವ್ಯಕ್ತಿ-ಸಾಧಾರಣ) ಜೂನ್ 2019.

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :
(ಕ.ಫ-9) **(3 ಅಂಕ)**

28. "ಕಣ್ಣು ನೀರಂ ತೀವಿ ನೆಲನಂ ಬರೆಯುತ್ತಿರೆ" (ಅಭಿವ್ಯಕ್ತಿ-ಕಠಿಣ)

29. "ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಳ್ತಿಯೊಳ್ ಬಂದಿರಪ್ಪೊಡೆ" (ಅಭಿವ್ಯಕ್ತಿ-ಕಠಿಣ) ಮಾರ್ಚ್ 2025.

30. "ಪಸರಂಗೊಟ್ಟೆನಿಲ್ಲಿದರ್ಕ್ಕೆ ಮುಳಿಯದಿರಿಂ" (ಅಭಿವ್ಯಕ್ತಿ-ಕಠಿಣ)

31. "ಪಂಡಿತಜನಮೆಲ್ಲಮೆಚ್ಚಿ ಬಿಚ್ಚಳಿಸಿ" (ಅಭಿವ್ಯಕ್ತಿ-ಕಠಿಣ)

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)
(ಕ.ಫ-3)

32. ಸಪ್ತವ್ಯಸನಿಗಳಾಗಿದ್ದ ಅಗ್ನಿಭೂತಿ ವಾಯುಭೂತಿಯರು ಪಂಡಿತರಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ)

33. ಸೂರ್ಯಮಿತ್ರನು ತಮ್ಮ ಮಾವನೆಂದು ತಿಳಿದಾಗ ಅಗ್ನಿಭೂತಿ ವಾಯುಭೂತಿಯರಲ್ಲಿ ಮೂಡಿದ ಭಾವನೆಗಳನ್ನು ವಿವರಿಸಿ. (ಅಭಿವ್ಯಕ್ತಿ-ಸಾಧಾರಣ)

ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (ಕ.ಫ-3) (ಗ್ರಹಿಕೆ-ಸಾಧಾರಣ) **(2+2= 4 ಅಂಕ)**

34. ಭಾರತೀಯ ಕ್ರಿಕೆಟಿನ ಯಶಸ್ಸಿನ ಹಿಂದೆ ನೂರಾರು ಖ್ಯಾತನಾಮರು ಇದ್ದಾರೆ. ಅವರಲ್ಲಿ ಕರ್ನಾಟಕದ ರಾಹುಲ್ ದ್ರಾವಿಡ್ ಸಹ ಒಬ್ಬರು. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಮಾತು ರಾಹುಲ್ ದ್ರಾವಿಡ್ ಅವರಿಗೆ ಸೊಗಸಾಗಿ ಅನ್ವಯವಾಗುತ್ತದೆ. ಅವರು ಬಾಲ್ಯದಲ್ಲಿಯೇ ಕ್ರಿಕೆಟ್ ಆಟದಲ್ಲಿ ಆಸಕ್ತಿಹೊಂದಿ ಸತತ ಅಭ್ಯಾಸ ಮಾಡುತ್ತಿದ್ದರು. ಅದರ ಫಲವಾಗಿ ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಶಾಲಾತಂಡವನ್ನು ಪ್ರತಿನಿಧಿಸುವಂತಾಯಿತು. ಆಡಿದ ಮೊದಲ ಪಂದ್ಯದಲ್ಲಿಯೇ ಶತಕವನ್ನು ಬಾರಿಸಿದರು. ಒಂದು ಉತ್ತಮವಾದ ಎಸೆತವು ಪ್ರಸಿದ್ಧ ಆಟಗಾರನನ್ನಾದರೂ ಔಟ್ ಮಾಡಬಹುದು. ಆದರೆ ರಾಹುಲ್ ದ್ರಾವಿಡ್ ಅವರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೇಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ. ದಿನವಿಡಿ ಕ್ರೀಸಿನಲ್ಲಿ ನಿಲ್ಲಬಲ್ಲ ಸಾರ್ಮರ್ಥ್ಯ ಅವರದ್ದು. ಅದೇ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರನ್ನಾಗಿಸಿತು. ಬೌಂಡರಿ ಬಾರಿಸು ಅಥವಾ ಔಟಾಗು ಎಂಬ ಮನೋಭಾವದ ಆಟಗಾರರಿಗಿಂತ ಭಿನ್ನವಾದ ಶೈಲಿ ರಾಹುಲ್ ಅವರದ್ದು. ಸಂಯಮದ ಹೊಡೆತ, ಉತ್ತಮ ಎಸೆತವನ್ನು ಗೌರವಿಸುವುದು, ಕೆಟ್ಟ ಎಸೆತವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು, ಎಲ್ಲ ಬಗೆಯ ಹೊಡೆತಗಳಲ್ಲೂ ಶಿಸ್ತು, ಕಲಾತ್ಮಕತೆ, ಎಲ್ಲವೂ ನಯನ ಮನೋಹರ. ಇವು ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವಾಗಿತ್ತು. ರಾಹುಲ್ ದ್ರಾವಿಡ್ ಅವರು ಎಂದೂ ಸ್ವಂತ ದಾಖಲೆಗಾಗಿ ಆಡಿದವರಲ್ಲ; ತಂಡದ ಗೆಲುವಿಗಾಗಿ; ದೇಶದ ಗೌರವಕ್ಕಾಗಿ ಆಡಿದವರು.

ಪ್ರಶ್ನೆಗಳು :

ಅ. ರಾಹುಲ್ ದ್ರಾವಿಡ್ ಅವರನ್ನು 'ಗೋಡೆ' ಎಂದು ಕರೆಯಲು ಕಾರಣವೇನು?

ಆ. ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯಗಳೇನು?

ಕೆಳಗೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : (ಕ.ಫ-4) **(5 ಅಂಕ)**
(ಅಭಿವ್ಯಕ್ತಿ-ಸಾಧಾರಣ)

35. ನಿಮ್ಮನ್ನು ಹಾವೇರಿಯ ಸರ್ಕಾರಿ ಪ್ರೌಢಶಾಲೆಯ 'ಮೇಘಾ ಎಂದು ಭಾವಿಸಿಕೊಂಡು ಮೈಸೂರಿನ ಕೆ. ಆರ್. ಎಸ್. ಬೃಂದಾವನಕ್ಕೆ ಪ್ರವೇಶ ಬಯಸಿ ಅಲ್ಲಿನ ವ್ಯವಸ್ಥಾಪಕರಿಗೆ ಪತ್ರವನ್ನು ಬರೆಯಿರಿ.

ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :
(ಕ.ಫ-5) **(5 ಅಂಕ)**

36 ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ತ್ವ. (ಅಭಿವ್ಯಕ್ತಿ-ಕಠಿಣ) ಮಾರ್ಚ್ 2026,ಮೇ 2025.

ಪದ್ಯಪಾಠ : 1. ಸಂಕಲ್ಪಗೀತೆ - ಜಿ. ಎಸ್. ಶಿವರುದ್ರಪ್ಪ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	16	22	10	4	52
ಅಂಕಗಳು	21	30	32	16	99

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ.1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	20	10	4	11	7	0	52
ಅಂಕಗಳು	20	10	8	33	28	0	99

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-7) **(1 ಅಂಕ)**

1. 'ಪೂಜಾರಿ' ಪದ ಈ ವ್ಯಾಕರಣಾಂಶಕ್ಕೆ ಸೇರಿದೆ (ಸ್ಮರಣೆ- ಸುಲಭ)
(ಎ) ರೂಢನಾಮ (ಬಿ) ಅಂಕಿತನಾಮ (ಸಿ) ಅನ್ವರ್ಥನಾಮ (ಡಿ) ಸರ್ವನಾಮ

2. 'ಇನಿತು' ಪದ ನಾಮಪದದ ಈ ಪ್ರಕಾರಕ್ಕೆ ಸೇರಿದೆ (ಸ್ಮರಣೆ- ಸುಲಭ)
(ಎ) ಗುಣವಾಚಕ (ಬಿ) ಸಂಖ್ಯಾವಾಚಕ (ಸಿ) ಭಾವವಾಚಕ (ಡಿ) ಪರಿಮಾಣವಾಚಕ

3. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಾದ ಪದವಿದು (ಗ್ರಹಿಕೆ- ಸುಲಭ)
(ಎ) ತನ್ನ (ಬಿ) ಏನು? (ಸಿ) ಅಲ್ಲಿ (ಡಿ) ಯಾರು?

4. ರೂಢನಾಮವಲ್ಲದ ಪದವಿದು (ಗ್ರಹಿಕೆ- ಸುಲಭ)
(ಎ) ನದಿ (ಬಿ) ಪರ್ವತ (ಸಿ) ಊರು (ಡಿ) ಸಹದೇವ

5. ಅಂಕಿತನಾಮಕ್ಕೆ ಉದಾಹರಣೆಯಾದ ಪದವಿದು (ಗ್ರಹಿಕೆ- ಸುಲಭ)
(ಎ) ಮನುಷ್ಯ (ಬಿ) ದೇಶ (ಸಿ) ಕಮಲಾಕ್ಷ (ಡಿ) ವಿದ್ಯಾಂಸ

6. ಅನ್ವರ್ಥನಾಮ ಪದವಿದು (ಗ್ರಹಿಕೆ- ಸುಲಭ)
(ಎ) ಮನುಷ್ಯ (ಬಿ) ದೇಶ (ಸಿ) ಕಮಲಾಕ್ಷ (ಡಿ) ವಿದ್ಯಾಂಸ

7. ಗುಣವಾಚಕ ಪದಕ್ಕೆ ಸೇರಿದ ಪದವಿದು (ಗ್ರಹಿಕೆ- ಸುಲಭ)
(ಎ) ಹಳತು (ಬಿ) ಎಂಭತ್ತು (ಸಿ) ಮೂವರು (ಡಿ) ತೆಂಕಣ

8. ಪರಿಮಾಣವಾಚಕಕ್ಕೆ ಉದಾಹರಣೆಯಾದ ಪದವಿದು (ಗ್ರಹಿಕೆ- ಸುಲಭ)
(ಎ) ಮಾಟ (ಬಿ) ಪಡುವಣ (ಸಿ) ಅನಿತು (ಡಿ) ಹಿರಿಮೆ

9. 'ತುಸು' ಪದದಲ್ಲಿರುವ ವ್ಯಾಕರಣಾಂಶ (ಸಾಧಾರಣ- ಸುಲಭ)
(ಎ) ಪರಿಮಾಣವಾಚಕ (ಬಿ) ದಿಗ್ವಾಚಕ (ಸಿ) ಗುಣವಾಚಕ (ಡಿ) ಸಂಖ್ಯಾವಾಚಕ

10. 'ವ್ಯಾಪಾರಿ' ಪದವು ನಾಮಪದದ ಈ ಗುಂಪಿಗೆ ಸೇರಿದೆ (ಸ್ಮರಣೆ- ಸುಲಭ)
ಜೂನ್ 2023.
(ಎ) ಭಾವನಾಮ (ಬಿ) ರೂಢನಾಮ (ಸಿ) ಅನ್ವರ್ಥನಾಮ (ಡಿ) ಅಂಕಿತನಾಮ

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಫ-7) **(1 ಅಂಕ)**

11. ಒಳ್ಳೆಯ : ಗುಣವಾಚಕ : : ತೆಂಕಣ : ..... (ಗ್ರಹಿಕೆ- ಸುಲಭ)

12. ನಾನು : ಉತ್ತಮಪುರುಷ : : ಅವರು : ..... (ಗ್ರಹಿಕೆ-ಸಾಧಾರಣ)

13. ನೀವು : ಮಧ್ಯಮಪುರುಷ : : ಅವು : ..... (ಗ್ರಹಿಕೆ-ಸಾಧಾರಣ)

14. ಐವತ್ತು : ಸಂಖ್ಯಾವಾಚಕ : : ಐವರು : ..... (ಗ್ರಹಿಕೆ-ಸಾಧಾರಣ)

15. ನದಿ : ರೂಢನಾಮ : : ವಿಜ್ಞಾನಿ : ..... (ಗ್ರಹಿಕೆ- ಸುಲಭ) ಆಗಸ್ಟ್ 2024, ಜೂನ್ 2026.

16. ನಾನು : ಪುರುಷಾರ್ಥಕ ಸರ್ವನಾಮ : : ಯಾರು : ..... (ಗ್ರಹಿಕೆ-ಸಾಧಾರಣ)

17. ಅಷ್ಟು : ಪರಿಮಾಣವಾಚಕ : : ಹನ್ನೆರಡು : .....ಗ್ರಹಿಕೆ- ಸುಲಭ) ಮಾರ್ಚ್ 2026.

18. ಹನ್ನೆರಡು : ಸಂಖ್ಯಾವಾಚಕ : : ಮೂಡಣ : .....(ಗ್ರಹಿಕೆ- ಸುಲಭ) ಸೆಪ್ಟೆಂಬರ್ 2020.

19. ಪರ್ವತ : ರೂಢನಾಮ : : ಧರ್ಮರಾಯ : .....(ಗ್ರಹಿಕೆ- ಸುಲಭ) ಮಾರ್ಚ್ 2023.

20. ಪರ್ವತ : ರೂಢನಾಮ : : ವಿದ್ವಾಂಸ : ..... (ಗ್ರಹಿಕೆ- ಸುಲಭ) ಜೂನ್ 2024.

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

21. ಪ್ರೀತಿಯ ಹಣತೆಯನ್ನು ಎಲ್ಲಿ ಹಚ್ಚಬೇಕೆಂದು ಕವಿ ಶಿವರುದ್ರಪ್ಪನವರು ಹೇಳಿದ್ದಾರೆ? (ಸ್ಮರಣೆ – ಸುಲಭ)

22. ಕವಿ ಶಿವರುದ್ರಪ್ಪನವರು ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ಎಂದು ಹೇಳಿದ್ದಾರೆ? (ಸ್ಮರಣೆ - ಸುಲಭ) ಮಾರ್ಚ್ 2024.

23. ನದೀಜಲಗಳು ಏನಾಗಿವೆ? (ಸ್ಮರಣೆ - ಸುಲಭ) ಮಾರ್ಚ್ 2022

24. ಕವಿ ಶಿವರುದ್ರಪ್ಪನವರು ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕೆಂದು ಹೇಳಿದ್ದಾರೆ? (ಸ್ಮರಣೆ - ಸುಲಭ)

25. ಕಾಡುಮೇಡುಗಳ ಸ್ಥಿತಿ ಹೇಗಿದೆ? (ಗ್ರಹಿಕೆ - ಸುಲಭ)

26. ಕವಿ ಶಿವರುದ್ರಪ್ಪನವರು ವಸಂತವಾಗುತ ಏನನ್ನು ಮುಟ್ಟಬೇಕಿದೆ ಎಂದಿದ್ದಾರೆ? (ಸ್ಮರಣೆ-ಸಾಧಾರಣ)

27. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಕವಿ ಏನನ್ನು ಕಟ್ಟೋಣವೆಂದು ತಿಳಿಸುತ್ತಾರೆ? (ಸ್ಮರಣೆ-ಸಾಧಾರಣ)

28. ಮನುಜರ ನಡುವಿನ ಅಡ್ಡಗೋಡೆಗಳ ಕೆಡವುತ ಏನಾಗಬೇಕೆಂದು ಕವಿ ಬಯಸಿದ್ದಾರೆ? (ಸ್ಮರಣೆ-ಸುಲಭ))

29. ಕವಿ ಶಿವರುದ್ರಪ್ಪನವರು ಯಾವ ಎಚ್ಚರದೊಳು ಬದುಕಬೇಕಿದೆ ಎಂದು ಹೇಳಿದ್ದಾರೆ? (ಸ್ಮರಣೆ-ಸುಲಭ) ಮಾರ್ಚ್ 2024.

30. ನಾಳಿನ ಕನಸನ್ನು ಎಲ್ಲಿ ಬಿತ್ತಬೇಕು ಎಂದು ಕವಿ ಜಿ. ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ? (ಸ್ಮರಣೆ-ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **(2 ಅಂಕ)**

31. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕೆಂಬುದು ಕವಿ ಶಿವರುದ್ರಪ್ಪನವರ ಅಭಿಪ್ರಾಯವಾಗಿದೆ? (ಗ್ರಹಿಕೆ-ಸುಲಭ) (ಕ.ಫ-2)

32. 'ಬರಡಾಗಿರುವ ಕಾಡುಮೇಡುಗಳನ್ನು ಹೇಗೆ ಮುಟ್ಟಬೇಕಿದೆ' ಎಂದು ಕವಿ ಹೇಳಿದ್ದಾರೆ? (ಗ್ರಹಿಕೆ-ಸಾಧಾರಣ) (ಕ.ಫ-3)

33. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ ಎಂದು ಕವಿ ಶಿವರುದ್ರಪ್ಪನವರು ವಿವರಿಸಿದ್ದಾರೆ? (ಗ್ರಹಿಕೆ-ಸಾಧಾರಣ) ಮಾರ್ಚ್ 2024. (ಕ.ಫ-3)

34. ಕವಿ ಜಿ. ಎಸ್. ಶಿವರುದ್ರಪ್ಪನವರು ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕೆಂದಿದ್ದಾರೆ? (ಗ್ರಹಿಕೆ-ಸಾಧಾರಣ) ಆಗಸ್ಟ್ 2024. (ಕ.ಫ-3)

ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

35. ಜಿ. ಎಸ್. ಶಿವರುದ್ರಪ್ಪ (ಸ್ಮರಣೆ-ಸಾಧಾರಣ) ಮಾರ್ಚ್ 2023, ಸೆಪ್ಟೆಂಬರ್ 2020.

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : (ಕ.ಫ-10) **(3 ಅಂಕ)**

36. "ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು." (ಗ್ರಹಿಕೆ-ಸಾಧಾರಣ) ಮಾರ್ಚ್ 2026.

37. "ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು." (ಗ್ರಹಿಕೆ-ಸಾಧಾರಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

38. "ಪ್ರೀತಿಯ ಹಣತೆಯ ಹಚ್ಚೋಣ" (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2022. ಆಗಸ್ಟ್ 2024

39. "ಮುಂಗಾರಿನ ಮಳೆಯಾಗೋಣ" (ಅಭಿವ್ಯಕ್ತಿ-ಸಾಧಾರಣ)

40. "ಹೊಸ ಭರವಸೆಗಳ ಕಟ್ಟೋಣ" (ಅಭಿವ್ಯಕ್ತಿ-ಸಾಧಾರಣ)

41. "ಹೊಸ ಎಚ್ಚರದೊಳು ಬದುಕೋಣ" (ಅಭಿವ್ಯಕ್ತಿ-ಸಾಧಾರಣ)

42. "ಎಚ್ಚರದಲಿ ಮುನ್ನಡೆಸೋಣ" (ಅಭಿವ್ಯಕ್ತಿ-ಸಾಧಾರಣ)

43. "ವಸಂತವಾಗುತ ಮುಟ್ಟೋಣ" (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2020.

44. "ಕೆಡವುತ ಸೇತುವೆಯಾಗೋಣ" (ಅಭಿವ್ಯಕ್ತಿ-ಸಾಧಾರಣ)

45. "ನಾಳಿನ ಕನಸನು ಬಿತ್ತೋಣ" (ಅಭಿವ್ಯಕ್ತಿ-ಸಾಧಾರಣ)

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : (ಸ್ಮರಣೆ-ಸುಲಭ)
ಜೂನ್ 2022, 2026. (ಕ.ಫ-17) **(4 ಅಂಕ)**

46. ಕಲುಷಿತವಾದೀ .....
.....
.....
..... ಮುಟ್ಪೋಣ.

ಅಥವಾ

ಮತಗಳೆಲ್ಲವೂ .....
.....
.....
..... ಬಿತ್ತೋಣ.

ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : (ಕ.ಫ-11) (ಪ್ರಶಂಸೆ-ಕಠಿಣ) **(4 ಅಂಕ)**

47. ಸುತ್ತಲು ಕವಿಯುವ ಕತ್ತಲೆಯೊಳಗೆ - ಮೇ 2025.
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ

48. ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಪೋಣ

49. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ

50. ಮತಗಳೆಲ್ಲವು ಪಥಗಳು ಎನ್ನುವ - ಜೂನ್ 2024.
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)
(ಕ.ಫ-3)

51. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ? ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2025, ಜೂನ್ 2023.

52. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2025, ಜೂನ್ 2023.

ಹೆಚ್ಚುವರಿ : ನಾಮಪದಗಳು

1. ವಸ್ತುವಾಚಕಗಳು :

ರೂಢನಾಮಗಳು : ನದಿ, ಪರ್ವತ, ಊರು, ದೇಶ, ಮನುಷ್ಯ.

ಅಂಕಿತನಾಮಗಳು : ಸಹದೇವ, ಧರ್ಮರಾಯ, ರಾಹುಲ, ಕಮಲಾಕ್ಷ, ಮೈಸೂರು, ವಿಶ್ವೇಶ್ವರಯ್ಯ.

ಅನ್ವರ್ಥನಾಮಗಳು : ವ್ಯಾಪಾರಿ, ವಿದ್ವಾಂಸ, ವಿಜ್ಞಾನಿ, ಪೂಜಾರಿ.

2. ಗುಣವಾಚಕಗಳು : ಒಳ್ಳೆಯ, ಕೆಟ್ಟ, ದೊಡ್ಡದು, ಹಳತು.

3. ಸಂಖ್ಯಾವಾಚಕಗಳು : ಹನ್ನೆರಡು, ಐವತ್ತು, ಎಂಬತ್ತು.

4. ಸಂಖ್ಯೇಯವಾಚಕಗಳು : ಮೂವರು, ಹನ್ನೆರಡನೆಯ, ಎಂಭತ್ತನೆಯ.

5. ಭಾವನಾಮಗಳು : ಕೆಂಪು, ಹಿರಿಮೆ, ನೋಟ, ಮಾಟ, ಆಟ.

6. ಪರಿಮಾಣವಾಚಕಗಳು : ಅಷ್ಟು, ಎಷ್ಟು, ಹಲವು, ಇನಿತು, ಅನಿತು.

7. ದಿಗ್ವಾಚಕಗಳು : ಮೂಡಣ, ತೆಂಕಣ, ಪಡುವಣ, ಬಡಗಣ, ಈಶಾನ್ಯ, ಆಗ್ನೇಯ, ವಾಯುವ್ಯ, ನೈರುತ್ಯ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ.

8. ಸರ್ವನಾಮಗಳು :

ಪುರುಷಾರ್ಥಕ ಸರ್ವನಾಮಗಳು :

ಉತ್ತಮ ಪುರುಷ : ನಾನು, ನಾವು.

ಮಧ್ಯಮ ಪುರುಷ : ನೀನು, ನೀವು.

ಪ್ರಥಮ ಪುರುಷ : ಅವನು/ಅವಳು/ಅದು/ಅವರು/ಅವು

ಆತ್ಮಾರ್ಥಕ ಸರ್ವನಾಮಗಳು : ತಾನು, ತಾವು, ತನ್ನ, ತಮ್ಮ.

ಪ್ರಶ್ನಾರ್ಥಕ ಸರ್ವನಾಮಗಳು : ಯಾರು? ಯಾವುದು? ಯಾವನು? ಯಾವಳು? ಯಾವುವು?

ಪದ್ಯಪಾಠ : 2. ಹಕ್ಕಿ ಹಾರುತಿದೆ ನೋಡಿದಿರಾ - ದ. ರಾ. ಬೇಂದ್ರೆ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	22	10	13	7	52
ಅಂಕಗಳು	27	17	41	28	113

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ 3	ಒಟ್ಟು
ಪ್ರಶ್ನೆಗಳು	15	10	3	14	10	0	52
ಅಂಕಗಳು	15	10	6	42	40	0	113

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-17) **(1 ಅಂಕ)**

1. 'ಬೇಗನೆ' ಪದ ಈ ಅವ್ಯಯಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಜೂನ್ 2022, ಆಗಸ್ಟ್ 2024.

(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಅನುಕರಣಾವ್ಯಯ

(ಸಿ) ಭಾವಸೂಚಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ

2. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುವುದು (ಸ್ಮರಣೆ-ಸಾಧಾರಣ) ಮಾರ್ಚ್ 2017, 2019.

(ಎ) ಸಂಬಂಧಾರ್ಥಕಾವ್ಯಯ (ಬಿ) ಭಾವಸೂಚಕಾವ್ಯಯ

(ಸಿ) ಸಾಮಾನ್ಯಾರ್ಥಕಾವ್ಯಯ (ಡಿ) ಅವಧಾರಣಾರ್ಥಕಾವ್ಯಯ

3. 'ಸಾಕು' ಪದವು ಈ ಅವ್ಯಯಕ್ಕೆ ಉದಾರಣೆಯಾಗಿದೆ (ಸ್ಮರಣೆ-ಸುಲಭ) ಮಾರ್ಚ್ 2018.

(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಅನುಕರಣಾವ್ಯಯ

(ಸಿ) ಭಾವಸೂಚಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ

4. 'ಅವರೇ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2020.

(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಕ್ರಿಯಾರ್ಥಕಾವ್ಯಯ

(ಸಿ) ಸಂಬಂಧಾರ್ಥಕಾವ್ಯಯ (ಡಿ) ಅವಧಾರಣಾರ್ಥಕಾವ್ಯಯ

5. ರೊಯ್ಯನೆ, ಸುಯ್ಯನೆ ಪದಗಳು ಈ ಅವ್ಯಯಕ್ಕೆ ಉದಾಹರಣೆಯಾಗಿವೆ (ಸ್ಮರಣೆ-ಸುಲಭ) ಸೆಪ್ಟೆಂಬರ್ 2020.

(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಅನುಕರಣಾವ್ಯಯ

(ಸಿ) ಅವಧಾರಣಾರ್ಥಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ

6. ಯಾವುದಾರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವ ಅವ್ಯಯಗಳನ್ನು ಹೀಗೆನ್ನುವರು (ಸ್ಮರಣೆ-ಸುಲಭ) ಮಾರ್ಚ್ 2021, ಜೂನ್ 2018.

(ಎ) ಅವಧಾರಣಾರ್ಥಕಾವ್ಯಯ (ಬಿ) ಅನುಕರಣಾವ್ಯಯ

(ಸಿ) ಸಾಮಾನ್ಯಾರ್ಥಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ

7. 'ಧಗಧಗ' ಪದವು ಈ ಅವ್ಯಯಕ್ಕೆ ಸೇರಿದೆ (ಸ್ಮರಣೆ-ಸುಲಭ) ಮಾರ್ಚ್ 2023.
(ಎ) ಸಾಮಾನ್ಯಾರ್ಥಕಾವ್ಯಯ (ಬಿ) ಅನುಕರಣಾವ್ಯಯ
(ಸಿ) ಭಾವಸೂಚಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ

8. ಕ್ರಿಯಾರ್ಥಕಾವ್ಯಯಕ್ಕೆ ಉದಾಹರಣೆಯಾದ ಪದವಿದು (ಗ್ರಹಿಕೆ-ಸಾಧಾರಣ) ಮಾರ್ಚ್ 2015.
(ಎ) ಉಂಟು (ಬಿ) ಬೇಗನೆ
(ಸಿ) ಮತ್ತು (ಡಿ) ಧಗಧಗ

9. 'ಸೊಗಸಾಗಿ' ಪದವು ಅವ್ಯಯದ ಈ ಗುಂಪಿಗೆ ಸೇರಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2017, ಜೂನ್ 2019.
(ಎ) ಕ್ರಿಯಾರ್ಥಕಾವ್ಯಯ (ಬಿ) ಸಾಮಾನ್ಯಾರ್ಥಕಾವ್ಯಯ
(ಸಿ) ಅನುಕರಣಾವ್ಯಯ (ಡಿ) ಅವಧಾರಣಾರ್ಥಕಾವ್ಯಯ

10. 'ನೀನೇ' ಪದವು ಈ ಅವ್ಯಯಕ್ಕೆ ಸೇರಿದೆ (ಸ್ಮರಣೆ-ಸಾಧಾರಣ) ಜೂನ್ 2017
(ಎ) ಅವಧಾರಣಾರ್ಥಕಾವ್ಯಯ (ಬಿ) ಸಾಮಾನ್ಯಾರ್ಥಕಾವ್ಯಯ
(ಸಿ) ಸಂಬಂಧಾರ್ಥಕಾವ್ಯಯ (ಡಿ)ಭಾವಸೂಚಕಾವ್ಯಯ

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಫ-17) **(1 ಅಂಕ)**

11. ಅಥವಾ : ಸಂಬಂಧಾರ್ಥಕಾವ್ಯಯ : : ಚಟಚಟ : ..... (ಗ್ರಹಿಕೆ-ಸುಲಭ)

12. ತರುವಾಯ : ಸಾಮಾನ್ಯಾರ್ಥಕಾವ್ಯಯ : : ಉಂಟು : ..... (ಗ್ರಹಿಕೆ-ಸುಲಭ)

13. ಸುಮ್ಮನೆ : ಸಾಮಾನ್ಯಾರ್ಥಕಾವ್ಯಯ : : ಸರಸರನೆ : ..... (ಗ್ರಹಿಕೆ-ಸುಲಭ) ಮಾರ್ಚ್ 2025.

14. ಸಾಕು : ಕ್ರಿಯಾರ್ಥಕಾವ್ಯಯ : : ಅದುವೇ : ..... (ಗ್ರಹಿಕೆ-ಸುಲಭ)

15. ಬೇಗನೆ : ಸಾಮಾನ್ಯಾರ್ಥಕಾವ್ಯಯ : : ಫುಳುಫುಳು : ..... (ಗ್ರಹಿಕೆ-ಸುಲಭ)

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

16. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ? (ಸ್ಮರಣೆ-ಸುಲಭ)

17. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ? (ಸ್ಮರಣೆ-ಸುಲಭ)
ಮಾರ್ಚ್ 2018, 2020, 2025.

18. ಹಕ್ಕಿಯ ಕಣ್ಣುಗಳು ಯಾವುವು? (ಸ್ಮರಣೆ-ಸುಲಭ) ಮಾರ್ಚ್ 2015, 2023.

19. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ? (ಸ್ಮರಣೆ-ಸುಲಭ) ಜೂನ್ 2024, ಆಗಸ್ಟ್ 2024.

20. ಹಕ್ಕಿಯು ಯಾರನ್ನು ಹರಸಿದೆ? (ಸ್ಮರಣೆ-ಸುಲಭ)

21. ಹಕ್ಕಿಯು ಯಾವುದರ ಸಂಕೇತವಾಗಿದೆ? (ಸ್ಮರಣೆ-ಸುಲಭ) ಜೂನ್ 2018,2019.

22. ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ? (ಸ್ಮರಣೆ-ಸುಲಭ)

23. ಹಕ್ಕಿಯು ಎಲ್ಲಿಯ ನೀರನ್ನು ಹೀರಿದೆ? (ಸ್ಮರಣೆ-ಸಾಧಾರಣ)

24. ಕವಿ ಯಾವುದನ್ನು ಹಳ್ಳಿಗೆ ಹೋಲಿಸಿದ್ದಾರೆ? (ಸ್ಮರಣೆ-ಸಾಧಾರಣ)

25. ಹಕ್ಕಿಯು ಯಾವುದನ್ನು ಒಡೆಯಲು ಹೊಂಚು ಹಾಕಿ ನಿಂತಿದೆ? (ಸ್ಮರಣೆ-ಸಾಧಾರಣ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :
(ಕ.ಫ-3) **(2 ಅಂಕ)**

26. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ? (ಗ್ರಹಿಕೆ-ಸುಲಭ) ಮಾರ್ಚ್ 2025, ಜೂನ್ 2023.

27. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ? (ಗ್ರಹಿಕೆ-ಸುಲಭ) ಮಾರ್ಚ್ 2026.

28. ಹಕ್ಕಿಯು ಯಾವ ಮೇರೆ ಮೀರಿ, ನೀರನು ಹೀರಿದೆ? (ಗ್ರಹಿಕೆ-ಸುಲಭ)

ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

29. ದ. ರಾ. ಬೇಂದ್ರೆ (ಸ್ಮರಣೆ-ಸಾಧಾರಣ)

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : (ಕ.ಫ-10) **(3 ಅಂಕ)**

30. "ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು." (ಗ್ರಹಿಕೆ-ಸಾಧಾರಣ)

31. "ಮರವೇರಿದ ಮರ್ಕಟನಂತೆ" (ಗ್ರಹಿಕೆ-ಕಠಿಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :
(ಕ.ಫ-9) **(3 ಅಂಕ)**

32. "ರೆಕ್ಕೆಗಳೆರಡೂ ಪಕ್ಕದಲ್ಲುಂಟು" (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2026.

33. "ಸಾರ್ವಭೌಮರಾ ನೆತ್ತಿಯ ಕುಕ್ಕಿ" (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2015, 2018, 2025.

34. "ಬಲ್ಲರು ಯಾರಾ ಹಾಕಿದ ಹೊಂಚ" (ಅಭಿವ್ಯಕ್ತಿ-ಸಾಧಾರಣ)

35. "ಹೊಸಗಾಲದ ಹಸುಮಕ್ಕಳ ಹರಸಿ" (ಅಭಿವ್ಯಕ್ತಿ-ಸಾಧಾರಣ) ಜೂನ್ 2017, 2019.

36. "ಮಂಗಳ ಲೋಕದ ಅಂಗಳಕೇರಿ" (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2023, ಜೂನ್ 2018.

37. "ತಿಂಗಳಿನೂರಿನ ನೀರನು ಹೀರಿ" (ಅಭಿವ್ಯಕ್ತಿ-ಕಠಿಣ) ಜೂನ್ 2024.

38. "ರೆಕ್ಕೆಯ ಬೀಸುತ ಚೇತನಗೊಳಿಸಿ" (ಅಭಿವ್ಯಕ್ತಿ-ಕಠಿಣ) ಆಗಸ್ಟ್ 2024.

39. "ತೇಲಿಸಿ ಮುಳುಗಿಸಿ ಖಂಡಖಂಡಗಳ" (ಅಭಿವ್ಯಕ್ತಿ-ಕಠಿಣ) ಮಾರ್ಚ್ 2020, ಜೂನ್ 2023.

40. "ಬಿಳಿ ಹೊಳೆ ಬಣ್ಣದ ಗರಿ-ಗರಿ ಉಂಟು" (ಅಭಿವ್ಯಕ್ತಿ-ಕಠಿಣ)

41. "ಮಂಡಲ-ಗಿಂಡಲಗಳ ಗಡ ಮುಕ್ಕಿ"(ಅಭಿವ್ಯಕ್ತಿ-ಸಾಧಾರಣ)

42. "ಮುಗಿಲಿಗೆ ರೆಕ್ಕೆಗಳು ಹೊಡೆದವು ಅಣ್ಣ"(ಅಭಿವ್ಯಕ್ತಿ-ಸಾಧಾರಣ)

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : (ಕ.ಪ-17) **(4 ಅಂಕ)**
(ಸ್ಮರಣೆ-ಸುಲಭ) ಮಾರ್ಚ್ 2022, 2024, ಜೂನ್ 2022, ಮೇ 2025, ಸೆಪ್ಟೆಂಬರ್ 2020.

43. ನೀಲಮೇಘಮಂಡಲ- .....
.....
.....
..... ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ಅಥವಾ

ಯುಗಯುಗಗಳ .....
.....
.....
..... ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : (ಕ.ಪ-11) (ಪ್ರಶಂಸೆ-ಕಠಿಣ) **(4 ಅಂಕ)**

44. ಇರುಳಿರುಳಳಿದು ದಿನ ದಿನ ಬೆಳಗೆ
ಸುತ್ತಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ?

45. ಕರಿನರೆ ಬಣ್ಣದ ಪುಚ್ಚಗಳುಂಟು
ಬಿಳಿ-ಹೊಳೆ ಬಣ್ಣದ ಗರಿ-ಗರಿಯುಂಟು
ಕೆನ್ನನ ಹೊನ್ನನ ಬಣ್ಣ-ಬಣ್ಣಗಳ
ರೆಕ್ಕೆಗಳೆರಡೂ ಪಕ್ಕದಲುಂಟು
ಹಕ್ಕಿ ಹಾರುತಿದೆ ನೋಡಿದಿರಾ?

46. ನೀಲಮೇಘಮಂಡಲ-ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

47. ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ (ಜೂನ್ 2022)
ಮಂಡಲ-ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ-ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

48. ಯುಗ-ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ

ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

49. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

50. ಮುಟ್ಟಿದೆ ದಿಗ್ಮಂಡಲಗಳ ಅಂಚ
ಆಚೆಗೆ ಚಾಚಿದೆ ತನ್ನಯ ಚುಂಚ
ಬ್ರಹ್ಮಾಂಡಗಳನು ಒಡೆಯಲು ಎಂದೋ
ಬಲ್ಲರು ಯಾರಾ ಹಾಕಿದ ಹೊಂಚ!
ಹಕ್ಕಿ ಹಾರುತಿದೆ ನೋಡಿದಿರಾ?

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)

(ಕ.ಫ-3)

51. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳನ್ನು ಕುರಿತು ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ)

52. ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ಎಲ್ಲರು ತಲೆಬಾಗಲೇಬೇಕು ಎಂಬುದನ್ನು ಹಕ್ಕಿ ಹಾರುವಿಕೆಯ ಸಹಜ ಕ್ರಿಯೆಯೊಂದಿಗೆ ಕವಿ ಹೇಳಿರುವ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ)

ಹೆಚ್ಚುವರಿ : ಅವ್ಯಯಗಳು

ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು 'ಅವ್ಯಯಗಳು' ಎನ್ನುವರು.

ಸಾಮಾನ್ಯಾರ್ಥಕಾವ್ಯಯಗಳು : ಯಾವುದಾರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳೇ ಸಾಮಾನ್ಯಾರ್ಥಕಾವ್ಯಯಗಳು. ಇವು ಹೆಚ್ಚಾಗಿ ವಿಶೇಷಣಗಳಾಗಿರುತ್ತವೆ.

ಉದಾ : ಬೇಗನೆ, ಮೆಲ್ಲಗೆ, ಸೊಗಸಾಗಿ, ಸುಮ್ಮನೆ, ತಟ್ಟನೆ, ತರುವಾಯ, ಹಾಗೆ, ಅಂತು, ಬೇರೆ, ಬಳಿಕ, ಕೂಡಲೆ, ಚೆನ್ನಾಗಿ.

ಅನುಕರಣಾವ್ಯಯಗಳು : ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು 'ಅನುಕರಣಾವ್ಯಯಗಳು' ಎಂದು ಕರೆಯುತ್ತಾರೆ.

ಉದಾ : ಚಟಚಟ, ಕರಕರ, ಚುರುಚುರು, ಧಗಧಗ, ರೊಯ್ಯನೆ, ಸುಯ್ಯನೆ, ಘುಳುಘುಳು, ದಡದಡ.

ಭಾವಸೂಚಕಾವ್ಯಯಗಳು : ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು

ಪದಗಳನ್ನು ಬಳಸುತ್ತೇವೆ. ಅಂತಹ ಪದಗಳನ್ನು 'ಭಾವಸೂಚಕಾವ್ಯಯಗಳು' ಎಂದು ಕರೆಯುತ್ತಾರೆ.

ಉದಾ : ಅಹಾ! ಛಳಿರೆ! ಓಹೋ! ಹೋ! ಅಃ! ಆಃ! ಓ!

ಕ್ರಿಯಾರ್ಥಕಾವ್ಯಯಗಳು : ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು 'ಕ್ರಿಯಾರ್ಥಕ ಅವ್ಯಯಗಳು' ಎಂದು ಕರೆಯಲಾಗಿದೆ.

ಉದಾ : ಅಹುದು, ಸಾಕು, ಅಲ್ಲ, ಹೌದು, ಬೇಡ, ಉಂಟು ಇತ್ಯಾದಿ.

ಸಂಬಂಧಾರ್ಥಕಾವ್ಯಯಗಳು : ಎರಡು ಪದಗಳನ್ನಾಗಲೀ, ಹಲವು ಪದ ಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ ಜೋಡಿಸುವಂತಹ ಅಥವಾ ಸಂಬಂಧಗೊಳಿಸುವಂತಹ ಪದಗಳೇ 'ಸಂಬಂಧಾರ್ಥಕಾವ್ಯಯಗಳು'

ಉದಾ : ಊ, ಉಂ, ಮತ್ತು, ಅಥವಾ, ಆದ್ದರಿಂದ, ಅಲ್ಲದೆ, ಇತ್ಯಾದಿ.

ಪದಗಳ ಜೋಡಣೆ : ರಾಮನೂ ಲಕ್ಷ್ಮಣನೂ ಸೀತೆಯೂ ಕಾಡಿಗೆ ಹೊರಟರು.

ಪದಸಮುಚ್ಚಯ ಜೋಡಣೆ : ಅವನು ಬರುವುದು ಬೇಡ ; ಆ ಕೆಲಸ ಆಗುವುದು ಬೇಡ.

ವಾಕ್ಯಗಳ ಜೋಡಣೆ : ಅವನು ಬರಲಿಲ್ಲ ಆದ್ದರಿಂದ ನಾನೂ ಬರಲಿಲ್ಲ.

ಅವಧಾರಣಾರ್ಥಕಾವ್ಯಯಗಳು : ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು ಅವಧಾರಣಾರ್ಥಕಾವ್ಯಯ ಎಂದು ಕರೆಯುವರು. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.

ಉದಾ : ಅವನೇ, ಅದುವೇ, ನೀನೇ, ಅವಳೇ, ಅವರೇ, ಇತ್ಯಾದಿ.

ಪದ್ಯಪಾಠ : 3. ಕೌರವೇಂದ್ರನ ಕೊಂದೆ ನೀನು – ಕುಮಾರವ್ಯಾಸ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	28	20	12	10	70
ಅಂಕಗಳು	33	34	38	40	145

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	25	10	8	14	13	0	70
ಅಂಕಗಳು	25	10	16	42	52	0	145

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-17) **(1 ಅಂಕ)**

1. ದ್ವಂದ್ವಸಮಾಸಕ್ಕೆ ಉದಾಹರಣೆ ಇದು (ಗ್ರಹಿಕೆ-ಕಠಿಣ) ಮಾರ್ಚ್ 2026.
(ಎ) ಮುರಾರಿ (ಬಿ) ಮಾದ್ರಮಾಗಧಯಾದವರು
(ಸಿ) ಕೈಯಾನು (ಡಿ) ಮೇದಿನೀಪತಿ

2. 'ಹೊಗೆದೋರು' ಪದದಲ್ಲಿರುವ ಸಮಾಸ (ಸ್ಮರಣೆ-ಸಾಧಾರಣ)
(ಎ) ಅಂಶಿಸಮಾಸ (ಬಿ) ತತ್ಪುರುಷಸಮಾಸ
(ಸಿ) ಕ್ರಿಯಾಸಮಾಸ (ಡಿ) ಬಹುವ್ರೀಹಿಸಮಾಸ

3. 'ದಿನಪಸುತ' ಈ ಸಮಾಸಕ್ಕೆ ಉದಾಹರಣೆ (ಸ್ಮರಣೆ-ಸಾಧಾರಣ)
(ಎ) ತತ್ಪುರುಷ (ಬಿ) ಕರ್ಮಧಾರಯ
(ಸಿ) ಬಹುವ್ರೀಹಿ (ಡಿ) ಗಮಕ

4. ತತ್ಪುರುಷ ಸಮಾಸಕ್ಕೆ ಉದಾಹರಣೆ ಇದು (ಗ್ರಹಿಕೆ-ಸಾಧಾರಣ)
(ಎ) ಸೊಲ್ಗೇಳಿ (ಬಿ) ಬಿಲ್ಕೊಂಡು
(ಸಿ) ಪೂದೋಟ (ಡಿ) ಬಿಲ್ದಿರುವನೇರಿಸಿ

5. 'ಇಮ್ಮಾವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ)
(ಎ) ತತ್ಪುರುಷ (ಬಿ) ಕರ್ಮಧಾರಯ
(ಸಿ) ಗಮಕ (ಡಿ) ಅಂಶಿ

6. 'ಮೂಗಾವುದ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಮೇ 2025.
(ಎ) ಕರ್ಮಧಾರಯ (ಬಿ) ದ್ವಿಗು
(ಸಿ) ಕ್ರಿಯಾ (ಡಿ)ಬಹುವ್ರೀಹಿ

7. 'ಕುಡಿಹುಬ್ಬು' ಈ ಪದದಲ್ಲಿರುವ ಸಮಾಸ (ಸ್ಮರಣೆ-ಸಾಧಾರಣ)
(ಎ) ತತ್ಪುರುಷ (ಬಿ) ಕರ್ಮಧಾರಯ
(ಸಿ) ಕ್ರಿಯಾ (ಡಿ) ಅಂಶಿ

8. 'ಸಪ್ತಸ್ವರಗಳು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ)
(ಎ) ದ್ವಿಗು (ಬಿ) ಕ್ರಿಯಾ
(ಸಿ) ದ್ವಂದ್ವ (ಡಿ) ಕರ್ಮಧಾರಯ

9. 'ಅಂಗೈ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ)
ಆಗಸ್ಟ್ 2024
(ಎ) ತತ್ಪುರುಷ (ಬಿ) ಕ್ರಿಯಾ
(ಸಿ) ದ್ವಿಗು (ಡಿ) ಅಂಶಿ

10. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ)
ಮಾರ್ಚ್ 2019, 2023, ಜೂನ್ 2022, 2026.
(ಎ) ಕರ್ಮಧಾರಯ (ಬಿ) ದ್ವಿಗು
(ಸಿ) ತತ್ಪುರುಷ (ಡಿ) ಗಮಕ

11. 'ಮೋಸಮಾಡು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ)
(ಎ) ತತ್ಪುರುಷ (ಬಿ) ಕ್ರಿಯಾ ಸಮಾಸ
(ಸಿ) ದ್ವಿಗು ಸಮಾಸ (ಡಿ)ಅಂಶಿ ಸಮಾಸ

12. 'ಕಳ್ಳುಡಿದ' ಪದವು ಈ ಸಮಾಸಕ್ಕೆ ಸೇರಿದೆ (ಸ್ಮರಣೆ -ಸಾಧಾರಣ)
(ಎ) ಕ್ರಿಯಾ (ಬಿ) ಅಂಶಿ
(ಸಿ) ಕರ್ಮಧಾರಯ (ಡಿ) ದ್ವಿಗು

13. 'ಮುಕ್ಕಣ್ಣ' ಪದದಲ್ಲಿರುವ ಸಮಾಸ (ಸ್ಮರಣೆ-ಸಾಧಾರಣ) ಸೆಪ್ಟೆಂಬರ್ 2020.
(ಎ) ಅಂಶಿ (ಬಿ) ದ್ವಂದ್ವ
(ಸಿ) ಕ್ರಿಯಾ (ಡಿ) ದ್ವಿಗು

14. ಕ್ರಿಯಾಸಮಾಸಕ್ಕೆ ಉದಾಹರಣೆ ಇದು (ಗ್ರಹಿಕೆ-ಕಠಿಣ) ಮಾರ್ಚ್ 2021.
(ಎ) ಇಮ್ಮಾವು (ಬಿ) ಕಡೆಗಣ್ಣು
(ಸಿ) ಕಣ್ದೆರೆ (ಡಿ) ತಲೆನೋವು

15. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2022.
(ಎ) ತತ್ಪುರುಷ (ಬಿ) ಕ್ರಿಯಾ
(ಸಿ) ಅಂಶಿ (ಡಿ) ದ್ವಿಗು

16. 'ಕಣ್ದೆರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ)
ಮಾರ್ಚ್ 2024.
(ಎ) ಅಂಶಿ (ಬಿ) ಕರ್ಮಧಾರಯ
(ಸಿ) ಕ್ರಿಯಾ (ಡಿ) ಗಮಕ

17. 'ರಾಜೀವಸಖ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಜೂನ್ 2024.
(ಎ) ತತ್ಪುರುಷ (ಬಿ) ಅಂಶಿ
(ಸಿ) ಬಹುವ್ರೀಹಿ (ಡಿ) ಗಮಕ

18. 'ಕಂಗೆಡು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2015, 2025.

(ಎ) ಗಮಕ (ಬಿ) ದ್ವಿಗು
(ಸಿ) ಅಂಶಿ (ಡಿ) ಕ್ರಿಯಾ

19. 'ಚಕ್ರಪಾಣಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಮಾರ್ಚ್ 2018. (ಕ.ಫ-7)
(ಎ) ತತ್ಪುರುಷ (ಬಿ) ಅಂಶಿ
(ಸಿ) ಬಹುವ್ರೀಹಿ (ಡಿ) ಗಮಕ

20. 'ನೆಯ್ದವಸ್ತ್ರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ (ಸ್ಮರಣೆ-ಸಾಧಾರಣ) ಜೂನ್ 2017, 2019. (ಕ.ಫ-7)
(ಎ) ತತ್ಪುರುಷ (ಬಿ) ಅಂಶಿ
(ಸಿ) ಬಹುವ್ರೀಹಿ (ಡಿ) ಗಮಕ

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಫ-17) **(1 ಅಂಕ)**

21. ಕಪ್ಪಡಮುಟ್ಟು : ಕ್ರಿಯಾಸಮಾಸ : : ಸಪ್ತವ್ಯಸನಗಳು : .....
(ಗ್ರಹಿಕೆ-ಸಾಧಾರಣ)

22. ಇಮ್ಮಾವು : ಕರ್ಮಧಾರಯಸಮಾಸ : : ಹಿಂದಲೆ : ..... (ಗ್ರಹಿಕೆ-ಸಾಧಾರಣ) ಮಾರ್ಚ್ 2020.

23. ಮಾಡಿದಡುಗೆ : ಗಮಕಸಮಾಸ : : ಬಿಲ್ಕೊಂಡು : ..... (ಗ್ರಹಿಕೆ- ಸಾಧಾರಣ)

24. ಆಕಲ್ಲು : ಗಮಕಸಮಾಸ : : ಕಣ್ದೆರೆ : ..... (ಗ್ರಹಿಕೆ-ಸಾಧಾರಣ)

25. ನಡುರಾತ್ರಿ : ಅಂಶಿಸಮಾಸ : : ಹೆದ್ದೊರೆ : ..... (ಗ್ರಹಿಕೆ-ಸಾಧಾರಣ) ಜೂನ್ 2018.

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

26. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು? (ಗ್ರಹಿಕೆ-ಸುಲಭ) ಸೆಪ್ಟೆಂಬರ್ 2020.

27. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು? (ಸ್ಮರಣೆ-ಸುಲಭ)

28. ಕರ್ಣನಿಗೆ ಆಮಿಷಗಳನ್ನು ಒಡ್ಡಿದವರು ಯಾರು? (ಸ್ಮರಣೆ-ಸುಲಭ) ಜೂನ್ 2023.

29. ಕರ್ಣನು ಯಾರ ಅನುಗ್ರಹದಿಂದ ಜನಿಸಿದನು? (ಸ್ಮರಣೆ-ಸುಲಭ)

30. ಧರ್ಮರಾಜನು ಯಾರ ಅನುಗ್ರಹದಿಂದ ಜನಿಸಿದನು? (ಸ್ಮರಣೆ-ಸುಲಭ)

31. ಭೀಮನು ಯಾರ ಅನುಗ್ರಹದಿಂದ ಜನಿಸಿದನು? (ಸ್ಮರಣೆ-ಸುಲಭ)

32. ಅರ್ಜುನನು ಯಾರ ಅನುಗ್ರಹದಿಂದ ಜನಿಸಿದನು? (ಸ್ಮರಣೆ-ಸುಲಭ)

33. ಫಲುಗುಣ ಎಂದು ಯಾರನ್ನು ಕರೆಯುತ್ತಾರೆ? (ಸ್ಮರಣೆ-ಸುಲಭ)

34. ನಕುಲ ಸಹದೇವರ ತಾಯಿಯ ಹೆಸರೇನು? (ಸ್ಮರಣೆ-ಸುಲಭ)

35. ಕೃಷ್ಣನು ಕರ್ಣನಿಗೆ ಎಲ್ಲಿಯ ರಾಜನನ್ನಾಗಿ ಮಾಡುವೆನೆಂದು ತಿಳಿಸುತ್ತಾನೆ? (ಸ್ಮರಣೆ-ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

36. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು? / ಮೇದಿನಿಪತಿ ನೀನು ಎಂದು ಕೃಷ್ಣನು ಕರ್ಣನ ಮನದಲ್ಲಿ ಹೇಗೆ ಭಯವನ್ನು ಬಿತ್ತಿದನು? (ಗ್ರಹಿಕೆ-ಸಾಧಾರಣ) (ಕ.ಫ-3)

37. ಕುಂತಿ, ಮಾದ್ರಿಯರು ಯಾರು ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು? (ಗ್ರಹಿಕೆ-ಸುಲಭ) (ಕ.ಫ-2)

38. ಕೃಷ್ಣನು ಆವಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳಾವುವು? (ಗ್ರಹಿಕೆ-ಸಾಧಾರಣ) ಮೇ-2025. (ಕ.ಫ-3)

39. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು? (ಗ್ರಹಿಕೆ-ಸಾಧಾರಣ) ಮಾರ್ಚ್ 2022, 2024, ಜೂ-2024, ಸೆಪ್ಟೆಂಬರ್ 2024. (ಕ.ಫ-3)

40. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) (ಕ.ಫ-3) (ಗ್ರಹಿಕೆ-ಸಾಧಾರಣ) ಮಾರ್ಚ್ 2020. (ಕ.ಫ-2)

42. ಕೃಷ್ಣನು ಕರ್ಣನಿಗೆ ರಾಜನಾದರೆ ಹೇಗೆ ಶೋಭಿಸಬಹುದೆಂದು ತಿಳಿಸುತ್ತಾನೆ? (ಗ್ರಹಿಕೆ-ಸಾಧಾರಣ) (ಕ.ಫ-2)

43. ದುಃಖಿತನಾದ ಕರ್ಣನನ್ನು ಕೃಷ್ಣನು ಹೇಗೆ ಸಂತೈಸಿದನು? (ಗ್ರಹಿಕೆ-ಸಾಧಾರಣ) (ಕ.ಫ-2)

ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

44. ಕುಮಾರವ್ಯಾಸ. (ಸ್ಮರಣೆ-ಸುಲಭ) ಮಾರ್ಚ್ 2022,2025, ಜೂನ್ 2024, ಮೇ 2025.

ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : (ಕ.ಫ-10) (ಗ್ರಹಿಕೆ-ಸಾಧಾರಣ) **(3 ಅಂಕ)**

45. ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿಯುಧಿಷ್ಠಿರದೇವ ಮೂರನೆಯಾತ ಕಲಿಭೀಮ

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : (ಕ.ಫ-10) **(3 ಅಂಕ)**

46. "ಮಾರಿಗೌತಣವಾಯಿತು ನಾಳಿನ ಭಾರತವು" (ಗ್ರಹಿಕೆ-ಸಾಧಾರಣ) 2024.

47. "ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ." (ಗ್ರಹಿಕೆ-ಕಠಿಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

48. "ರವಿ ಸುತನ ಕಿವಿಯಲಿ ಬಿತ್ತಿದನು ಭಯವ" (ಅಭಿವ್ಯಕ್ತಿ-ಸಾಧಾರಣ)

49. "ಬಾಯ್ದಂಬುಲಕೆ ಕೈಯಾನುವರೆ" (ಅಭಿವ್ಯಕ್ತಿ-ಸಾಧಾರಣ)

50. "ಜೀಯ ಹಸಾದವೆಂಬುದು ಕಷ್ಟ" (ಅಭಿವ್ಯಕ್ತಿ-ಸಾಧಾರಣ)

51. "ನಿನ್ನಪದೆಸೆಯ ಬಯಸುವನಲ್ಲ" (ಅಭಿವ್ಯಕ್ತಿ-ಸಾಧಾರಣ)

52. "ಮಾರಿಗೌತಣವಾಯ್ತು ನಾಳಿನ ಭಾರತವು" (ಅಭಿವ್ಯಕ್ತಿ-ಸಾಧಾರಣ)

53. "ಹರಿಯ ಹಗೆ ಹೊಗೆದೋರದುರುಹದೆ ಬರಿದೆ ಹೋಹುದೆ" (ಅಭಿವ್ಯಕ್ತಿ-ಕಠಿಣ) ಮಾರ್ಚ್ 2024.

54. "ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು" (ಅಭಿವ್ಯಕ್ತಿ-ಕಠಿಣ) ಮಾರ್ಚ್ 2020.

55. "ನಿನ್ನಯ ವೀರರೈವರ ನೋಯಿಸೆನು ರಾಜೀವ ಸಖನಾಣೆ" (ಅಭಿವ್ಯಕ್ತಿ-ಕಠಿಣ) ಸೆಪ್ಟೆಂಬರ್ 2020. (ಕ.ಫ-9)

56. "ನಿಮ್ಮಡಿಗಳಲಿ ಸಮಸೇವನೆಯೆ ದೇವ" (ಅಭಿವ್ಯಕ್ತಿ-ಕಠಿಣ)

57. "ಕೌರವೇಂದ್ರನ ಕೊಂದೆ ನೀನೆಂದ" (ಅಭಿವ್ಯಕ್ತಿ-ಕಠಿಣ)

ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : (ಕ.ಫ-17)
(ಸ್ಮರಣೆ-ಸಾಧಾರಣ) ಜೂನ್ 2023. **(4 ಅಂಕ)**

58. ಕೊರಳಸೆರೆ ಹಿಗ್ಗಿದವು ದೃಗುಜಲ
.....
.....
.....
.....
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಅಥವಾ

ಮಾರಿಗೌತಣವಾಯ್ತು ನಾಳಿನ
.....
.....
.....
.....
ವೀರರೈವರ ನೋಯಿಸೆನು ರಾಜೀವಸಖನಾಣೆ

ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : (ಕ.ಫ-11) (ಪ್ರಶಂಸೆ-ಕಠಿಣ) **(4 ಅಂಕ)**

59. ಇನತನೂಜನ ಕೂಡೆ ಮೈದುನ
ತನದ ಸರಸವನೆಸಗಿ ರಥದೊಳು
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ
ಎನಗೆ ನಿಮ್ಮಡಿಗಳಲಿ ಸಮಸೇ
ವನೆಯೆ ದೇವ ಮುರಾರಿಯಂಜುವೆ
ನೆನಲು ತೊಡೆಸೋಂಕಿನಲಿ ಸಾರಿದು ಶೌರಿಯಿಂತೆಂದ

60. ಭೇದವಿಲ್ಲೆಲೆ ಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿಸುವಡನ್ನಯಕೆ ಮೊದಲೆರಡಿಲ್ಲ ನಿನ್ನಾಣೆ
ಮೇದಿನೀಪತಿ ನೀನು ಚಿತ್ತದೊ
ಳಾದುದರಿವಿಲ್ಲೆನುತ ದಾನವ
ಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭಯವ

61. ಲಲನೆ ಪಡೆದೀಯ್ದೆದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು

62. ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ
ಜನಪ ಕೌರವ ಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರವೆರಡು ಸಂತತಿ
ಯೆನಿಸಲೊಲ್ಲದೆ ನೀನು ದುರಿಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ

63. ಎಡದ ಮೈಯಲಿ ಕೌರವೇಂದ್ರರ
ಗಡಣ ಬಲದಲಿ ಪಾಂಡು ತನಯರ
ಗಡಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು
ನಡುವೆ ನೀನೋಲಗದೊಳೊಪ್ಪುವ
ಕಡು ವಿಲಾಸವ ಬಿಸುಟು ಕುರುಪತಿ
ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ

64. ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

65. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ
ಹಾನಿಯಿಲ್ಲೆನ್ನಾಣೆ ನುಡಿ ನುಡಿ
ಮೌನವೇತಕೆ ಮರುಳುತನ ಬೇ
ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ

66. ಮರುಳು ಮಾಧವ ಮಹಿಯ ರಾಜ್ಯದ (ಮಾರ್ಚ್ 2023.)
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದನು ಕೌರವೇಂದ್ರನ ಕೊಂದೆ ನೀನೆಂದ

67. ವೀರ ಕೌರವರಾಯನೇ ದಾ
ತಾರನಾತನ ಹಗೆಯೆ ಹಗೆ ಕೈ
ವಾರವೇ ಕೈವಾರವಾದಂತಹೆನು ಕುರುನೃಪತಿ
ಶೌರಿ ಕೇಳೈ ನಾಳೆ ಸಮರದ
ಸಾರದಲಿ ತೋರುವೆನು ನಿಜಭುಜ
ಶೌರಿಯದ ಸಂಪನ್ನತನವನು ಪಾಂಡುತನಯರಲಿ

68. ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನಖಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)
(ಕ.ಫ-3) (ಅಭಿವ್ಯಕ್ತಿ-ಸಾಧಾರಣ)

69. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳನ್ನು ಸಂಗ್ರಹಿಸಿ ಬರೆಯಿರಿ.

70. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಹೆಚ್ಚುವರಿ : ಸಮಾಸಗಳು.

* **ತತ್ಪುರುಷಸಮಾಸ.**

ಬೆಟ್ಟದಾವರೆ	ದೈವಭಕ್ತಿ	ತಲೆನೋವು	ಸ್ವಾಮಿದ್ರೋಹ
ಪರಧನ	ಕಾಲುಬಳೆ	ಪೂದೋಟ	ಧನಹರಣ

ಕರ್ಮಧಾರಯಸಮಾಸ.

ಇಮ್ಮಾವು	ಮೆಲ್ಲಾತು	ಹೊಸಗನ್ನಡ	ಅತಿಕುಟಿಲ
ಕಟ್ಟೇಕಾಂತ	ದಿವ್ಯಶರಾಳಿ	ಹೆದ್ದೊರೆ	ನಲ್ನುದುರೆ

ದ್ವಿಗುಸಮಾಸ.

ಮೂಗಾವುದ	ಮುಕ್ಕಣ್ಣ	ಇರ್ಮಡಿ	ಸಪ್ತಸ್ವರಗಳು

* **ಬಹುವ್ರೀಹಿಸಮಾಸ.**

ಹಣೆಗಣ್ಣ	ಮುಕ್ಕಣ್ಣ	ಚಕ್ರಪಾಣಿ	ಅಬ್ಜೋದರ
ಅಂತಕಾತ್ಮಜ	ದಿನಪಸುತ	ಇನತನೂಜ	ದನುಜರಿಪು
ಮುರಾರಿ	ರಾಜೀವಸಖ	ನಾಣಿಲಿ	

*** ಅಂಶಿಸಮಾಸ.**

ಅಂಗೈ ಹಿಂದಲೆ ಕಡೆಗಣ್ಣು ಮುಂಗೈ ನಡುರಾತ್ರಿ

* **ದ್ವಂದ್ವಸಮಾಸ.**

ಗಿರಿವನದುರ್ಗಗಳು ಕರಿತುರಗರಥ ಹನುಮಭೀಮರಾಮ ಪಾರ್ಥಭೀಮರು
ಮಾದ್ರಮಾಗಧಯಾದವರು ಕೆರೆಕಟ್ಟೆಬಾವಿಗಳ

* **ಕ್ರಿಯಾಸಮಾಸ.**

ಮೈಮುಚ್ಚು ಕಣ್ಣೆರೆ ಕಂಗೆಡು ಕೈಕೊಳ್ಳುವದು
ಕೈಯಾನು ಸೊಲ್ಗೇಳಿ ಬಲವಂದು ಬಿಲ್ಕೊಂಡು
ಕಳ್ಗುಡಿದ ಮೋಸಮಾಡು

ಗಮಕಸಮಾಸ.

ಆಕಲ್ಲು ಈಬೆಕ್ಕು ನೆಯ್ದವಸ್ತ್ರ

ಪದ್ಯಪಾಠ : 4. ಛಲಮನೆ ಮೆಱೆವೆಂ – ರನ್ನ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	17	15	8	5	45
ಅಂಕಗಳು	22	27	26	20	95

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	10	11	6	10	8	0	45
ಅಂಕಗಳು	10	11	12	30	32	0	95

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-10) **(1 ಅಂಕ)**

1. 'ಕಂದ ಪದ್ಯ'ದಲ್ಲಿ ಬರುವ ಒಟ್ಟು ಮಾತ್ರೆಗಳ ಸಂಖ್ಯೆ (ಸ್ಮರಣೆ-ಸಾಧಾರಣ)
(ಎ) ೨೩ (ಬಿ) ೩೨ (ಸಿ) ೬೪ (ಡಿ) ೧೦೨

2. 'ಮೆಱೆವೆಂ' ಈ ಪದದಲ್ಲಿರುವ ಗಣದ ಹೆಸರು (ಸ್ಮರಣೆ-ಸಾಧಾರಣ)
(ಎ) ಜಗಣ (ಬಿ) ಭಗಣ (ಸಿ) ನಗಣ (ಡಿ) ಸಗಣ

3. ಭ, ರ, ನ, ಭ, ಭ, ರ, ಗಣಗಳಿರುವ ವೃತ್ತ (ಸ್ಮರಣೆ-ಸಾಧಾರಣ)
(ಎ) ಚಂಪಕ (ಬಿ) ಉತ್ಪಲ (ಸಿ) ಮತ್ತೇಭ (ಡಿ) ಸ್ರಗ್ಧರಾ

4. 'ಸಾಮ್ರಾಜ್ಯ' ಪದದಲ್ಲಿ ಕಂಡುಬರುವ ಅಕ್ಷರಗಣ (ಸ್ಮರಣೆ-ಸಾಧಾರಣ) ಮಾರ್ಚ್ 2021.
(ಎ) ಮ ಗಣ (ಬಿ) ತ ಗಣ (ಸಿ) ನಗಣ (ಡಿ) ಸಗಣ

5. ಭಾಮಿನಿಷಟ್ಪದಿಯ ಮೊದಲ ಸಾಲಿನಲ್ಲಿ ಬರುವ ಮಾತ್ರೆಗಳ ಸಂಖ್ಯೆ (ಸ್ಮರಣೆ-ಸಾಧಾರಣ) ಮಾರ್ಚ್ 2021.
(ಎ) ೧೦ (ಬಿ) ೧೨ (ಸಿ) ೧೪ (ಡಿ) ೨೦

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಫ-10) **(1 ಅಂಕ)**

6. ಪಿರಿದುಂ : ಸಗಣ : : ಪಾರ್ವನೆ : ..... (ಗ್ರಹಿಕೆ-ಸಾಧಾರಣ)

7. ಗುರುವೊಂದು ಆದಿಯೊಳ್ : ಉತ್ಪಲ : : ಲಘುನಾಲ್ಕು ಆಗಿರೆ : .....
(ಗ್ರಹಿಕೆ-ಸಾಧಾರಣ) ಸೆ-2020.

8. ಭಾಮಿನಿಷಟ್ಪದಿ : ೧೦೨ : : ವಾರ್ಧಕಷಟ್ಪದಿ : ..... (ಗ್ರಹಿಕೆ-ಸಾಧಾರಣ)

9. ಗುರುಲಘು ಮೂರಿರೆ : ಮ-ನ ಗಣ : : ಗುರುಲಘು ನಡುವಿರೆ : .....
ಗ್ರಹಿಕೆ-ಸಾಧಾರಣ)

10. ಚಂಪಕಮಾಲಾವೃತ್ತ : 21ಅಕ್ಷರ : : ಮಹಾಸ್ರಗ್ಧರಾವೃತ್ತ : .....
(ಗ್ರಹಿಕೆ-ಸಾಧಾರಣ)

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

11. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು? (ಸ್ಮರಣೆ-ಸುಲಭ)

12. ದಿನಪಸುತ ಎಂದರೆ ಯಾರು? (ಸ್ಮರಣೆ-ಸುಲಭ) ಮೇ 2025.

13. ದುರ್ಯೋಧನ ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ಹೇಳುತ್ತಾನೆ? (ಸ್ಮರಣೆ-ಸುಲಭ) ಮಾರ್ಚ್ 2025.

14. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ಯಾರು? (ಸ್ಮರಣೆ-ಸುಲಭ)

15. ಅಂತಕಾತ್ಮಜ ಎಂದರೆ ಯಾರು? (ಸ್ಮರಣೆ-ಸಾಧಾರಣ)

16. ದುರ್ಯೋಧನ ಯಾರ ಸಲಹೆ ಮೇರೆಗೆ ರಣರಂಗಕ್ಕೆ ಬರುತ್ತಾನೆ? (ಸ್ಮರಣೆ-ಸಾಧಾರಣ)

17. ದುರ್ಯೋಧನ ಸಲಹೆಯನ್ನು ಪಡೆಯಲು ಯಾರ ಬಳಿಗೆ ಬರುತ್ತಾನೆ? (ಸ್ಮರಣೆ-ಸುಲಭ)

18. ಭೀಷ್ಮರು ದುರ್ಯೋಧನನಿಗೆ ಯಾವ ಸಲಹೆಯನ್ನು ನೀಡುತ್ತಾರೆ? (ಸ್ಮರಣೆ-ಸುಲಭ)

19. ದುರ್ಯೋಧನನು ಕರ್ಣನನ್ನು ಕೊಲ್ಲಿಸಿದ ನೆಲವನ್ನು ಯಾವುದಕ್ಕೆ ಹೋಲಿಸುವನು? (ಸ್ಮರಣೆ-ಸಾಧಾರಣ)

20. ದುರ್ಯೋಧನ ತಾನು ಹೋರಾಡುತ್ತಿರುವುದು ಏಕೆ ಎಂದು ಭೀಷ್ಮನಿಗೆ ಹೇಳುತ್ತಾನೆ? (ಗ್ರಹಿಕೆ-ಸಾಧಾರಣ) ಮಾರ್ಚ್ 2020.

21. ಕರ್ಣ ಮತ್ತು ದುಶ್ಶಾಸನರನ್ನು ಕೊಂದವರು ಯಾರು? (ಸ್ಮರಣೆ-ಸಾಧಾರಣ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

22. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ? (ಗ್ರಹಿಕೆ-ಸಾಧಾರಣ) ಮಾರ್ಚ್ 2023. (ಕ.ಫ-3)

23. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ? (ಗ್ರಹಿಕೆ -ಸಾಧಾರಣ) ಮಾರ್ಚ್ 2025 (ಕ.ಫ-3)

24. ಪಾರ್ಥಭೀಮರ ಬಗೆಗಿನ ದುರ್ಯೋಧನನ ಅಭಿಪ್ರಾಯವನ್ನು ತಿಳಿಸಿ.
(ಗ್ರಹಿಕೆ- ಸಾಧಾರಣ) ಮಾ-2023. ಜೂನ್ 2022, 2024. (ಕ.ಫ-3)

25. ತಮ್ಮ ಬಳಿಗೆ ಬಂದ ದುರ್ಯೋಧನನಿಗೆ ಭೀಷ್ಮರು ನೀಡಿದ ಸಲಹೆಯನ್ನು ತಿಳಿಸಿ. (ಗ್ರಹಿಕೆ- ಸಾಧಾರಣ) (ಕ.ಫ-2)

26. ದುರ್ಯೋಧನನು ಛಲವನ್ನೇ ಮೆರೆಯುವುದಾಗಿ ಏಕೆ ಹೇಳುತ್ತಾನೆ?
(ಗ್ರಹಿಕೆ- ಸಾಧಾರಣ) (ಕ.ಫ-3)

27. ಅಂತಕಾತ್ಮಜನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳಲು ಕಾರಣವೇನು? (ಗ್ರಹಿಕೆ-ಸಾಧಾರಣ) ಮಾರ್ಚ್ 2020. (ಕ.ಫ-3)

ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

28. ರನ್ನ (ಸ್ಮರಣೆ-ಸುಲಭ) ಜೂನ್ 2022, 2023, ಆಗಸ್ಟ್ 2024.

ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : (ಕ.ಫ-10) (ಗ್ರಹಿಕೆ-ಸಾಧಾರಣ) **(3 ಅಂಕ)**

29. ಪುಟ್ಟಿದ ನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ

30. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರುಂ

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : (ಕ.ಫ-10) **(3 ಅಂಕ)**

31. "ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮೀಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು." (ಗ್ರಹಿಕೆ-ಕಠಿಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

32. "ನೆಲಕಿಱಿವೆನೆಂದು ಬಗೆದಿರೆ ಚಲಕಿಱಿವೆಂ" (ಅಭಿವ್ಯಕ್ತಿ-ಸಾಧಾರಣ) ಮೇ 2025.

33. "ಸಮರದೊಳೆನಗಜ್ಜ ಪೇೞಿಮಾವುದು ಕಜ್ಜಂ" (ಅಭಿವ್ಯಕ್ತಿ-ಸಾಧಾರಣ)

34. "ಪಾಂಡವರೊಳಿಱಿದು ಛಲಮನೆ ಮೆರೆವೆಂ" (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2026.

35. "ಮೇಣಾಯ್ತು ಕೌರವಂಗವನಿತಳಂ" (ಅಭಿವ್ಯಕ್ತಿ-ಕಠಿಣ)

36. "ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು" (ಅಭಿವ್ಯಕ್ತಿ-ಕಠಿಣ) ಮಾರ್ಚ್ 2024.

37. "ಮುನ್ನಮವಂದಿರಿರ್ಬರುಮನಿಕ್ಕುವೆನಿಕ್ಕಿ ಬಲಿಕ್ಕೆ ಸಂಧಿಗೆಯ್ವೊನ್" (ಅಭಿವ್ಯಕ್ತಿ-ಕಠಿಣ)

38. "ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದ ಪೆನೇ"

ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : (ಕ.ಫ-17) **(4 ಅಂಕ)**
(ಸ್ಮರಣೆ-ಸಾಧಾರಣ) ಮಾರ್ಚ್ 2018 ಜೂನ್-2021.

38. ನೆಲಕಿಱಿವೆನೆಂದು .....
.....
.....
..... ಪುದುವಾಳ್ದ ಪೆನೇ

ಅಥವಾ

ಪುಟ್ಟಿದ .....
.....
.....
..... ಛಲಮನೆ ಮೆಱೆವೆಂ

ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : (ಕ.ಫ-11) (ಪ್ರಶಂಸೆ-ಕಠಿಣ) **(4 ಅಂಕ)**

39. ನಿಮಗೆ ಪೊಡೆಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ
ಸಮಕೊಳಿಸಲೆಂದು ಬಂದೆನೆ
ಸಮರದೊಳೆನಗಜ್ಜ ಪೇೞಿಮಾವುದು ಕಜ್ಜಂ

40. ನೆಲಕಿಱಿವೆನೆಂದು ಬಗೆದಿರೆ
ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ
ೞ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆಪುದುವಾಳ್ವಪೆನೇ

41. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು
ಳ್ಳನ್ನೆಗಮೊಲ್ಲೆನೆನ್ನೊಡಲೊಳೆನ್ನಸುವುಳ್ಳಿನಮಜ್ಜ ಸಂಧಿಯಂ
ಮುನ್ನಮವಂದಿರಿರ್ಬರುಮನಿಕ್ಕುವೆನಿಕ್ಕಿ ಬೞಿಕ್ಕೆ ಸಂಧಿಗೆ
ಯ್ವೊನ್ನೆಗಳ್ದಂತಕಾತ್ಮಜನೊಳೆನ್ನಳಲಾಱಿದೊಡಾಗದೆಂಬೆನೇ

42. ಪುಟ್ಟಿದ ನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ
ಪುಟ್ಟಿ ಪೊದೞ್ದುದು ಸತ್ತರ್
ಪುಟ್ಟರೆಪಾಂಡವರೊಳಿಱಿದು ಛಲಮನೆಮೞ್ಚೆವೆಂ

43. ಕಾದದಿರೆನಜ್ಜ ಪಾಂಡವ
ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ
ಣಾದೆನದಱಿಂದೆ ಪಾಂಡವ
ರ್ಗಾದುದು ಮೇಣಾಯ್ತು ಕೌರವಂಗವನಿತಳಂ

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)
(ಕ.ಫ-3)

44. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2022. ಸೆ-2020.

45. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2022, ಸೆಪ್ಟೆಂಬರ್ 2020.

ಪದ್ಯಪಾಠ : 5. ಹಸುರು – ಕುವೆಂಪು

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	10	21	9	4	44
ಅಂಕಗಳು	15	27	30	16	88

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	20	4	4	8	8	0	44
ಅಂಕಗಳು	20	4	8	24	32	0	88

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (ಕ.ಫ-17) **(1 ಅಂಕ)**

1. 'ಚೀರ' ಪದದ ತದ್ಭವ ರೂಪವಿದು (ಸ್ಮರಣೆ-ಸಾಧಾರಣ)
(ಎ) ಸೀರೆ (ಬಿ) ನೀರೆ (ಸಿ) ಚೀರು (ಡಿ) ಸಾರು

2. 'ತವಸಿ' ಪದದ ತತ್ಸಮ ರೂಪವಿದು (ಸ್ಮರಣೆ-ಸಾಧಾರಣ)
(ಎ) ತಪಸಿ (ಬಿ) ತಪ (ಸಿ) ತಪಸ್ವಿ (ಡಿ) ತಪಸ್ಸು

3. 'ದಿಟ್ಟಿ' ಪದದ ತತ್ಸಮ ರೂಪವಿದು (ಸ್ಮರಣೆ-ಸುಲಭ)
(ಎ) ದೃಷ್ಟಿ (ಬಿ) ದಟ್ಟ (ಸಿ) ದಡ್ಡ (ಡಿ) ದುಷ್ಟ

4. 'ಬ್ರಹ್ಮ' ಪದದ ತದ್ಭವ ರೂಪ (ಸ್ಮರಣೆ-ಸಾಧಾರಣ)
(ಎ) ಬರಮ (ಬಿ) ಬಮ್ಮ (ಸಿ) ಬಿಮ್ಮು (ಡಿ) ಬೊಮ್ಮ

5. 'ಕಲಶ' ಪದದ ತದ್ಭವ ರೂಪವಿದು (ಸ್ಮರಣೆ-ಸಾಧಾರಣ) ಮಾರ್ಚ್ 2021
(ಎ) ಗೋಪುರ (ಬಿ) ಕಳಿಸು (ಸಿ) ಕಳಸ (ಡಿ) ಕಲ್ಮಶ

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಫ-17) **(1 ಅಂಕ)**

6. ಸಂಜೆ : ಸಂಧ್ಯಾ : : ಸಂಸ್ಕೃತ : ..... (ಗ್ರಹಿಕೆ-ಸಾಧಾರಣ)

7. ಯುದ್ಧ : ಜುದ್ಧ : : ಪ್ರಸಾದ : ..... (ಗ್ರಹಿಕೆ-ಸಾಧಾರಣ) ಜೂನ್ 2018, ಮೇ 2025.

8. ಯುಗ : ಜುಗ : : ಬ್ರಹ್ಮ : ..... (ಗ್ರಹಿಕೆ-ಸಾಧಾರಣ)

9. ಕುಠಾರ : ಕೊಡಲಿ : : ಅರ್ಕ : ..... (ಗ್ರಹಿಕೆ-ಸಾಧಾರಣ)

10. ಅರ್ಕ : ಎಕ್ಕ : : ವ್ಯಯ : ..... (ಗ್ರಹಿಕೆ-ಸಾಧಾರಣ) ಜೂನ್ 2017.

11. ವಂಧ್ಯಾ : ಬಂಜೆ : : ದೃಷ್ಟಿ : ..... (ಗ್ರಹಿಕೆ-ಸುಲಭ) ಮಾರ್ಚ್ 2020.

12. ಬೀರ : ವೀರ : : ಬಂಜೆ : ..... (ಗ್ರಹಿಕೆ - ಸಾಧಾರಣ)

13. ಪ್ರತೀಹಾರಿ : ಪಡಿಯರ : : ಸಂದೇಹ : ..... (ಗ್ರಹಿಕೆ-ಕಠಿಣ)

14. ದೃಷ್ಟಿ : ದಿಟ್ಟಿ : : ತವಸಿ : ..... (ಗ್ರಹಿಕೆ-ಸುಲಭ) ಮಾರ್ಚ್ 2020, 2025, ಸೆಪ್ಟೆಂಬರ್ 2020.

15. ವರ್ಷ : ವರುಸ : : ಕಾರ್ಯ : ..... (ಗ್ರಹಿಕೆ-ಸುಲಭ) ಮಾರ್ಚ್ 2022, 2026.

16. ವಂಧ್ಯಾ : ಬಂಜೆ : : ಕುಠಾರ : ..... (ಗ್ರಹಿಕೆ-ಸುಲಭ) ಮಾರ್ಚ್ 2017, ಜೂನ್ 2022, ಆಗಸ್ಟ್ 2024.

17. ಸ್ಥಾನ : ತಾಣ : : ವಂಧ್ಯಾ : ..... (ಗ್ರಹಿಕೆ-ಸುಲಭ) ಜೂ2023. (ಕ.ಫ-7)

18. ಕೋಕಿಲಾ : ಕೋಗಿಲೆ : : ವರ್ಣ : ..... (ಗ್ರಹಿಕೆ-ಸಾಧಾರಣ) ಮಾರ್ಚ್ 2019, 2024.

19. ಚೀರ : ಸೀರೆ : : ಯುದ್ಧ : ..... (ಗ್ರಹಿಕೆ-ಸಾಧಾರಣ) ಜೂನ್ 2024.

20. ಅಮೃತ : ಅಮರ್ದು : : ವಿದ್ಯಾಧರ : ..... (ಗ್ರಹಿಕೆ-ಸಾಧಾರಣ)

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಫ-2) **(1 ಅಂಕ)**

21. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ? (ಸ್ಮರಣೆ-ಸುಲಭ) ಮಾರ್ಚ್ 2022. ಜೂನ್ 2022.

22. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ? (ಸ್ಮರಣೆ ಸುಲಭ) ಮೇ 2025.

23. ಹಸುರು ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ? (ಸ್ಮರಣೆ-ಸುಲಭ)

24. ಕವಿಗೆ ಹುಲ್ಲಿನಹಾಸು ಹೇಗೆ ಕಂಡಿದೆ? (ಗ್ರಹಿಕೆ-ಸುಲಭ) ಮಾರ್ಚ್ 2024.

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :
(1 ಅಂಕ)

25. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ? (ಗ್ರಹಿಕೆ-ಸುಲಭ) (ಕ.ಫ-2)

26. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿ ಹೇಗೆ ವರ್ಣಿಸಿದ್ದಾರೆ? (ಗ್ರಹಿಕ-ಸಾಧಾರಣ) (ಕ.ಫ-3)

27. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾವುವು? (ಗ್ರಹಿಕೆ-ಸಾಧಾರಣ)ಮೇ2025. (ಕ.ಫ-2)

28. ಕವಿ ಕುವೆಂಪುರವರು ಹಸುರಿನಲ್ಲಿ ತಲ್ಲೀನರಾದ ಬಗೆಯನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) (ಕ.ಫ-3)

ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

29. ಕುವೆಂಪು (ಸ್ಮರಣೆ - ಸುಲಭ) ಮಾರ್ಚ್ 2020, 2024.

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : (ಕ.ಫ-10) **(3 ಅಂಕ)**

30. "ಮಾತು ಬಲ್ಲವನಿಗೆ ಜಗಳವಿಲ್ಲ; ಊಟಬಲ್ಲವನಿಗೆ ರೋಗವಿಲ್ಲ." (ಗ್ರಹಿಕೆ-ಸಾಧಾರಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

31. "ಹಸುರಾದುದುಕವಿಯಾತ್ಮಂ" (ಅಭಿವ್ಯಕ್ತಿ-ಸಾಧಾರಣ)

32. "ಬೇರೆಬಣ್ಣವನೆ ಕಾಣೆ" (ಅಭಿವ್ಯಕ್ತಿ- ಸಾಧಾರಣ) ಜೂನ್ 2022, 2023.

33. "ಹಸುರುಹಸುರಿಳೆಯುಸಿರೂ" (ಅಭಿವ್ಯಕ್ತಿ- ಸಾಧಾರಣ) ಜೂನ್ 2024.

34. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್" (ಅಭಿವ್ಯಕ್ತಿ ಸಾಧಾರಣ) ಮಾರ್ಚ್ 2022, ಸೆಪ್ಟೆಂಬರ್ 2020.

35. "ಗಿಳಿಯೆದೆಬಣ್ಣದನೋಟ" (ಅಭಿವ್ಯಕ್ತಿ ಸಾಧಾರಣ) ಮಾರ್ಚ್ 2025.

36. "ಹಸುರು ಸಂಜೆಯೀ ಬಿಸಿಲೂ!" (ಅಭಿವ್ಯಕ್ತಿ ಸಾಧಾರಣ)

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : (ಕ.ಫ-17) **(4 ಅಂಕ)**
(ಸ್ಮರಣೆ-ಸುಲಭ) ಮಾರ್ಚ್ 2023, ಆಗಸ್ಟ್ 2024.

37. ಹಸುರಾಗಸ; .....
.....
.....
..... ಬಿಸಿಲೂ!

ಅಥವಾ

ಹೊಸ .....
.....
.....
..... ಹಸುರಿಳೆಯುಸಿರೂ!

ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : (ಕ.ಫ-11) (ಪ್ರಶಂಸೆ-ಕಠಿಣ) **(4 ಅಂಕ)**

38. ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸುರಾದುದೊ ಕವಿಯಾತ್ಮಂ
ರಸಪಾನ ಸ್ನಾನದಲಿ!

39. ಹಸುರಾಗಸ: ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ: ಹಸುರು ಕಣಿವೆ;
ಹಸುರು ಸಂಜೆಯೀ ಬಿಸಿಲೂ!

40. ಅದೊ ಹುಲ್ಲಿನ ಮಕಮಲ್ಲಿನ
ಪೊಸಪಚ್ಚೆಯ ಜಮಖಾನೆ

ಪಸರಿಸಿ ತಿರೆ ಮೈ ಮುಚ್ಚಿರೆ
ಬೇರೆ ಬಣ್ಣವನೆ ಕಾಣೆ!

41. ಹೊಸ ಹೂವಿನ ಕಂಪು ಹಸುರು,
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು!
ಹಸುರು ಹಸುರಿಳೆಯುಸಿರೂ!

ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : (ಕ.ಫ-3) (**4 ಅಂಕ)**

42. ಹಸುರು ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ. (ಅಭಿವ್ಯಕ್ತಿ-ಸಾಧಾರಣ)

43. ಪ್ರಕೃತಿಯ ಹಸುರು ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ)

44. ಕವಿ ಕುವೆಂಪುರವರು ಹಸುರಿನ ಸೌಂದರ್ಯಾನುಭವದಲ್ಲಿ ತನ್ಮಯತೆಯನ್ನು ಹೊಂದಿದ ರೀತಿಯನ್ನು ಬಣ್ಣಿಸಿ. (ಅಭಿವ್ಯಕ್ತಿ-ಸಾಧಾರಣ)

ಹೆಚ್ಚುವರಿ : ತತ್ಸಮ- ತದ್ಭವ ಪದಗಳು

ಅಮೃತ : ಅಮರ್ದು	ದಾತೃ : ದಾತಾರ	ದೃಷ್ಟಿ : ದಿಟ್ಟಿ
ವಂಶ : ಬಂಚ	ಸಂದೇಹ : ಸಂದೆಯ	ಚಂದ್ರ : ಚಂದಿರ
ಯಶ : ಜಸ	ಕಾರ್ಯ : ಕಜ್ಜ	ಕೋಕಿಲಾ : ಕೋಗಿಲೆ
ಪೃಥ್ವಿ : ಪೊಡವಿ	ಚೀರ : ಸೀರೆ	ಬಣ್ಣ : ವರ್ಣ
ವ್ಯಾಪಾರಿ : ಬೇಹಾರಿ	ಪ್ರಾಣ : ಹರಣ	ಕಾವ್ಯ : ಕಬ್ಬ
ಯುಗ : ಜುಗ	ತಪಸ್ವಿ. : ತವಸಿ	ಭಕ್ತ : ಬಕುತ
ವೀರ : ಬೀರ	ಶಶಿ : ಸಸಿ	ಪಟ್ಟಣ :ಪತ್ತನ
ಕೀರ್ತಿ : ಕೀರುತಿ	ಗ್ರಹ : ಗರ	ಅರ್ಕ : ಎಕ್ಕ
ಸ್ಥಾನ : ತಾನ (ತಾಣ)	ಸಕಲ : ಸಕಳ	ವ್ಯಯ : ಬೀಯ
ವೀರ : ಬೀರ	ವಿಜ್ಞಾನ : ಬಿನ್ನಾಣ/ಬಿನ್ನಣ	ಕಲಶ : ಕಳಸ
ಅಗ್ನಿ : ಅಗ್ಗಿ	ಬ್ರಹ್ಮ : ಬೊಮ್ಮ	ವರ್ಷ : ವರುಷ/ವರುಸ
ಅಟವಿ : ಅಡವಿ	ಅಜ್ಜ : ಆರ್ಯ	ತಟ : ತಡಿ
ಸುಧಾ / ಸುಧೆ : ಸೊದೆ	ಕುಠಾರ : ಕೊಡಲಿ	ಯಜ್ಞ : ಜನ್ನ
ಪುಣ್ಯ : ಹೂನ್ಯ	ದಿಶಾ : ದೆಸೆ / ದಿಸೆ / ದಿಶೆ	ಸಾಮಂತ : ಸಾವಂತ
ಪಕ್ಷಿ : ಹಕ್ಕಿ	ಶ್ರೀ : ಸಿರಿ	ಪಡಿಯರ : ಪ್ರತೀಹಾರಿ
ಅಂಗಳ : ಅಂಗಣ	ಯುದ್ಧ : ಜುದ್ಧ	ರಾಜ : ರಾಯ
ವಿದ್ಯಾಧರ : ಬಿಜ್ಜೋದರ	ದೀಪಿಕಾ : ದೀವಿಗೆ	ವಂಧ್ಯಾ :ಬಂಜೆ
ಕಣಿ : ಗಣಿ	ಮುಖಶಾಲೆ : ಮೊಗಸಾಲೆ	ಪ್ರಸಾದ : ಹಸಾದ
ಶಿರ : ಸಿರ	ದ್ಯೂತ : ಜೂಜು	ವಿಜ್ಞಾಪನೆ : ಬಿನ್ನಹ / ಬಿನ್ನಪ
ವೈಶಾಖ : ಬೇಸಗೆ	ಪಾದುಕಾ : ಹಾ ವುಗೆ	ಅಂಕುಶ : ಅಂಕುಸ

ಪದ್ಯಪಾಠ : ಹಲಗಲಿ ಬೇಡರು - ಬಿ. ಎಸ್. ಗದ್ದಗಿಮಠ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	10	12	9	6	37
ಅಂಕಗಳು	13	21	29	24	87

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	5	10	3	10	9	0	37
ಅಂಕಗಳು	5	10	6	30	36	0	87

ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : (ಕ.ಪ-18) **(1 ಅಂಕ)**

1. ಹೀಂಗ : ಹೀಗೆ : : ಇಸವಾಸ : ..... (ಗ್ರಹಿಕೆ-ಸುಲಭ) ಜೂನ್ 2019, 2024, ಮಾರ್ಚ್ 2024.

2. ಮ್ಯಾಗ : ಮೇಲೆ: : ಸಕ್ಕಾರಿ : ..... (ಗ್ರಹಿಕೆ-ಸುಲಭ) ಮಾರ್ಚ್ 2023, 2026. ಮೇ 2025.

3. ಸಕ್ಕಾರಿ : ಸಕ್ಕರೆ: : ಕಳುವ್ಯಾರೆ : ..... (ಗ್ರಹಿಕೆ-ಸುಲಭ) ಮಾರ್ಚ್ 2025.

4. ಇಸವಾಸ : ವಿಶ್ವಾಸ : : ಇಲ್ಲದ್ಹಂಗ : ..... (ಗ್ರಹಿಕೆ-ಸುಲಭ)

5. ಹೀಂಗ : ಹೀಗೆ : : ಮ್ಯಾಗ : ..... (ಗ್ರಹಿಕೆ-ಸುಲಭ)

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :
(ಕ.ಪ-2) **(1 ಅಂಕ)**

6. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಯಾವುದು? (ಸ್ಮರಣೆ-ಸುಲಭ) ಮಾರ್ಚ್ 2026.

7. ಹಲಗಲಿಯ ನಾಲ್ವರು ಪ್ರಮುಖರು ಯಾರು? (ಸ್ಮರಣೆ-ಸುಲಭ)

8. ಹಲಗಲಿಯ ಗುರುತು ಉಳಿಯದಂತಾದದು ಏಕೆ? (ಗ್ರಹಿಕೆ-ಸಾಧಾರಣ)

9. ಹಲಗಲಿ ಲಾವಣಿಗೆ ಯಾವ ಘಟನೆ ಕಾರಣವಾಗಿದೆ? (ಸ್ಮರಣೆ-ಸಾಧಾರಣ)

10. ಹಲಗಲಿ ಗ್ರಾಮ ಎಲ್ಲಿದೆ? (ಸ್ಮರಣೆ-ಸುಲಭ)

11. ಹಲಗಲಿ ಗ್ರಾಮದ ಹೆಬ್ಬಾಗಿಲಿನ ಬಳಿ ನಿಂತು ಬುದ್ಧಿ ಮಾತನ್ನು ಹೇಳಿದವರು ಯಾರು? (ಸ್ಮರಣೆ-ಸುಲಭ)

12. ಬ್ರಿಟಿಷ್ ಸರ್ಕಾರ ಭಾರತೀಯರ ಮೇಲೆ ಯಾವಾಗ ನಿಶ್ಶಸ್ತ್ರೀಕರಣದ ಆದೇಶ ಹೊರಡಿಸಿತು? (ಸ್ಮರಣೆ-ಸುಲಭ)

13. ಹಲಗಲಿಯ ಬೇಡರು ಯಾರ ಕಪಾಳಕ್ಕೆ ಹೊಡೆದು ನೆಲಕ್ಕೆ ಉರುಳಿಸಿದರು? (ಸ್ಮರಣೆ-ಸುಲಭ)

14. ಹೆಬಲಕ್ (ಹೆನ್ರಿ ಹ್ಯಾವಲಾಕ್) ಸಾಹೇಬನನ್ನು ಗುಂಡಿಕ್ಕಿ ಕೊಂದವರು ಯಾರು? (ಸ್ಮರಣೆ-ಸುಲಭ)

15. ಹಲಗಲಿಯನ್ನು ಲೂಟಿ ಮಾಡಲು ಆದೇಶಿಸಿದವರು ಯಾರು? (ಸ್ಮರಣೆ-ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :
(ಕ.ಫ-3) **(2 ಅಂಕ)**

16. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು? (ಗ್ರಹಿಕೆ- ಸಾಧಾರಣ) ಮಾರ್ಚ್ 2026, ಜೂನ್ 2022, ಸೆಪ್ಟೆಂಬರ್ 2020.

17. ಹಲಗಲಿಗೆ ದಂಡು ಬರಲು ಕಾರಣವೇನು? (ಗ್ರಹಿಕೆ- ಸಾಧಾರಣ) ಮಾರ್ಚ್ 2022.

18. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು? (ಗ್ರಹಿಕೆ- ಸಾಧಾರಣ) ಸೆಪ್ಟಂಬರ್ 2020.

ಕೆಳಗಿನ ವಾಕ್ಯದಲ್ಲಿರುವ ಅಲಂಕಾರ ಗುರುತಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :
(ಕ.ಫ-10) **(3 ಅಂಕ)**

19. "ಒಳಗಿನ ಮಂದಿ ಗುಂಡ ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"
(ಗ್ರಹಿಕೆ-ಸಾಧಾರಣ) ಆಗಸ್ಟ್ 2024.

20. "ಸಿಡಿಲ ಸಿಡಿದ್ಹಾಂಗ ಗುಂಡ ಸುರಿದಾವ" (ಗ್ರಹಿಕೆ- ಸಾಧಾರಣ)

21. "ನೀಚರಿಗೆ ಮಾಡಿದ ಉಪಕಾರವು ಹಾಎಿಗೆ ಹಾಲೆರೆದಂತೆ" (ಗ್ರಹಿಕೆ- ಸಾಧಾರಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :
(ಕ.ಫ-9) **(3 ಅಂಕ)**

22. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ" (ಅಭಿವ್ಯಕ್ತಿ- ಸಾಧಾರಣ) ಮಾರ್ಚ್ 2022.

23. "ಜೀವ ಸತ್ತು ಹೋಗುವುದು ಗೊತ್ತ"/ "ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ" (ಅಭಿವ್ಯಕ್ತಿ- ಸಾಧಾರಣ)

24. "ಹೊಡೆದರೊ ಗುಂಡ ಕರುಣ ಇಲ್ಲದ್ಹಾಂಗ" (ಅಭಿವ್ಯಕ್ತಿ- ಸಾಧಾರಣ) ಜೂನ್ 2022.

25. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು" (ಅಭಿವ್ಯಕ್ತಿ- ಸಾಧಾರಣ)

26. "ಸಿಕ್ಕದ್ದು ತಗೊಂಡು ಸರದನಿಂತರೊ ಊರಿಗೆ ಕೊಳ್ಳಿ ಕೊಟ್ಟಾ"
(ಅಭಿವ್ಯಕ್ತಿ- ಸಾಧಾರಣ) ಮೇ 2025

27. "ಬೆನ್ನಬೆನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ಹಾಂಗ" (ಅಭಿವ್ಯಕ್ತಿ- ಕಠಿಣ)

28. "ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ" (ಅಭಿವ್ಯಕ್ತಿ- ಕಠಿಣ)

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : (ಕ.ಫ-17) **(4 ಅಂಕ)**
(ಸ್ಮರಣೆ-ಸಾಧಾರಣ) ಮಾರ್ಚ್ 2020, ಜೂನ್ 2024.

29. ಕೊಡಲಿ .....
.....
.....
..... ನಾನೆಷ್ಟಾ

ಅಥವಾ

ಸಿಕ್ಕದ್ದು .....
.....
.....
..... ಜನಕಾ

ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ : (ಕ.ಫ-11) (ಪ್ರಶಂಸೆ-ಕಠಿಣ) **(4 ಅಂಕ)**

30. ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ
ಹಲಗರಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ
ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗರಾಮ ಮಸಲತ್ತ

31. ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ
ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ
ಹೊಡಿರಿ ಜಗಳ ಕೂಡಿ ತೀರ್ತೇವು ಕುಮಕಿ ನಮ್ಮದ್ಯಾವತ್ತ
ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ

32. ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ
ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೊ ಹಿಡಿದು ದಂಗ
ಕಾಗದ ಬರೆದು ಕಳುವ್ಯಾರೆ ಬೇಗ, ದಂಡು ಬರಲೆಂತ ಹೀಂಗ
ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ

33. ಬೆನ್ನಬೆನ್ನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ಹಾಂಗ
ನಡುವೆ ಹಾಕ್ಕೊಂಡು ಹೊಡದರೊ ಗುಂಡ ಕರುಣ ಇಲ್ಲದ್ಹಾಂಗ
ಚಟೆಕಾರರು ಚೌಕಿ ಮಾಡುತ, ನಡಿದರೊ ಹೇಳದೆ ಗುಡದಾಗ
ಅಗಸಿಗೆ ಬಂದು 'ಹೆಬಲಕ' ಸಾಬ ಹೇಳತಾನ ಬುದ್ಧಿಮಾತ

34. ಜಡಗ ಹೇಳುತಾನೊ ಹೊಡೆಯಿರಿ ಇವರ ಪೂರ ಘಾತಕರಾ (ಮಾರ್ಚ್ 2024)
ಇಸವಾಸಘಾತಕ ಮಾಡಿದರಿವರ, ನಂಬಿಗಿಲ್ಲ ನಮಗ ಪಿತೂರಾ
ಮೋಸ ಮಾಡಿ ನಮದೇಶ ಗೆದಿತಾರೊ ಮುಂದ ನಮಗ ಘೋರಾ
ಅಂದು ಹೊಡೆದಾನೊ ಒಂದು ಗುಂಡಿಗೆ ಆದ ಸಾಹೇಬನ ಟಾರಾ

35. ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ
ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ
ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)
(ಕ.ಫ-3)

36. ಹಲಗಲಿ ದಂಗೆಗೆ ಕಾರಣವಾದ ಅಂಶಗಳನ್ನು ಕುರಿತು ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2024.

37. ಹಲಗಲಿ ದಂಗೆಯ ಪರಿಣಾಮವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
(ಅಭಿವ್ಯಕ್ತಿ- ಸಾಧಾರಣ) ಮಾರ್ಚ್ 2024.

ಪದ್ಯಪಾಠ : ವೀರಲವ – ಲಕ್ಷ್ಮೀಶ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	11	8	13	4	36
ಅಂಕಗಳು	16	17	41	16	90

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	0	10	5	14	7	0	36
ಅಂಕಗಳು	0	10	10	42	28	0	90

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

1. ರಾಮನ ಯಜ್ಞದ ಕುದುರೆ ಭೂಲೋಕದಲ್ಲಿ ಸಂಚರಿಸುತ್ತಾ ಎಲ್ಲಿಗೆ ಬಂದಿತು? (ಸ್ಮರಣೆ - ಸಾಧಾರಣ)

2. ವಾಲ್ಮೀಕಿ ಮುನಿಗಳು ತೋಟದ ಕಾವಲಿಗೆ ಯಾರನ್ನು ನೇಮಿಸಿ ಹೋಗಿದ್ದರು? (ಸ್ಮರಣೆ-ಸುಲಭ)

3. ವೀರಲವನು ಯಾರೊಂದಿಗೆ ಆಟವಾಡುತ್ತಿದ್ದನು? (ಸ್ಮರಣೆ- ಸಾಧಾರಣ)

4. ವಾಲ್ಮೀಕಿ ಋಷಿಗಳು ಎಲ್ಲಿಗೆ ಹೋಗಿದ್ದರು? (ಸ್ಮರಣೆ - ಸುಲಭ)

5. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?(ಸ್ಮರಣೆ-ಸುಲಭ) ಜೂನ್ 2022, ಸೆಪ್ಟೆಂಬರ್ 2020.

6. ಕುದುರೆಯನ್ನು ಲವನು ಯಾವುದಕ್ಕೆ ಕಟ್ಟಿದನು? (ಸ್ಮರಣೆ- ಸಾಧಾರಣ)

7. ರಾಮನ ಯಜ್ಞಾಶ್ವವನ್ನು ಕಟ್ಟಿ ಹಾಕಿದವರು ಯಾರು? (ಸ್ಮರಣೆ - ಸುಲಭ) ಮಾರ್ಚ್ 2023.

8. ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದ ಲವನ ಕಂಡು ಮುನಿಸುತರು ಹೆದರಲು ಕಾರಣವೇನು? (ಗ್ರಹಿಕೆ - ಸಾಧಾರಣ)

9. ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶ್ರೀರಾಮನು ಯಾರನ್ನು ಕಳುಹಿಸುತ್ತಾನೆ? (ಸ್ಮರಣೆ - ಸುಲಭ)

10. ಶ್ರೀರಾಮನ ತಾಯಿಯ ಹೆಸರೇನು? (ಸ್ಮರಣೆ - ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

11. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ. (ಗ್ರಹಿಕೆ-ಸುಲಭ) (ಕ.ಫ-3)

12. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಬರೆದ ಅಂಶಗಳಾವುವು? (ಗ್ರಹಿಕೆ- ಸಾಧಾರಣ) (ಕ.ಫ-2)

13. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ. (ಗ್ರಹಿಕೆ - ಸಾಧಾರಣ) (ಕ.ಫ-3)

14. ಲವನು ಆಶ್ರಮದ ಉಪವನದಲ್ಲಿ ಕುದುರೆಯನ್ನು ಕಂಡು ಯೋಚಿಸಿದ ಬಗೆಯನ್ನು ಬರೆಯಿರಿ. (ಗ್ರಹಿಕೆ - ಸಾಧಾರಣ) (ಕ.ಫ-3)

15. ಲವನು ಉರಿದೇಳಲು ಕಾರಣವೇನು? (ಗ್ರಹಿಕೆ - ಸಾಧಾರಣ) (ಕ.ಫ-3)

ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದುಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

16. ಲಕ್ಷ್ಮೀಶ (ಸ್ಮರಣೆ-ಸುಲಭ)

ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ : (3 ಅಂಕ)
(ಕ.ಫ-10) (ಗ್ರಹಿಕೆ-ಸಾಧಾರಣ)

17. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂರಾಮ
ನೊರ್ವನೇ ವೀರನಾತನ ಯಜ್ಞತುರಗವಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

ಕೆಳಗಿನ ವಾಕ್ಯದಲ್ಲಿರುವ ಅಲಂಕಾರ ಗುರುತಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :
(ಕ.ಫ-10) **(3 ಅಂಕ)**

18. "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?" (ಗ್ರಹಿಕೆ-ಸಾಧಾರಣ)

ಕೆಳಗಿನ ಗಾದೆಯನ್ನು ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3 ಅಂಕ)**

19. ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತಲೂ ಮಿಗಿಲು. (ಅಭಿವ್ಯಕ್ತಿ-ಸಾಧಾರಣ)

20. ಕಾಯಕವೇ ಕೈಲಾಸ. (ಅಭಿವ್ಯಕ್ತಿ-ಸಾಧಾರಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :
(ಕ.ಫ-9) **(3 ಅಂಕ)**

21. "ರಘೂದ್ವಹನ ಸೊಲ್ಗೇಳಿ ನಮಿಸಲ್" (ಅಭಿವ್ಯಕ್ತಿ-ಸಾಧಾರಣ)

22. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ" (ಅಭಿವ್ಯಕ್ತಿ-ಕಠಿಣ) ಮಾರ್ಚ್ 2023.

23. "ಅರಸುಗಳ ವಾಜಿಯಂ ಬಿಡು" (ಅಭಿವ್ಯಕ್ತಿ-ಸಾಧಾರಣ)

24. "ಜಾನಕಿಯ ಮಗನಿದಕೆ ಬೆದರುವನೆ" (ಅಭಿವ್ಯಕ್ತಿ-ಸಾಧಾರಣ) ಜೂನ್ 2022.

25. "ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ" (ಅಭಿವ್ಯಕ್ತಿ-ಕಠಿಣ)
ಮಾರ್ಚ್ 2025

26. "ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ಮಗನಿದಕೆ ಬೆದರುವನೆ" (ಅಭಿವ್ಯಕ್ತಿ-ಕಠಿಣ) ಸೆಪ್ಟೆಂಬರ್ 2020.

27. "ಎತ್ತಣ ತುರಂಗವಿದು" (ಅಭಿವ್ಯಕ್ತಿ-ಕಠಿಣ)

28. "ವರುಣನ ಲೋಕದಿಂ ಬಂದು ಮುಳಿದಪನೆ" (ಅಭಿವ್ಯಕ್ತಿ-ಕಠಿಣ)

29. "ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ಬಿಗಿದು"

ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : (ಕ.ಫ-17) **(4 ಅಂಕ)**
(ಸ್ಮರಣೆ-ಸಾಧಾರಣ)

30. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
.....
.....
.....
.....
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

ಅಥವಾ

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
.....
.....
.....
.....
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : (ಕ.ಫ-11) **(4 ಅಂಕ)**

31. ಬಲ್ಸಯ್ಯ ನೃಪರಂಜಿ ತಡೆಯದೆ ರಘೂದ್ವಹನ
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ
ನಲ್ಬುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು
ಪುಲ್ಲಳ ಪಸುರ್ಗೆಳಸಿ ಪೊಕ್ಕೊಡಾ ತೋಟಗಾ
ವಲ್ಲೆ ತನ್ನೊಡನಾಡಿಗಳ ಕೂಡಿ ಲೀಲೆ ವಿಗೆ
ಬಿಲ್ಲೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು

32. ಎತ್ತಣ ತುರಂಗವಿದು ಪೊಕ್ಕು ಪೂದೋಟಮಂ (ಮಾರ್ಚ್ 2026.)
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ
ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಜಿಪಂ ಕರೆಸಲಾಗಿ
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು

33. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ (ಮಾರ್ಚ್ 2022, ಆಗಸ್ಟ್ 2024.)
ನೊರ್ವನೇ ವೀರನಾತನ ಯಜ್ಞತುರಗವಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

34. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ (ಮಾರ್ಚ್ 2020, 24, ಜೂನ್ 2023.)
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :(4 ಅಂಕ)
(ಕ.ಫ-3)

35. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವಾದ ಅಂಶಗಳನ್ನು ಸಂಗ್ರಹಿಸಿ ಬರೆಯಿರಿ. (ಅಭಿವ್ಯಕ್ತಿ - ಸಾಧಾರಣ) ಜೂನ್ 2024,

36. ಲವನಲ್ಲಿದ್ದ ಕ್ಷಾತ್ರಗುಣ ವೀರಲವ ಪದ್ಯದಲ್ಲಿ ವ್ಯಕ್ತಗೊಂಡಿರುವುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. (ಅಭಿವ್ಯಕ್ತಿ - ಕಠಿಣ) ಜೂನ್ 2024, ಮೇ 2025.

ಪದ್ಯಪಾಠ : ಕೆಮ್ಮನೆ ಮೀಸೆವೊತ್ತನೇ – ಪಂಪ (ಕ.ಫ-8)

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	12	14	17	1	44
ಅಂಕಗಳು	17	36	60	4	117

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	0	10	6	19	7	2	44
ಅಂಕಗಳು	0	10	12	57	28	10	117

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

1. ದ್ರೋಣನು ಪರುಶುರಾಮರಲ್ಲಿಗೆ ಏಕೆ ಬಂದನು? (ಗ್ರಹಿಕೆ- ಸಾಧಾರಣ) ಮಾರ್ಚ್ 2026, ಜೂನ್ 2023, ಆಗಸ್ಟ್ 2024.

2. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು? (ಸ್ಮರಣೆ-ಸಾಧಾರಣ) ಮಾ2024. (ಕ.ಫ-7)

3. ದ್ರುಪದನು ಎಲ್ಲಿ ರಾಜ್ಯಭಾರ ಮಾಡುತ್ತಿದ್ದನು? (ಸ್ಮರಣೆ-ಕಠಿಣ) (ಕ.ಫ-7)

4. ಕುಂಭಸಂಭವ ಎಂದು ಯಾರನ್ನು ಕರೆಯಲಾಗಿದೆ? (ಸ್ಮರಣೆ-ಸಾಧಾರಣ) (ಕ.ಫ-7)

5. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು? (ಸ್ಮರಣೆ-ಸಾಧಾರಣ) (ಕ.ಫ-7)

6. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು? (ಸ್ಮರಣೆ- ಸುಲಭ) (ಕ.ಫ-7)

7. ದ್ರೋಣನು ಪರಶುರಾಮನ ಬಳಿ ಬಂದಾಗ ಪರಶುರಾಮನ ವೇಷಭೂಷಣಗಳು ಹೇಗಿದ್ದವು? (ಗ್ರಹಿಕೆ- ಸಾಧಾರಣ) (ಕ.ಫ-7)

8. ಭಾರ್ಗವ ಎಂದರೆ ಯಾರು? (ಸ್ಮರಣೆ-ಸುಲಭ) (ಕ.ಫ-7)

9. ಪರಶುರಾಮನು ದ್ರೋಣನಿಗೆ ಯಾವುದರಲ್ಲಿ ಅರ್ಘ್ಯ ನೀಡಿದನು? (ಸ್ಮರಣೆ-ಸುಲಭ) (ಕ.ಫ-7)

10. ಪರಶುರಾಮನು ಅವನಿ(ಭೂಮಿ)ಯನ್ನು ಯಾರಿಗೆ ದಾನ ಮಾಡಿದ್ದನು? (ಸ್ಮರಣೆ-ಸುಲಭ) (ಕ.ಫ-7)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

11. ಪರಶುರಾಮನು ದ್ರೋಣರಿಗೆ ಮಣ್ಣಿನಪಾತ್ರೆಯಲ್ಲಿ ಅರ್ಘ್ಯವನ್ನುಕೊಡಲು ಕಾರಣವೇನು? (ಗ್ರಹಿಕೆ-ಸಾಧಾರಣ) ಜೂನ್ 2023. (ಕ.ಫ-3)

12. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು? (ಗ್ರಹಿಕೆ-ಕಠಿಣ) ಆಗಸ್ಟ್ 2024 (ಕ.ಫ-2)

13. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು? (ಗ್ರಹಿಕೆ-ಸಾಧಾರಣ) (ಕ.ಫ-2)

14. ದ್ರೋಣನು ಪರುಶುರಾಮನಿಂದ ದಿವಾಸ್ತ್ರಗಳನ್ನು ಪಡೆದ ಬಗೆಯನ್ನು ತಿಳಿಸಿ. (ಗ್ರಹಿಕೆ-ಕಠಿಣ) (ಕ.ಫ-3)

15. ಐಶ್ವರ್ಯ ಮದ್ಯದೊಡನೆ ಹುಟ್ಟಿದೆ ಎಂಬುದನ್ನು ದ್ರೋಣನು ಹೇಗೆ ಸ್ಪಷ್ಟಪಡಿಸಿದನು? (ಕ.ಫ-3)

16. ಭಾರ್ಗವನು ದ್ರೋಣನಿಗೆ ಅರ್ಘ್ಯವನ್ನು ಎತ್ತಿ ಪೂಜಿಸಿದ ನಂತರ ಹೇಳಿದ ಮಾತುಗಳಾವುವು? (ಕ.ಫ-2)

ಕೆಳಗಿನ ಕವಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (ಕ.ಫ-7) **(3 ಅಂಕ)**

17. ಪಂಪ (ಸ್ಮರಣೆ-ಸುಲಭ) ಮಾರ್ಚ್ 2026.

ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : (ಕ.ಫ-10) (ಗ್ರಹಿಕೆ-ಸಾಧಾರಣ) **(3 ಅಂಕ)**

18. ಅಂತೆಂಬನಾರ್ಗೆ ಪಿರಿದುಂ
ಭ್ರಾಂತುದಲೇಂ ದ್ರೋಣನೆಂಬನೇಂ ಪಾರ್ವನೆ ಪೇ

19. ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ

20. ಚಾಗದಭೋಗದಕ್ಕರದ ಗೇಯದಗೊಟ್ಟಿಯಲಂಪಿನಿಂ ಪುಗ

21. ಸೂಳ್ಪೈಸೆಚ್ಚೆಚ್ಚು ಬಿಲ್ಲಂರಥದ ಕುದುರೆಯಂ ಸೂತನಂ ಖಂಡಿಸುತ್ತಾ

22. ಇದು ಚಕ್ರವ್ಯೂಹವೀವ್ಯೂಹ ಮನೊಡೆವದಟಂ ಪಾರ್ಥನಂ ತಾತನುಂ ಗೆಂ

23. ಮಾತಂಗಾಸುರ ವೈರಿಯಲ್ಲಿ ಪಡೆದುಂ ಬಿಲ್ಲಂಧನುರ್ವಿದ್ಯೆಗಂ

24. ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸಂ

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : (ಕ.ಫ-10) (ಗ್ರಹಿಕೆ-ಕಠಿಣ) **(3 ಅಂಕ)**

25. "ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂದಳವು"

ಕೆಳಗಿನ ಗಾದೆಗಳನ್ನು ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : (ಕ.ಫ-10) **(3ಅಂಕ)**

26. ಸತ್ಯಕ್ಕೆ ಸಾವಿ ಲ್ಲ, ಸುಳ್ಳಿಗೆ ಸುಖವಿಲ್ಲ. (ಅಭಿವ್ಯಕ್ತಿ-ಸಾಧಾರಣ)

27. ಮನಸ್ಸಿದ್ದರೆ ಮಾರ್ಗ. (ಅಭಿವ್ಯಕ್ತಿ-ಸಾಧಾರಣ)

ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : (ಕ.ಫ-9) **(3 ಅಂಕ)**

28. "ಈಗಳೊಂದಡಕೆಯುವಿಲ್ಲ ಕೈಯೊಳ್" (ಅಭಿವ್ಯಕ್ತಿ-ಸಾಧಾರಣ) ಜೂನ್ 2024.

29. "ವಿದ್ಯಾಧನಮೆ ಧಮನಪ್ಪುದು" (ಅಭಿವ್ಯಕ್ತಿ -ಸಾಧಾರಣ) ಮಾರ್ಚ್ 2024.

30. "ಎಂತು ನಾಣಿಲಿಗರಪ್ಪರೆ ಮಾನಸರ್" (ಅಭಿವ್ಯಕ್ತಿ-ಕಠಿಣ) ಮೇ 2025.

31. "ನೊಳವಿಂಗೆ ಕುಪ್ಪೆವರಂ" (ಅಭಿವ್ಯಕ್ತಿ-ಕಠಿಣ)

32. "ಜಲಕ್ಕನೀಗಳಱೆದೆಂ ಸಿರಿಕಳ್ಳೊಡವುಟ್ಟಿತೆಂಬುದಂ" (ಅಭಿವ್ಯಕ್ತಿ-ಕಠಿಣ)

33. "ನೂಂಕಂತಪ್ಪನನಱೆಯೆನೆಂದು ಸಭೆಯೊಳ್ ನುಡಿದಂ" (ಅಭಿವ್ಯಕ್ತಿ-ಕಠಿಣ)

34. "ಅರಿಯಿರೆ ನೀಮುಮಾಮುಮೊಡನೋದಿದೆವೆಂಬುದನಣ್ಣ" (ಅಭಿವ್ಯಕ್ತಿ-ಕಠಿಣ)

35. "ದ್ರುಪದಂ ಕಡುಸಿಗ್ಗು ಮಾಡಿದಂ" (ಅಭಿವ್ಯಕ್ತಿ-ಕಠಿಣ)

ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : (ಕ.ಫ-17) **(4 ಅಂಕ)**
(ಸ್ಮರಣೆ-ಸಾಧಾರಣ) ಮಾರ್ಚ್ 2025.

36. ಅಂತೆಂನಾರ್ಗೆ .....
.....
.....
..... ನುಡಿದಂ

ಅಥವಾ

ಒಡವೆಯನರ್ಥಿಗಿತ್ತೆ .....
.....
.....
..... ಕುಂಭಸಂಭವಂ

ಕೆಳಗಿನ ಪದ್ಯಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ : (ಕ.ಫ 11) **(4 ಅಂಕ)**
(ಪ್ರಶಂಸೆ-ಕಠಿಣ) ಸೆಪ್ಟೆಂಬರ್ 2020.

37. ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ
ದಡೆಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ
ಲ್ಲೊಡಮೆ ಸಮಂತು ಪೇಳವರೊಳಾವುದನೀವುದೊ ಕುಂಭಸಂಭವಂ

ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ: (4 ಅಂಕ)

38. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ. (ಅಭಿವ್ಯಕ್ತಿ-ಸಾಧಾರಣ) ಮಾರ್ಚ್ 2020.

39. ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ. (ಅಭಿವ್ಯಕ್ತಿ -ಸಾಧಾರಣ) ಮಾರ್ಚ್ 2020, 2023. (ಕ.ಫ-3)

40. ಪರಶುರಾಮನು ಸಹಾಯ ಅರಸಿ ಬಂದ ದ್ರೋಣರನ್ನು ಸತ್ಕರಿಸಿ ಬೀಳ್ಕೊಟ್ಟ ಬಗೆಯನ್ನು ವಿವರಿಸಿ. (ಅಭಿವ್ಯಕ್ತಿ -ಸಾಧಾರಣ) ಮಾರ್ಚ್ 2023. (ಕ.ಫ-3)

41. ದ್ರುಪದನು ದ್ರೋಣನನ್ನು ತನ್ನ ಸಹಪಾಠಿ ಎಂದು ಗುರುತಿಸದೇ ಅವಮಾನಿಸಿದ್ದು ಸರಿಯೇ? ವಿಮರ್ಷಿಸಿ. (ಅಭಿವ್ಯಕ್ತಿ -ಸಾಧಾರಣ) (ಕ.ಫ-12/13)

42. ಹತ್ತನೇ ತರಗತಿ ಪಠ್ಯದಲ್ಲಿರುವ ಎಲ್ಲಾ ಕವಿಗಳ ಪರಿಚಯವನ್ನು ಸಂದರ್ಶನ ಮಾದರಿಯಲ್ಲಿ ನಿರೂಪಿಸಿ ವಿಡಿಯೋ ಚಿತ್ರಿಕರಿಸಿ. (ಅಭಿವ್ಯಕ್ತಿ -ಸಾಧಾರಣ) (ಕ.ಫ-6)

ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :

(ಕ.ಫ-5) **(5 ಅಂಕ)**

43. ಗ್ರಾಮ ಸ್ವರಾಜ್ಯ. (ಅಭಿವ್ಯಕ್ತಿ-ಕಠಿಣ)

44. ಸ್ವಚ್ಛ ಭಾರತ ಅಭಿಯಾನ. (ಅಭಿವ್ಯಕ್ತಿ-ಕಠಿಣ) ಜೂನ್ 2018.

ಪಠ್ಯಪೂರಕ ಅಧ್ಯಯನ : ವಸಂತ ಮುಖ ತೋರಲಿಲ್ಲ
- ಡಾ. ವಿಜಯಶ್ರೀ ಸಬರದ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	4	10	0	0	14
ಅಂಕಗಳು	4	14	0	0	18

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	0	10	4	0	0	0	14
ಅಂಕಗಳು	0	10	8	0	0	0	18

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

1. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ? (ಸ್ಮರಣೆ-ಸುಲಭ) ಮಾರ್ಚ್ 2018, 2026, ಜೂನ್ 2018.

2. ಪುಟ್ಟ ಪೋರಿಯ ಅಮ್ಮ ಗುಡಿಸಿಲಿನಲ್ಲಿ ಹೇಗೆ ಮಲಗಿದ್ದಾಳೆ? (ಗ್ರಹಿಕೆ-ಸುಲಭ) ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ? (ಸ್ಮರಣೆ-ಸುಲಭ) ಮಾರ್ಚ್ 2019, 2022. (ಕ.ಫ-2)

3. ಗೋಡೆಗಳು ಏಕೆ ಮುಖ ಮುಚ್ಚಿಕೊಂಡಿವೆ? (ಗ್ರಹಿಕೆ-ಸುಲಭ) (ಕ.ಫ-2)

4. ಒಡೆಯನ ಅಂಗಳದಲ್ಲಿದ್ದ ಮಾವಿನ ಮರಗಳು ಹೇಗೆ ನಿಂತಿವೆ? (ಗ್ರಹಿಕೆ-ಸುಲಭ) ಜೂನ್ 2023. (ಕ.ಫ-2)

5. ವಸಂತಮುಖ ಯಾರಿಗೆ ತೋರಲಿಲ್ಲ? (ಸ್ಮರಣೆ-ಸುಲಭ) ಜೂನ್ 2019. (ಕ.ಫ-2)

6. ಇಳೆಯು ಹೇಗೆ ಸಂಭ್ರಮಿಸುತ್ತಿದೆ? (ಗ್ರಹಿಕೆ-ಸುಲಭ) (ಕ.ಫ-2)

7. ಕೋಗಿಲೆಗಳು ಹೇಗೆ ಹಾಡುತ್ತಿವೆ? (ಗ್ರಹಿಕೆ-ಸುಲಭ) (ಕ.ಫ-2)

8. ಮುಗುಳುನಗೆ ಎಲ್ಲಿ ಬೀರಿತ್ತು? (ಸ್ಮರಣೆ-ಸುಲಭ) (ಕ.ಫ-2)

9. ಪುಟ್ಟ ಪೋರಿ ವಸಂತ ಏಕೆ ಮರುಗಿದನು ಎಂದು ತಿಳಿಸುತ್ತಾಳೆ? (ಗ್ರಹಿಕೆ-ಸಾಧಾರಣ(ಕ.ಫ-2)

10. ಪುಟ್ಟ ಪೋರಿಯ ಅಮ್ಮನ ತೂತು ಬಿದ್ದ ಸೀರೆಯಲ್ಲಿ ಯಾರು ಸೊರಗಿದ್ದಾರೆ? (ಸ್ಮರಣೆ-ಸಾಧಾರಣ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

11. 'ವಸಂತ ಮುಖತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ? / ಕವಯಿತ್ರಿ ಡಾ. ವಿಜಯಶ್ರೀ ಸಬರದ ಅವರು ತಮ್ಮ ಕವನದಲ್ಲಿ ಇಳೆ ಸಂಭ್ರಮಿಸುವ

ರೀತಿಯನ್ನು ಹೇಗೆ ವರ್ಣಿಸಿದ್ದಾರೆ? ಮಾರ್ಚ್ 2020, 2023, 2024, 2025, ಜೂನ್ 2022, ಆಗಸ್ಟ್ 2024, ಮೇ 2025 (ಗ್ರಹಿಕೆ-ಸುಲಭ) (ಕ.ಫ-3)

12. ಕತ್ತಲೆ ಗವ್ವೆನ್ನುವ ಗುಡಿಸಲೊಳಗೆ ಬರಲು ವಸಂತನಿಗೂ ಹೆದರಿಕೆಯಾದದ್ದು ಏಕೆ? (ಗ್ರಹಿಕೆ-ಸಾಧಾರಣ) (ಕ.ಫ-3)

13. ಪುಟ್ಟ ಪೋರಿ ಏಕೆ ಮೂಕವಿಸ್ಮಿತಾಗಿದ್ದಾಳೆ? (ಗ್ರಹಿಕೆ-ಸಾಧಾರಣ) (ಕ.ಫ-3)

14. ವಸಂತ ಮುಖ ತೋರಲಿಲ್ಲ ಕವನದಲ್ಲಿ ಶ್ರಮಿಕರ ಬದುಕು ಹೇಗೆ ಚಿತ್ರಿತಗೊಂಡಿದೆ? (ಗ್ರಹಿಕೆ-ಸಾಧಾರಣ) (ಕ.ಫ-8)

ಪಠ್ಯಪೂರಕ ಅಧ್ಯಯನ : ಭಗತ್‌ಸಿಂಗ್
- ಚಿದಾನಂದಮೂರ್ತಿ ಜಿ. ಎಸ್.

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	7	5	0	0	12
ಅಂಕಗಳು	7	10	0	0	17

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	0	7	5	0	0	0	12
ಅಂಕಗಳು	0	7	10	0	0	0	17

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

1. ಸಂಜೆ ತಡವಾಗಿ ಬಾಲಕ ಭಗತ್‌ಸಿಂಗ್ ಮನೆಯೊಳಕ್ಕೆ ಕಾಲಿಟ್ಟಾಗ ಅವನ ತಂಗಿ ಏನೆಂದು ಕೂಗಿಕೊಂಡಳು? (ಸ್ಮರಣೆ-ಸಾಧಾರಣ) (ಕ.ಫ-2)

2. ಬಾಲಕ ಭಗತ್‌ಸಿಂಗ್‌ನಿಗೆ ಅವನ ತಂಗಿ ತಿನ್ನಲು ಏನನ್ನು ಕೊಟ್ಟಳು? (ಸ್ಮರಣೆ-ಸುಲಭ) (ಕ.ಫ-2)

3. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರೇನು? (ಸ್ಮರಣೆ-ಸುಲಭ) (ಕ.ಫ-2)

4. ಭಗತ್‌ಸಿಂಗ್‌ನ ತಂದೆತಾಯಿಯರ ಹೆಸರೇನು? (ಸ್ಮರಣೆ-ಸುಲಭ) (ಕ.ಫ-2)

5. ಭಗತ್‌ಸಿಂಗ್‌ನ ಜನ್ಮಸ್ಥಳ ಯಾವುದು? (ಸ್ಮರಣೆ-ಸುಲಭ) (ಕ.ಫ-2)

6. "ಇಂಕ್ವಿಲಾಬ್ ಜಿಂದಾಬಾದ್" ಘೋಷಣೆಯನ್ನು ಯಾರು ಹುಟ್ಟು ಹಾಕಿದರು? (ಸ್ಮರಣೆ-ಸಾಧಾರಣ) (ಕ.ಫ-2)

7. ಭಗತ್‌ಸಿಂಗ್ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಂಡಿದ್ದಕ್ಕೆ ದೊರೆತ ಫಲವೇನು? (ಸ್ಮರಣೆ-ಸಾಧಾರಣ) ಮಾರ್ಚ್ 2020.

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

8. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ಸಹೋದರಿಗೆ ಹೇಳಿದ ಮಾತುಗಳನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) ಜೂನ್ 2023. ಆಗಸ್ಟ್ 2024. (ಕ.ಫ-2)

9. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವನ್ನು ತಿಳಿಸಿ. (ಗ್ರಹಿಕೆ- ಸಾಧಾರಣ) ಜೂನ್ 2024. (ಕ.ಫ-3)

10. ಬಾಲಕ ಭಗತ್ ಸಿಂಗ್ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಸ್ಥಳದಲ್ಲಿನ ಮಣ್ಣನ್ನು ಸಂಗ್ರಹಿಸಿದ ಬಗೆಯನ್ನು ತಿಳಿಸಿ. (ಗ್ರಹಿಕೆ ಸಾಧಾರಣ) (ಕ.ಫ-3)

11. ಭಗತ್‌ಸಿಂಗ್‌ನ ತಾಯಿಯ ಕಣ್ಣಿನಿಂದ ಧಾರಾಕಾರವಾಗಿ ನೀರು ಸುರಿಯಲು ಕಾರಣವೇನು? (ಗ್ರಹಿಕೆ ಸಾಧಾರಣ) ಮಾರ್ಚ್ 2026, ಮೇ 2025. (ಕ.ಫ-3)

12. ಭಗತ್ ಸಿಂಗ್ ಹೇಗೆ ಅಮರನಾದನು? (ಗ್ರಹಿಕೆ- ಸಾಧಾರಣ) ಮಾರ್ಚ್ 2024 (ಕ.ಫ-3)

ಪಠ್ಯಪೂರಕ ಅಧ್ಯಯನ : ಉದಾತ್ತ ಚಿಂತನೆಗಳು – ಸಂಗ್ರಹ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	4	6	0	0	10
ಅಂಕಗಳು	4	12	0	0	16

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	0	4	6	0	0	0	10
ಅಂಕಗಳು	0	4	12	0	0	0	16

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

1. ಕ್ರಿಯಾ ಸ್ವಾತಂತ್ರ್ಯ ಎಂದರೇನು? (ಸ್ಮರಣೆ-ಸಾಧಾರಣ)

2. `ಅನ್‌ಟು ದಿಸ್ ಲಾಸ್ಟ್' ಕೃತಿಯನ್ನು ಬರೆದವರು ಯಾರು? (ಸ್ಮರಣೆ-ಸಾಧಾರಣ)

3. ನಚಿಕೇತನು ಯಾರನ್ನು ಸಂದರ್ಶಿಸಿ ಧೈರ್ಯದಿಂದ ಪ್ರಶ್ನಿಸಿದನು? (ಸ್ಮರಣೆ-ಸಾಧಾರಣ)

4. 'ಸರ್ವೋದಯ' ಹೆಸರಿನಿಂದ ಗುಜರಾತಿ ಭಾಷೆಗೆ ಅನುವಾದಗೊಂಡ ಕೃತಿ ಯಾವುದು? (ಸ್ಮರಣೆ-ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

5. ರಾಜಕೀಯ ಸ್ವಾತಂತ್ರ್ಯದ ಮಹತ್ವವನ್ನು ತಿಳಿಸಿ. (ಗ್ರಹಿಕೆ-ಕಠಿಣ) (ಕ.ಫ-8)

6. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವನ್ನು ಕುರಿತು ಬರೆಯಿರಿ. (ಗ್ರಹಿಕೆ - ಸಾಧಾರಣ) ಜೂನ್ 2023. ಆ2024, ಮೇ2025. (ಕ.ಫ-3)

7. `ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು? (ಗ್ರಹಿಕೆ-ಸಾಧಾರಣ) ಮಾ 2026, ಜೂನ್ 2024, (ಕ.ಫ-3)

8. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಯಾವಾಗ ಸ್ಥಿರವಾಗುತ್ತದೆ? (ಗ್ರಹಿಕೆ-ಸಾಧಾರಣ) ಮಾರ್ಚ್ 2025. (ಕ.ಫ-8)

9. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ? (ಗ್ರಹಿಕೆ-ಸಾಧಾರಣ) ಮಾರ್ಚ್ 2023, 2024. (ಕ.ಫ-8)

10. ಗಾಂಧೀಜಿಯವರು 'ಅನ್‌ಟ್ಟು ದಿಸ್ ಲಾಸ್ಟ್' ಕೃತಿಯಲ್ಲಿ ತಿಳಿದ ಸಿದ್ಧಾಂತಗಳಾವುವು? (ಗ್ರಹಿಕೆ-ಸಾಧಾರಣ) ಮೇ 2024. (ಕ.ಫ-3)

ಪಠ್ಯಪೂರಕ ಅಧ್ಯಯನ : ವಚನಗಳು – ಅಕ್ಕಮಹಾದೇವಿ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	4	4	0	0	8
ಅಂಕಗಳು	4	6	0	0	10

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	0	6	2	0	0	0	8
ಅಂಕಗಳು	0	6	4	0	0	0	10

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

1. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು ? (ಸ್ಮರಣೆ-ಸುಲಭ) ಮೇ 2025 (ಕ.ಫ-5)

2. ಚೆನ್ನಮಲ್ಲಿಕಾರ್ಜುನ ಯಾರ ಅಂಕಿತವಾಗಿದೆ ? (ಸ್ಮರಣೆ-ಸುಲಭ) (ಕ.ಫ-5)

3. ಸುವರ್ಣವು ಯಾವಾಗ ಕಳಂಕ ಹಿಡಿಯುವುದಿಲ್ಲ ? (ಸ್ಮರಣೆ-ಸುಲಭ) (ಕ.ಫ-2)

4. ಅಕ್ಕಮಹಾದೇವಿಯು ಯಾವುದನ್ನು ಹಾನಿ ಎಂದಿದ್ದಾಳೆ? (ಸ್ಮರಣೆ-ಸುಲಭ) (ಕ.ಫ-2) (ಕ.ಫ-2)

5. ಬಲ್ಲವರೊಡನೆ ಸಂಗವ ಮಾಡಿದರೆ ಆಗುವ ಪರಿಣಾಮವೇನು? (ಗ್ರಹಿಕೆ-ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

7. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ? (ಗ್ರಹಿಕೆ-ಸಾಧಾರಣ) ಮಾರ್ಚ್ 2025 (ಕ.ಫ-3)

8. ಜ್ಞಾನಿ- ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವನ್ನು ತಿಳಿಸಿ. (ಗ್ರಹಿಕೆ-ಸಾಧಾರಣ) ಮಾರ್ಚ್ 2026. (ಕ.ಫ-3)

ಪಠ್ಯಪೂರಕ ಅಧ್ಯಯನ : ನಾನು ಪ್ರಾಸ ಬಿಟ್ಟ ಕತೆ - ಗೋವಿಂದ ಪೈ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	6	3	0	0	9
ಅಂಕಗಳು	6	6	0	0	12

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	0	6	3	0	0	0	9
ಅಂಕಗಳು	0	6	6	0	0	0	12

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

1. 'ಬಿಲ್ಲಹಬ್ಬ'ವನ್ನು ರಚಿಸಿದ ಕವಿ ಯಾರು? (ಸ್ಮರಣೆ-ಸುಲಭ) ಮಾರ್ಚ್ 2024, ಜೂ2024.

2. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು? (ಸ್ಮರಣೆ-ಸುಲಭ) (ಕ.ಫ-2)

3. ಬಾಸೆಲ್‌ಮಿಶನ್ ಅವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು? (ಸ್ಮರಣೆ-ಸಾಧಾರಣ) (ಕ.ಫ-2)

4. ಮುದ್ರಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು? (ಸ್ಮರಣೆ-ಸುಲಭ) (ಕ.ಫ-2)

5. ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು ಯಾವ ಕೃತಿಯನ್ನು ಬರೆದರು? (ಸ್ಮರಣೆ-ಸುಲಭ) (ಕ.ಫ-2)

6. ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು? (ಸ್ಮರಣೆ-ಸುಲಭ) ಮಾರ್ಚ್ 2023.

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

7. ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ದತೆಗಳಾಗುತ್ತಿದ್ದವು? (ಗ್ರಹಿಕೆ-ಸುಲಭ) ಜೂನ್ 2023. (ಕ.ಫ-2)

8. ಪೈಗಳು ಪ್ರಾಸ ತೊರೆಯಲು ನಿಶ್ಚಯಿಸಿದ ಸಂದರ್ಭವನ್ನು ವಿವರಿಸಿ. (ಗ್ರಹಿಕೆ-ಕಠಿಣ) ಮಾರ್ಚ್ 2025 (ಕ.ಫ-3)

9. ಪ್ರಾಸವನ್ನು ಬಿಟ್ಟು ಬರೆಯಲು ಯೋಚಿಸಿದ ಪೈಗಳು ಪ್ರಾಸ ಇಟ್ಟೆ ಬರೆಯಲು ಕಾರಣವೇನು? (ಕ.ಫ-3)

ಪಠ್ಯಪೂರಕ ಅಧ್ಯಯನ : ಶುಕನಾಸನ ಉಪದೇಶ
-ಬನ್ನಂಜೆ ಗೋವಿಂದಾಚಾರ್ಯ

ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	4	3	0	0	7
ಅಂಕಗಳು	4	5	0	0	9

ಪ್ರಶ್ನಾನುಸಾರ ಪ್ರಾಮುಖ್ಯತೆ :

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	0	5	2	0	0	0	7
ಅಂಕಗಳು	0	5	4	0	0	0	9

ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

(ಕ.ಫ-2) **(1 ಅಂಕ)**

1. ಗುರುವಾಣಿ ಯಾರಿಗೆ ಹೊರೆ ಎನಿಸುತ್ತದೆ? (ಸ್ಮರಣೆ-ಸಾಧಾರಣ)

2. ಉಪದೇಶ ಯಾರ ಕಿವಿಗೆ ನಾಟುವುದಿಲ್ಲ? (ಸ್ಮರಣೆ-ಸಾಧಾರಣ)

3. ದುಡ್ಡಿನ ಪೈತ್ಯ ಅಡರಿದವರಿಗೆ ಯಾವುದು ಕ್ಷುದ್ರವಾಗಿ ಕಾಣುತ್ತದೆ? (ಸ್ಮರಣೆ-ಸುಲಭ) ಮಾರ್ಚ್ 2025.

4. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ? (ಗ್ರಹಿಕೆ-ಸಾಧಾರಣ)

5. ದುರಭಿಮಾನದ ತವರು ಯಾವುದು? (ಸ್ಮರಣೆ-ಸುಲಭ)

ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :

(2 ಅಂಕ)

6. ಗುರೂಪದೇಶದ ಗುಣಗಳನ್ನು ಪಟ್ಟಿಮಾಡಿ (ಗ್ರಹಿಕೆ-ಸಾಧಾರಣ) (ಕ.ಫ-2)

7. ರಾಜರ ಪ್ರಕೃತಿ ಹೇಗಿರುತ್ತದೆ? (ಗ್ರಹಿಕೆ-ಸಾಧಾರಣ) ಮಾರ್ಚ್ 2026, ಮೇ 2025. (ಕ.ಫ-3)

ಪ್ರಬಂಧಗಳು / ಹೆಚ್ಚುವರಿ ಪತ್ರಲೇಖನಗಳು :

	ಸ್ಮರಣೆ	ಗ್ರಹಿಕೆ	ಅಭಿವ್ಯಕ್ತಿ	ಪ್ರಶಂಸೆ	ಒಟ್ಟು
ಪ್ರಶ್ನೆಗಳು	0	0	15	0	15
ಅಂಕಗಳು	0	0	75	0	75

	ವ. ನಿ.	ಕಿ. ಉ. 1	ಕಿ. ಉ. 2	ದೀ. ಉ. 1	ದೀ. ಉ. 2	ದೀ. ಉ. 3	ಒಟ್ಟು
ಪ್ರಶ್ನೆಗಳು	0	0	0	0	0	15	15
ಅಂಕಗಳು	0	0	0	0	0	75	75

ಪ್ರಬಂಧಗಳು - ಪತ್ರಲೇಖನಗಳು

1. ಶಾಲೆಯಲ್ಲಿ ಮೌಲ್ಯ ಶಿಕ್ಷಣ.
2. ಶಾಲೆಯಲ್ಲಿನ ವಿವಿಧ ಸಂಘಗಳ ಚಟುವಟಿಕೆಗಳು.
3. ಕನ್ನಡ ಭಾಷಾಭಿವೃದ್ಧಿಯ ಮಾರ್ಗಗಳು.
4. ಕನ್ನಡ ಭಾಷೆಯ ಬೆಳೆವಣಿಗೆ ಮತ್ತು ಸವಾಲುಗಳು.'
5. ಶಾಲಾ ಸಂಸತ್ತು ಚುನಾವಣಾ ಪ್ರಕ್ರಿಯೆ ಹಾಗೂ ಮಹತ್ತ್ವ.
6. ಭಾವೈಕ್ಯವನ್ನು ಬೆಳೆಸುವಲ್ಲಿ ಕ್ರೀಡೆಗಳ ಪಾತ್ರ
7. ಹೆಣ್ಣು ಮಕ್ಕಳಿಗೆ ಸರ್ಕಾರದ ಸೌಲಭ್ಯಗಳು.

1. ನಿಮ್ಮನ್ನು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಗುಡ್ಡೇತೋಟ ಗ್ರಾಮದ ನಿವಾಸಿ 'ಚಂದನಾ' ಎಂದು ಭಾವಿಸಿಕೊಂಡು, ಗ್ರಾಮದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಆರಂಭಿಸುವಂತೆ ಕೋರಿ, ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ ಇವರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಶೇಖರ' ಎಂದು ಭಾವಿಸಿಕೊಂಡು, ಪಾಲಕರ ಸಭೆಗೆ ಆಹ್ವಾನಿಸಿ, ಶಿವಮೊಗ್ಗದಲ್ಲಿ ವಾಸವಾಗಿರುವ 'ರೂಪಶ್ರೀ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

2. ನಿಮ್ಮನ್ನು ಮೈಸೂರಿನ ವಿಜಯನಗರ ಬಡಾವಣೆಯ ನಿವಾಸಿ 'ರಾಜೇಶ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಗೆ 'ಸಾರ್ವಜನಿಕ ಗ್ರಂಥಾಲಯ' ವನ್ನು ಮಂಜೂರು ಮಾಡುವಂತೆ ಕೋರಿ, ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ರಾಮನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಹರ್ಷಿತಾ' ಎಂದು ಭಾವಿಸಿಕೊಂಡು, ವಾರ್ಷಿಕ ಪರೀಕ್ಷೆಯ ಸಿದ್ಧತೆಯನ್ನು ಕುರಿತು ಮಂಡ್ಯದ ಸುಭಾಷ್ ನಗರದಲ್ಲಿ ವಾಸವಾಗಿರುವ 'ಬಸವರಾಜ' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

3. ನಿಮ್ಮನ್ನು ಹಾವೇರಿ ನಗರದ ಬಸವೇಶ್ವರ ಬಡಾವಣೆಯಲ್ಲಿ ವಾಸವಿರುವ 'ಸಂಜೀವ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಹೆಚ್ಚಾಗಿರುವ ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕುವಂತೆ ಕೋರಿ, ನಗರ ಪಾಲಿಕೆಯ ಮುಖ್ಯಾಧಿಕಾರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಉತ್ತರ ಕನ್ನಡ ಜಿಲ್ಲೆಯ ಹುನಗುಂದ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ 'ಅಪೇಕ್ಷಾ' ಎಂದು ಭಾವಿಸಿಕೊಂಡು, ಕಲಿಕಾಫಲ ಆಧಾರಿತ ಮೌಲ್ಯಾಂಕನದಲ್ಲಿ ನೀವು ಸಾಧಿಸಿದ ಪ್ರಗತಿಯನ್ನು ವಿವರಿಸಿ, ಧಾರವಾಡದಲ್ಲಿ ವಾಸವಾಗಿರುವ 'ದೀಪಾ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

4. ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸುಪ್ರೀತ' ಎಂದು ಭಾವಿಸಿಕೊಂಡು, ಬೆಂಗಳೂರಿನ ನೆಹರೂ ತಾರಾಲಯ ವೀಕ್ಷಣೆಗೆ ಸಮಯಾವಕಾಶ ನಿಗದಿಪಡಿಸಿ ತಿಳಿಸುವಂತೆ ಕೋರಿ, ಅಲ್ಲಿನ ವ್ಯವಸ್ಥಾಪಕರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಹಾವೇರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸಹನಾ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ವನಮಹೋತ್ಸವ ಕಾರ್ಯಕ್ರಮವನ್ನು ವಿವರಿಸಿ ದಾವಣಗೆರೆಯ ಬಸವೇಶ್ವರ ಬಡಾವಣೆಯಲ್ಲಿ ವಾಸವಾಗಿರುವ 'ಸಂಧ್ಯಾ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

5. ನಿಮ್ಮನ್ನು ರಾಯಚೂರಿನ ವಿವೇಕಾನಂದ ಬಡಾವಣೆಯ ನಿವಾಸಿ 'ನಂದಿನಿ' ಎಂದು ಭಾವಿಸಿಕೊಂಡು, ಗಾಳಿಯ ರಭಸಕ್ಕೆ ವಿದ್ಯುತ್ ತಂತಿಯ ಮೇಲೆ ಬಿದ್ದಿರುವ ಮರವನ್ನು ತೆರವುಗೊಳಿಸುವಂತೆ ಕೋರಿ, ವಿದ್ಯುಚ್ಛಕ್ತಿ ಮಂಡಳಿಯ ಮುಖ್ಯ ಅಭಿಯಂತರರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಮಾಲತೇಶ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ಗ್ರಂಥಸಪ್ತಾಹ ಕಾರ್ಯಕ್ರಮವನ್ನು ಕುರಿತು ಬಳ್ಳಾರಿಯಲ್ಲಿ ವಾಸವಾಗಿರುವ 'ಶೇಖರಪ್ಪ' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

6. ನಿಮ್ಮನ್ನು ಉಡುಪಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸ್ಫೂರ್ತಿ' ಎಂದು ಭಾವಿಸಿಕೊಂಡು, ಮಂಗಳೂರಿನ 'ಪಿಲಿಕುಳ ವಿಜ್ಞಾನ ವಸ್ತುಸಂಗ್ರಹಾಲಯ' ವೀಕ್ಷಣೆಗೆ ಅವಕಾಶ ಕೋರಿ, ಅಲ್ಲಿನ ವ್ಯವಸ್ಥಾಪಕರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಹಾವೇರಿ ಜಿಲ್ಲೆಯ ಹಾನಗಲ್ಲಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸಂಜನಾ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಕನ್ನಡ ಸಂಘದಿಂದ ಆಯೋಜಿಸಿದ

ಭಾವಗೀತೆಗಳ ಗಾಯನ ಸ್ಪರ್ಧೆಯನ್ನು ಕುರಿತು ಹಾಸನದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಲಾವಣ್ಯಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.

7. ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸಮರ್ಥ' ಎಂದು ಭಾವಿಸಿಕೊಂಡು ಶಾಲೆಗೆ ಗ್ರಂಥಾಲಯದ ಸೌಲಭ್ಯ ಕಲ್ಪಿಸಿ ಕೊಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ

ಅಥವಾ

ನಿಮ್ಮನ್ನು ಬೆಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಆನಂದ' ಎಂದು ಭಾವಿಸಿಕೊಂಡು ಎಸ್‌ಎಸ್‌ಎಲ್‌ಸಿ ನಂತರದ ನಿಮ್ಮ ಮುಂದಿನ ಜೀವನದ ಗುರಿ ಯೋಜನೆ ವಿವರಿಸಿ ಮೈಸೂರಿನ ಸರಸ್ವತಿ ಬಡಾವಣೆಯಲ್ಲಿ ವಾಸವಾಗಿರುವ 'ನವೀನ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

8. ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ರೇಖಾ' ಎಂದು ಭಾವಿಸಿಕೊಂಡು ಜಿಲ್ಲೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕೇಂದ್ರವನ್ನ ಸ್ಥಾಪಿಸುವಂತೆ ಕೋರಿ ಮಾನ್ಯ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ ಇವರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಶಿವಮೊಗ್ಗದ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಚಿದಾನಂದ' ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ ಗ್ರಂಥ ಸಪ್ತಾಹ ಕಾರ್ಯಕ್ರಮವನ್ನು ಕುರಿತು,ಬಳ್ಳಾರಿಯಲ್ಲಿ ವಾಸವಾಗಿರುವ 'ಶ್ರೀನಿವಾಸ' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

ಪ್ರಥಮಭಾಷೆ ಕನ್ನಡ – 01K
ಕಲಿಕಾಫಲ ಆಧಾರಿತ ಮೌಲ್ಯಾಂಕನ ಸಾಮಗ್ರಿ (LBA)
: ಮಾದರಿ ಉತ್ತರಗಳು :

ಗರಿಷ್ಠ ಅಂಕ : 100 **ಸಮಯ : 3 ಗಂಟೆ 15ನಿಮಿಷಗಳು**

: ಮಾದರಿ ಉತ್ತರಗಳ ಅಂಕ ವಿತರಣೆ :

I. ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : 6 x 1 = 6

ಪ್ರಶ್ನೆಸಂಖ್ಯೆ 1. ರಿಂದ 6

II. ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) : 4 x 1 = 4

ಪ್ರಶ್ನೆಸಂಖ್ಯೆ 7. ರಿಂದ 10.

III. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು
(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) : 7 x 1 = 7

ಪ್ರಶ್ನೆಸಂಖ್ಯೆ 11. ರಿಂದ17.

IV. ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು
(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) : 10 x 2 = 20

ಪ್ರಶ್ನೆಸಂಖ್ಯೆ 18. ರಿಂದ27.

V. ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು : 2 x 3 = 6

ಜನ್ಮಸ್ಥಳ, ಕಾಲ	1
ಕೃತಿ, ಬಿರುದು / ಪ್ರಶಸ್ತಿ	1
ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ	1
ಒಟ್ಟು	**3**

ಪ್ರಶ್ನೆಸಂಖ್ಯೆ 28. ರಿಂದ 29.

VI. ಪ್ರಸ್ತಾರಹಾಕಿ, ಗಣವಿಭಾಗಿಸಿ, ಛಂದಸ್ಸನ್ನುಹೆಸರಿಸುವುದು : 1 x 3 = 3

ಪ್ರಸ್ತಾರ ಹಾಕುವುದು	1
ಗಣ ವಿಭಾಗಿಸುವುದು	1
ಛಂದಸ್ಸಿನ ಹೆಸರು ಬರೆಯುವುದು	1
ಒಟ್ಟು	**3**

ಪ್ರಶ್ನೆಸಂಖ್ಯೆ 30.

VII. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಮಾಡುವುದು :1 x 3 = 3

ಅಲಂಕಾರವನ್ನು ಹೆಸರಿಸುವುದು	1
ಲಕ್ಷಣ ಬರೆಯುವುದ	1
ಅಂಶಗಳನ್ನು ಗುರುತಿಸಿ ಸಮನ್ವಯಿಸುವುದು	1
ಒಟ್ಟು	**3**

ಪ್ರಶ್ನೆಸಂಖ್ಯೆ 31

VIII. ಗಾದೆಯನ್ನು ವಿಸ್ತರಿಸಿ ಬರೆಯುವುದು : 1x3=3

ಗಾದೆಯ ಮಹತ್ವದ ವಿವರಣೆ 1
ಉದಾಹರಣೆಯೊಂದಿಗೆ ಅರ್ಥ ವಿವರಣೆ 1
ಭಾಷಾ ಶೈಲಿ-ಪದಬಂಧಗಳಿಗೆ 1
ಒಟ್ಟು 3

ಪ್ರಶ್ನೆಸಂಖ್ಯೆ 32.

IX. ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು : 6 x 3 =18

ಕರ್ತೃ, ಆಕರ ಮತ್ತು ಪಠ್ಯದ ಹೆಸರು 1
ಸಂದರ್ಭದ ವಿವರಣೆ 1
ಸ್ವಾರಸ್ಯ ಮತ್ತು ಶೈಲಿ 1
ಒಟ್ಟು 3

ಪ್ರಶ್ನೆಸಂಖ್ಯೆ 33. ರಿಂದ 38

X. ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1ಅಂಕ) : 1 x 4 = 4

ಪ್ರಶ್ನೆಸಂಖ್ಯೆ 39.

XI. ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು : 1 x 4 = 4

ವಿಷಯಾಂಶಕ್ಕೆ 3
ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ 1
ಒಟ್ಟು 4

ಪ್ರಶ್ನೆಸಂಖ್ಯೆ 40.

XII. ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : 2x4=8

ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ 3
ಭಾಷಾಶೈಲಿಗೆ, ಪದಬಂಧಗಳಿಗೆ 1
ಒಟ್ಟು 4

ಪ್ರಶ್ನೆಸಂಖ್ಯೆ 41. ರಿಂದ 42.

XIII. ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) : 1 x 4 = 4

ಪ್ರಶ್ನೆಸಂಖ್ಯೆ 43. ಅ) - ಆ)

XIV. ಪತ್ರಲೇಖನ ಬರೆಯುವುದು : 1 x 5 = 5

ಪ್ರಶ್ನೆಸಂಖ್ಯೆ 44. **ವ್ಯಾವಹಾರಿಕ / ಮನವಿ ಪತ್ರ :**

ಇಂದ, ಗೆ, ಸಂಬೋಧನೆ, ವಿಷಯ 1
ಪತ್ರದ ಒಡಲು. ವಿಷಯ ನಿರೂಪಣೆ 2
ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ 1
ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ 1
ಒಟ್ಟು 5

ಅಥವಾ

ಖಾಸಗಿ ಪತ್ರ :

ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ	1
ಪತ್ರದ ಒಡಲು. ವಿಷಯ ನಿರೂಪಣೆ	2
ಮುಕ್ತಾಯ, ಇಂತಿ, ಸಹಿ, ಹೊರವಿಳಾಸ	1
ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ	1
ಒಟ್ಟು	**5**

XV. ಪ್ರಬಂಧ ಬರೆವಣಿಗೆ : **1** x **5** = **5**

ಪ್ರಶ್ನೆಸಂಖ್ಯೆ 45.

ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ	1
ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ	2
ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ	1
ಭಾಷಾಶೈಲಿಗೆ, ಪದಬಂಧ	1
ಒಟ್ಟು	**5**

ಗದ್ಯಪಾಠ 1. ನಮ್ಮಭಾಷೆ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಬಿ) ಮಹಾಪ್ರಾಣಾಕ್ಷರಗಳು

2. (ಡಿ) ೧೦

3. (ಎ) ಅನುನಾಸಿಕಗಳು

4. (ಬಿ) ೦೫

5. (ಬಿ) ಣ

6. (ಬಿ) ಎಚ್ಚರ

7. (ಡಿ) ೧೦

8. (ಬಿ) ಉಷ್ಣ

9. (ಸಿ) ಯೋಗವಾಹ

10. (ಎ) ಅಲ್ಪಪ್ರಾಣಾಕ್ಷರಗಳು

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :

11. ಮಹಾಪ್ರಾಣಾಕ್ಷರಗಳು

12. ೦೯

13. ಅವರ್ಗೀಯ ವ್ಯಂಜನಗಳು

14. ೦೨

15. ೦೬

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ1 ಅಂಕ) :

16. ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನವಾಗಿದೆ.

17. ಪ್ರಾಣಿಗಳು ಚಲನ ವಲನ, ಆಹಾರ ವಿಷಯಗಳ ವಿಚಾರವಾಗಿ ತಮ್ಮ ಮಕ್ಕಳಿಗೆ ತರಪೇತು ಕೊಡುತ್ತವೆ.

18. ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಮೊದಲು ಮಾಡಿದಂದಿನಿಂದ ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಉಂಟಾಯಿತು.

19. ಎಣ್ಣೆ ತುಪ್ಪದ ವಿಶ್ರಣ ಬೇಡವೆಂದು ಹೇಳಿದವರು ನಯಸೇನ.

20. ಮಹಮ್ಮದೀಯರ ಆಳ್ವಿಕೆಯ ಅವಧಿಯಲ್ಲಿ ಪರ್ಷಿಯನ್ ಭಾಷೆಯಿಂದ ಅನೇಕ ಶಬ್ದಗಳು ಕನ್ನಡಕ್ಕೆ ಬಂದಿವೆ.

21. ಒಂದು ಭಾಷೆ ಸತ್ವಪೂರ್ಣವಾಗಿರಬೇಕಾದರೆ ಅದನ್ನಾಡುವ ಜನ ಅಭಿಮಾನಧನರೂ, ಬುದ್ಧಿಶಾಲಿಗಳೂ, ಪ್ರಯೋಗಶೀಲರೂ ಆಗಿರಬೇಕು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2ಅಂಕಗಳು) :

22. ವ್ಯಾವಹಾರಿಕವೆಂದರೆ ಜೀವದ್ಭಾಷೆ. ಅದರಲ್ಲಿ ಜನರು ಮಾತನಾಡುತ್ತಾರೆ. ವ್ಯವಹರಿಸುತ್ತಾರೆ. ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲಿಷ್ ಇದಕ್ಕೆ ಉದಾಹರಣೆ. ಎಲ್ಲ ವ್ಯಾವಹಾರಿಕ ಭಾಷೆಗಳು ಗ್ರಾಂಥಿಕವಾಗಬೇಕಿಲ್ಲ. ತುಳು ಒಂದು ಸುಂದರ ವ್ಯಾವಹಾರಿಕ ಭಾಷೆ, ಆದರೆ ಅದು ಗ್ರಾಂಥಿಕ ಭಾಷೆಯಲ್ಲ. ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ, ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ, ಇತ್ಯಾದಿ ಈ ವರ್ಗಕ್ಕೆ ಉದಾಹರಣೆ. ಎಲ್ಲ ಗ್ರಾಂಥಿಕ ಭಾಷೆಗಳು ಇಂದು ವ್ಯಾವಹಾರಿಕವಾಗಿಲ್ಲ. ಸಂಸ್ಕೃತ ಗ್ರಾಂಥಿಕ ಭಾಷೆಯಾಗಿದ್ದು, ಈಗ ಯಾವೊಂದು ಪ್ರದೇಶದಲ್ಲಿಯೂ ಅದು ವ್ಯಾವಹಾರಿಕ ಭಾಷೆಯಾಗಿಲ್ಲ.

23. ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಮೊದಲು ಮಾಡಿದಂದಿನಿಂದ ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಉಂಟಾಯಿತು. ಓದು ಬರೆಹವಿಲ್ಲದ ಹಳ್ಳಿಯ ಕೆಲಸಗಾರನು ಕೂಡ ತಾನು ದಿನಗೆಲಸಕ್ಕೆ ಹೋದ ಲೆಕ್ಕವನ್ನು ಗೋಡೆಯ ಮೇಲೆ ದಿನಂಪ್ರತಿ ಒಂದೊಂದು ಗೆರೆ ಎಳೆದು ಗುರುತಿಸಿ, ಲೆಕ್ಕಹಾಕಿ ಸಂಬಳವನ್ನು ಪಡೆಯುತ್ತಾನೆ. ಹಾಲು ಮಾರುವವರೂ ಹೀಗೆಯೇ ಲೆಕ್ಕವಿಡುವುದುಂಟು. ಪುರಾತನ ಸುಮೆರ್, ನೈಲ್, ಕ್ರಿಟಗಿರಿ ಇತ್ಯಾದಿ ಪ್ರದೇಶಗಳಲ್ಲಿ ಈ ಬಗೆಯ ಲಿಪಿ ಸಾಕ್ಷ್ಯಗಳು ದೊರೆತಿವೆ. ಹೀಗೆ ಲಿಪಿಯ ಜಾಡು ಆರಂಭಗೊಂಡಿತು.

24. ಮಾನವನಿಗೆ ಬಿಡುವು ಹೆಚ್ಚಿದಂತೆ, ಜೀವನದ ಸೌಕರ್ಯಗಳನ್ನು ವಿಶಿಷ್ಟ ಮೇಧಾಶಕ್ತಿಯಿಂದ ಅಭಿವೃದ್ಧಿಗೊಳಿಸುತ್ತಾ ಹೋದ. ತನ್ನ ಆಗುಹೋಗುಗಳನ್ನು, ಸುಖದುಃಖಗಳನ್ನು ಕಾವ್ಯರೂಪಕ್ಕೆ ಇಳಿಸುವ ಮಾರ್ಗವನ್ನು ಕಂಡುಕೊಂಡ. ಮೂಲ ಲಿಪಿಯನ್ನು ಮತ್ತಷ್ಟು ಪರಿಷ್ಕರಿಸುತ್ತಾ ಸುಂದರವಾದ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡ. ಹೀಗೆ ಸಾಹಿತ್ಯ ವಿವಿಧ ರೂಪದಲ್ಲಿ ಬೆಳೆದಿರಬೇಕು. ಲಿಪಿಯ ಮೂಲಕ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲು ಸಾಧ್ಯವಾಯಿತು. ಹೀಗೆ ಜ್ಞಾನ ಭಂಡಾರ ಭದ್ರವಾಯಿತು.

25. ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭು, ಚಾಮರಸ, ಕುಮಾರವ್ಯಾಸ, ಪುರಂದರದಾಸ, ಕನಕದಾಸರು ಸುಲಭ ಮಾರ್ಗವನ್ನು ತುಳಿದರು. ತಮ್ಮತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡಿತು.

26. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲ ಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು. ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ. ಆಕಾಂಕ್ಷೆ, ವಿಚಾರ ಮುಂತಾದವನ್ನು ಆಂಗ್ಲ ಭಾಷೆಯಲ್ಲಿಯೇ ಹೇಳಬೇಕೆಂಬ ಉಜ್ವಲ ಅಭಿಮಾನ ವುಳ್ಳವರಾಗಿದ್ದರು. ಆಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆಂಗ್ಲಭಾಷೆ ಬೆಳೆದು ವಿಶ್ವವ್ಯಾಪಿಯಾಯಿತು.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

27. ಎಂ. ಮರಿಯಪ್ಪ ಭಟ್ಟರು : ಎಂ. ಮರಿಯಪ್ಪ ಭಟ್ಟರು ಸಾ. ಶ. ೧೯೦೬ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕಬಕ ಗ್ರಾಮದಲ್ಲಿ ಜನಿಸಿದರು. ಶ್ರೀಯುತರು 'ಕನ್ನಡ ಸಂಸ್ಕೃತಿ, ತುಳು-ಇಂಗ್ಲಿಷ್ ನಿಘಂಟು, ಅಭಿನವಮಂಗರಾಜನ ನಿಘಂಟು, ಜಾತಕತಿಲಕಂ, ಛಂದಸ್ಸಾರ' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸರ್ಕಾರದ ಪುರಸ್ಕಾರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

28. ಮಾತೇ ಮೃತ್ಯು. ಮಾತೇ ಮುತ್ತು : ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಗಾದೆಯು ನಮ್ಮ ಮಾತಿನ ಮಹತ್ತ್ವವನ್ನು ತಿಳಿಸುತ್ತದೆ.

ಅಲ್ಲಮಪ್ರಭು ಹೇಳಿರುವಂತೆ "ಮಾತೆಂಬುದು ಜ್ಯೋತಿರ್ಲಿಂಗ". ಮಾತು ಬದುಕಿಗೆ ಬೆಳಕು ನೀಡುವುದಾಗಿದೆ. ಮಾತು ನಮ್ಮ ವ್ಯಕ್ತಿತ್ವದ ಕನ್ನಡಿಯಾಗಿದೆ. ನಮ್ಮ ಬೇಕು ಬೇಡಗಳನ್ನು ಅಭಿಪ್ರಾಯಗಳನ್ನು ಇತರರಿಗೆ ಮಾತುಗಳ ಮೂಲಕ ತಿಳಿಸುತ್ತೇವೆ. ಅವರಿಂದ ತಿಳಿಯುತ್ತೇವೆ. "ಮಾತು ಬಲ್ಲವ ಮಾಣಿಕ್ಯ ತಂದ; ಮಾತರಿಯದವ ಜಗಳ ತಂದ," "ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು," "ಮಾತು ಬಲ್ಲವನಿಗೆ ಜಗಳವಿಲ್ಲ'' ಎಂಬ ಗಾದೆ ಮಾತುಗಳು ಕೂಡ ಮಾತಿನ ಮಹತ್ತ್ವವನ್ನು ತಿಳಿಸುತ್ತವೆ. ಬಸವಣ್ಣನವರು "ನುಡಿದರೆ ಮುತ್ತಿನ ಹಾರದಂತಿರಬೇಕು. ಲಿಂಗಮೆಚ್ಚಿ ಅಹುದಹುದೆನಬೇಕು" ಎಂದು ಹೇಳಿದ್ದಾರೆ.

ಮಾತು ಹಿತ-ಮಿತವಾಗಿ ಕೇಳುಗರಿಗೆ ಮಧುರವಾಗಿ ಮುತ್ತಿನಂತಿರಬೇಕು. ನಯವಾದ ವಿನಯ ಪೂರ್ವಕವಾದ ಮಾತು ಕೇಳುಗರಿಗೆ ಸಂತೋಷವನ್ನುಂಟು ಮಾಡುತ್ತದೆ. ಕಠೋರವಾದ ಮಾತುಗಳು ಮನಸ್ಸಿಗೆ ನೋವನ್ನು ತರಬಲ್ಲವು. ಆದ್ದರಿಂದ ಮಾತು ಮುತ್ತಿನಂತಿರಬೇಕು. ಒಳ್ಳೆಯ ಮಾತು ಸ್ನೇಹ ಸಂಬಂಧವನ್ನು ಬೆಳೆಸಿದರೆ, ಕೆಟ್ಟ ಮಾತು ಒಡಕನ್ನುಂಟು ಮಾಡುತ್ತದೆ. ಅದಕ್ಕಾಗಿಯೇ ಸರ್ವಜ್ಞ ಕವಿಯು "ಮಾತಿನಿಂ ನಗೆ-ನುಡಿಯು ಮಾತಿನಿಂ ಹಗೆ ಕೊಲೆಯು ಮಾತಿನಿಂ ಸರ್ವ ಸಂಪದವು ಲೋಕಕ್ಕೆ ಮಾತೆ ಮಾಣಿಕವು" ಎಂದಿದ್ದಾನೆ. ಆದುದರಿಂದ ಮಾತು ಮೃದುವಾಗಿದ್ದರೆ ಮುತ್ತಿನಂತ ಮಾತು ಎಂದು ಮಾತು ಒರಟಾಗಿದ್ದರೆ ಮೃತ್ಯುವನ್ನು ತರಬಲ್ಲದು. ಆದ್ದರಿಂದ "ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು" ಎಂಬಂತೆ ನಾವು ಎಚ್ಚರಿಕೆಯಿಂದ ಮಾತನಾಡಬೇಕು ಎಂಬ ಅರ್ಥವನ್ನು ಪ್ರಸ್ತುತ ಗಾದೆಯು ಸ್ಫುರಿಸುತ್ತದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

29. "ಸಂಸ್ಕೃತಿಯ ಇತಿಹಾಸ ಉಳಿಯಿತು."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎಂ. ಮರಿಯಪ್ಪ ಭಟ್ಟರವರ 'ಕನ್ನಡ ಸಂಸ್ಕೃತಿ' ಕೃತಿಯಿಂದ ಆಯ್ದ 'ನಮ್ಮ ಭಾಷೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೆಕ್ಕಪತ್ರಗಳನ್ನಿಡಲು ಉಪಯುಕ್ತವಾದ ಮೂಲಲಿಪಿಯನ್ನು ಪರಿಷ್ಕರಿಸುತ್ತಾ ಸುಂದರವಾದ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡ. ಇದರಿಂದ

ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲು ಸಾಧ್ಯವಾಯಿತು. ಆ ಮೂಲಕ ಜ್ಞಾನ ಭಂಡಾರ ಭದ್ರವಾಯಿತು ಎಂದು ಹೇಳುವಾಗ ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಲಿಪಿಯ ಆವಿಷ್ಕಾರದಿಂದ ಇತಿಹಾಸದ ಅನೇಕ ಅಂಶಗಳನ್ನು ತಿಳಿಯಲು ಸಹಾಯವಾಯಿತು. ಅಗಾಧವಾದ ಅಭಿವೃದ್ಧಿಗೆ ಕಾರಣವಾಯಿತು, ಲಿಪಿಯಿಂದ ಮನುಕುಲಕ್ಕೆ ಆದ ಪ್ರಯೋಜನವನ್ನು ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಿದೆ.

30. "ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎಂ. ಮರಿಯಪ್ಪ ಭಟ್ಟರವರ 'ಕನ್ನಡ ಸಂಸ್ಕೃತಿ' ಕೃತಿಯಿಂದ ಆಯ್ದ 'ನಮ್ಮ ಭಾಷೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕನ್ನಡಕ್ಕೆ ಬಹಳ ಪ್ರಾಚೀನ ಕಾಲದಿಂದಲೂ ಸಂಸ್ಕೃತದ ಪೋಷಣೆ ದೊರೆಯುತ್ತ ಬಂದಿದೆ. ವೈದಿಕ ಹಾಗೂ ಜೈನ ಧಾರ್ಮಿಕ ತತ್ತ್ವಗಳನ್ನು ಕನ್ನಡದಲ್ಲಿ ವಿವರಿಸಬೇಕೆಂಬ ಅಭಿಲಾಷೆಯಿಂದ ಅನೇಕ ಪಂಡಿತರು ಉತ್ತಮ ಕಾವ್ಯಗಳನ್ನು ರಚಿಸಿದರು. ಆದರೆ ಅವರಲ್ಲಿ ಅನೇಕರು ಕನ್ನಡವನ್ನು ಸಂಸ್ಕೃತಮಯವನ್ನಾಗಿ ಮಾಡಿಬಿಟ್ಟರು. ಕನ್ನಡ ಮಾತ್ರ ತಿಳಿದವರಿಗೆ ಅವರ ರಚನೆ ಕಬ್ಬಿಣದ ಕಡಲೆಯೇ ಆಯಿತು. ಇಂಥ ಪರಿಸ್ಥಿತಿಯನ್ನು ಗಮನಿಸಿದ ನಯಸೇನ ಕನ್ನಡ ಮತ್ತು ಸಂಸ್ಕೃತದ ಮಿಶ್ರಣ ಮಾಡಬಾರದು. ಹಾಗೆ ಮಾಡಿದರೆ ಅದು ಎಣ್ಣೆ ತುಪ್ಪದ ಮಿಶ್ರಣ ಮಾಡಿದಂತಾಗುವುದು ಎಂದು ಹೇಳುವ ಸಂದರ್ಭದಲ್ಲಿ ನಯಸೇನ ಕವಿ ಮೇಲಿನ ಮಾತನ್ನು ಹೇಳಿದ್ದಾನೆ.

ಸ್ವಾರಸ್ಯ : ತಮ್ಮ ಕಾವ್ಯ ಪ್ರೌಢಿಮೆಯನ್ನು ತೋರಿಸಲು ಕನ್ನಡದೊಂದಿಗೆ ಸಂಸ್ಕೃತವನ್ನು ಮಿಶ್ರಣಮಾಡಿ ಸಾಹಿತ್ಯ ರಚನೆ ಮಾಡಿದ್ದರಿಂದ ಕನ್ನಡದ ಸೊಗಡು ಕಳೆಗುಂದುತ್ತದೆ. ಹೀಗೆ ಮಾಡುವುದು ತಪ್ಪು ಎಂದು ಕಿವಿ ಮಾತು ಹೇಳಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

31. "ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎಂ. ಮರಿಯಪ್ಪ ಭಟ್ಟರವರ 'ಕನ್ನಡ ಸಂಸ್ಕೃತಿ' ಕೃತಿಯಿಂದ ಆಯ್ದ 'ನಮ್ಮ ಭಾಷೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಅನೇಕ ಕವಿಗಳು ಸಾರಿದರು. ವಚನಕಾರರು, ದಾಸರು, ಕವಿಶ್ರೇಷ್ಠರು ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಇದರಿಂದ ಕನ್ನಡ ಭಾಷೆ ಹದಗೊಂಡಿತು. ಹಾಗೆ ಹದಗೊಂಡ ಕನ್ನಡ ಭಾಷೆ ಸುಲಭ ಮತ್ತು ರುಚಿಯುಳ್ಳದ್ದಾಗಿದೆ ಎಂದು ಕವಿ ಮಹಲಿಂಗರಂಗ ಉದ್ಘೋಷಿಸುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ಕನ್ನಡ ಭಾಷೆಯಷ್ಟು ಸರಳ, ಸುಲಭ, ಸುಂದರವಾದ ಭಾಷೆ ಮತ್ತೊಂದಿಲ್ಲ ಈ ಭಾಷೆಯಲ್ಲಿಯ ಮೋಕ್ಷವನ್ನು ಕಂಡುಕೊಳ್ಳಬಹುದು ಎಂಬ ತಾತ್ಪರ್ಯದಲ್ಲಿ ಕವಿ ಮಹಲಿಂಗರಂಗ ಹೇಳಿರುವ ಮಾತು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

32. "ಒಬ್ಬ ತಾಯಿಯ ಗಾನದ ಶ್ರುತಿಯಂತೆ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎಂ. ಮರಿಯಪ್ಪ ಭಟ್ಟರವರ 'ಕನ್ನಡ ಸಂಸ್ಕೃತಿ' ಕೃತಿಯಿಂದ ಆಯ್ದ 'ನಮ್ಮ ಭಾಷೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸ್ವಭಾಷೆಯನ್ನು ಪ್ರೀತಿಸಬೇಕು, ಗೌರವಿಸಬೇಕು, ಬೆಳೆಸಬೇಕು ಎಂದರೆ ಅನ್ಯಭಾಷೆಗಳನ್ನು ತಿರಸ್ಕರಿಸಬೇಕು ಎಂದು ಅರ್ಥವಲ್ಲ. ಭಾಷೆಗಳಲ್ಲಿ ಮೇಲು ಕೀಳೆಂಬುದಿಲ್ಲ. ನಾಲ್ಕು ಜನ ಮಾತನಾಡುತ್ತಿದ್ದ ಭಾಷೆಗೂ ನಲವತ್ತು ಲಕ್ಷ ಜನ

ಮಾತನಾಡುತ್ತಿದ್ದ ಭಾಷೆಗೂ ಸತ್ಯ ಹಾಗೂ ಸತ್ಯದೃಷ್ಟಿಯಿಂದ ಅಂತರವೇ ಇಲ್ಲ. ಭಾರತೀಯರಾದ ನಾವು ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೆ, ನಮ್ಮ ನಮ್ಮ ಭಾಷೆಗಳನ್ನು ಗೌರವಿಸಿ, ಪ್ರೀತಿಸಿ. ಅಭಿವೃದ್ಧಿಗೊಳಿಸಿದರೆ ದೇಶದ ಸಂಸ್ಕೃತಿ ಮುಂದುವರಿಯುತ್ತದೆ ಎಂದು ಹೇಳುವಾಗ ಲೇಖಕರು ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ಭಾಷೆಗಳೆಲ್ಲ ಒಂದೇ ಸಮ. ಅವುಗಳಲ್ಲಿ ಭೇದ ಎಣಿಸದೆ, ದ್ವೇಷಿಸದ ಸ್ವಭಾಷೆಯನ್ನು ಪ್ರೀತಿಸಿ, ಬೆಳೆಸಿ, ಅಭಿವೃದ್ಧಿ ಪಡಿಸಬೇಕೆಂಬ ಕಳಕಳಿ ಲೇಖಕರ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

33. "ಇದು ಎಲ್ಲ ಭಾಷೆಗಳಲ್ಲೂ ಕಾಣುವ ಸಹಜಶಕ್ತಿ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎಂ. ಮರಿಯಪ್ಪ ಭಟ್ಟರವರ 'ಕನ್ನಡ ಸಂಸ್ಕೃತಿ' ಕೃತಿಯಿಂದ ಆಯ್ದ 'ನಮ್ಮ ಭಾಷೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಯಾವುದೇ ಭಾಷೆಯು ತನ್ನಲ್ಲಿರುವ ಸಾಮಗ್ರಿಗಳನ್ನೇ ಉಪಯೋಗಿಸಿಕೊಂಡು ಭಾಷಾಭಿವೃದ್ಧಿಯನ್ನು ಮಾಡುವ ಇನ್ನೊಂದು ವಿಧಾನ ನುಡಿಗಟ್ಟುಗಳಿಗೆ ಸೇರಿದೆ. ಎರಡು ಅಥವಾ ಹೆಚ್ಚು ಶಬ್ದಗಳು ಸೇರಿ ಒಂದು ನುಡಿಗಟ್ಟಾಗಿ ಅದಕ್ಕೊಂದು ನವೀನ ಅರ್ಥ ಬರುತ್ತದೆ. ಇದು ಎಲ್ಲ ಭಾಷೆಗಳಲ್ಲಿಯೂ ಕಾಣುವ ಸಹಜಶಕ್ತಿ. ಈ ವಿಚಿತ್ರಶಕ್ತಿ ಕನ್ನಡದಲ್ಲಿ ಅನೇಕ ಅಂದವಾದ ನುಡಿಗಟ್ಟುಗಳನ್ನು ಉಂಟುಮಾಡಿರುತ್ತದೆ ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಬಳಸಿದ್ದಾರೆ.

ಸ್ವಾರಸ್ಯ : ನುಡಿಗಟ್ಟುಳು ಭಾಷೆಯ ಸೋಗಸನ್ನು ಹೆಚ್ಚಿಸುತ್ತದೆ. ಇದು ಕನ್ನಡ ಭಾಷೆಗೆ ಮಾತ್ರ ಸಿಮಿತವಲ್ಲ ಇಲ್ಲ ಭಾಷೆಗಳಲ್ಲಿಯೂ ಇದೆ ಎಂಬುದು ಇಲ್ಲಿನ ಸ್ವಾರಸಯವಾಗಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

34. ಒಂದು ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಜನ ಅಭಿಮಾನಧನರೂ ಬುದ್ಧಿಶಾಲಿಗಳೂ ಪ್ರಯೋಗಶೀಲರೂ ಆಗಿರಬೇಕು. ನಾಲ್ಕೈದು ಶತಮಾನಗಳ ಹಿಂದೆ ಆಂಗ್ಲಭಾಷೆ ಯೂರೋಪಿನ ಸಾಮಾನ್ಯ ಭಾಷೆಗಳಲ್ಲಿ ಒಂದಾಗಿತ್ತು. ಅಲ್ಲಿನ ಜನತೆ ಸಾಹಸಜೀವಿಯಾಯಿತು. ಬುದ್ಧಿಶಾಲಿಯಾಯಿತು. ಸೂರ್ಯನು ಎಂದೂ ಮುಳುಗನೆನ್ನು - ವಂತಹ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿತು. ದೇಶ ವಿದೇಶಗಳ ಭಾಷೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಆಂಗ್ಲಪಂಡಿತರು ಮುಕ್ತ ಮನಸ್ಸಿನಿಂದ ಅಭ್ಯಸಿಸಿದರು. ತನ್ಮೂಲಕ ತಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹಿಗ್ಗಿಸಿದರು. ಅರಳಿಸಿದರು. ಎಲ್ಲಕ್ಕೂ ಮೇಲಾಗಿ ಮಹಾ ಮೇಧಾವಿಗಳು ತಮ್ಮ ಆಸೆ, ಆಕಾಂಕ್ಷೆ, ವಿಚಾರ ಮುಂತಾದುವನ್ನು ಆ ಭಾಷೆಯ ಮುಖಾಂತರವಾಗಿಯೇ ಹೇಳಬೇಕೆಂಬ ಉಜ್ವಲ ಅಭಿಮಾನವುಳ್ಳವರಾಗಿದ್ದರು. ಅಂಗ್ಲ ವಿಜ್ಞಾನಿಗಳು, ರಾಜಕಾರಣಿಗಳು, ಅರ್ಥಶಾಸ್ತ್ರಜ್ಞರು ಹೀಗೆ ಎಲ್ಲರೂ ತಮ್ಮ ಭಾಷೆಯನ್ನೇ ಬಳಸಿದುದರ ಪರಿಣಾಮವಾಗಿ ಆ ಭಾಷೆ ಬೆಳೆದು ಇಂದು ಪ್ರಪಂಚದ ದೊಡ್ಡ ಭಾಷೆಗಳಲ್ಲಿ ಒಂದಾಗಿದೆ. ಆಂಗ್ಲ ಜನರ ಸಂಕಲ್ಪ, ಕೃಷಿಯ ಕಾರಣದಿಂದ ಆಂಗ್ಲ ಭಾಷೆ ಸತ್ವಪೂರ್ಣವಾಗಿ ವಿಕಾಸಗೊಂಡಿತು. ಆಂಗ್ಲಭಾಷೆಯ ಮಾದರಿಯನ್ನೇ ಎಲ್ಲ ಭಾಷೆಗಳು ಅನ್ವಯಿಸಿಕೊಂಡಾಗ ಸತ್ವಪೂರ್ಣವಾಗಿ ವಿಕಾಸಗೊಳ್ಳುವುವು. ಆದ್ದರಿಂದ ನೆರೆಹೊರೆಯ ಭಾಷೆಗಳನ್ನು ದ್ವೇಷಿಸದೇ ಸ್ವಭಾಷೆಯನ್ನು ಪ್ರೀತಿಸಿ, ಗೌರವಿಸಿ, ಬೆಳೆಸಬೇಕು. ಆಗ ಭಾಷೆ ಸತ್ವಪೂರ್ಣವಾಗಿ ವಿಕಾಸಗೊಳ್ಳುವುದು.

35. ಕನ್ನಡ ಭಾಷೆ ಹಾಗೂ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಅದು ಇತರ ಭಾಷೆ, ಸಾಹಿತ್ಯ, ಸಂಸ್ಕೃತಿಯಿಂದ ಪ್ರಭಾವಿತರಾದರೂ

ದೇಶಿಯತೆಯನ್ನು ಬಿಟ್ಟಿಲ್ಲ. ಸ್ವತಂತ್ರವಾಗಿ ಬೆಳೆದು ಬಂದಿದೆ. ವೈದಿಕ ಹಾಗೂ ಜೈನ ಧಾರ್ಮಿಕ ತತ್ತ್ವಗಳನ್ನು ಕನ್ನಡದಲ್ಲಿ ವಿವರಿಸಬೇಕೆಂಬ ಅಭಿಲಾಷೆಯಿಂದ ಅನೇಕ ಪಂಡಿತರು ಉತ್ತಮ ಕಾವ್ಯಗಳನ್ನು ರಚಿಸಿದರು. ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶೇಷ್ಠರು ಸುಲಭ ಮಾರ್ಗವನ್ನೇ ತುಳಿದರು. ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಸಂಸ್ಕೃತ, ಪ್ರಾಕೃತ ಭಾಷೆಗಳಿಂದ (ತತ್ಸಮ ತದ್ಭವಗಳಾಗಿ) ಅನೇಕ ಶಬ್ದಗಳನ್ನು ಕನ್ನಡ ತನ್ನಲ್ಲಿ ಅಳವಡಿಸಿಕೊಂಡಿದೆ. ಮಹಮ್ಮದೀಯರ ಆಳ್ವಿಕೆಯ ಅವಧಿಯಲ್ಲಿ ಪರ್ಷಿಯನ್ ಭಾಷೆಯಿಂದ ಅನೇಕ ಶಬ್ದಗಳು ಕನ್ನಡಕ್ಕೆ ಬಂದಿವೆ. ಅಸಂಖ್ಯಾತ ಇಂಗ್ಲಿಷ್ ಶಬ್ದಗಳು ಕನ್ನಡದ ಉಡುಪನ್ನು ಧರಿಸಿ ಒಳಗೆ ಬಂದು ಬಿಟ್ಟಿವೆ. ಸ್ವಾಭಾವಿಕವಾಗಿ ಗಡಿ ಜನರ ವ್ಯವಹಾರ ಸಂಪರ್ಕಗಳಿಂದ ನೆರೆಮಾತುಗಳಲ್ಲಿ ಕೊಳುಕೊಡುಗೆ ನಡೆಯುತ್ತಲೇ ಇದೆ. ಇದರಿಂದ ಕನ್ನಡವೂ ಅದರ ನೆರೆನುಡಿಗಳು ಪರಸ್ಪರ ಎರವುಗಳಿಂದ ಅಭಿವೃದ್ಧಿ ಹೊಂದುತ್ತಲಿವೆ. ಭಾಷೆಯಲ್ಲಿದ್ದ ಸಾಮಗ್ರಿಯನ್ನೇ ಉಪಯೋಗಿಸಿಕೊಂಡು ಭಾಷಾಭಿವೃದ್ಧಿಯನ್ನು ನುಡಿಗಟ್ಟುಗಳು ಮಾಡುತ್ತವೆ. ಇವೆ ಮೊದಲಾದ ವಿಧಾನಗಳಿಂದ ಕನ್ನಡಭಾಷೆ ಹದಗೊಂಡು ಸಮೃದ್ಧವಾಗಿ ರೂಪುಗೊಂಡಿದೆ.

36. ವಿದ್ಯಾರ್ಥಿ ಸ್ವಂತಿಕೆಯಾಗಿ ಬರೆಯುವುದು.

ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

37. **ಅ.** "ಆಂಗ್ಲಸಾಹಿತ್ಯ ಸಂಸ್ಕೃತಿಯು ದೇಸಿಯ ಭಾಷೆಗಳಲ್ಲಿ ಬರುವಂತಾಗಬೇಕು; ಎನ್ನುವುದು ಆಂಗ್ಲ ವಿದ್ಯಾಭ್ಯಾಸದ ಉದ್ದೇಶಗಳಲ್ಲೊಂದಾಗಿತ್ತು. ಆ ಶಿಕ್ಷಣದ ಋಣ ತೀರಿಸಿ ಸಾರ್ಥಕತೆ ಹೊಂದಿದ ಪ್ರಮುಖರೆಂದರೆ ಶ್ರೀಯವರು" ಎಂದು ಬೇಂದ್ರೆ ಶ್ರೀಯವರನ್ನು ಮೆಚ್ಚಿ ಬರೆದರು.

ಆ. 'ಇಂಗ್ಲಿಷ್ ಗೀತೆಗಳು' ಎಂಬ ಕೃತಿಯ ಮೂಲಕ ಹೊಸಗನ್ನಡದ ತಿಳಿಯಾದ ಭಾಷೆ, ಹಳೆಯದನ್ನು ಆಧರಿಸಿಯೂ ಹೊಸ ರೂಪತಾಳಿದ್ದ ಸುಗಮ ಲಯಗಳು, ಹೊಸಬಗೆಯ ಕಾವ್ಯವಸ್ತುಗಳು ಇದರ ಮೂಲಕ ಪ್ರಯೋಗವಾದವು.

ಪತ್ರಲೇಖನ ಬರೆಯುವುದು :

38.

ಸ್ಥಳ : ಹಾವೇರಿ
ದಿನಾಂಕ : ೨೩. ೦೬. ೨೦೨೬

ಇವರಿಂದ,
ಪ್ರದೀಪ
ಬಸವೇಶ್ವರನಗರ
ಹಾವೇರಿ

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಗಳು
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಹಾವೇರಿ

ಮಾನ್ಯರೆ,

ವಿಷಯ : <u>ಬಡಾವಣೆಯಲ್ಲಿ ಗ್ರಂಥಾಲಯವನ್ನು ಸ್ಥಾಪಿಸುವಂತೆ ಕೋರಿ.</u>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾವೇರಿಯ ಬಸವೇಶ್ವರನಗರ ಬಡಾವಣೆಯಲ್ಲಿ ಸುಮಾರು ಒಂದು ಸಾವಿರ ಜನಸಂಖ್ಯೆ ಇದೆ. ಇದಕ್ಕೆ ಪೂರಕವಾಗಿ ಸಮಯದ ಸದುಪಯೋಗಕ್ಕಾಗಿ ಯಾವುದೇ ಗ್ರಂಥಾಲಯವಿರುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು, ಯುವಕರು, ಹಿರಿಯರು ಬಿಡುವಿನ ಸಮಯದಲ್ಲಿ ಅಲ್ಲಿ ಇಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದಾರೆ. ಇದನ್ನು ತಪ್ಪಿಸಲು ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ಬಡಾವಣೆಯಲ್ಲಿ ಗ್ರಂಥಾಲಯದ ಶಾಖೆ ಅಗತ್ಯವಿದೆ. ಆದ್ದರಿಂದ ತಾವು ಒಂದು ಸುಸಜ್ಜಿತ ಗ್ರಂಥಾಲಯದ ಶಾಖೆಯೊಂದನ್ನು ಬಡಾವಣೆಯಲ್ಲಿ ಪ್ರಾರಂಭಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಪ್ರದೀಪ
(ಬಡಾವಣೆಯ ಪ್ರಮುಖರ ಸಹಿಗಳಿವೆ)

ಹೊರ ವಿಳಾಸ :

ಇವರಿಗೆ, ಮಾನ್ಯ ಜಿಲ್ಲಾಧಿಕಾರಿಗಳು ಜಿಲ್ಲಾಧಿಕಾರಿಗಳ ಕಾರ್ಯಾಲಯ ಹಾವೇರಿ	ಇವರಿಂದ, ಪ್ರದೀಪ ಬಸವೇಶ್ವರನಗರ ಹಾವೇರಿ

ಪ್ರಬಂಧ ಬರೆವಣಿಗೆ :

39. ರಾಷ್ಟ್ರೀಯ ಹಬ್ಬಗಳ ಮಹತ್ವ :

ಪೀಠಿಕೆ : ರಾಷ್ಟ್ರೀಯ ಹಬ್ಬಗಳು ಯಾವುದೇ ದೇಶದ ಏಕತೆ, ಸಾಕ್ಷರತೆ ಮತ್ತು ಹೆಮ್ಮೆಯ ಸಂಕೇತವಾಗಿವೆ. ಭಾರತದಂತಹ ವೈವಿಧ್ಯಮಯ ಸಂಸ್ಕೃತಿ ಹೊಂದಿರುವ ದೇಶದಲ್ಲಿ, ರಾಷ್ಟ್ರೀಯ ಹಬ್ಬಗಳು ಎಲ್ಲ ಧರ್ಮ, ಜಾತಿ ಮತ್ತು ಪ್ರಾಂತ್ಯಗಳ ಜನರನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುವ ಶಕ್ತಿಯನ್ನು ಹೊಂದಿವೆ. ಈ ಹಬ್ಬಗಳು ಕೇವಲ ರಜಾದಿನಗಳಲ್ಲ, ಬದಲಿಗೆ ದೇಶದ ಇತಿಹಾಸ ಮತ್ತು ವೀರರ ತ್ಯಾಗವನ್ನು ನೆನಪಿಸುವ ಪವಿತ್ರ ದಿನಗಳಾಗಿವೆ.

ನಿರೂಪಣೆ : ಭಾರತದಲ್ಲಿ ಪ್ರಮುಖವಾಗಿ ಮೂರು ರಾಷ್ಟ್ರೀಯ ಹಬ್ಬಗಳನ್ನು ದೇಶಾದ್ಯಂತ ಅತ್ಯಂತ ಸಡಗರ ಮತ್ತು ಗೌರವದಿಂದ ಆಚರಿಸಲಾಗುತ್ತದೆ.

ಸ್ವಾತಂತ್ರ್ಯ ದಿನಾಚರಣೆ (ಆಗಸ್ಟ್ ೧೫) : ಬ್ರಿಟಿಷರ ದಾಸ್ಯದಿಂದ ಭಾರತ ಮುಕ್ತವಾದ ದಿನವನ್ನು ಇದು ನೆನಪಿಸುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ವೀರ ಯೋಧರು ಮತ್ತು ನಾಯಕರನ್ನು ಈ ದಿನ ಸ್ಮರಿಸಲಾಗುತ್ತದೆ.

ಗಣರಾಜ್ಯೋತ್ಸವ (ಜನವರಿ ೨೬) : ಭಾರತದ ಸಂವಿಧಾನ ಜಾರಿಗೆ ಬಂದು, ನಮ್ಮ ದೇಶವು ಸಾರ್ವಭೌಮ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಹೊರಹೊಮ್ಮಿದ ದಿನವಿದು. ದೆಹಲಿಯ ರಾಜಪಥ್‌ನಲ್ಲಿ ನಡೆಯುವ ಪೆರೇಡ್ ಈ ದಿನದ ಪ್ರಮುಖ ಆಕರ್ಷಣೆಯಾಗಿದೆ.

ಗಾಂಧಿ ಜಯಂತಿ (ಅಕ್ಟೋಬರ್ ೨) : ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಜನ್ಮದಿನವನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸಲಾಗುತ್ತದೆ. ಇಡೀ ವಿಶ್ವವೇ ಈ ದಿನವನ್ನು ಅಹಿಂಸಾ ದಿನವನ್ನಾಗಿ ಆಚರಿಸುತ್ತದೆ.

ರಾಷ್ಟ್ರೀಯ ಹಬ್ಬಗಳು ದೇಶದ ನಾಗರಿಕರಲ್ಲಿ ಹಲವಾರು ಪ್ರಮುಖ ಮೌಲ್ಯಗಳನ್ನು ಜಾಗೃತಗೊಳಿಸುತ್ತವೆ.

ಏಕತೆ ಮತ್ತು ಸಮಗ್ರತೆ : ಭಾರತವು ವಿವಿಧ ಭಾಷೆ, ಧರ್ಮ ಮತ್ತು ಆಚಾರ-ವಿಚಾರಗಳನ್ನು ಹೊಂದಿರುವ ದೇಶ. ಆದರೆ ರಾಷ್ಟ್ರೀಯ ಹಬ್ಬಗಳಂದು ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡುತ್ತದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಪ್ರತಿಯೊಬ್ಬ ನಾಗರಿಕನೂ ದೇಶದ ಧ್ವಜಕ್ಕೆ ಗೌರವ ಸಲ್ಲಿಸುತ್ತಾನೆ.

ದೇಶಭಕ್ತಿಯ ಜಾಗೃತಿ : ಇಂದಿನ ಯುವ ಪೀಳಿಗೆಗೆ ದೇಶದ ಇತಿಹಾಸ ಮತ್ತು ನಮ್ಮ ಪೂರ್ವಜರು ಪಟ್ಟ ಕಷ್ಟಗಳನ್ನು ತಿಳಿಸಲು ಈ ಹಬ್ಬಗಳು ಅತ್ಯಗತ್ಯ. ಶಾಲೆ ಮತ್ತು ಕಾಲೇಜುಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ದೇಶಪ್ರೇಮವನ್ನು ಬಿತ್ತುತ್ತವೆ.

ತ್ಯಾಗದ ಸ್ಮರಣೆ : ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯದ ಹಿಂದೆ ಲಕ್ಷಾಂತರ ದೇಶಭಕ್ತರ ಬಲಿದಾನವಿದೆ. ರಾಷ್ಟ್ರೀಯ ಹಬ್ಬಗಳು ಭಗತ್ ಸಿಂಗ್, ಮಹಾತ್ಮಾ ಗಾಂಧಿ, ಸುಭಾಷ್ ಚಂದ್ರ ಬೋಸ್ ಮುಂತಾದ ಮಹನೀಯರ ಆದರ್ಶಗಳನ್ನು ಮರುಕಳಿಸುವಂತೆ ಮಾಡುತ್ತವೆ.

ಜವಾಬ್ದಾರಿಯ ಅರಿವು : ಗಣರಾಜ್ಯೋತ್ಸವದಂತಹ ದಿನಗಳು ಸಂವಿಧಾನ ನಮಗೆ ನೀಡಿರುವ ಹಕ್ಕುಗಳ ಜೊತೆಗೆ, ನಾವು ದೇಶಕ್ಕೆ ಸಲ್ಲಿಸಬೇಕಾದ ಕರ್ತವ್ಯಗಳನ್ನು ನೆನಪಿಸುತ್ತವೆ. ಇದು ಪ್ರತಿಯೊಬ್ಬರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುತ್ತದೆ.

ರಾಷ್ಟ್ರೀಯ ಹಬ್ಬಗಳನ್ನು ದೇಶದ ಪ್ರತಿಯೊಂದು ಹಳ್ಳಿ, ಪಟ್ಟಣ ಮತ್ತು ನಗರಗಳಲ್ಲಿ ಆಚರಿಸಲಾಗುತ್ತದೆ. ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಚೇರಿಗಳು ಮತ್ತು ಸಾರ್ವಜನಿಕ

ಸ್ಥಳಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಲಾಗುತ್ತದೆ. ರಾಷ್ಟ್ರಗೀತೆಯನ್ನು ಹಾಡಿ, ಸಿಹಿ ಹಂಚಿ ಸಂಭ್ರಮಿಸಲಾಗುತ್ತದೆ. ದೇಶದ ಪ್ರಧಾನಮಂತ್ರಿಯವರು ಕೆಂಪುಕೋಟೆಯ ಮೇಲೆ ಧ್ವಜಾರೋಹಣ ಮಾಡಿ ದೇಶವನ್ನುದ್ದೇಶಿಸಿ ಭಾಷಣ ಮಾಡುತ್ತಾರೆ. ಈ ದಿನಗಳಲ್ಲಿ ದೇಶದ ರಕ್ಷಣೆಗಾಗಿ ಹೋರಾಡಿದ ವೀರ ಯೋಧರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ.

ಉಪಸಂಹಾರ : ರಾಷ್ಟ್ರೀಯ ಹಬ್ಬಗಳು ಕೇವಲ ಒಂದು ದಿನದ ಆಚರಣೆಗೆ ಸೀಮಿತವಾಗಬಾರದು. ಅವುಗಳು ಬಿತ್ತುವ ದೇಶಪ್ರೇಮ, ಸೋದರಭಾವ ಮತ್ತು ಏಕತೆಯ ಸಂದೇಶ ನಮ್ಮ ದೈನಂದಿನ ಜೀವನದಲ್ಲಿಯೂ ಪ್ರತಿಫಲಿಸಬೇಕು. ದೇಶದ ಪ್ರಗತಿಗಾಗಿ ಮತ್ತು ಶಾಂತಿಗಾಗಿ ನಾವೆಲ್ಲರೂ ಶ್ರಮಿಸುವುದೇ ಈ ಹಬ್ಬಗಳಿಗೆ ನಾವು ನೀಡುವ ನಿಜವಾದ ಗೌರವವಾಗಿದೆ.

"ಮಾತೃ ಧರ್ಮಗಳನೇಕ, ಮಾತೃ ಭಾಷೆಗಳನೇಕ ಆದರೆ ಮಾತೃಭೂಮಿ ಒಂದೇ ಅದು ಭಾರತ. ಇದಕ್ಕಾಗಿ ದುಡಿಯೋಣ".

ಗದ್ಯಪಾಠ 2. ವ್ಯಾಘ್ರಗೀತೆ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಬಿ) ಕರಣಾರ್ಥ
2. (ಎ) ಸಂಪ್ರದಾನ
3. (ಬಿ) ಒಳ್
4. (ಡಿ) ಅಂ
5. (ಸಿ) ಸಪ್ತಮೀ
6. (ಡಿ) ಚತುರ್ಥೀ
7. (ಎ) ಅಧಿಕರಣ
8. (ಡಿ) ಕರ್ಮಾರ್ಥ
9. (ಡಿ) ಸಪ್ತಮೀ
10. (ಸಿ) ಸಪ್ತಮೀ

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :

11. ತೃತೀಯಾ
12. ಅಪಾದಾನ
13. ದ್ವಿತೀಯಾ
14. ಸಪ್ತಮೀ
15. ದ್ವಿತೀಯಾ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

16. ಭಗವದ್ಗೀತೆಯನ್ನು ರಚಿಸಿದವರು ವೇದವ್ಯಾಸರು.
17. ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.
18. ಹುಲಿಗೆ ತಮ್ಮ ಮುಖ ದರ್ಶನವಾಗದಂತೆ ತಪ್ಪಿಸಿಕೊಳ್ಳುವ ದೊಂಬರಾಟದಲ್ಲಿ ಕುಲಾಲಚಕ್ರದಂತೆ ತಿರುಗಿದ್ದರಿಂದ ಶಾನುಭೋಗರಿಗೆ ತಲೆಸುತ್ತಲಾರಂಭಿಸಿತು.
19. ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿಪುಸ್ತಕ.
20. ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.
21. ಶಾನುಭೋಗರ ರಾಜಭಕ್ತಿಯ ಲಾಂಛನ ಖಿರ್ದಿಪುಸ್ತಕ.
22. ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತೆಗೆದುಕೊಂಡು ಹೋಗಿದ್ದ ರೈತರು ಶಾನುಭೋಗರನ್ನು ಮೂರ್ಛೆಯಿಂದ ಎಚ್ಚರಿಸಿದರು.
23. ಶಾನುಭೋಗರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಾಗಿತ್ತು.
24. ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಇರಸಾಲಿಗಾಗಿ ಹೋಗಿದ್ದರು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

25. ಶಾನುಭೋಗರು ತಮ್ಮ ಹಳ್ಳಿಯನ್ನು ತಲಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. ಅದು ಕಾಡು ದಾರಿ, ಬೆಳುದಿಂಗಳ ದಿನ; ಆದರೂ ಮದಲಿಂಗನ ಕಣಿವೆಗೆ ಬರುವಾಗ ರಾತ್ರಿಯಾಗಿತ್ತು. ಸ್ವಲ್ಪದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಯೋಚಿಸಿದರು.

26. ಭರತ ಖಂಡದ ಹುಲಿಗಳು ಧರ್ಮಶ್ರದ್ಧೆಯನ್ನು ಅನುಸರಿಸಿ ಬೇಟೆಯಾಡುತ್ತವೆ. ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಮಹರ್ಷಿ ವೇದವ್ಯಾಸರಿಂದ ರಚಿತವಾದ ಭಗದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಇಂತಹ ಈ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮದಿಂದ ನಡೆದುಕೊಳ್ಳುವುದಿಲ್ಲ. ಯಾರನ್ನೇ ಆಗಲಿ, ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನುತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ ಎಂದು ಹಿಂದಿನಿಂದ ಹಾರಿ ಕೊಲ್ಲದಿರಲು ನಿರ್ಧರಿಸಿತು.

27. ಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗಿ ಬರುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರಿದಾರಿಯಿದೆ ಎನ್ನುವಾಗ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳು ಕಣಿಹಾಕಿಕೊಂಡು ನಿಂತವು. ಅತ್ತ ಎತ್ತುಗಳ ಘಂಟೆಯ ಶಬ್ದ ಮತ್ತು ರೈತರ ಮಾತು ಕೇಳಿ ನಿರಾಶೆಯಿಂದಲೂ ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು. ಗಾಡಿಯವರು ಸ್ವಲ್ಪ ಹೊತ್ತು ಗಾಡಿಯ ಬಳಿಯಲ್ಲೇ ನಿಂತರು. ಮತ್ತೆ ಹುಲಿಯ ಗರ್ಜನೆ ಕೇಳಲಿಲ್ಲ. ಅನಂತರ ಅವರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

28. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರಿದಾರಿಯಿದೆ ಎನ್ನುವಾಗ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳು ಮುಂದೆ ಹೋಗದೆ ಕಣಿಹಾಕಿಕೊಂಡವು ಅದೇ ವೇಳೆಗೆ ಎದೆ ನಡುಗುವಂತೆ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು. ನಂತರ ರೈತರ ಮಾತು ಕೇಳಿ ಬಂದ ಮೇಲೆ ಹುಲಿಯು ನಿರಾಶೆಯಿಂದಲೂ ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು.

ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

29. **ಎ. ಎನ್. ಮೂರ್ತಿರಾವ್ :** ಎ. ಎನ್. ಮೂರ್ತಿರಾವ್‌ರವರು ಸಾ. ಶ. ೧೯೦೦ ರಂದು ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು. ಶ್ರೀಯುತರು 'ಹಗಲುಗನಸುಗಳು, ಅಲೆಯುವಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಮಿನುಗು-ಮಿಂಚು, ಪೂರ್ವಸೂರಿಗಳೊಡನೆ, ಚಂಡಮಾರುತ, ದೇವರು' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ಗೌರವ ಡಿ.ಲಿಟ್. ಪ್ರಶಸ್ತಿಗಳು ಲಭಿಸಿವೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

30. ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ : ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ. ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

ಮನುಷ್ಯನು ತನ್‌ನ ಉತ್ತಮವಾದ ಜೀವನ, ಭವಿಷ್ಯವವನ್ನು ನಿರ್ಮಿಸಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದರೆಗಳಿಗೆ ಸಾಕು. "ಕಟ್ಟುವುದು ಕಠಿಣ ; ಕೆಡಿಸುವುದು ಸುಲಭ" ಎಂಬ ಗಾದೆಯು ಇದೆ ಅರ್ಥವನ್ನು ಹೋಲುತ್ತದೆ. ಒಬ್ಬ ಕುಂಬಾರ ಮಡಿಕೆಗಳನ್ನು ಮಾಡಲು ಮಣ್ಣು ತಂದು ಹರಳನ್ನು ಬೇರ್ಪಡಿಸಿ ಮಣ್ಣನ್ನು ಹದಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು. ಒಂದು ಕಾರ್ಯ ಯಶಸ್ವಿಯಾಗಲು ಬಹಳ ಶ್ರಮವೂ, ಸಮಯವೂ ಅತ್ಯಗತ್ಯ. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಬಹಳ ಸಮಯ ನೀಡಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣ ಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿಹಾಕಿದರು. ಒಂದು ಕೊಡ ಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ? ಆದ್ದರಿಂದ ಮಾನವ ತನ್ನ ಘನತೆಯನ್ನರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಮಾಡುವುದು :

31. "ಶಾನುಭೋಗರ ವದನಾರವಿಂದದಲ್ಲಿ ಮುಗುಳುನಗೆ ಮೂಡಿತು."

ಅಲಂಕಾರದ ಹೆಸರು : ರೂಪಕಾಲಂಕಾರ

ಲಕ್ಷಣ : ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವುದೇ ರೂಪಕಾಲಂಕಾರ.

ಸಮನ್ವಯ : ಉಪಮೇಯ : ಶಾನುಭೋಗರ ವದನ

ಉಪಮಾನ : ಅರವಿಂದ

ಇಲ್ಲಿ ಉಪಮೇಯವಾದ 'ಶಾನುಭೋಗರ ವದನ' ಹಾಗೂ ಉಪಮಾನವಾದ 'ಅರವಿಂದ' ಇವೆರಡರ ನಡುವೆ ಅಭೇದವನ್ನು ರೂಪಿಸಿರುವುದರಿಂದ ಇದು 'ರೂಪಕಾಲಂಕಾರದ' ಲಕ್ಷ್ಯವಾಗಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

32. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಹುಲಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕೆಂದು ಪ್ರಯತ್ನಿಸಿ ವಿಫಲವಾದಾಗ ಬೆನ್ನ ಹಿಂದಿನಿಂದ ಬಿದ್ದೇ ಬಿಡಲೆ ಎಂದು ಅದರ ಮನಸಿನಲ್ಲಿ ಗೊಂದಲ. ಆದರೆ ಆಗೊಂದಲ ಕ್ಷಣಕಾಲಕ್ಕಿಂತಲೂ ಹೆಚ್ಚಾಗಿ ನಿಲ್ಲಲಿಲ್ಲ. ಅದು ಸದ್ವಂಶದಲ್ಲಿ ಜನಿಸಿದ ಹುಲಿಯಾದ್ದರಿಂದ ಆ ಪುಣ್ಯಕೋಟಿ ಹಸು ಆಹ್ವಾನ ಕೊಟ್ಟಾಗ ತನ್ನ ಅಜ್ಜ ಬಾಯಿ ಚಪ್ಪರಿಸಿಕೊಂಡು ಹಸುವನ್ನು ತಿನ್ನಬಹುದಾಗಿತ್ತು. ಆದರೂ ಆ ಹುಲಿರಾಯ

ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಪ್ರಾಣ ಬಿಟ್ಟಿತು. ಅಂಥ ಹುಲಿಯ ಮೊಮ್ಮಗನಾಗಿ ಹುಟ್ಟಿ ತಾನು ಅಧರ್ಮಕ್ಕೆ ಕೈ ಹಾಕುವುದೆ? ಎಂದು ಹುಲಿ ಯೋಚಿಸಿದ ಸಂದರ್ಭದಲ್ಲಿ ಮೇಲಿನ ಮಾತು ಬದಿದೆ..

ಸ್ವಾರಸ್ಯ : ಪುಣ್ಯಕೋಟಿ ಕಥೆಯಲ್ಲಿನ ವ್ಯಾಘ್ರನ ಆದರ್ಶತನ ತನಗೆ ಮಾದರಿಯಾದದ್ದು ಎಂಬ ಈ ಹುಲಿಯ ಚಿಂತನೆ, ಧರ್ಮಶ್ರದ್ದೆ ಇಲ್ಲಿ ಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತವಾಗಿದೆ.

33. "ದೇವರೆ, ಮರಹತ್ತುವಷ್ಟು ಅವಕಾಶ ಕರುಣಿಸು."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖಕ್ಕೆ ಎಸೆದಾಗ ಅದರ ಮುಖಕ್ಕೆ ಬಂದು ಬಡಿಯಿತು. ಆದರೆ ಹುಲಿಗೆ ಪೆಟ್ಟೇನೂ ಆಗಲಿಲ್ಲ. ಆ ಅರೆನಿಮಿಷದಲ್ಲಿ ಶಾನುಭೋಗರು "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು" ಎನ್ನುತ್ತಾ ಒಂದೇ ಉಸಿರಿನಲ್ಲಿ ಮರದ ಕಡೆಗೆ ಧಾವಿಸಿದ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಶಾನು ಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ತನ್ನೆಲ್ಲಾ ಪ್ರಯತ್ನಗಳನ್ನು ಮಾಡಿದಾಗಿಯೂ, ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯ ಪೂರ್ಣವಾಗಿದೆ.

34. "ನಾನು ಮುಖಮೇಲಾಗಿ ಬಿದ್ದಿದ್ದೆನೆ?"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಈ ಮಾತನ್ನು ಶಾನುಭೋಗರು ಗಾಡಿಯವರಿಗೆ ಕೇಳಿದರು. ಶಾನುಭೋಗರು ಪ್ರಜ್ಞೆತಪ್ಪಿ ಬಿದ್ದಿದ್ದಾಗ ಅದೇ ದಾರಿಯಲ್ಲಿ ಗಾಡಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರಚಿ ಎಚ್ಚರಿಸಿದ ಸಂದರ್ಭದಲ್ಲಿ ಅವರ ಮನಸ್ಸನ್ನೆಲ್ಲಾ ವಿಸ್ಮಯ ಆವರಿಸಿತ್ತು. ತಾವು ಉಳಿದದ್ದು ಹೇಗೆ? ನಿಸ್ಸಹಾಯರಾಗಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾಗ ಹುಲಿ ತಮ್ಮನ್ನು ಎಳೆದುಕೊಂಡು ಹೋಗಲಿಲ್ಲವೇಕೆ? ಎಂದು ಸ್ವಲ್ಪಹೊತ್ತು ಯೋಚಿಸಿ ಗಾಡಿಯವರನ್ನು ಮೇಲಿನಂತೆ ಎಂದು ಕೇಳಿದ ಸಂದರ್ಭವಾಗಿದೆ.

ಸ್ವಾರಸ್ಯ : ನಾನು ಪ್ರಜ್ಞೆತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದು ಕೊಂಡು ಹೋಗಲಿಲ್ಲ ಎಂಬ ಸಮಸ್ಯೆಗೆ ಶಾನುಭೋಗರು ಕೊನೆಯವರೆಗೂ ಆ ಪ್ರಾಣಿ ತನ್ನ ಕುಲ ಧರ್ಮವನ್ನು ಪಾಲಿಸಿಕೊಂಡೇ ಬಂದಿದೆ ಎಂಬ ಉತ್ತರ ಕಂಡುಕೊಳ್ಳುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

35. "ಹುಲಿ ಈಗ ಎಷ್ಟು ಹಸಿದಿರಬೇಕು."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶಾನುಭೋಗರು 'ಕುಡಿದ ನೀರು ಅಲುಗದ ಹಾಗೆ' ಎನ್ನಲಾಗದಿದ್ದರೂ ಹುಲಿಯಿಂದ ತಪ್ಪಿಸಿಕೊಂಡು ಜೀವ ಸಹಿತ ಮನೆ ಸೇರಿಕೊಂಡರು. ನಂತರ ರಸದೂಟವನ್ನು ಮಾಡುವ ಸಂದರ್ಭದಲ್ಲಿ ಶಾನುಭೋಗರು ಅನಂತ ವಾತ್ಸಲ್ಯದಿಂದ ಖಿರ್ದಿ ಪುಸ್ತಕವನ್ನು

ನೋಡುತ್ತಾ, ಹುಲಿಯ ಬಗ್ಗೆ ಯೋಚನೆ ಮೂಡಿ ಅವರ ವದನಾರವಿಂದದಲ್ಲಿ ಮುಗುಳು ನಗೆ ಮೂಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ನಾನು ಹುಲಿಯಿಂದ ತಪ್ಪಿಸಿಕೊಂಡು ಬಂದು ರಸದೂಟವನ್ನು ಮಾಡುತ್ತಿದ್ದೇನೆ. ಆದರೆ ತನ್ನ ಧರ್ಮಶ್ರದ್ಧೆಯಿಂದ ನನ್ನನ್ನು ಬಿಟ್ಟ ಆ ಹುಲಿ ಹಸಿವಿನಿಂದ ಬಳಲುತ್ತಿರಬಹುದು ಎಂದು ಶಾನುಭೋಗರ ಮಾನವೀಯ ಗುಣ ಸ್ವಾರಸ್ಯಪೂರ್ಣವಾಗಿದೆ.

36. "ಮಡಿಯ ಬೇಕಾದರೆ ಮಾಡಿಯೇ ಮಡಿಯುತ್ತೇನೆ."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶಾನುಭೋಗರು ಹುಲಿಯ ದಾಳಿಯಿಂದ ಪ್ರಾಣವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುವಾಗ ಅವರ ತಲೆ ಸುತ್ತಲಾರಂಭಿಸಿತು. ಆ ವಿಪತ್ತಿನ ವೇಳೆ ಅವರು ತಮ್ಮ ಖಿರ್ದಿ ಪುಸ್ತಕದಿಂದ ಹುಲಿಯನ್ನು ಹೊಡೆದು ತಪ್ಪಿಸಿಕೊಳ್ಳಬಹುದೆಂದು ಯೋಚಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ರಣರಂಗವನ್ನು ಪ್ರವೇಶಿಸಿದವನು ಶತ್ರುವಿನೊಡನೆ ಹೋರಾಡಿ ಗೆಲ್ಲಬೇಕು ಇಲ್ಲವೇ ವೀರ ಮರಣವನ್ನು ಒಪ್ಪಬೇಕು ಎನ್ನುವಂತೆ ಸುಲಭವಾಗಿ ಹುಲಿಗೆ ತಾವು ಆಹಾರವಾಗಬೇಕಿಲ್ಲ ಎಂದು ಶಾನುಭೋಗರು ಸಂದರ್ಭೋಚಿತವಾಗಿ ಯೋಚಿಸಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

37. ತಿನ್ನುವುದೊಂದೆ ಹುಲಿಯ ಸ್ವಭಾವ ಎಂದು ಭಾವಿಸುವವರು ಸಾಕಷ್ಟು ಜನರಿದ್ದಾರೆ. ಆದರೆ ಹುಲಿ ಆಹಾರಕ್ಕಾಗಿ ಬೇಟೆಯಾಡಿ ಪ್ರಾಣಿಗಳನ್ನು ಕೊಂದು ತಿನ್ನುವುದೇನೋ ಉಂಟು. ಆದರೆ ನಿಷ್ಪಕ್ಷಪಾತವಾದ ದೃಷ್ಟಿಯಿಂದ ನೋಡಿದರೆ ಅದರಲ್ಲಿ ತಪ್ಪೇನು ಇಲ್ಲ. ಯಾಕೆಂದರೆ ಅವು ಮೂಲತಃ ಮಾಂಸಹಾರಿಗಳು. ಶಾಕಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಮಾಂಸಹಾರಿಯಾದ ಹುಲಿಯಲ್ಲಿ ಅದೊಂದು ದೊಡ್ಡ ಅಪರಾಧವೇನಲ್ಲ. ಅದು ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದರಲ್ಲೇನೂ ತಪ್ಪಿಲ್ಲ. ಆದರೆ ಕೊಲ್ಲುವಾಗ ಯಾವುದಾದರೊಂದು ಧರ್ಮವನ್ನು ಅನುಸರಿಸಿ ಕೊಲ್ಲುತ್ತದೆಯೇ ಅಥವಾ ಧರ್ಮಾಧರ್ಮಗಳ ಲೆಕ್ಕವನ್ನೇ ಇಡದೆ ಸ್ವಚ್ಛಂದದಿಂದ ವರ್ತಿಸುತ್ತದೆಯೇ ಎಂಬುದೇ ಇಲ್ಲಿ ಮುಖ್ಯಪ್ರಶ್ನೆ. ಹುಲಿಗೆ ಧರ್ಮವೇನು ಬಂತು ಎನ್ನಬಹುದು. ಇತರ ದೇಶಗಳಲ್ಲಿರುವ ಹುಲಿಗಳ ವಿಷಯ ಹೇಗೋ ತಿಳಿಯದು ಆದರೆ ಭರತ ಖಂಡದ ಹುಲಿಗಳು ಧರ್ಮಶ್ರದ್ಧೆಯನ್ನು ಅನುಸರಿಸಿ ಬೇಟೆಯಾಡುತ್ತವೆ. ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಮಹರ್ಷಿ ವೇದವ್ಯಾಸರಿಂದ ರಚಿತವಾದ ಭಗದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಇಂತಹ ಈ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮದಿಂದ ನಡೆದುಕೊಳ್ಳುವುದಿಲ್ಲ. ಯಾರನ್ನೇ ಆಗಲಿ, ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನುತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಆದ್ದರಿಂದಲೇ ಹುಲಿಯು ಶಾನುಭೋಗರನ್ನು ಹಿಂದಿನಿಂದ ಹಾರಿಕೊಲ್ಲಲಿಲ್ಲ ಎಂದು ಮೂರ್ತಿರಾಯರು ಹುಲಿ ಬೇಟೆಯಾಡುವ ಬಗೆಯನ್ನು ವಿವರಿಸಿದ್ದಾರೆ.

38. "ಧರ್ಮೋ ರಕ್ಷತಿ ರಕ್ಷಿತಃ" ಎಂಬ ಮಾತಿನಂತೆ ಹುಲಿಯ ಧರ್ಮಶ್ರದ್ಧೆ ಶಾನುಭೋಗರ ಪ್ರಾಣವನ್ನು ರಕ್ಷಿಸುತ್ತದೆ. ಶಾನುಭೋಗರು ಚಿಕ್ಕನಾಯಕನಹಳ್ಳಿಯಿಂದ ಹಿಂದಿರುಗುವಾಗ ಹುಲಿಯ ಬಾಯಿಗೆ ತುತ್ತಾಗುವ ಅಪಾಯದಿಂದ ಪಾರಾಗುತ್ತಾರೆ. ಇದಕ್ಕೆಲ್ಲ ಅಂದು ಅವರು ಮಾಡಿದ ಹೋರಾಟವಲ್ಲ; ಅವರ ಪರಿಶ್ರಮಕ್ಕಿಂತ ಹುಲಿಯು ತನ್ನ ವಂಶಪಾರಂಪರ್ಯವಾಗಿ ಅನುಸರಿಸಿಕೊಂಡು ಬಂದಂತಹ ಸಂಪ್ರದಾಯ, ನಂಬಿಕೆ, ನಡೆದು ಬಂದ ದಾರಿ, ನೀತಿಯನ್ನು ಪಾಲಿಸಿದ ಪರಿಣಾಮ ಶಾನುಭೋಗರು ರಕ್ಷಿಸಲ್ಪಟ್ಟರು ಎಂಬುದು ಗಮನಾರ್ಹ. ಏಕೆಂದರೆ ಹುಲಿಯು ಮೊದಲ ಬಾರಿಗೆ ತಿನ್ನಲು ಬಯಸಿ ಬಂದಾಗ ಹಿಂದಿನಿಂದ ಹಾರಿ ಕೊಂದರೆ ಆಗ ಶಾನುಭೋಗರಿಗೆ ಬೇರೆ ಯಾವ ಆಯ್ಕೆಗಳೇ ಇರಲಿಲ್ಲ. ಎದುರಿಗೆ ಸಿಕ್ಕ ಆಹಾರವನ್ನು ಭಕ್ಷಿಸದೆ, ಧರ್ಮಾಧರ್ಮಗಳ ಲೆಕ್ಕವನ್ನು ಇಡದೆ ಹುಲಿಯು ವರ್ತಿಸಿದ್ದರೆ ಶಾನುಭೋಗರು ಬದುಕುಳಿಯಲು ಸಾಧ್ಯವಿರಲಿಲ್ಲ. ಅವರಿಗೆ ಭಯಂಕರವಾದ ಹುಲಿಯಿಂದ ಬದುಕುಳಿಯುವ ಉಪಾಯವೂ ಅಂದು ಹೊಳೆದಿರಲಿಲ್ಲ. ಆದ್ದರಿಂದ ಶಾನುಭೋಗರು ಅಪ್ರಯತ್ನಪೂರ್ವಕವಾಗಿ ಸಹಜವಾಗಿ ಖಿರ್ದಿಪುಸ್ತಕವನ್ನು ಬೀಸುತ್ತಿದ್ದರೂ ಅದರಿಂದ ಹುಲಿಗೆ ಯಾವ ಭಯವೂ ಇರಲಿಲ್ಲ. ಆದರೆ ಹುಲಿಗೆ ಕಾಡಿದ್ದು ಹಿಂದಿನಿಂದ ಹಾರಿ ಕೊಲ್ಲಬಾರದೆಂಬ ಧರ್ಮಶ್ರದ್ಧೆ ಮಾತ್ರ. ತನ್ನ ಹೊಟ್ಟೆ ಹಸಿದಿದ್ದರೂ ಸಹ ಆ ಸಂದರ್ಭದಲ್ಲಿ ತನ್ನ ಧರ್ಮವನ್ನು ಬಿಟ್ಟುಕೊಡಲಿಲ್ಲ. ಹಾಗಾಗಿ ಶಾನುಭೋಗರು ಜೀವವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಆದ್ದರಿಂದ ಶಾನುಭೋಗರು ರಕ್ಷಣೆಯಾದದ್ದು ಹುಲಿಯ ಧರ್ಮಶ್ರದ್ಧೆಯಿಂದ ಎಂಬುದು ಸಮರ್ಥನೀಯವಾಗಿದೆ.

ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

39. **ಅ.** ಧರ್ಮವೆಂದರೆ ಅಗ್ರಾಹ್ಯವಾದ ಜಟಿಲ ಜಾಲವಲ್ಲ, ಒಂದು ವರ್ಗದ ಸ್ವತ್ತಲ್ಲ ಎಲ್ಲರ ಆಸ್ತಿಯಾಗಬೇಕು. ಎಲ್ಲರ ಅಭ್ಯುದಯಕ್ಕೆ ಕಾರಣವಾಗಬೇಕು ಎಂಬುದು ಧರ್ಮದ ಬಗೆಗೆ ಬಸವಣ್ಣನವರ ನಿಲುವು ಆಗಿತ್ತು.

ಆ. ಸತ್ಯ ಅಹಿಂಸೆಗಳ ಅನುಷ್ಠಾನ, ಜಾತಿ ನಿರ್ಮೂಲನೆ, ಅಸ್ಪೃಶ್ಯತಾ ನಿವಾರಣೆ ಇಂದಿಗೂ ಅವಶ್ಯವೂ, ಅನಿವಾರ್ಯವೂ ಆಗಿದೆ. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದು ಹೇಳಿ, ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ ಎಂದು ಬಸವಣ್ಣನವರು ವ್ಯಾಖ್ಯಾನಿಸಿದರು. `ದೇವನೊಬ್ಬ ನಾಮ ಹಲವು' ಎಂದು ಬಹು ದೇವೋಪಾಸನೆಯನ್ನು ಖಂಡಿಸಿ, ಅಂತರಂಗ ಬಹಿರಂಗಗಳ ಸಾಮರಸ್ಯವನ್ನು ತಿಳಿಸಿ, ನುಡಿಗೆ ತಕ್ಕ ನಡೆಯಿರಬೇಕು ಎಂದರು. ಕಾಯಕ ತತ್ತ್ವಕ್ಕೆ ಪ್ರಾಧಾನ್ಯತೆ ನೀಡಿದರು. ಆದ್ದರಿಂದಲೇ ಬಸವಣ್ಣನವರು ಒಬ್ಬ ಕ್ರಾಂತಿಕಾರಿ ಎನಿಸಿಕೊಂಡಿದ್ದಾರೆ.

ಪತ್ರಲೇಖನ ಬರೆಯುವುದು :

40. ಕ್ಷೇಮ ಶ್ರೀ

ಇವರಿಂದ,
ಸ್ವರಾ
೧೦ ನೆಯ ತರಗತಿ,
ಸಕಾರಿ ಪ್ರೌಢಶಾಲೆ,
ಧಾರವಾಡ
ದಿನಾಂಕ: ೧೨.೧೭.೨೦೨೬

ತೀರ್ಥರೂಪರವರಿಗೆ,

ನಿಮ್ಮ ಮಗಳಾದ ಸ್ವರಾ ಮಾಡುವ ನಮಸ್ಕಾರಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನೀವು ಅಲ್ಲಿ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.

ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ನಿಮ್ಮ ಆಸೆಯಂತೆ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು ವೇಳಾಪಟ್ಟಿ ತಯಾರಿಸಿಕೊಂಡು ಓದುತ್ತಿದ್ದೇನೆ. ಈ ವರ್ಷ ವಾರ್ಷಿಕ ಪರೀಕ್ಷೆಯಲ್ಲಿ ಕಂಡಿತಾ ಒಳ್ಳೆಯ ಅಂಕಗಳಿಸುತ್ತೇನೆ. ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ, ಶಾಲೆಯಲ್ಲಿ ಈ ಬಾರಿ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ದಿನಾಂಕ ೧೫.೦೭.೨೦೨೬ ರಂದು ಏರ್ಪಡಿಸಿರುತ್ತಾರೆ. ಕವಿ ಕುವೆಂಪುರವರ ಸ್ಥಳವಾದ ಕುಪ್ಪಳ್ಳಿ ಗ್ರಾಮಕ್ಕೆ ಭೇಟಿ ನೀಡಲಿದ್ದು, ನಮ್ಮ ವರ್ಗ ಶಿಕ್ಷಕರು ಕಡ್ಡಾಯವಾಗಿ ಎಲ್ಲರೂ ಬರಬೇಕೆಂದು ತಿಳಿಸಿರುತ್ತಾರೆ. ತಾವು ಕೂಡ ಪ್ರವಾಸಕ್ಕೆ ಹೋಗಲು ಅನುಮತಿ ನೀಡುತ್ತೀರಿ ಎಂಬ ನಂಬಿಕೆಯಿಂದ ನಾನು ನನ್ನ ಹೆಸರನ್ನು ಬರೆಯಿಸಿದ್ದೇನೆ. ಆದ್ದರಿಂದ ತಾವು ನನಗೆ ಆದಷ್ಟು ಬೇಗನೆ ಪ್ರವಾಸಕ್ಕೆ ತೆರಳಲು ೧೦೦೦ ರೂಪಾಯಿಗಳನ್ನು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಮನೆಯಲ್ಲಿ ತಾಯಿಯವರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ.

ಇಂತಿ ನಿಮ್ಮ ಪ್ರೀತಿಯ ಮಗಳು
ಸ್ವರಾ

ಹೊರ ವಿಳಾಸ :

ಇವರಿಗೆ, ರಾಕೇಶ ಜಿ. ಈಶ್ವರ ನಗರ ಹರಿಹರ	ಇವರಿಂದ, ಸ್ವರಾ ೧೦ ನೆಯ ತರಗತಿ, ಸರ್ಕಾರಿ ಪ್ರೌಢಶಾಲೆ ಧಾರವಾಡ

ಪ್ರಬಂಧ ಬರೆವಣಿಗೆ :

41. ರಾಷ್ಟ್ರೀಯ ಭಾವೈಕ್ಯ :

ಪೀಠಿಕೆ : ರಾಷ್ಟ್ರೀಯ ಭಾವೈಕ್ಯ ಎಂದರೆ ಒಂದು ದೇಶದ ಜನರು ಭಾಷೆ, ಧರ್ಮ, ಜಾತಿ, ಮತ್ತು ಸಂಸ್ಕೃತಿಗಳ ವೈವಿಧ್ಯತೆಯ ನಡುವೆಯೂ ತಾವೆಲ್ಲರೂ ಒಂದೇ ಎಂಬ ಒಗ್ಗಟ್ಟಿನ ಭಾವನೆಯನ್ನು ಹೊಂದಿರುವುದಾಗಿದೆ. ಭಾರತದಂತಹ ವಿಶಾಲ ಮತ್ತು ವೈವಿಧ್ಯಮಯ ದೇಶಕ್ಕೆ ಈ ಭಾವನೆ ಅತ್ಯಂತ ಪ್ರಮುಖವಾಗಿದೆ. "ವೈವಿಧ್ಯತೆಯಲ್ಲಿ ಏಕತೆ" ಎಂಬುದು ನಮ್ಮ ದೇಶದ ಮೂಲಮಂತ್ರವಾಗಿದ್ದು, ರಾಷ್ಟ್ರೀಯ ಭಾವೈಕ್ಯ ದೇಶದ ಪ್ರಗತಿ ಮತ್ತು ಶಾಂತಿಗೆ ಅಡಿಪಾಯವಾಗಿದೆ.

ವಿಷಯ ನಿರೂಪಣೆ : ಭಾರತವು ವಿವಿಧ ಸಂಸ್ಕೃತಿಗಳ ತವರೂರು. 'ವಸುಧೈವ ಕುಟುಂಬಕಂ' 'ಸರ್ವೇ ಜನಾಃ ಸುಖಿನೋ ಭವಂತು' ಎಂಬುದು ಭಾರತೀಯ ಸಂಸ್ಕೃತಿ. ಇಲ್ಲಿ ನೂರಾರು ಭಾಷೆಗಳು, ಹಲವಾರು ಧರ್ಮಗಳು ಮತ್ತು ವೈವಿಧ್ಯಮಯ ಆಚರಣೆಗಳಿವೆ. ವಿವಿಧತೆಯಲ್ಲಿ ಏಕತೆಯೇ ದೇಶದ ಶಕ್ತಿ. ಪ್ರಾಚೀನ ಕಾಲದಿಂದಲೂ ಸಹಬಾಳ್ವೆ ಸಹಿಷ್ಣುತೆಯನ್ನು ಭಾರತವು ಬೋಧಿಸುತ್ತಾ ಪಾಲಿಸುತ್ತಾ ಬಂದಿದೆ. ಭಿನ್ನತೆಗಳಿದ್ದರೂ ನಾವೆಲ್ಲರೂ 'ಭಾರತೀಯರು' ಎಂಬ ಹೆಮ್ಮೆಯ ಭಾವನೆ ನಮ್ಮನ್ನು ಒಟ್ಟಿಗೆ ಹಿಡಿದಿಟ್ಟಿದೆ. ದೇಶದ ಆಂತರಿಕ ಭದ್ರತೆ ಮತ್ತು ಬಾಹ್ಯ ಆಕ್ರಮಣಗಳನ್ನು ಎದುರಿಸಲು ಈ ಒಗ್ಗಟ್ಟು ಅತಿ ಅಗತ್ಯ. ಜನರ ನಡುವೆ ಸೌಹಾರ್ದತೆ ಇದ್ದಾಗ ಮಾತ್ರ ದೇಶವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಕೆಲವೊಮ್ಮೆ ವೈವಿಧ್ಯತೆಯ ಕಾರಣದಿಂದ ದೇಶದ ಶಾಂತಿ ಹಾಳಾಗುವುದುಂಟು. ಇದರಿಂದ ಕೆಲವು ಪ್ರಮುಖ ಸವಾಲುಗಳು ಎದುರಾಗುತ್ತಿವೆ.

ಕೋಮುವಾದ : ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸುವ ಶಕ್ತಿಗಳು ದೇಶದ ಶಾಂತಿಗೆ ಧಕ್ಕೆ ತರುತ್ತಿವೆ.

ಜಾತಿ ಪದ್ಧತಿ : ಮೇಲು-ಕೀಳು ಎಂಬ ಭಾವನೆ ಮತ್ತು ಜಾತಿಯ ಆಧಾರದ ಮೇಲಿನ ತಾರತಮ್ಯಗಳು ಸಮಾಜವನ್ನು ಒಡೆಯುತ್ತಿವೆ. ಪ್ರಾಂತೀಯತೆ ಮತ್ತು ಭಾಷಾಭಿಮಾನ : ತಮ್ಮ ಪ್ರದೇಶ ಅಥವಾ ಭಾಷೆ ಮಾತ್ರ ಶ್ರೇಷ್ಠ ಎಂಬ ಅತಿಯಾದ ಹಠ ದೇಶದ ಒಗ್ಗಟ್ಟಿಗೆ ಮಾರಕವಾಗಿದೆ.

ರಾಜಕೀಯ ಸ್ವಾರ್ಥ : ಕೆಲವು ರಾಜಕಾರಣಿಗಳು ತಮ್ಮ ವೈಯಕ್ತಿಕ ಲಾಭಕ್ಕಾಗಿ ಜನರ ಭಾವನೆಗಳನ್ನು ಕೆರಳಿಸಿ ಒಡಕನ್ನು ಉಂಟುಮಾಡುತ್ತಾರೆ. ರಾಷ್ಟ್ರೀಯ ಭಾವೈಕ್ಯವನ್ನು ಬಲಪಡಿಸಲು ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಾಗಿದೆ.

ಶಿಕ್ಷಣದ ಪಾತ್ರ : ಶಾಲಾ-ಕಾಲೇಜುಗಳಲ್ಲಿ ಮಕ್ಕಳಿಗೆ ಬಾಲ್ಯದಿಂದಲೇ ಎಲ್ಲಾ ಧರ್ಮ, ಭಾಷೆ ಮತ್ತು ಸಂಸ್ಕೃತಿಗಳನ್ನು ಗೌರವಿಸುವುದನ್ನು ಕಲಿಸಬೇಕು. ಪಠ್ಯಪುಸ್ತಕಗಳಲ್ಲಿ ದೇಶಪ್ರೇಮ ಮತ್ತು ಒಗ್ಗಟ್ಟಿನ ಪಾಠಗಳಿರಬೇಕು.

ರಾಷ್ಟ್ರೀಯ ಯ ಹಬ್ಬಗಳ ಆಚರಣೆ : ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮತ್ತು ಗಾಂಧಿ ಜಯಂತಿಗಳಂತಹ ರಾಷ್ಟ್ರೀಯ ಹಬ್ಬಗಳನ್ನು ಜಾತಿ-ಮತ ಬೇಧವಿಲ್ಲದೆ ಎಲ್ಲರೂ ಒಟ್ಟಾಗಿ ಆಚರಿಸಬೇಕು. ಇದು ಭಾರತೀಯರೆಂಬ ಭಾವನೆಯನ್ನು ಮೂಡಿಸುತ್ತದೆ.

ಸಂವಹನ ಮತ್ತು ಪ್ರವಾಸ : ದೇಶದ ವಿವಿಧ ಭಾಗಗಳಿಗೆ ಪ್ರವಾಸ ಮಾಡುವುದರಿಂದ ಮತ್ತು ಬೇರೆ ಪ್ರದೇಶದ ಜನರೊಂದಿಗೆ ಸಂವಹನ ನಡೆಸುವುದರಿಂದ ಪರಸ್ಪರರ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಮಾಧ್ಯಮಗಳ ಜವಾಬ್ದಾರಿ : ಚಲನಚಿತ್ರಗಳು, ದೂರದರ್ಶನ ಮತ್ತು ಸಾಮಾಜಿಕ ಮಾಧ್ಯಮಗಳು ದ್ವೇಷವನ್ನು ಹರಡುವ ಬದಲು ಸೌಹಾರ್ದತೆ ಮತ್ತು ದೇಶಪ್ರೇಮವನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡಬೇಕು.

ಉಪಸಂಹಾರ : ರಾಷ್ಟ್ರೀಯ ಭಾವೈಕ್ಯ ಕೇವಲ ಒಂದು ಪರಿಕಲ್ಪನೆಯಲ್ಲ; ಅದು ದೇಶದ ಜೀವಾಳವಾಗಿದೆ. ಒಂದು ದೇಶದ ನಿಜವಾದ ಶಕ್ತಿ ಇರುವುದು ಅಲ್ಲಿನ ಆಯುಧಗಳಲ್ಲಲ್ಲ, ಬದಲಾಗಿ ಜನರ ನಡುವಿನ ಒಗ್ಗಟ್ಟಿನಲ್ಲಿ. ನಾವೆಲ್ಲರೂ ಭಿನ್ನಾಭಿಪ್ರಾಯಗಳನ್ನು ಮರೆತು, "ನಾವೆಲ್ಲರೂ ಒಂದು, ನಾವೆಲ್ಲರೂ ಭಾರತೀಯರು" ಎಂಬ ಮನೋಭಾವನೆಯನ್ನು ಬೆಳೆಸಿಕೊಂಡಾಗ ಮಾತ್ರ ಭಾರತವು ಜಗತ್ತಿನ ಬಲಿಷ್ಠ ಮತ್ತು ಶಾಂತಿಯುತ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯ. ಕಣ್ಣು ಬೇರೆ ನೋಟ ಒಂದು. ಭಾಷೆ ಬೇರೆ ಭಾವ ಒಂದು. ಮೊದಲು ರಾಷ್ಟ್ರ, ನಂತರ ಜಾತಿ-ಕುಲ-ಧರ್ಮ-ಭಾಷೆ-ಪ್ರಾಂತ್ಯಗಳೆಲ್ಲ ಎಂದು ಭಾವಿಸೋಣ. ನಾವೆಲ್ಲರೂ ಭಾರತೀಯರು ಒಂದಾಗಿ ಬಾಳಿದಾಗ ದೇಶ ಅಭಿವೃದ್ಧಿಯಾಗುವುದು ಮತ್ತು ವಿಶ್ವಮಾನ್ಯ ರಾಷ್ಟ್ರವಾಗುವುದು ಎಂಬುದು ನನ್ನ ಅಭಿಪ್ರಾಯವಾಗಿದೆ.

"ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ"

ಮಾದರಿ ಉತ್ತರಗಳು : ಗದ್ಯಪಾಠ 3. ಭಾಗ್ಯಶಿಲ್ಪಿಗಳು

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಡಿ) ವಾಕ್ಯವೇಷ್ಟನ
2. (ಸಿ) ಉದ್ಧರಣ
3. (ಡಿ) ಭಾವಸೂಚಕ
4. (ಎ) ಅಲ್ಪವಿರಾಮ
5. (ಸಿ) ಆವರಣ
6. (ಬಿ) ವಿವರಣಾತ್ಮಕ
7. (ಸಿ) ಅರ್ಧವಿರಾಮ
8. (ಬಿ) ಪ್ರಶ್ನಾರ್ಥಕ
9. (ಡಿ) ಅಲ್ಪವಿರಾಮ
10. (ಸಿ) ಭಾವಸೂಚಕ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

11. ನಾಲ್ವಡಿ ಕೃಷ್ಣರಾಜ ಒಡೆಯರು ಕ್ರಿ. ಶ. ೧೮೯೫ರಲ್ಲಿ ಪಟ್ಟಾಭಿಷಿಕ್ತರಾದರು.
12. ನಾಲ್ವಡಿ ಕೃಷ್ಣರಾಜ ಒಡೆಯರ ತಾಯಿಯ ಹೆಸರು 'ಮಹಾರಾಣಿ ವಾಣಿ ವಿಲಾಸ'.
13. ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು.
14. ೧೯೦೭ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದರು.
15. 'ಸಾಮಾಜಿಕ ಕಾನೂನುಗಳ ಹರಿಕಾರ' ರೆಂದು ಹೆಸರಾದವರು 'ನಾಲ್ವಡಿ ಕೃಷ್ಣರಾಜ ಒಡೆಯರು'.
16. ಶಿವನ ಸಮುದ್ರದ ಬಳಿ ಕಾವೇರಿ ನದಿಯ ಜಲವಿದ್ಯುತ್ ಯೋಜನೆ ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆಯಾಗಿದೆ.
17. ವಿಶ್ವೇಶ್ವರಯ್ಯನವರ ತಂದೆ ಶ್ರೀನಿವಾಸಶಾಸ್ತ್ರಿ, ತಾಯಿ ವೆಂಕಟಲಕ್ಷ್ಮಮ್ಮ.
18. ವಿಶ್ವೇಶ್ವರಯ್ಯನವರು ಕ್ರಿಸ್ತ ಶಕ ೧೮೬೦ನೇ ಸೆಪ್ಟೆಂಬರ್ ೧೫ರಂದು ಜನಿಸಿದರು.
19. ವಿಶ್ವೇಶ್ವರಯ್ಯನವರ ಪೂರ್ವಜರು ಮೂಲತಃ ಕರ್ನೂಲು ಜಿಲ್ಲೆ ಗಿಡ್ಡಲೂರು ತಾಲೂಕಿನ 'ಮೋಕ್ಷಗೊಂಡಂ' ಅಗ್ರಹಾರಕ್ಕೆ ಸೇರಿದವರು.
20. ಮೈಸೂರಿನ ದಿವಾನರಾದ ಸಿ. ರಂಗಾಚಾರ್ಲು ವಿಶ್ವೇಶ್ವರಯ್ಯನವರಿಗೆ ವಿದ್ಯಾರ್ಥಿ ವೇತನ ನೀಡಿದರು.
21. ವಿಶ್ವೇಶ್ವರಯ್ಯನವರನ್ನು ಬ್ರಿಟಿಷ್ ಅಧಿಕಾರಿ 'ಲಾರ್ಡ್ ಸಂಡ್ ಹರ್ಸ್ಟ್'ರವರು ಮುಕ್ತಕಂಠದಿಂದ ಹೊಗಳಿದರು.
22. ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ನಷ್ಟ ಸಂಭವಿಸುತ್ತಿತ್ತು.
23. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.

24. ವಿಶ್ವೇಶ್ವರಯ್ಯನವರಿಗೆ ಭಾರತ ಸರ್ಕಾರವು ನೀಡಿದ ಅತ್ಯುನ್ನತ ಪ್ರಶಸ್ತಿ 'ಭಾರತರತ್ನ ಪ್ರಶಸ್ತಿ'.

25. ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದರು.

26. ೧೯೧೩ರಲ್ಲಿ ವಿಶ್ವೇಶ್ವರಯ್ಯನವರು ಮೈಸೂರು ಬ್ಯಾಂಕ್ ಸ್ಥಾಪಿಸಿದರು.

27. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ 'ಎಂಜಿನಿಯರ್ಸ್ ದಿನಾಚರಣೆ'ಯನ್ನು ಮಾಡಲಾಗುತ್ತಿದೆ.

28. ವಿಶ್ವೇಶ್ವರಯ್ಯನವರು ತಮ್ಮ ೧೦೨ನೇ ವಯಸ್ಸಿನಲ್ಲಿ ಅಂದರೆ, ಸಾ. ಶ. ೧೯೬೨ರಲ್ಲಿ ಇಹಲೋಕವನ್ನು ತ್ಯಜಿಸಿದರು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

29. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಡಲಾಯಿತು. ಇದರಿಂದ ನಗರಪಾಲಿಕೆಗಳು ಹಾಗೂ ಗ್ರಾಮ ಪಂಚಾಯತಿಗಳು ಕಾರ್ಯನಿರ್ವಹಿಸಲು ಪ್ರಾರಂಭಮಾಡಿದವು. ಇವರ ಕಾಲದಲ್ಲಿ ೧. ಗ್ರಾಮ ನಿರ್ಮಲೀಕರಣ ೨. ವೈದ್ಯ ಸಹಾಯ ೩. ವಿದ್ಯಾ ಪ್ರಚಾರ ೪. ನೀರಿನ ಸೌಕರ್ಯ ೫. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು.

30. ೧೯೦೭ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಿದರು. ಈ ಸಭೆ ೫೦ ಜನ ಸದಸ್ಯರನ್ನು ಹೊಂದಿತ್ತು. ಇದರಲ್ಲಿ ಜನರಿಂದ ನೇರವಾಗಿ ೨೨ ಜನ ಸದಸ್ಯರು ಆಯ್ಕೆಯಾಗುತ್ತಿದ್ದರು. ಮೇಲ್ಮನೆಯ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನ್ಯಾಯವಿಧಾಯಕ ಸಭೆ ಬೆಂಗಳೂರಿನಲ್ಲಿ ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಈ ಸಭೆಗೆ ಇತ್ತು. ಯಾವುದೇ ಕಾನೂನನ್ನು ಜಾರಿಗೊಳಿಸಲು ನ್ಯಾಯವಿಧಾಯಕ ಸಭೆಯ ಅನುಮತಿ ಅಗತ್ಯವಾಗಿತ್ತು. ಇದಕ್ಕೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

31. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅಂದರೆ ಸಾ. ಶ. ೧೯೦೦ರಲ್ಲಿ ಶಿವನಸಮುದ್ರದ ಬಳಿಯ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಯಿತು. ಇದು ಭಾರತ ಮಾತ್ರವಲ್ಲ ಏಷ್ಯಾ ಖಂಡದಲ್ಲಿಯೇ ಮೊದಲ ಜಲವಿದ್ಯುತ್ ಯೋಜನೆಯಾಗಿದೆ. ಸಾ. ಶ. ೧೯೦೭ರಲ್ಲಿ ಮಾರಿ ಕಣಿವೆಯಲ್ಲಿ 'ವಾಣಿವಿಲಾಸ ಸಾಗರ' ಆಣೆಕಟ್ಟನ್ನು ಕಟ್ಟಲಾಯಿತು. ಸಾ. ಶ. ೧೯೧೧ರಲ್ಲಿ 'ಕೃಷ್ಣರಾಜ ಸಾಗರ' ಆಣೆಕಟ್ಟನ್ನು ನಿರ್ಮಿಸಲಾಯಿತು. ಇವು ನೀರಾವರಿ ಕ್ಷೇತ್ರಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರು ನೀಡಿದ ಬೃಹತ್ ಕೊಡುಗೆಯಾಗಿವೆ.

32. ನೆಹರು ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ ಎಂದು ಹೇಳಿದ್ದಾರೆ.

33. ಕ್ರಮನಿಷ್ಠತೆ, ಏನನ್ನಾದರೂ ಸಾಧಿಸಬೇಕೆಂಬ ದೃಢನಿರ್ಧಾರ, ಅದಕ್ಕೆ ತಕ್ಕಂತೆ ಪ್ರತಿಭೆ ಮತ್ತು ಮನೋಸ್ಥೈರ್ಯವನ್ನು ಹೊಂದಿರುವ ವಿಶ್ವೇಶ್ವರಯ್ಯನವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಬೆಂಗಳೂರಿನ 'ವೆಸ್ಲಿಯನ್ ಪ್ರೌಢಶಾಲೆ'ಯಲ್ಲಿ ಪ್ರೌಢಶಿಕ್ಷಣವನ್ನೂ, 'ಸೆಂಟ್ರಲ್ ಕಾಲೇಜಿ'ನಲ್ಲಿ ಎರಡು ವರ್ಷಗಳ ಇಂಟರ್ ಮೀಡಿಯಟ್ ಮತ್ತು ಮೂರು ವರ್ಷಗಳ ಬಿ. ಎ. ಪದವಿ ಶಿಕ್ಷಣವನ್ನೂ ಪಡೆದರು. ಮೈಸೂರಿನ ದಿವಾನರಾದ ಸಿ. ರಂಗಾಚಾರ್ಲು ಅವರಿಂದ ವಿದ್ಯಾರ್ಥಿವೇತನ ಸೌಲಭ್ಯ ಪಡೆದು ಪೂನಾದ ಎಂಜನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೋಮಾ ಶಿಕ್ಷಣವನ್ನು ಪ್ರಥಮಸ್ಥಾನದಲ್ಲಿ ಪಡೆದುದಲ್ಲದೇ 'ಜೇಮ್ಸ್ ಬರ್ಕ್ಲಿ' ಬಹುಮಾನಕ್ಕೂ ಪಾತ್ರರಾದರು.

34. ವಿಶ್ವೇಶ್ವರಯ್ಯನವರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸುವ ಮೂಲಕ ಯಶಸ್ವಿಯಾದರು. ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ಇದನ್ನೇ ಮುಂದೆ ಗ್ವಾಲಿಯರ್‌ನ ತಿಗ್ರಾ ಜಲಾಶಯಕ್ಕೂ ಮೈಸೂರಿನ ಕೃಷ್ಣರಾಜಸಾಗರ (ಈಗಿನ ಮಂಡ್ಯಜಿಲ್ಲೆಯ) ಜಲಾಶಯಕ್ಕೂ ಅಳವಡಿಸಲಾಯಿತು.

35. ನಾಲ್ವಡಿ ಕೃಷ್ಣರಾಜ ಒಡೆಯರು ೧೯೨೩ ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು, ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇದು ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಆರಂಭಿಸಿತು. ಪ್ರಜಾ ಪ್ರತಿನಿಧಿ ಸಭೆಯು ವರ್ಷಕ್ಕೆ ಎರಡು ಬಾರಿ ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರಗಳು, ಠರಾವುಗಳನ್ನು ಮಂಡಿಸುವುದು ಮುಂತಾದ ಸಂಸದೀಯ ಮಾದರಿಯ ನಡವಳಿಕೆಗಳು ನಡೆಯುತ್ತಿದ್ದವು. ಪ್ರತಿನಿಧಿ ಸಭೆಯಲ್ಲಿದ್ದ ೨೬೫ ಸದಸ್ಯರಲ್ಲಿ ಹೆಚ್ಚು ಪ್ರತಿನಿಧಿಗಳು ಜನರಿಂದ ಆಯ್ಕೆಯಾದವರಾಗಿದ್ದರು. ಒಟ್ಟಾರೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯು ನೂತನ ರೂಪವನ್ನು ಪಡೆದು, ನಿಜವಾದ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು.

36. ೧೯೦೯ - ದೇವದಾಸಿ ಪದ್ಧತಿ ನಿಷೇಧ, ೧೯೧೦- ಬಸವಿ ಪದ್ಧತಿ ರದ್ದತಿ, ಗೆಜ್ಜೆ ಪೂಜೆ ಪದ್ಧತಿ ಸಂಪೂರ್ಣ ನಿರ್ಮೂಲನೆ, ೧೯೩೬ - ವೇಶ್ಯಾ ವೃತ್ತಿ ತಡೆಗಟ್ಟುವ ಕಾಯ್ದೆ; ವಿಧವಾ ಮರು ವಿವಾಹ ಕಾಯ್ದೆ, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ ಜಾರಿ, ೧೯೧೪ರಲ್ಲಿ ಶಾಲಾ ಪ್ರವೇಶಕ್ಕೆ ಜಾತಿ ಪರಿಗಣನೆಯ ನಿಷೇಧ, ೧೯೧೯- ಮಾಧ್ಯಮಿಕ ಶಾಲಾ ಶಿಕ್ಷಣ ಶುಲ್ಕ ರದ್ದತಿ, ೧೯೨೭ - ಮೊಟ್ಟ ಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು, ೧೯೦೫ - ಸಹಕಾರಿ ಕಾರ್ಮಿಕ ಪರಿಹಾರ ಕಾಯ್ದೆ, ೧೯೧೩ - ಮೈಸೂರು ಗ್ರಾಮ ನ್ಯಾಯಾಲಯ ಕಾಯ್ದೆ, ೧೯೧೪ - ಗ್ರಾಮ ಪಂಚಾಯಿತಿಗಳ ಕಾಯ್ದೆಗಳನ್ನು ನಾಲ್ವಡಿ ಕೃಷ್ಣರಾಜ ಒಡೆಯರು ಜಾರಿಗೆ ತಂದು ನಾಡಿನ ಅಭಿವೃದ್ಧಿಗೆ ಶ್ರಮಿಸಿದ್ದಾರೆ.

37. ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವ ಮೂಲಕ ಸಮಸ್ಯೆಯನ್ನು ವಿಶ್ವೇಶ್ವಯ್ಯನವರು ಬಗೆಹರಿಸಿದರು. ಅವರು ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

38. ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಕ ಮಾಡಿದಾಗ, ವಿಶ್ವೇಶ್ವರಯ್ಯನವರು

ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ಅಷ್ಟೇ ಅಲ್ಲದೆ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ಇದರಿಂದ 'ಮೈಸೂರು ಮಾದರಿ' ಎಂಬ ಹೊಸ ಆಡಳಿತ ಮಾದರಿ ಜನ್ಮತಾಳಿತು. ಮೈಸೂರಿನ ಆಡಳಿತ ರೀತಿಯನ್ನು ಗಾಂಧೀಜಿ ಅವರು ಮುಕ್ತಕಂಠದಿಂದ ಹೊಗಳಿದರು.

39. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂದು ಘೋಷಣೆ ಮಾಡಿದ ವಿಶ್ವೇಶ್ವರಯ್ಯನವರು ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯೊಂದನ್ನು ಸ್ಥಾಪಿಸಿದರು. ಹೆಂಚಿನ ಕಾರ್ಖಾನೆ, ಮೂಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧಿ ತಯಾರಿಕಾ ಘಟಕ, ಗಂಧದ ಎಣ್ಣೆ, ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆಗಳ ಸ್ಥಾಪನೆ, ಸೋಪು ಮತ್ತು ಲೋಹ ತಯಾರಿಕೆ, ಕಲೆ ಮತ್ತು ಕರಕುಶಲತೆ ಡಿಪೋ, ಕೃಷ್ಣರಾಜೇಂದ್ರ ಬಟ್ಟೆಗಿರಣಿ, ಕಾಗದದ ತಿರುಳು, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳನ್ನು ಪ್ರಾರಂಭಿಸಿ ಕೈಗಾರಿಕೀಕರಣಕ್ಕೆ ಕೊಡುಗೆ ನೀಡಿದ್ದಾರೆ.

40. ವಿಶ್ವೇಶ್ವರಯ್ಯ ಅವರು ೧೯೧೩ ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಉಳಿತಾಯ ಬ್ಯಾಂಕ್‌ಗಳು ಅಸ್ತಿತ್ವಕ್ಕೆ ಬಂದವು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಸಹಕಾರಿ ಕ್ಷೇತ್ರವನ್ನು ಬಲವರ್ಧನೆಗೊಳಿಸಿದರು. ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ, ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು. ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ವಿವಿಧ ಮಾರ್ಪಾಡು ಮಾಡಿದರು.

41. ವಿಶ್ವೇಶ್ವರಯ್ಯನವರ ಸಾಧನೆಗೆ ಬ್ರಿಟಿಷ್ ಸರ್ಕಾರ 'ಸರ್' ಪದವಿಯನ್ನು ನೀಡಿ ಗೌರವಿಸಿತು. ಅವರ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿಯನ್ನು ಸಲ್ಲಿಸಿತು. ದೇಶದ ಹಲವಾರು ಪ್ರತಿಷ್ಠಿತ ಸಂಸ್ಥೆ ಹಾಗೂ ವಿಶ್ವವಿದ್ಯಾನಿಲಯಗಳು ಸದಸ್ಯತ್ವ ಹಾಗೂ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿದವು. ಮಹಾನ್ ಆಡಳಿತಗಾರರಾದ ಇವರ ಶತಮಾನೋತ್ಸವದ ಸವಿನೆನಪಿಗಾಗಿ ವಿಶೇಷ ಅಂಚೆಚೀಟಿ ಬಿಡುಗಡೆ ಮಾಡಲಾಯಿತು. ಸೆಪ್ಟೆಂಬರ್ ೧೫, ೧೯೬೦ ರಂದು ಶತಮಾನೋತ್ಸವ ಅಭಿನಂದನೆ 'ಸರ್ ಎಂ. ವಿ. ಅಭಿನಂದನಾ ಗ್ರಂಥ'ವನ್ನು ಪ್ರಕಟಿಸಲಾಯಿತು. ಇವರ ಹುಟ್ಟು ಹಬ್ಬದ ನೆನಪಿಗಾಗಿ ಅವರ ಜನ್ಮದಿನವನ್ನು 'ಎಂಜಿನಿಯರ್ಸ್ ದಿನಾಚರಣೆ' ಎಂದು ಆಚರಿಸಲಾಗುತ್ತಿದೆ.

42. ವಿಶ್ವೇಶ್ವರಯ್ಯನವರು 'ರಿಕನ್‌ಸ್ಟ್ರಕ್ಟಿಂಗ್ ಇಂಡಿಯಾ', 'ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯ' ಹಾಗೂ ಆತ್ಮಚರಿತ್ರೆ 'ಮೆಮೋರೀಸ್ ಆಫ್ ಮೈ ವರ್ಕಿಂಗ್ ಲೈಫ್', 'ನೇಷನ್ ಬಿಲ್ಡಿಂಗ್ ಪ್ಲಾನ್ ಫಾರ್ ಇಂಡಿಯಾ' ಕೃತಿಗಳನ್ನು ರಚಿಸಿರುವರು.

43. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

44. ಡಿ. ಎಸ್. ಜಯಪ್ಪಗೌಡ : ದಾರದಹಳ್ಳಿ ಸುಬ್ಬೆಗೌಡ ಜಯಪ್ಪಗೌಡ ಅವರು ಸಾ. ಶ. ೧೯೪೭ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿಯಲ್ಲಿ ಜನಿಸಿದರು. ಶ್ರೀಯುತರು 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು, ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಜನಪದ ಆಟಗಳು' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನಗಳು ಲಭಿಸಿವೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

45. ಬೆಳೆಯುವ ಸಿರಿ ಮೊಳಕೆಯಲ್ಲಿ : ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಬೆಳೆಯುವ ಸಸಿಯನ್ನು ನೋಡಿದಾಗಲೇ ಅದು ಮುಂದೆ ಎಂತಹ ಬೆಳೆಯನ್ನು ಕೊಡುತ್ತದೆ ಎಂಬುದು ತಿಳಿಯುತ್ತದೆ. ಹಾಗೆಯೇ ಬಾಲ್ಯದಲ್ಲಿ ಮಕ್ಕಳ ನಡೆನುಡಿಗಳನ್ನು ಗಮನಿಸಿದರೆ ಮುಂದೆ ಅವರು ಏನಾಗುತ್ತಾರೆ ಎಂಬುದನ್ನು ಅರಿಯಬಹುದು. ಕ್ರಿಕೆಟ್ ಆಟಗಾರ ಸಚಿನ್ ಜೀವನವೇ ಇದಕ್ಕೊಂದು ಉತ್ತಮ ಉದಾಹರಣೆ. ಮೊಳಕೆ ಚೆನ್ನಾಗಿದ್ದರೆ ಬೆಳೆ ಚೆನ್ನಾಗಿರುತ್ತದೆ. ಅದೇ ರೀತಿ ಮಕ್ಕಳು ಬಾಲ್ಯದಲ್ಲಿ ಉತ್ತಮ ಗುಣಗಳನ್ನು ಬೆಳೆಸಿಕೊಂಡರೆ ಮುಂದೆ ಅವರು ಉತ್ತಮ ವ್ಯಕ್ತಿಗಳಾಗುತ್ತಾರೆ ಎಂಬುದೇ ಈ ಗಾದೆಯ ಅರ್ಥವಾಗಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

46. "ಸಾಮಾಜಿಕ ಕಾನೂನುಗಳ ಹರಿಕಾರ."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಪಠ್ಯಪುಸ್ತಕ ಸಮಿತಿ ರಚಿಸಿರುವ 'ನಾಲ್ವಡಿ ಕೃಷ್ಣರಾಜ ಒಡೆಯರು' ಲೇಖನದಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರು ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳನ್ನು ವಿವರಿಸುತ್ತ ಒಡೆಯರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ಇದರಿಂದ ನಗರಪಾಲಿಕೆಗಳು ಹಾಗೂ ಗ್ರಾಮ ಪಂಚಾಯಿತಿಗಳು ಕಾರ್ಯನಿರ್ವಹಿಸಲು ಆರಂಭ ಮಾಡಿದವು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸುವ ಮೂಲಕ 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಹೆಸರಾದರು ಎಂದು ಲೇಖಕರು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಸ್ವತಃ ರಾಜರಾಗಿ ಕೇಂದ್ರೀಕೃತ ವ್ಯವಸ್ಥೆಗೆ ಬದಲಾಗಿ ಆಡಳಿತದಲ್ಲಿ ವಿಕೇಂದ್ರೀಕೃತ ವ್ಯವಸ್ಥೆ ತಂದು ಸಾಮಾಜಿಕ ಕಾನೂನುಗಳನ್ನು ಜಾರಿಗೊಳಿಸಿದ ಒಡೆಯರಿಗೆ ಈ ಬಿರುದು ಒಪ್ಪುವಂತಾದುದು ಎಂಬುದು ಲೇಖಕರ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

47. "ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು."

ಆಯ್ಕೆ: ಪ್ರಸ್ತುತ ವಾಕ್ಯವನ್ನು ಪಠ್ಯಪುಸ್ತಕ ಸಮಿತಿ ರಚಿಸಿರುವ 'ನಾಲ್ವಡಿ ಕೃಷ್ಣರಾಜ ಒಡೆಯರು' ಲೇಖನದಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೨ರ ಆಗಸ್ಟ್ ೮ನೇ ತಾರೀಖಿನಂದು ಮೈಸೂರು ರಾಜ್ಯದ ನೇರ ಉಸ್ತುವಾರಿ ವಹಿಸಿಕೊಂಡು, ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ಸಮಾಜಮುಖಿಯಾಗಿ ಅಧಿಕಾರವನ್ನು ಸಮರ್ಥವಾಗಿ ಬಳಕೆ ಮಾಡಿಕೊಂಡು ಜನಮನದಲ್ಲಿ ಶಾಶ್ವತವಾಗಿ ಉಳಿಯುವ ಕಾರ್ಯ ಕೈಗೊಂಡು, ಮೈಸೂರು ರಾಜ್ಯವನ್ನು ಮಾದರಿ ರಾಜ್ಯವನ್ನಾಗಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಪ್ರಜಾತಂತ್ರದ ದೂರದೃಷ್ಟಿಯನ್ನು ಹೊಂದಿ ಮೈಸೂರು ರಾಜ್ಯದ ಅಭಿವೃದ್ಧಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಂಡಿರುವುದು ಒಡೆಯರ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ.

48. "ಮೊಟ್ಟ ಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು."

ಆಯ್ಕೆ: ಪ್ರಸ್ತುತ ವಾಕ್ಯವನ್ನು ಪಠ್ಯಪುಸ್ತಕ ಸಮಿತಿ ರಚಿಸಿರುವ 'ನಾಲ್ವಡಿ ಕೃಷ್ಣರಾಜ ಒಡೆಯರು' ಲೇಖನದಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ನಾಲ್ವಡಿ ಕೃಷ್ಣರಾಜ ಒಡೆಯರು ಅರಸು ಮನೆತನದಿಂದ ಬಂದವರಾಗಿದ್ದರೂ ಸಹ, ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯ ಪರವಾಗಿದ್ದರು. ಅನೇಕ ಕಾನೂನುಗಳನ್ನು ಜಾರಿಗೆ ತರುವುದರ ಮೂಲಕ ಮಾದರಿ ಮೈಸೂರು ಸಂಸ್ಥಾನವನ್ನು ರೂಪಿಸಿದರು. ಸ್ತ್ರೀಯರ ಪರವಾಗಿರುವ ದೇವದಾಸಿ ಪದ್ಧತಿಯ ನಿಷೇಧ, ವೇಶ್ಯಾವೃತ್ತಿ ತಡೆಗಟ್ಟುವಿಕೆ, ವಿಧವಾ ಮರು ವಿವಾಹ, ಕಡ್ಡಾಯ ಸ್ತ್ರೀ ಶಿಕ್ಷಣ, ಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು ಹೀಗೆ ಹಲವು ಕಾನೂನುಗಳನ್ನು ಜಾರಿಗೆ ತಂದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿರುವರು.

ಸ್ವಾರಸ್ಯ : ನಾಲ್ವಡಿ ಕೃಷ್ಣರಾಜ ಒಡೆಯರು ಸ್ತ್ರೀಯರ ಪರವಾಗಿರುವ ಕಾನೂನುಗಳನ್ನು ಜಾರಿಗೆ ತರುವುದರ ಮೂಲಕ ಸ್ತ್ರೀಯರ ಏಳ್ಗೆಗೆ ಶ್ರಮಿಸಿರುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

49. "ಮೈಸೂರು ಗ್ರಾಮ ನ್ಯಾಯಾಲಯ ಕಾಯ್ದೆ."

ಆಯ್ಕೆ: ಪ್ರಸ್ತುತ ವಾಕ್ಯವನ್ನು ಪಠ್ಯಪುಸ್ತಕ ಸಮಿತಿ ರಚಿಸಿರುವ 'ನಾಲ್ವಡಿ ಕೃಷ್ಣರಾಜ ಒಡೆಯರು' ಲೇಖನದಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ನಾಲ್ವಡಿ ಕೃಷ್ಣರಾಜ ಒಡೆಯರ ಅವಧಿಯಲ್ಲಿ ದಿವಾನರಾಗಿದ್ದ ಸರ್ ಕೆ. ಶೇಷಾದ್ರಿ ಅಯ್ಯರ್ ರವರ ಸಹಕಾರದಿಂದ ಆಡಳಿತದಲ್ಲಿ ಹೊಸ ಬದಲಾವಣೆಗಳನ್ನು ತಂದರು. ಆಡಳಿತ ವಿಕೇಂದ್ರೀಕರಿಸಿದರು. ಅನೇಕ ಕ್ಷೇತ್ರಗಳನ್ನು ಸ್ವಯಂ ಆಡಳಿತ ಕ್ಷೇತ್ರಗಳಾಗಿಸಿ, ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದರು. ಅವುಗಳಲ್ಲಿ ದೇವದಾಸಿ ಪದ್ಧತಿ ನಿಷೇಧ, ಗೆಜ್ಜೆಪೂಜೆ ಪದ್ಧತಿ ನಿಷೇಧ, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ, ಸ್ತ್ರೀಯರಿಗೆ ಮತದಾನದ ಹಕ್ಕು ಇತ್ಯಾದಿ ಕಾಯ್ದೆಗಳೊಂದಿಗೆ ಮೇಲಿನ ಕಾಯ್ದೆಯನ್ನು ಜಾರಿಗೆ ತಂದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಓದುಗರಿಗೆ ಹೇಳಿದ್ದಾರೆ.

ಸ್ವಾರಸ್ಯ : ಸಾಮಾಜಿಕ ಕಳಕಳಿ, ಸಂಸ್ಥಾನದ ಸರ್ವತೋಮುಖ ಏಳಿಗೆ, ಅಭಿವೃದ್ಧಿಯ ದೂರದೃಷ್ಟಿ, ವ್ಯಕ್ತಿತ್ವ ವಿಕಸನ, ಸಾಮಾನ್ಯ ಜನರ ಕಲ್ಯಾಣದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದು ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

50. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ. ಎಸ್. ಜಯಪ್ಪಗೌಡ ಅವರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೆಪ್ಟೆಂಬರ್ ೧೫, ೧೯೬೦ರಂದು ಸರ್ ಎಂ. ವಿಶ್ವೇಶ್ವರಯ್ಯನವರ ಶತಮಾನೋತ್ಸವವನ್ನು ಬೆಂಗಳೂರಿನಲ್ಲಿ ಆಚರಿಸಲಾಯಿತು. ಆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಅಂದಿನ ಭಾರತದ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ಅವರು ತಮ್ಮ ಭಾಷಣದಲ್ಲಿ ವಿಶ್ವೇಶ್ವರಯ್ಯನವರನ್ನು ಶ್ಲಾಘಿಸುತ್ತ ಈ ಮೇಲಿನ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ವಿಶ್ವೇಶ್ವರಯ್ಯನವರು ಕೈಗೊಂಡ ಸಾಧನೆಗಳು ಅವರ ಬಗ್ಗೆ ಮಾತನಾಡುತ್ತಿದ್ದವು. ಸದಾ ಮೌನವಾಗಿದ್ದು ನಡೆದು ತೋರಿಸಿದ ವ್ಯಕ್ತಿತ್ವ ಅವರದಾಗಿತ್ತು. ಅವರಿಂದ ಭಾರತೀಯರು ಕಲೆಯುವುದು ಬಹಳಷ್ಟಿದೆ ಎಂದು ನೆಹರು ಅವರು ಹೇಳಿದ್ದು ವಿಶ್ವೇಶ್ವರಯ್ಯನವರ ವ್ಯಕ್ತಿತ್ವ ಸ್ಪಷ್ಟಗೊಳಿಸುವುದು.

51. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ. ಎಸ್. ಜಯಪ್ಪಗೌಡ ಅವರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವಿಶ್ವೇಶ್ವರಯ್ಯ ಅವರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವತಃ ತಾವೇ ಅನ್ವೇಷಣೆ ಮಾಡಿದ ಸ್ವಯಂಚಾಲಿತ ಬಾಗಿಲುಗಳನ್ನು ಯಶಸ್ವಿಯಾಗಿ ಅಳವಡಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ವಿಶ್ವೇಶ್ವರಯ್ಯ ಅವರಲ್ಲಿದ್ದ ಕಾರ್ಯದಕ್ಷತೆ, ಬುದ್ಧಿಶಕ್ತಿ ಹಾಗೂ ಅನ್ವೇಷಣಾ ಸಾಮರ್ಥ್ಯ ಸ್ವಾರಸ್ಯ ಈ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ.

52. "ಮೈಸೂರು ಮಾದರಿ' ಎಂಬ ಹೊಸ ಆಡಳಿತ ಮಾದರಿ ಜನ್ಮತಾಳಿತು."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ. ಎಸ್. ಜಯಪ್ಪಗೌಡ ಅವರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಮೈಸೂರು ಸಂಸ್ಥಾನದ ದಿವಾನರಾದ ವಿಶ್ವೇಶ್ವರಯ್ಯನವರು ಹೊಸ ಮನ್ವಂತರಕ್ಕೆ ಅಡಿಪಾಯ ಹಾಕಿದರು. ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ಇದರಿಂದ 'ಮೈಸೂರು ಮಾದರಿ' ಎಂಬ ಹೊಸ ಆಡಳಿತ ಮಾದರಿ ಜನ್ಮತಾಳಿತು ಎಂದು ಲೇಖಕರು ಈ ಮೇಲಿನ ಮಾತನ್ನು ಹೇಳುವರು.

ಸ್ವಾರಸ್ಯ : ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾದುದರಿಂಲೇ ಮೈಸೂರು ಮಾದರಿ ರಾಜ್ಯವಾಗಲು ಸಹಕಾರಿ ಯಾಯಿತೆಂಬುದು ಪ್ರಸ್ತುತ ಮಾತಿನಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿದೆ.

53. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ. ಎಸ್. ಜಯಪ್ಪಗೌಡ ಅವರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು ಎಂಬುದನ್ನು ಮನಗಂಡ ಇವರು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು ಎಂದು ಲೇಖಕರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ,

ಸ್ವಾರಸ್ಯ : ಸ್ವಾತಂತ್ರ್ಯ ಪೂರ್ವಕಾಲದಲ್ಲೇ ಶಿಕ್ಷಣ ಮೂಲಭೂತ ಹಕ್ಕು ಎಂಬ ಪ್ರಜಾಪ್ರಭುತ್ವದ ಆಶಯವನ್ನು ಕಾರ್ಯಗತಗೊಳಿಸಲು ಸರ್ ಎಂ. ವಿಶ್ವೇಶ್ವರಯ್ಯನವರು ನುಡಿದಂತೆ ನಡೆಯಲು ಯೋಜಿಸಿರುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

54. "ಕೈಗಾರಿಕೀಕರಣ ಇಲ್ಲವೆ ಅವನತಿ."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ಅವರು ರಚಿಸಿರುವ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಮೈಸೂರು ಸಂಸ್ಥಾನದ ದಿವಾನರಾದ ವಿಶ್ವೇಶ್ವರಯ್ಯನವರು ತಮ್ಮ ಆಡಳಿತದಲ್ಲಿ ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು. ಇದರ ಫಲವಾಗಿ ಅನೇಕ ಕಾರ್ಖಾನೆಗಳು ಮೈಸೂರು ರಾಜ್ಯದಲ್ಲಿ ಸ್ಥಾಪಿತಗೊಂಡು ಕಾರ್ಯ ಪ್ರಾರಂಭಿಸಿದವು. ಇವು ಮೈಸೂರು ರಾಜ್ಯವನ್ನು ಆರ್ಥಿಕವಾಗಿ ಸದೃಢವನ್ನಾಗಿಸಿದವು. ಇದರಿಂದ ಮೈಸೂರು ಮಾದರಿ ರಾಜ್ಯ ರೂಪುಗೊಳ್ಳಲು ಸಾಧ್ಯವಾಯಿತು ಎಂದು ವಿವರಿಸುವ ಸಂದರ್ಭದಲ್ಲಿ ವಿಶ್ವೇಶ್ವರಯ್ಯನವರು ಘೋಷಿಸಿದ ನುಡಿ ಉದಾಹರಿಸುತ್ತಾ ಲೇಖಕರು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ದೇಶದ ಅಭಿವೃದ್ಧಿಗೆ ಕೈಗಾರಿಕೀಕರಣ ಮುಖ್ಯ. ಕೈಗಾರಿಕೆಗಳು ಆರ್ಥಿಕವಾಗಿ ದೇಶವನ್ನು ಸದೃಢಗೊಳಿಸಲು ಸಹಾಯಕ ಎಂಬುದು ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

55. "ಶಿಕ್ಷಣವು ಸಂಜೀವಿನಿ ಎಂಬುದನ್ನರಿತ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ. ಎಸ್. ಜಯಪ್ಪಗೌಡ ಅವರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ನಾಲ್ವಡಿ ಕೃಷ್ಣರಾಜ ಒಡೆಯರು ಸರ್ ಎಂ. ವಿಶ್ವೇಶ್ವರಯ್ಯನವರನ್ನು ಮೈಸೂರು ಸಂಸ್ಥಾನ ದಿವಾನರಾಗಿ ನೇಮಿಸುವ ಮೂಲಕ ಹೊಸ ಮನ್ವಂತರಕ್ಕೆ ನಾಂದಿ ಹಾಡಿದರು. ನಾಡಿನ ಪ್ರಗತಿ ಶಿಕ್ಷಣದ ಮೇಲೆ ಅವಲಂಬಿತವಾಗಿರುತ್ತದೆ ಎಂಬುದನ್ನರಿತ್ತಿದ್ದ ವಿಶ್ವೇಶ್ವರಯ್ಯನವರು ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದರು. ಪ್ರತಿಯೊಬ್ಬರಿಗೂ ಶಿಕ್ಷಣ ದೊರೆಯುವಂತಾಗಬೇಕು ಎಂದು ಪ್ರಾಥಮಿಕ ಶಿಕ್ಷಣ

ನಿಬಂಧನೆಯನ್ನು ಜಾರಿ ಮಾಡಿದರು. ಇವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಲೇಖಕರು ತಿಳಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ಸ್ವಾತಂತ್ರ್ಯ ಪೂರ್ವಕಾಲದಲ್ಲೇ ಶಿಕ್ಷಣ ಮೂಲಭೂತ ಹಕ್ಕು ಎಂಬ ಪ್ರಜಾಪ್ರಭುತ್ವದ ಆಶಯ ಕಾರ್ಯಗತಗೊಳಿಸಲು ಶಿಕ್ಷಣದಲ್ಲಿ ಮಹತ್ತ್ವದ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ವಿವಿಧ ಯೋಜನೆ ರೂಪಿಸಿ ಯಶಸ್ಸು ಪಡೆಯುವ ಅವರ ನಿಲುವು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

56. ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೨ರ ಆಗಸ್ಟ್ ೞನೇ ತಾರೀಖಿನಂದು ಮೈಸೂರು ರಾಜ್ಯದ ನೇರ ಉಸ್ತುವಾರಿ ವಹಿಸಿಕೊಂಡು, ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ೧೯೦೭ ರಲ್ಲಿ ನ್ಯಾಯ ವಿಧಾಯಕ ಸಭೆಯನ್ನೂ ಸಹ ಸ್ಥಾಪಿಸಿದರು. ಈ ಸಭೆಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನೂ ಸಹ ವಿಮರ್ಶಿಸುವ ಅಧಿಕಾರ ಇದ್ದಿತು. ೧೯೨೩ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು, ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇವರ ಕಾಲದಲ್ಲಿ ಗ್ರಾಮ ನಿರ್ಮಲೀಕರಣ, ವೈದ್ಯಕೀಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಆ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರು 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಹೆಸರಾದರು. ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರಲ್ಲದೇ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರಾರಂಭಿಸಿದರು. ಅನೇಕ ರೈಲು ಮಾರ್ಗಗಳನ್ನು ನಿರ್ಮಿಸಿದರು. ೧೯೦೦ರಲ್ಲಿಯೇ ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಏಷ್ಯಾ ಖಂಡದಲ್ಲೇ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಯಿತು. ವಾಣಿ ವಿಲಾಸ ಸಾಗರ (ಮಾರಿ ಕಣಿವೆ) ಕೃಷ್ಣರಾಜ ಸಾಗರ ನಿರ್ಮಾಣ ಮಾಡಿ ನೀರಾವರಿ ಕ್ಷೇತ್ರಕ್ಕೆ ನೀಡಿದ ಬೃಹತ್ ಮುಂಗಾಣ್ಕೆಯಾಗಿದೆ. ಮೊಟ್ಟಮೊದಲ ವಿಶ್ವವಿದ್ಯಾನಿಲಯವಾದ 'ಮೈಸೂರು ವಿಶ್ವವಿದ್ಯಾನಿಲಯ'ವನ್ನು ಸ್ಥಾಪಿಸಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ. ಉಚಿತ ಆಸ್ಪತ್ರೆಗಳ ಕಾರ್ಯಾರಂಭ, ವಾಣಿಜ್ಯ ಕ್ಷೇತ್ರದಲ್ಲಿ ಮೈಸೂರು ಬ್ಯಾಂಕಿನ ಸ್ಥಾಪನೆ ಹಾಗೂ ಸಹಕಾರ ಸಂಘಗಳನ್ನು ಸ್ಥಾಪಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಇಡೀ ಭರತ ಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ, ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು.

57. ಭಾರತದ ಆಧುನಿಕತೆಯ ಹರಿಕಾರರಾಗಿ ವಾಸ್ತವ ಚಿಂತನೆ, ನಿಸ್ವಾರ್ಥ ನಡತೆ, ಸುಸಂಗತ ವೈಜ್ಞಾನಿಕ ದೃಷ್ಟಿ, ಯೋಜನೆ ಮತ್ತು ದಕ್ಷ ಆಡಳಿತದ ತಳಹದಿಯ ಮೇಲೆ ಹೊಸ ರಾಷ್ಟ್ರ ನಿರ್ಮಿಸಲು ಮುಂದಾದವರು ಸರ್. ಎಂ. ವಿಶ್ವೇಶ್ವರಯ್ಯನವರು. ವಿಶ್ವೇಶ್ವರಯ್ಯ ಮೈಸೂರು ಸಂಸ್ಥಾನದ ದಿವಾನರಾಗಿ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದರು. ಕಛೇರಿಯ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಸುಧಾರಣೆ ಮಾಡಿದರು. ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು. ರಾಜ್ಯ ಪ್ರವಾಸ ಮಾಡಿ ಅಜಮಾಯಿಷಿ ಕಾರ್ಯ ನಡೆಸಿದರು. ಸಮರ್ಥ ಕಾರ್ಯನಿರ್ವಹಣೆಗಾಗಿ ಸಮಿತಿಗಳನ್ನು ರಚಿಸಿದರು. ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ

ನೀಡಿದರು. ತಾಂತ್ರಿಕ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಭಾಷೆ ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಿದರು. ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು. ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು. ವಿದ್ಯಾರ್ಥಿ ವೇತನವನ್ನು ಕೊಡುವ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು. ಹೀಗೆ ತಮ್ಮ ಪರಿಪಕ್ವ ಅನುಭವವನ್ನು ಮೈಸೂರಿನ ಸಮಗ್ರ ಅಭಿವೃದ್ಧಿಗೆ ಬಳಸಿ ವಿಶ್ವೇಶ್ವರಯ್ಯನವರು ಸ್ಮರಣೀಯರಾಗಿರುವರು.

58. ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದರು. ಕ್ರಿ. ಶ. ೧೯೧೩ ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರೌಢಶಿಕ್ಷಣ ಶಾಲೆಗಳನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ಜಾರಿಗೆ ತಂದರು. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂಬುದನ್ನು ಮನಗಂಡ ಇವರು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಮಹಿಳಾ ಶಿಕ್ಷಣದ ಬಗ್ಗೆ ಸಹಾನುಭೂತಿ ಹೊಂದಿದ್ದ ಇವರು ಗೃಹಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ದೂರದೃಷ್ಟಿಯ ಮತ್ತೊಂದು ಫಲಶ್ರುತಿಯಾಗಿದೆ.

59. ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೨ ರ ಆಗಸ್ಟ್ ೮ ನೇ ತಾರೀಖಿನಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿಯನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡರು. ದಿವಾನರಾಗಿದ್ದ ಸರ್ ಕೆ. ಶೇಷಾದ್ರಿ ಅಯ್ಯರ್ ರವರ ಸಹಕಾರದಿಂದ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ಅರಸು ಮನೆತನದಿಂದ ಬಂದವರಾಗಿದ್ದರೂ ಜನತೆ ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯ ಪರವಾಗಿದ್ದರು. ಇವರ ಕಾಲದಲ್ಲಿ 'ಪ್ರಜಾಪ್ರತಿನಿಧಿ ಸಭೆ' ಹೊಸರೂಪವನ್ನು ಪಡೆದು ಜನಪ್ರತಿನಿಧಿ ಸಭೆಯಾಗಿ ಪರಿವರಿವರ್ತನೆಯಾಯಿತು. ೧೯೨೩ ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ವರ್ಷಕ್ಕೆ ಎರಡು ಬಾರಿ ಸಮಾವೇಶಗೊಂಡು ಕಲಾಪ ನಡೆಸುತ್ತಿದ್ದರು. ಇದು ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರ ಠರಾವುಗಳ ಮಂಡನೆಯನ್ನು ಮಾಡುತ್ತಿತ್ತು. ಇದರಲ್ಲಿ ಹೆಚ್ಚು ಪ್ರತಿನಿಧಿಗಳನ್ನು ಜನರಿಂದಲೇ ಆಯ್ಕೆ ಮಾಡಲಾಗುತ್ತಿತ್ತು. ೧೯೦೭ ರಲ್ಲಿ 'ನ್ಯಾಯ ವಿಧಾಯಕ ಸಭೆ' ಯನ್ನು ಸ್ಥಾಪಿಸಿದರು. ವರ್ಷಕ್ಕೆ ಎರಡು ಬಾರಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿದ್ದ ಈ ಸಭೆಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಅಧಿಕಾರವನ್ನು ಹೊಂದಿತ್ತು. ಯಾವುದೇ ಕಾನೂನನ್ನು ಜಾರಿಗೊಳಿಸಲು ಈ ಸಭೆಯ ಅನುಮತಿ ಅಗತ್ಯವಾಗಿತ್ತು. ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

60. ವಿಶ್ವೇಶ್ವರಯ್ಯನವರು ೧೮೮೪ ಎಲ್ಲಿ ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆ ಪ್ರಾರಂಭಿಸಿದರು. ಖಾನ್‌ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಸಾಲುವೆಯನ್ನು ನಿರ್ಮಿಸಿದ ಕಾರ್ಯದಲ್ಲಿ ಯಶಸ್ಸು ಗಳಿಸಿ ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು. ಮುಂಬೈ ಸರ್ಕಾರದ ಸೂಚನೆಯ ಮೇರೆಗೆ ಸಿಂಧ್ ಪ್ರಾಂತ್ಯ

ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು. ಅಂದಿನ ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ ಲಾರ್ಡ್ ಸಂಡ್ ಹರ್ಸ್ಟ್ ಅವರು ಇವರನ್ನು ಮುಕ್ತಕಂಠದಿಂದ ಹಾಡಿ ಹೊಗಳಿದರು. ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದರು. ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ನಂತರ ನಾಲ್ಕು ವರ್ಷಗಳ ಕಾಲ ಮುಂಬೈ ಪ್ರಾಂತ್ಯದ ಸ್ಯಾನಿಟರಿ ಎಂಜಿನಿಯರ್ ಆಗಿ ನೇಮಕಗೊಂಡರು. ಈ ಹುದ್ದೆಗೆ ನೇಮಕವಾದ ಪ್ರಥಮ ಭಾರತೀಯರು ಎಂಬುದು ಗಮನಾರ್ಹ ಅಂಶವಾಗಿದೆ.

61. ನಾಲ್ವಡಿ ಕೃಷ್ಣರಾಜ ಒಡೆಯರು ಸ್ಥಾಪಿಸಿದ ನ್ಯಾಯ ವಿಧಾಯಕ ಸಭೆ ಮತ್ತು ಜಾರಿಗೆ ತಂದ ಸಾಮಾಜಿಕ ಕಾನೂನುಗಳು. ನ್ಯಾಯ ವಿಧಾಯಕ ಸಭೆ : ನಾಲ್ವಡಿ ಕೃಷ್ಣ ಒಡೆಯರು ೧೯೦೭ ರಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದರು. ಇದರ ಸದಸ್ಯರ ಸಂಖ್ಯೆ ೫೦. ಇದರಲ್ಲಿ ಜನರಿಂದ ಆಯ್ಕೆಯಾದವರು ೨೨ ಸದಸ್ಯರು. ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆ, ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಈ ಸಂಸ್ಥೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

ಜಾರಿಗೆ ತಂದ ಸಾಮಾಜಿಕ ಕಾನೂನುಗಳು : ೧೯೦೯ ರಲ್ಲಿ ದೇವದಾಸಿ ಪದ್ಧತಿ ನಿಷೇಧ, ೧೯೧೦ ರಲ್ಲಿ ಬಸವಿಪದ್ಧತಿ, ಗೆಜ್ಜೆಪೂಜೆ ಪದ್ಧತಿ ಸಂಪೂರ್ಣ ನಿರ್ಮೂಲನೆ, ೧೯೩೬ ರಲ್ಲಿ ವೇಶ್ಯಾವೃತ್ತಿ ತಡೆಗಟ್ಟುವ ಕಾಯ್ದೆ, ವಿಧವಾ ಮರುವಿವಾಹ ಕಾಯ್ದೆ, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ ಜಾರಿ, ೧೯೧೪ ರಲ್ಲಿ ಶಾಲಾ ಪ್ರವೇಶಕ್ಕೆ ಜಾತಿ ಪರಿಗಣನೆಯ ನಿಷೇಧ, ೧೯೧೯ ರಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣ ಶುಲ್ಕ ರದ್ದತಿ, ೧೯೨೭ರಲ್ಲಿ ಮೊಟ್ಟ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು, ೧೯೦೫ ರಲ್ಲಿ ಸಹಕಾರಿ ಕಾರ್ಮಿಕ ಪರಿಹಾರ ಕಾಯ್ದೆ, ೧೯೧೩ ರಲ್ಲಿ ಮೈಸೂರು ಗ್ರಾಮ ನ್ಯಾಯಾಲಯ ಕಾಯ್ದೆ, ೧೯೧೪ ರಲ್ಲಿ ಗ್ರಾಮಪಂಚಾಯತಿಗಳ ಕಾಯ್ದೆ ಜಾರಿಗೆ ತಂದರು.

ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

62. **ಅ.** ತಾಳ್ಮೆ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾಮನೋಭಾವ - ಇವೇ ಮೊದಲಾದ ರಚನಾತ್ಮಕ ಭಾವನೆಗಳು ದೇಹಯಂತ್ರದ ಎಲ್ಲ ಭಾಗಗಳಲ್ಲಿ ಉತ್ಸಾಹಯುತ ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುತ್ತವೆ.

ಆ. ನಿಷೇಧಮಯ ಭಾವನೆಗಳಿಂದ ಭಯ, ಚಿಂತೆ, ದ್ವೇಷ, ಅಸೂಯೆ, ಸೋಲಿನ ಮನೋಭಾವ ಹಾಗೂ ಸಂಕುಚಿತ ಸ್ವಾರ್ಥದ ನಾನಾ ಅವತಾರಗಳು ಸಮಸ್ತ ದೇಹ ಮತ್ತು ಅಂಗಾಂಗಗಳಿಗೆ ಕೆಡುಕನ್ನುಂಟುಮಾಡಿ ರೋಗಕ್ಕೆ ಕಾರಣವಾಗುತ್ತವೆ.

ಪತ್ರಲೇಖನ ಬರೆಯುವುದು :

63.

ದಿನಾಂಕ: ೦೪. ೦೮. ೨೦೨೬
ಸ್ಥಳ : ಉಡುಪಿ

ಇವರಿಂದ,
ವರ್ಷಾ
೧೦ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಉಡುಪಿ.

ಇವರಿಗೆ,
ಮಾನ್ಯ ವ್ಯವಸ್ಥಾಪಕರು
ವಿಜ್ಞಾನ ವಸ್ತು ಸಂಗ್ರಹಾಲಯ
ಪಿಲಿಕುಳ - ಮಂಗಳೂರು

ಮಾನ್ಯರೆ,

ವಿಷಯ : <u>ಪಿಲಿಕುಳದ 'ವಿಜ್ಞಾನ ವಸ್ತು ಸಂಗ್ರಹಾಲಯ'ದ ವೀಕ್ಷಣೆಗೆ ಪ್ರವೇಶ ಕೋರಿ.</u>

ನಾನು ಉಡುಪಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ೧೦ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ ಕುಮಾರಿ. ವರ್ಷಾ ಎಂಬುವಳಾಗಿದ್ದು ನಾನು ನನ್ನ ಕುಟುಂಬದೊಂದಿಗೆ ಇಂದು ಪಿಲಿಕುಳದ 'ವಿಜ್ಞಾನ ವಸ್ತು ಸಂಗ್ರಹಾಲಯಕ್ಕೆ' ಶೈಕ್ಷಣಿಕ ಉದ್ದೇಶದಿಂದ ಭೇಟಿ ನೀಡಿಬೇಕೆಂದಿದ್ದೇವೆ. ಶಾಲೆಯ ವಿಜ್ಞಾನ ಶಿಕ್ಷಕರು ಈ ಮೊದಲು ತರಗತಿಯಲ್ಲಿ ಪಿಲಿಕುಳದ ವಿಜ್ಞಾನ ವಸ್ತು ಸಂಗ್ರಹಾಲಯದ ಬಗೆಗೆ ಹಲವು ಕೌತುಕದ ಮಾಹಿತಿ ನೀಡಿದ್ದರು. ಹಾಗಾಗಿ ನಾನು ವಸ್ತುಸಂಗ್ರಹಾಲಯದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಮತ್ತು ವೀಕ್ಷಣೆಗೆ ಉತ್ಸುಕಳಾಗಿರುತ್ತೇನೆ. ಕಾರಣ ತಾವು ನಮಗೆ ಪಿಳಿಕುಳದ ವಿಜ್ಞಾನ ವಸ್ತುಸಂಗ್ರಹಾಲಯದ ವೀಕ್ಷಣೆಗೆ ಅನೂಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
ವರ್ಷಾ

ಹೊರ ವಿಳಾಸ :

ಇವರಿಗೆ, ಮಾನ್ಯ ವ್ಯವಸ್ಥಾಪಕರು ವಿಜ್ಞಾನ ವಸ್ತು ಸಂಗ್ರಹಾಲಯ ಪಿಲಿಕುಳ ಮಂಗಳೂರು	ಇವರಿಂದ, ವರ್ಷಾ ೧೦ನೇ ತರಗತಿ ಸರ್ಕಾರಿ ಪ್ರೌಢಶಾಲೆ ಉಡುಪಿ.

ಪ್ರಬಂಧ ಬರೆವಣಿಗೆ :

64. ಮಹಿಳಾ ಸಬಲೀಕರಣ :

ಪೀಠಿಕೆ : "ತೊಟ್ಟಿಲು ತೂಗುವ ಕೈ ಜಗತ್ತನ್ನು ಆಳಬಲ್ಲದು", "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎಂದೆಲ್ಲ ಹೇಳುವ ಸಮಾಜದಲ್ಲಿ ಇಂದಿಗೂ ಮಹಿಳೆ ಎರಡನೇ ದರ್ಜೆಯ ಪ್ರಜೆಯಂತಿರುವುದು ಅವಮಾನಕರ ಸಂಗತಿ. ಮಹಿಳಾ ಸಬಲೀಕರಣವು ಕೇವಲ ಸ್ತ್ರೀಯರಿಗೆ ಸಂಬಂಧಿಸಿದ ವಿಷಯವಲ್ಲ. ಇದು ಇಡೀ ಸಮಾಜದ ಅಭಿವೃದ್ಧಿಯ ಸಂಕೇತವಾಗಿದೆ.

ವಿಷಯ ನಿರೂಪಣೆ : ಮಹಿಳೆಯರಲ್ಲಿ ಆತ್ಮವಿಶ್ವಾಸ ಬೆಳೆಸುವುದು ಮತ್ತು ಸ್ವಾವಲಂಬಿಗಳನ್ನಾಗಿ ಮಾಡುವುದು ಹಾಗೂ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳನ್ನು ಒದಗಿಸುವುದು ಮಹಿಳಾ ಸಬಲೀಕರಣವಾಗಿದೆ. ಲಿಂಗ ಸಮಾನತೆ ಮತ್ತು ಮಹಿಳೆಯರ ಹಕ್ಕುಗಳ ರಕ್ಷಣೆ ಸಬಲೀಕರಣದ ಮುಖ್ಯ ಉದ್ದೇಶವಾಗಿದೆ. ಶತಮಾನಗಳಿಂದಲೂ ಮಹಿಳೆಯರನ್ನು ಕೇವಲ ಮನೆಯ ಕೆಲಸಗಳಿಗೆ ಸೀಮಿತಗೊಳಿಸಲಾಗಿತ್ತು. ಶಿಕ್ಷಣದ ಕೊರತೆ, ಬಾಲ್ಯ ವಿವಾಹ ಮತ್ತು ಸಾಮಾಜಿಕ ಕಟ್ಟುಪಾಡುಗಳು ಅವರ ಪ್ರಗತಿಗೆ ಅಡ್ಡಿಯಾಗಿದ್ದವು. ಲಿಂಗ ತಾರತಮ್ಯ ಮತ್ತು ಪುರುಷ ಪ್ರಧಾನ ಸಮಾಜದ ಚಿಂತನೆಗಳು, ಅನಕ್ಷರತೆ ಮುಕ್ತ ಆರ್ಥಿಕ ಅಸಮಾನತೆ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ಮುಕ್ತ ಭದ್ರತೆಯ ಕೊರತೆ ಇದೆ. ದೇಶವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸದೃಢವಾಗಬೇಕಾದರೆ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಮಾನವಾಗಿ ಪಾಲ್ಗೊಳ್ಳುವುದು ಅಗತ್ಯವಾಗಿದೆ.

ಹೆಣ್ಣು ಮಗುವಿನ ಉಳಿವು, ರಕ್ಷಣೆ, ಶಿಕ್ಷಣ ಖಚಿತತೆ ಮತ್ತು ತಾರತಮ್ಯವನ್ನು ಹೋಗಲಾಡಿಸಲು ಭಾರತ ಮತ್ತು ಕರ್ನಾಟಕ ಸರ್ಕಾರಗಳು ಹಲವು ಯೋಜನೆಗಳನ್ನು ಜಾರಿಗೆ ತಂದಿವೆ.

- ಭಾರತ ಸರ್ಕಾರದ 'ಬೇಟಿ ಬಚಾವೋ ಬೇಟಿ ಪಢಾವೋ' ಅಡಿಯಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುತ್ತಿದೆ.
- ಕರ್ನಾಟಕ ಸರ್ಕಾರ ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೆ ತಂದು ಮಹಿಳೆಯರ ಕಲ್ಯಾಣಕ್ಕೆ ಹೆಚ್ಚು ಒತ್ತು ನೀಡುತ್ತಿದೆ.
- ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ವೈದ್ಯಕೀಯ, ಕಾನೂನು ಮತ್ತು ಮಾನಸಿಕ ನೆರವು ನೀಡಲು ಒನ್-ಸ್ಟಾಪ್ ಸೆಂಟರ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
- ಸಂಕಷ್ಟದಲ್ಲಿರುವ ಅಥವಾ ವಸತಿ ಇಲ್ಲದ ಮಹಿಳೆಯರಿಗೆ ಆಹಾರ, ಬಟ್ಟೆ ಮತ್ತು ಆಶ್ರಯ ನೀಡಲು ಸ್ವಾಧಾರ್ ಗೃಹ ಯೋಜನೆ ಇದೆ.
- ಮಹಿಳೆಯರ ಸುರಕ್ಷತೆಗಾಗಿ ಅವರು ಕಾರ್ಯ ನಿರ್ವಹಿಸುವ ಸ್ಥಳಗಳಲ್ಲಿ ಕಟ್ಟುನಿಟ್ಟಿನ ಕಾನೂನು ಜಾರಿಗೆ ತರಲಾಗಿದೆ.
- ತುರ್ತು ಸಂದರ್ಭಗಳಲ್ಲಿ ಮಹಿಳೆಯರು ೧೪೧ ಸಂಖ್ಯೆಗೆ ಕರೆ ಮಾಡಿ ಸಹಾಯ ಪಡೆಯಬಹುದು.
- ಮಹಿಳೆಯರ ಆರ್ಥಿಕ ಸಬಲತೆಗಾಗಿ ಸ್ವ-ಸಹಾಯ ಸಂಘಗಳ ಮೂಲಕ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
- ನೀತಿ ಆಯೋಗವು ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲು ಮಹಿಳಾ ಉದ್ಯಮಶೀಲತಾ ವೇದಿಕೆಯನ್ನು ಸ್ಥಾಪಿಸಿದೆ.

ಉಪಸಂಹಾರ : ಮಹಿಳಾ ಸಬಲೀಕರಣ ಕೇವಲ ಸರ್ಕಾರದ ಹೊಣೆಯಲ್ಲ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ. ಶಿಕ್ಷಣ ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾಜದ ಬದಲಾದ ದೃಷ್ಟಿಕೋನದಿಂದ ಮಹೀಳಾ ಸಬಲೀಕರಣ ಸಂಪೂರ್ಣವಾಗಿ ಸಾಧಿಸಲು ಸಾಧ್ಯ. ಮಹಿಳೆಯರಿಗೆ ಗೌರವಯುತ ಜೀವನ ನೀಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮಹಿಳೆ ಪ್ರಗತಿ ಪಥದಲ್ಲಿ ಚಲಿಸಿದರೆ ಕುಟುಂಬ, ಗ್ರಾಮ ಮತ್ತು ದೇಶ ಪ್ರಗತಿಯಾಗುವುದು.
"ಮಹಿಳೆಯರು ಸಬಲರಾದಾಗ ಮಾತ್ರ ಸ್ಥಿರವಾದ ಮತ್ತು ಉತ್ತಮ ರಾಷ್ಟ್ರ ನಿರ್ಮಾಣ ಸಾಧ್ಯ"

ಮಾದರಿ ಉತ್ತರಗಳು : ಗದ್ಯಪಾಠ 4. ಎದೆಗೆಬಿದ್ದ ಅಕ್ಷರ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಬಿ) ಧಾತು
2. (ಬಿ) ಸಂಭಾವನಾರ್ಥಕ
3. (ಡಿ) ವ
4. (ಸಿ) ಮಾಡೇವು
5. (ಸಿ) ನೋಡದು
6. (ಡಿ) ಮಾಡಲಿ
7. (ಎ) ವಿಧ್ಯರ್ಥಕ
8 (ಸಿ) ಉತ್ತ
9. (ಡಿ) ಸಂಭಾವನಾರ್ಥಕ
10. (ಡಿ) ಓಡು

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :

11. ಅಕರ್ಮಕಧಾತು
12. ನಿಷೇಧಾರ್ಥಕ
13. ಭವಿಷತ್‌ಕಾಲ
14. ಸಕರ್ಮಕಧಾತು
15. ಸಂಭಾವನಾರ್ಥಕ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

16. ಮಂಚಮ್ಮ ಇಂದು ಚಾವಣಿ ಇಲ್ಲದ ಗುಡಿಯೊಳಗೆ ಪೂಜಿತವಾಗುತ್ತಿದ್ದಾಳೆ.
17. ಡಾ. ಅಶೋಕ ಪೈಯವರ ಸ್ಥಳ ಶಿವಮೊಗ್ಗ.
18. ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ' ಇವು ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.
19. ಕವಿ ಸಿದ್ಧಲಿಂಗಯ್ಯ ಅವರು ದೇವನೂರು ಮಹಾದೇವ ಅವರಿಗೆ ಹೇಳಿದ ಕತೆಯಲ್ಲಿನ ಗ್ರಾಮದೇವತೆ ಮನೆ ಮಂಚಮ್ಮ.
20. ಮನೆಮಂಚಮ್ಮನ ಕತೆ ಹೇಳಿದ ಕವಿ ಸಿದ್ಧಲಿಂಗಯ್ಯ.
21. ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಫ. ಗು. ಹಳಕಟ್ಟಿಯವರು.
22. ವಚನಕಾರರಿಗೆ ಪ್ರಜ್ಞೆಯೇ (ಇಷ್ಟದೈವ) ದೇವರಾಗಿತ್ತು.
23. ಅಶೋಕ ಪೈ ಅವರು ಮನೋವೈದ್ಯರು.
24. ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದು ದೇವನೂರ ಮಹಾದೇವ ಅವರ ದೇವರು ಆಗುತ್ತದೆ.
25. ಲೇಖಕರಾದ ದೇವನೂರ ಮಹಾದೇವ ಅವರು ಮನೋವೈದ್ಯ ಅಶೋಕ ಪೈ ಅವರನ್ನು ಮೈಸೂರಿನಲ್ಲಿ ಭೇಟಿಯಾದರು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

26. ಒಂದು ಕೊಠಡಿಯಲ್ಲಿ ಟೆಲಿವಿಷನ್ ನೋಡುತ್ತ ಕುಳಿತಿರುವ ಕೆಲವು ಜನರು ಮತ್ತು ಇನ್ನೊಂದು ಕೊಠಡಿಯಲ್ಲಿ ಇದರ ಅರಿವಿಲ್ಲದೆ ತಮ್ಮಷ್ಟಕ್ಕೆ ತಾವು ಮಾತನಾಡುತ್ತ ಕುಳಿತಿರುವ ಜನರು ಇದ್ದಾಗ, ಟೆಲಿವಿಷನ್‌ದಲ್ಲಿ ಮೂಡಿ ಬರುವ ಕೊಲೆ ದೃಶ್ಯವು ನೋಡುವವರ ಮನಸ್ಸಿನ ಮೇಲೆ ದುಃಖವನ್ನುಂಟು ಮಾಡುತ್ತದೆ. ಅದೇ ರೀತಿ ನೋಡದ ಇನ್ನೊಂದು ಕೊಠಡಿಯಲ್ಲಿ ಇರುವವರ ಮೇಲೆಯೂ ಆ ದೃಶ್ಯ ಸ್ವಲ್ಪಮಟ್ಟಿಗೆ ದುಗುಡವನ್ನುಂಟು ಮಾಡುವುದು. ಅದೇ ನೃತ್ಯ ದೃಶ್ಯ ನೋಡುತ್ತಿರುವವರ ಮೇಲೆ ಉಂಟುಮಾಡುವ ಖುಷಿ ಭಾವನೆಯು ಇದನ್ನು ನೋಡದವರ ಮನದಲ್ಲೂ ಕಾಣಬಹುದು. ಇದರಿಂದ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ. ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುವ ಎಲ್ಲಾ ಜೀವಿಗಳಲ್ಲಿ ಕಂಪನವುಂಟುಮಾಡಿ, 'ಜೀವಿಸಂಕುಲ ಒಂದೇ' ಎಂದು ಹೇಳುವ ಸಂಶೋಧನಾ ಸತ್ಯವನ್ನು ಉದಾಹರಣೆಯ ಮೂಲಕ ಅಶೋಕ ಪೈ ಅವರು ಹೇಳಿರುವರು.

27. ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ. ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

28. ಒಮ್ಮೆ ಗ್ರಾಮದ ಜನರೆಲ್ಲಾ ಸೇರಿ ಮಂಚಮ್ಮದೇವಿಗೆ ಗುಡಿ ಕಟ್ಟಲು ಪ್ರಾರಂಭಿಸುತ್ತಾರೆ. ಚಾವಣಿಯ ಮಟ್ಟಕ್ಕೆ ಬಂದಾಗ ಒಬ್ಬನ ಮೈಮೇಲೆ ದೇವಿ ಆವಾಹಿಸಿಕೊಂಡು ಜನರನ್ನು ಕುರಿತು "ಏನ್ರಯ್ಯಾ ಏನು ಮಾಡ್ತಾ ಇದ್ದೀರಿ?" ಎಂದು ಪ್ರಶ್ನಿಸುತ್ತಾಳೆ. ನಿನಗೆ ಗುಡಿ ಕಟ್ಟುತ್ತಿದ್ದೇವೆ ಎಂದು ಜನರು ಉತ್ತರಿಸಿದಾಗ "ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ?" ಎಂದು ದೇವಿ ಅಬ್ಬರಿಸಿದಾಗ ಒಬ್ಬ "ನನಗಿಲ್ಲ ತಾಯಿ" ಎನ್ನುತ್ತಾನೆ. ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೂ ನನಗೂ ಮನೆ ಬೇಡ ಎಂದ ಮಂಚಮ್ಮದೇವಿ ಅಂದಿನಿಂದ ಮನೆಮಂಚಮ್ಮ ದೇವಿಯಾಗಿ ರೂಪುಗೊಂಡು ಇಂದಿಗೂ ಚಾವಣಿಯಿಲ್ಲದ ಗುಡಿಯಲ್ಲಿ ಪೂಜಿತಳಾಗುತ್ತಿದ್ದಾಳೆ.

29. ಲೇಖಕರಾದ ದೇವನೂರ ಮಹಾದೇವರವರು ಫ. ಗು. ಹಳಕಟ್ಟಿಯವರು ಬರೆದ 'ಶಿವಾನುಭವ ಶಬ್ದಕೋಶ ಪುಸ್ತಕ'ವನ್ನು ಓದಿದ ಮೇಲೆ, ಅಲ್ಲಿ ಹೇಳಿರುವ ಜ್ಞಾನ, ಅರಿವುಗಳ ಬಗ್ಗೆ ನೋಡಿ ಸುಸ್ತಾದರು. ಕ್ರಿಯೆಯ ಅನುಭವದಿಂದ ಒಡಮೂಡುವುದು ಅರಿವು. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವೆಂಬುದನ್ನು ಅವರು ಅರಿತರು. ನಂತರ ಈ ಅರಿವಿಗಾಗಿ ಕಂಡ ಕಂಡ ಕಡೆ, ಇದುವರೆಗೆ ಭಾರತೀಯ ಪರಂಪರೆಯಲ್ಲಿ ಈ ಸುಟ್ಟುಕೊಂಡು ಬರುವ ಅರಿವು ಯಾರ್‍ಯಾರಿಗಿದೆ? ಎಲ್ಲೆಲ್ಲಿದೆ? ಎಂದು ಹುಡುಕಾಡ ತೊಡಗಿದರು.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

30. **ದೇವನೂರ ಮಹಾದೇವ :** ದೇವನೂರ ಮಹಾದೇವ ಅವರು ಕ್ರಿ. ಶ. ೧೯೪೮ ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರು ಎಂಬಲ್ಲಿ ಜನಿಸಿದರು. ಶ್ರೀಯುತರು 'ಎದೆಗೆ ಬಿದ್ದ ಅಕ್ಷರ, ದ್ಯಾವನೂರು, ಒಡಲಾಳ, ಕುಸುಮಬಾಲೆ' ಮೊದಲಾದ

ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

31. ಕೂಡಿಬಾಳಿದರೆ ಸ್ವರ್ಗ ಸುಖ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ಎಲ್ಲರೊಡನೆ ಕಲೆತು ನಡೆಸುವ ಜೀವನ ಸ್ವರ್ಗ ಸುಖವನ್ನು ನೀಡುವುದು ಎಂಬ ತಾತ್ಪರ್ಯವನ್ನು ಈ ಗಾದೆಯು ನೀಡುವುದು.

"ಮಾನವನು ಸಂಘಜೀವಿ ; ಸಮಾಜ ಜೀವಿ". ಕೂಡಿ ಬಾಳುವುದರಲ್ಲಿ ಇರುವ ಪ್ರೀತಿ, ಕಾಳಜಿ ಮತ್ತು ಭದ್ರತೆಯು ಯಾವುದರಲ್ಲಿಯೂ ಸಿಗದು. ಒಂದೊಂದು ಕಡ್ಡಿಯನ್ನು ಬಹು ಸುಲಭವಾಗಿ ಮುರಿದು ಹಾಕಬಹುದು. ಅದೇ ಅನೇಕ ಕಡ್ಡಿಗಳನ್ನು ಒಟ್ಟಿಗೆ ಸೇರಿಸಿ ಕಟ್ಟು ಕಟ್ಟಿ ಮುರಿಯಲು ಸಾಧ್ಯವಿಲ್ಲ. "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ಮಾತು ಇದಕ್ಕೆ ಪುಷ್ಟಿ ನೀಡುತ್ತದೆ. ಸುಖಿ ಕುಟುಂಬಗಳು ತಮ್ಮ ಕುಟುಂಬದ ಸದಸ್ಯರ ನಡುವೆ ಅನ್ಯೋನ್ಯವಾದ ಬಾಂಧವ್ಯವನ್ನು ಹೊಂದಿರುತ್ತವೆ. ಸಮಾಜ ಮತ್ತು ಕುಟುಂಬಗಳು ಉತ್ತಮ ಬಾಂಧವ್ಯವವನ್ನು ಕಾಪಾಡುವ, ಪ್ರೋತ್ಸಾಹಿಸುವ ಜವಾಬ್ದಾರಿಯನ್ನು ಹೊಂದಿರುತ್ತವೆ. ವ್ಯಕ್ತಿಯು ತನ್ನ ಕುಟುಂಬದವರೊಡನೆ, ಸಮಾಜದೊಡನೆ ಸಾಮರಸ್ಯದಿಂದ ಕೂಡಿ ಬಾಳುವುದರಿಂದ ತನ್ನ ಸುಖ, ದುಃಖಗಳನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಕೂಡು ಬಾಳ್ವೆ ಅನ್ಯೋನ್ಯತೆ, ಆದರತೆಗಳ ಆಗರವಾಗಿ ಸ್ವರ್ಗ ಸುಖ ನೀಡುವುದು ಎಂಬುದನ್ನು ಪ್ರಸ್ತುತ ಗಾದೆಯು ವ್ಯಕ್ತಪಡಿಸುವುದು.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

32. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ಸಿದ್ದಲಿಂಗಯ್ಯನವರು ಹೇಳಿದ ಮನೆಮಂಚಮ್ಮನ ಕಥೆಯಲ್ಲಿ ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಗ್ರಾಮದ ಜನರೆಲ್ಲ ಕೂಡಿ ಪ್ರಾರಂಭಿಸುತ್ತಾರೆ. ಹೀಗೆ ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈ ಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರೊಡನೆ ಮಾತನಾಡುವ ಸಂದರ್ಭದಲ್ಲಿ ಈ ಮಾತನ್ನು ಗ್ರಾಮದೇವತೆ ಮಂಚಮ್ಮ ಜನರಿಗೆ ಹೇಳುತ್ತಾಳೆ.

ಸ್ವಾರಸ್ಯ : ತನ್ನ ಭಕ್ತರಿಗೆ ಮನೆ ಇಲ್ಲದ ಮೇಲೆ ನನಗೂ ಮನೆ ಬೇಡ ಎಂಬ ಮಂಚಮ್ಮ ದೇವತೆಯ ಮಾತು ಕಾರುಣ್ಯ ಮತ್ತು ಸಮಾನತೆಯ ದ್ಯೋತಕವಾಗಿರುವುದು ಈ ಮಾತಿನ ಸ್ವಾರಸ್ಯವಾಗಿದೆ.

33. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರಾದ ದೇವನೂರ ಮಹಾದೇವ ಅವರು ಬುದ್ಧನ ಕಾರುಣ್ಯ ತಮ್ಮ ಮನದೊಳಗೆ ಕುಳಿತ ಬಗೆಯನ್ನು ಡಾ. ಅಶೋಕ ಪೈ ಅವರ ಒಂದು ಸಂಶೋಧನಾ ಸತ್ಯಕತೆಯ ಉದಾಹರಣೆ ನೀಡುವ ಮೂಲಕ ವಿವರಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : "ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ, ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೆ" ಎಂಬುದು ಲೇಖಕರ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಬಂದಿದೆ.

34. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು."

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರಾದ ದೇವನೂರ ಮಹಾದೇವ ಅವರು ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟದೈವ. ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು ಎಂದು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಹನ್ನೆರಡನೆಯ ಶತಮಾನದ ವಚನಕಾರರು ನುಡಿದಂತೆ ನಡೆದು ದೈವವನ್ನು ಕಂಡುಕೊಂಡವರು, ಇಷ್ಟದೈವದಂತೆ ಇದ್ದ ಪ್ರಜ್ಞೆ ಪ್ರತಿಯೊಬ್ಬರಲ್ಲಿ ಜಾಗೃತವಾಗಿರಬೇಕು ಎಂಬುದು ಲೇಖಕರ ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

35. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ."

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರಾದ ದೇವನೂರ ಮಹಾದೇವ ಅವರು "ಕೊಲೆ. ಸುಲಿಗೆ, ದ್ವೇಷ, ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನು ಘಾಸಿಗೊಳಿಸುತ್ತಿದೆ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಸಮಷ್ಟಿ ಮನಸ್ಸಿನಲ್ಲಿ ಎಲ್ಲರೂ ಇರುವುದರಿಂದ ಕಾರುಣ್ಯ ಹಾಗೂ ಸರ್ವ ಸಮಾನತೆ ಮನೋಭಾವ ಮೂಡಿಸಿಕೊಂಡು ಬದುಕಬೇಕು ಎಂಬುದು ಲೇಖಕರ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

36. "ನಿಲ್ಸಿ ನನ್ ಮಕ್ಕಳಾ" / "ಹಾಗಾದರೆ ನಿಮಗೆಲ್ಲಾ ಮನೆ ಉಂಟಾ ನನ್ನ ಮಕ್ಕಳಾ?"

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ಸಿದ್ಧಲಿಂಗಯ್ಯನವರು ದೇವನೂರರಿಗೆ ಮನೆ ಮಂಚಮ್ಮ ಕತೆ ಹೇಳಿದರು. ಒಮ್ಮೆ ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ದೇವತೆಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಹೀಗೆ ಕಟ್ತಾ ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈಮೇಲೆ ಆ ದೇವತೆ ಮಂಚಮ್ಮ ಆವಾಹಿಸಿಕೊಂಡು "ನಿಲ್ಸಿ ನನ್ ಮಕ್ಕಳಾ" ಎಂದು ಅಬ್ಬರ ಮಾಡುತ್ತಾಳೆ. ಆ ಅಬ್ಬರಕ್ಕೆ ಜನ ತಮ್ಮ ಕೆಲಸವನ್ನು ನಿಲ್ಲಿಸಿ, ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು ಆ ದೇವತೆ ಹಾಗೂ ಆ ಜನರ ನಡುವೆ ಮಾತುಕತೆ ನಡೆಯುತ್ತದೆ. ಆ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ಜನರಿಗಿಲ್ಲದ ಮನೆ ನನಗೂ ಬೇಡ ಎಂಬ ಉದ್ದೇಶದಿಂದ ದೇವಿಯಲ್ಲಿದ್ದ ಸಮಾನತೆ, ಕಾರುಣ್ಯಸಮತೆಯ ಅಂಶಗಳು ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ.

37. "ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು"

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಫ. ಗು. ಹಳಕಟ್ಟಿಯವರ 'ಶಿವಾನುಭವ ಶಬ್ದಕೋಶ' ಕುರಿತು ತಿಳಿಸುವಾಗ ಲೇಖಕರು ಈ ಮಾತನ್ನು ಹೇಳಿದ್ದಾರೆ. ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ವಿಶ್ಲೇಷಿಸುತ್ತಾರೆ.

ಸ್ವಾರಸ್ಯ : ಕ್ರಿಯೆಯ ಅನುಭವ ಅರಿವು. ನುಡಿದಂತೆ ನಡೆಯದಿದ್ದರೆ ದೇವರು ಮೆಚ್ಚಲಾರ ಎಂದು ಹೇಳಿರುವುದು ಸ್ವಾರಸ್ಯಕರವಾಗಿ ಮೂಡಿಬಂದಿದೆ.

38. "ತಮ್ಮ ಪ್ರಜ್ಞೆ ಮುಂದೆ ಸುಳ್ಳು ಹೇಳಕ್ಕಾಗಲ್ಲ "

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವಚನಕಾರರು ತಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ . ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಆದ ಇಷ್ಟದೈವ ಇದ್ದಿತು. ಅದೇ ಪ್ರಜ್ಞೆ , ಅಂದರೆ ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು. ಅವರು ತಮ್ಮ ಕಷ್ಟ ಸುಖ , ದುಃಖ ದುಮ್ಮಾನ , ಏಳುಬೀಳುಗಳನ್ನು ಅವರ ಉತ್ಕಟ ಇಕ್ಕಟ್ಟುಗಳನ್ನು ಆ ಪ್ರಜ್ಞೆ ಮುಂದೆ ಹೇಳಿಕೊಳ್ಳುತ್ತ ಒದ್ದಾಡುತ್ತಿದ್ದರೆಂದು ಕಾಣುತ್ತದೆ ಎಂದು ಪ್ರಜ್ಞೆಯ ಬಗ್ಗೆ ವಿವರಿಸುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ವಚನಕಾರರಿಗೆ ಇಷ್ಟದೈವದ ರೀತಿಯಲ್ಲಿ ಇದ್ದ ಪ್ರಜ್ಞೆಯಂತೆ ಪ್ರತಿಯೊಬ್ಬರಲ್ಲಿ ಪ್ರಜ್ಞೆ ಜಾಗೃತವಾಗಿರಬೇಕು. ಅದರ ಮುಂದೆ ಯಾವುದೆ ಸುಳ್ಳು ಹೇಳಲಾಗುವುದಿಲ್ಲ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವಿವರಿಸಿದ್ದಾರೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

39. ದೇವನೂರರು ಒಂದು ಪುಸ್ತಕ ಓದುತ್ತಾ ಇದ್ದರು. 'ಶಿವಾನುಭವ ಶಬ್ದಕೋಶ' ಪುಸ್ತಕದ ಹೆಸರು. ಹಳಕಟ್ಟಿಯವರು ಬರೆದ ಪುಸ್ತಕ ಅದು. ಅದರಲ್ಲಿ ಅರಿವು, ಜ್ಞಾನದ ಬಗ್ಗೆ ಹೇಳಲಾಗಿದೆ. ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು. ಈಗ ಲೇಖಕರ ಮನಸ್ಸು ಅರಿವಿಗಾಗಿ ಕಂಡ ಕಂಡ ಕಡೆ, ಇದುವರೆಗೆ ಭಾರತೀಯ ಪರಂಪರೆಯಲ್ಲಿ ಈ ಸುಟ್ಟುಕೊಂಡು ಬರುವ ಅರಿವು ಯಾರ್ಯಾರಿಗಿದೆ? ಎಲ್ಲೆಲ್ಲಿದೆ? ಹುಡುಕಾಡ ತೊಡಗಿದರು. ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟದೈವ. ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು. ಈ ರೀತಿ ಪ್ರಜ್ಞೆಯನ್ನೇ ದೇವರು ಅಂತ ಅಂದುಕೊಂಡರೆ ಸುಡುವ ಬೆಂಕಿಯನ್ನು ನೆತ್ತಿ ಮೇಲೆ ಇಟ್ಟುಕೊಂಡಂತಾಗುತ್ತದೆ. ತಮ್ಮ ಪ್ರಜ್ಞೆ ಮುಂದೆ ಸುಳ್ಳು ಹೇಳಕ್ಕಾಗಲ್ಲ. ಇತರೆ ದೇವರಿಗಾದರೆ - ಯಾವುದೇ ಉಗ್ರ ದೇವತೆ ಇರಲಿ, ಏನೋ ಸ್ವಲ್ಪ ಹೊಟ್ಟೆ ಒಳಕ್ಕೆ ಹಾಕ್ಕೋಂತ ಸುಳ್ಳುಪಳ್ಳು ಹೇಳಿಬಿಡಬಹುದು. ಆದರೆ ಪ್ರಜ್ಞೆ ಮುಂದೆ ಇದು ನಡೆಯದು. ಈ ಇಕ್ಕಟ್ಟಿಗೆ

ವಚನಕಾರರು ಮುಖಾಮುಖಿಯಾದರು ಎಂದು ಕಾಣಿಸುತ್ತದೆ. ಅವರು ತಮ್ಮ ಕಷ್ಟ ಸುಖಾನ, ದುಃಖ ದುಮ್ಮಾನಾನ, ಏಳುಬೀಳುಗಳನ್ನು ಅವರ ಉತ್ಕಟ ಇಕ್ಕಟ್ಟುಗಳನ್ನು ಆ ಪ್ರಜ್ಞೆ ಮುಂದೆ ಹೇಳಿಕೊಳ್ಳುತ್ತ ಒದ್ದಾಡುತ್ತಿದ್ದರೆಂದು ಕಾಣುತ್ತದೆ. ಈ ಒದ್ದಾಟಕ್ಕೆ ಅವರು ನುಡಿ ಕೊಟ್ಟರು. ಅವರು ಅಂದು ನುಡಿದದ್ದು ಇಂದು ನುಡಿದಂತೆ ಕೇಳಿಸುತ್ತಿದೆ. ಅದು ತನಗೆ ತಾನೆ ಕಾವ್ಯವಾಗಿಬಿಟ್ಟಿದೆ. ಹೀಗೆ ವಚನ ಸಾಹಿತ್ಯ ಕುರಿತು ಲೇಖಕರು ವಿಮರ್ಶೆ ಮಾಡಿದ್ದಾರೆ.

40. ಬುದ್ಧನ ಕಾರುಣ್ಯ ಲೇಖಕರ ಮನದೊಳಗೆ ಕೂತ ಬಗೆಯನ್ನು ಒಂದು ಉದಾಹರಣೆಯಿಂದ ಹೇಳುತ್ತಾರೆ. ಇತ್ತೀಚೆಗೆ ಮನೋವೈದ್ಯರಾದ ಅಶೋಕ ಪೈರವರು ಮೈಸೂರಿಗೆ ಬಂದಾಗ ನಡೆದಿರುವ ಸಂಶೋಧನಾ ಸತ್ಯ ವಿವರಿಸಿದರು. ಅದು ಏನೆಂದರೆ- ಕೆಲವು ಜನ ಒಂದು ಟೆಲಿವಿಷನ್ ನೋಡುತ್ತಿದ್ದಾರೆ. ಇನ್ನೊಂದಿಷ್ಟು ಜನ ಇದರ ಅರಿವಿಲ್ಲದೇ ತಮ್ಮಷ್ಟಕ್ಕೆ ತಾವು ಇದ್ದಾರೆ. ಆಗ ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದು:ಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದಂತೆ. ಅದೇ ಟೆಲಿವಿಷನ್‌ನಲ್ಲಿ ಯಾವುದಾದರೂ ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಮಾಡಿ ಸ್ವಲ್ಪ ಮಟ್ಟಿಗೆ ಸಂತೋಷದ ಭಾವನೆ ಉಂಟಾಗುವುದಂತೆ. ಅಶೋಕ ಪೈರವರ ಸಂಶೋಧನಾ ಸತ್ಯವು ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ. ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೆ. ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ. ಬುದ್ಧನ ಕಾರುಣ್ಯ ಇಲ್ಲಿಂದಲೇ ಮೂಡಿರಬಹುದು. ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ಘಾಸಿಗೊಳಿಸುವುದು ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನೆ. ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ. ನಾವು ಮನುಷ್ಯರು ನಮ್ಮೊಳಗೆ ಮೂರ್ಛಾವಸ್ಥೆಯಲ್ಲಿರುವ ಕಾರುಣ್ಯವನ್ನು ಎಚ್ಚರಗೊಳಿಸಬೇಕಾಗಿದೆ. ಈ ಎಳೆ ಹಿಡಿದು ಜಾಗತೀಕರಣವನ್ನೂ ರೂಪಿಸಬೇಕಾಗಿದೆ. ಆಗ ಮಾತ್ರವೇ ಅದು ಜಾಗತೀಕರಣ.

41. ದೇವನೂರ ಮಹಾದೇವ ಅವರಿಗೆ ಕವಿ ಸಿದ್ದಲಿಂಗಯ್ಯ ಅವರು ಮನೆಮಂಚಮ್ಮ ಎಂಬ ಗ್ರಾಮದೇವತೆಯ ಕತೆಯನ್ನು ಹೇಳುತ್ತಾರೆ. ಆ ಕತೆ ಹೀಗಿದೆ- ಒಂದು ಸಲ ಒಂದು ಗ್ರಾಮದ ಜನರೆಲ್ಲ ಸೇರಿ ತಮ್ಮ ಗ್ರಾಮದೇವತೆ ಮಂಚಮ್ಮಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಹೀಗೆ ಗುಡಿ ಕಟ್ತಾ ಇರುವಾಗ ಗುಡಿಯ ಕಟ್ಟಡ ಚಾವಣಿ ಮಟ್ಟಕ್ಕೆ ಬಂದಾಗ ಅಲ್ಲಿದ್ದ ಒಬ್ಬನ ಮೈಮೇಲೆ ಆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು "ನಿಲ್ಸಿ ನನ್ ಮಕ್ಕಳಾ" ಎಂದು ಅಬ್ಬರ ಮಾಡುತ್ತಾಳೆ. ಆ ಅಬ್ಬರಕ್ಕೆ ಜನ ತಮ್ಮ ಕೆಲಸ ನಿಲ್ಲಿಸಿ ಕಕ್ಕಾಬಿಕ್ಕಿಯಾಗಿ ನೋಡುತ್ತಾರೆ. ಆಗ ದೇವತೆ ಮಂಚಮ್ಮ "ಏನ್ರಯ್ಯಾ ಏನ್ ಮಾಡ್ತಾ ಇದ್ದಿರಿ?" ಎನ್ನುತ್ತಾಳೆ. ಅಲ್ಲಿನ ಜನರು "ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ" ಎಂದು ಹೇಳುತ್ತಾರೆ. ಆ ದೇವತೆ "ಓಹೋ, ನನಗೆ ಗುಡಿಮನೆ ಕಟ್ತಾ ಇದ್ದೀರೋ? ಹಾಗಾದರೆ ನಿಮಗೆಲ್ಲ ಮನೆ ಉಂಟಾ ನನ್ನ ಮಕ್ಕಳಾ?" ಎಂದು ಕೇಳುತ್ತಾಳೆ. ಆಗ ಒಬ್ಬನು "ನನಗಿಲ್ಲ ತಾಯಿ" ಎಂದು ಹೇಳುತ್ತಾನೆ. ಆಗ ಗ್ರಾಮದೇವತೆ ಮಂಚಮ್ಮ "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ" ಎಂದು ಹೇಳುತ್ತಾಳೆ. ಅಂದಿನಿಂದ ಮಂಚಮ್ಮದೇವಿ ಮನೆಮಂಚಮ್ಮಳಾಗುತ್ತಾಳೆ. ಚಾವಣಿ ಇಲ್ಲದ ಗುಡಿಯಲ್ಲಿ ತಾಯಿ ಮನೆಮಂಚಮ್ಮ ಇಂದು ಪೂಜಿತಳಾಗುತ್ತಿದ್ದಾಳೆ.

ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

42. **ಅ.** ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು, ವಿಜ್ಞಾನದ ಅನ್ವೇಷಣ ಕಾರ್ಯದಲ್ಲಿ ನಾವೆಲ್ಲ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸ ದಾರಿಯನ್ನು ಗುರುತಿಸಿ ಮುಂದುವರೆಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು.

ಆ. ರಾಮನ್ ಮುಂಜಾನೆ ಪ್ರಯೋಗಾಲಯಕ್ಕೆ ಬಂದಕೂಡಲೆ ಒಂದು ಸುತ್ತು ಹೊರಟು ಎಲ್ಲ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದಾನೆಂದರೆ, ಬೆನ್ನುತಟ್ಟಿ, ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪತ್ರಲೇಖನ ಬರೆಯುವುದು :

43. ಕ್ಷೇಮ ಶ್ರೀ

ಇವರಿಂದ,
ಸ್ವಾತಿ
೧೦ ನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ಧಾರವಾಡ
ದಿನಾಂಕ : ೧೨.೦೧.೨೦೨೬

ಪ್ರೀತಿಯ,

ಗೆಳತಿಯಾದ ತೇಜುಳಿಗೆ ನಿನ್ನ ಗೆಳತಿ ಸ್ವಾತಿ ಮಾಡುವ ವಂದನೆಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನೀನು ಅಲ್ಲಿ ಕ್ಷೇಮವಾಗಿರುವೆ ಎಂದು ನಂಬಿರುತ್ತೇನೆ.

ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು ವೇಳಾಪಟ್ಟಿ ತಯಾರಿಸಿಕೊಂಡು ಓದುತ್ತಿದ್ದೇನೆ. ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ, ಶಾಲೆಯಲ್ಲಿ ದಿನಾಂಕ ೦೮.೦೧.೨೦೨೬ ರಂದು ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ನಡೆಯಿತು. ಅಂದು ಕಾರ್ಯಕ್ರಮಕ್ಕೆ ಖ್ಯಾತ ಸಾಹಿತಿ ಜಯಂತ ಕಾಯ್ಕಿಣಿಯವರು ಅತಿಥಿಗಳಾಗಿ ಆಗಮಿಸಿದ್ದರು. ಅವರು ತಮ್ಮ ಅತಿಥಿ ಭಾಷಣದಲ್ಲಿ ಹತ್ತನೇ ತರಗತಿಯ ಓದಿನ ಮಹತ್ವ ಹಾಗೂ ಸಾಹಿತ್ಯ ಆಸಕ್ತಿ, ರಚನೆ, ಸಂಶೋಧನೆ ಹಲವು ವಿಚಾರಗಳ ಕುರಿತು ಅತ್ಯುಪಯುಕ್ತ ಮಾಹಿತಿ ನೀಡಿದರು. ನಂತರ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಅವರು ಬಹುಮಾನ ನೀಡಿದರು. ನಾನು ರಸಪ್ರಶ್ನೆ, ಭಾಷಣ ಸ್ಪರ್ಧೆಗಳಲ್ಲಿ ಬಹುಮಾನ ಪಡೆದೆನು. ಸಭಾ ಕಾರ್ಯಕ್ರಮದ ನಂತರ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ವೇದಿಕೆಯಲ್ಲಿ ನಡೆದವು. ನಾನು ಕೂಡ ನೃತ್ಯ ಹಾಗೂ ನಾಟಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಒಟ್ಟಾರೆ ಶಾಲೆಯ ಈ ಸುದಿನ ಎಂದೂ

ಮರೆಯದ ಅನುಭವಗಳನ್ನು, ನೆನಪುಗಳನ್ನು ನನ್ನ ಜೀವನದಲ್ಲಿ ನೀಡಿತು. ನಿನ್ನ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದ ಕುರಿತು ಪತ್ರವನ್ನು ಬರೆ.

ಮನೆಯಲ್ಲಿ ನಿನ್ನ ತಂದೆ, ತಾಯಿಯವರಿಗೂ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತಿ ನಿನ್ನ ಪ್ರೀತಿಯ ಗೆಳತಿ
ಸ್ವಾತಿ

ಹೊರ ವಿಳಾಸ :

ಇವರಿಗೆ, ತೇಜು ೧೦ನೇ ತರಗತಿ ಸರ್ಕಾರಿ ಪ್ರೌಢಶಾಲೆ ಹಾಸನ	ಇವರಿಂದ, ಸ್ವಾತಿ ೧೦ನೇ ತರಗತಿ ಸರ್ಕಾರಿ ಪ್ರೌಢಶಾಲೆ ಧಾರವಾಡ

ಪ್ರಬಂಧ ಬರೆವಣಿಗೆ :

44. ತ್ಯಾಜ್ಯವಸ್ತು ನಿರ್ವಹಣೆ :

ಪೀಠಿಕೆ : 'ಪುನರಪಿ ಜನನಂ ಪುನರಪಿ ಮರಣಂ' ಎಂಬಂತೆ ಹುಟ್ಟಿದ್ದೆಲ್ಲ ಸಾಯಲೇಬೇಕು. ಸತ್ತ ಶರೀರಕ್ಕೆ ಸಂಸ್ಕಾರ ಮಾಡುತ್ತೇವೆ. ಹಾಗೆಯೇ ನಾವು ಬಳಸಿ ನಿರುಪಯುಕ್ತವಾದ ವಸ್ತುಗಳನ್ನು ಸರಿಯಾಗಿ ವಿಲೇವಾರಿ ಮಾಡಬೇಕು. ಬಳಸಿದ ನಂತರ ತ್ಯಜಿಸಲು ಇರುವ ವಸ್ತುಗಳೇ ತ್ಯಾಜ್ಯವಸ್ತುಗಳು. ಇವುಗಳನ್ನು ಸಮರ್ಪಕವಾಗಿ ಸಂಗ್ರಹ, ವಿಲೇವಾರಿ, ಸಂಸ್ಕರಣೆ, ಮರುಬಳಕೆ ಮಾಡುವ ಪ್ರಕ್ರಿಯೆಯನ್ನು ತ್ಯಾಜ್ಯವಸ್ತು ನಿರ್ವಹಣೆ ಎನ್ನಬಹುದು.

ವಿಷಯ ನಿರೂಪಣೆ : ಆಧುನೀಕರಣ, ನಗರೀಕರಣ, ಔದ್ಯೋಗಿಕರಣ, ಯಾಂತ್ರೀಕರಣ ಮುಂತಾದವುಗಳಿಂದ ಮಾನವ ಬದುಕು ಸುಂದರ ಮತ್ತು ಸರಳಗೊಂಡಿದೆ. ಆದರೆ ಇವುಗಳಿಂದ ತ್ಯಾಜ್ಯವಸ್ತುಗಳ ಪ್ರಮಾಣವೂ ಹೆಚ್ಚಿದೆ. ಮಿತಿಮೀರಿದ ಜನಸಂಖ್ಯೆ ಸಮಸ್ಯೆಯಿಂದ ತ್ಯಾಜ್ಯವಸ್ತುಗಳ ನಿರ್ವಹಣೆ ಅತೀ ದೊಡ್ಡ ಸಮಸ್ಯೆಯಾಗಿದೆ. ತ್ಯಾಜ್ಯವಸ್ತುಗಳಲ್ಲಿ ಘನತ್ಯಾಜ್ಯ, ದ್ರವತ್ಯಾಜ್ಯ, ಅನಿಲತ್ಯಾಜ್ಯಗಳೆಂದು ವಿಂಗಡಿಸಬಹುದು. ಕೊಳೆಯಬಹುದಾದ ತ್ಯಾಜ್ಯ, ಕೊಳೆಯಲಾರದ ತ್ಯಾಜ್ಯ, ಅಪಾಯಕಾರಿ ತ್ಯಾಜ್ಯಗಳೆಂದೂ ವಿಂಗಡಿಸುವುದುಂಟು. ತ್ಯಾಜ್ಯ ವಸ್ತು ನಿರ್ವಹಣೆ ಮಾಡದಿದ್ದರೆ ಅವು ಕೊಳೆತು ವಾತಾವರಣ ಮತ್ತು ನೀರಿನಲ್ಲಿ ಸೇರಿ ಜನರ ಮತ್ತು ಜೀವಕುಲಕ್ಕೆ ಅನಾರೋಗ್ಯ ತರುತ್ತದೆ. ಕೈಗಾರಿಕೆ ಮತ್ತು ವೈದ್ಯಕೀಯ ತ್ಯಾಜ್ಯಗಳಿಂದ ಅಪಾಯಕಾರಿ ಪರಿಣಾಮ ಉಂಟಾಗುತ್ತದೆ. ಪ್ಲಾಸ್ಟಿಕ್, ರಬ್ಬರ್, ಗಾಜು, ಲೋಹ, ಮತು ರಾಸಾಯನಿಕ ತ್ಯಾಜ್ಯ ವಸ್ತುಗಳು ಬಹು ಅಪಾಯಕಾರಿಯಾಗಿವೆ. ತ್ಯಾಜ್ಯ ವಸ್ತು ನಿರ್ವಹಣೆ ಮಾಡದಿದ್ದರೆ ಊರು ಪಟ್ಟಣ ದೇಶದ ಸೌಂದರ್ಯ ಕಳೆದುಕೊಂಡು ಗೌರವಕ್ಕೆ ಕಳಂಕ ಬರುತ್ತದೆ. ಸರ್ಕಾರವು ತ್ಯಾಜ್ಯ ನಿರ್ವಹಣೆಗಾಗಿ ಸಾಕಷ್ಟು ಕ್ರಮಗಳನ್ನು ಕೈಗೊಳ್ಳುತ್ತಿದೆ. ಸ್ವಚ್ಛಭಾರತ ಅಭಿಯಾನ ಅಡಿಯಲ್ಲಿ ಸಾಕಷ್ಟು ಯೋಜನೆ ಜಾರಿಗೊಂಡಿವೆ. ಕಸ ಸಂಗ್ರಹಣೆ ವಾಹನ ಮನೆಮನೆಗೆ ಬಂದು ಹಸಿಕಸ ಒಣಕಸ ಪ್ರತ್ಯೇಕವಾಗಿ ಸಂಗ್ರಹಿಸುತ್ತದೆ. ಇವುಗಳನ್ನು ಜನವಸತಿಯಿಂದ ದೂರದ ಬಯಲಿನಲ್ಲಿ ಸುಡುವ ಅಥವಾ ಹುಗಿಯುವ ವ್ಯವಸ್ಥೆಯಿರುತ್ತದೆ. ಹೆಚ್ಚಾಗಿ ಈ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ವಿಂಗಡಿಸಿ ಸಂಸ್ಕರಿಸಲಾಗುತ್ತಿದೆ. ಕಸದಿಂದ ಕಾಂಪೋಸ್ಟ್ ಗೊಬ್ಬರ ತಯಾರಿಸಲಾಗುತ್ತಿದೆ. ಕೈಗಾರಿಕೆಗಳು

ಖಾಸಗಿಯಾಗಿ ತ್ಯಾಜ್ಯ ನಿರ್ವಹಣೆ ಮಾಡಬೇಕಾಗುತ್ತದೆ. ತ್ಯಾಜ್ಯಗಳು ಭೂಮಿಯಲ್ಲಿ ಮಾತ್ರವಲ್ಲ ಸಮುದ್ರ, ಹಿಮಾಲಯ, ಬಾಹ್ಯಾಕಾಶಗಳನ್ನೂ ವ್ಯಾಪಿಸಿದೆ. ಇಲ್ಲಿಯೂ ನಿರ್ವಹಣೆಯಾಗಬೇಕು.

ಉಪಸಂಹಾರ : ಸ್ವಾಸ್ಥ್ಯ ಸಮಾಜ ಮತ್ತು ಸುಂದರ ದೇಶದ ನಿರ್ಮಾಣಕ್ಕೆ ತ್ಯಾಜ್ಯ ನಿರ್ವಹಣೆಯ ಪಾತ್ರ ಹಿರಿದು. ಸರ್ಕಾರದ ಪ್ರಯತ್ನಕ್ಕೆ ಸಾರ್ವಜನಿಕರಿಂದ ಸಹಕಾರ ಅತೀ ಅವಶ್ಯಕವಾಗಿಬೇಕು. ಕಸವನ್ನು ಸರಿಯಾಗಿ ವಿಂಗಡಿಸಿ ನೀಡಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಸಮಾವೇಶ ಮತ್ತು ಕಾರ್ಯಕ್ರಮಗಳಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು. ಜನಜಾಗೃತಿ ಕಾರ್ಯಕ್ರಮಗಳು ನಡೆಯಬೇಕು. ವಿದ್ಯಾರ್ಥಿಗಳು ಸಹ ಸ್ವಚ್ಛತೆಯ ಮಹತ್ವ ಅರಿತು ನಿತ್ಯ ಜೀವನದಲ್ಲಿ ಪಾಲಿಸಬೇಕು. ಹೀಗಾದಾಗ ಕಾರ್ಯಕ್ರಮ ಯಶಸ್ವಿಯಾಗಬಲ್ಲದು ಎಂಬುದು ನನ್ನ ಅನಿಸಿಕೆ.

ಮಾದರಿ ಉತ್ತರಗಳು : ಗದ್ಯಪಾಠ 5. ಯುದ್ಧ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಬಿ) ಸಂಯೋಜಿತವಾಕ್ಯ
2. (ಡಿ) ಮಿಶ್ರವಾಕ್ಯ
3. (ಎ) ಸಾಮಾನ್ಯವಾಕ್ಯ
4. (ಸಿ) ಸಾಮಾನ್ಯವಾಕ್ಯ
5. (ಬಿ) ಸಂಯೋಜಿತವಾಕ್ಯ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

6. ರಾಹಿಲನು ತನ್ನ ಕೈಯಲ್ಲಿದ್ದ ಔಷಧ ಮತ್ತು ತುರ್ತು ಪರಿಸ್ಥಿತಿಗೆ ಬೇಕಾದ ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.
7. ವೈಮಾನಿಕ ದಾಳಿಯಿಂದ ರಕ್ಷಿಸಿಕೊಳ್ಳಲು ಗಡಿ ಪ್ರದೇಶದಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಪಾಲಿಸಲಾಗುತ್ತದೆ.
8. ರಾಹಿಲ್ ಒಬ್ಬ ಸೇನಾ ವೈದ್ಯ.
9. ರಾಹಿಲನು ಮುದುಕಿಯ ಎದುರಿಗೆ "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ. ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು" ಎಂದು ಗಂಭೀರವಾಗಿ ನುಡಿದನು.
10. ಮುದುಕಿಯು "ಗಾಯ? ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ತಾನೇ?" ಎಂದು ಗೊಣಗಿಕೊಂಡಳು.
11. ಸೈನ್ಯದಲ್ಲಿದ್ದ ವೈದ್ಯನ ಹೆಸರು ರಾಹಿಲ.
12. ವಿಮಾನದ ಪೈಲಟ್ ರೇಡಿಯೋ ಸಮನಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಹೇಳಿದನು.
13. ರಾಹಿಲನು ಸೈನಿಕ ಉಡುಪಿನಲ್ಲಿದ್ದುದರಿಂದ ಆತನಿಗೆ ಈಜಲು ತೊಂದರೆಯಾಗುತ್ತಿತ್ತು.
14. ಮುದುಕಿಯು ತಾನು ಈ ಊರಿಗೆ ಬಂದು ಐವತ್ತು ವರ್ಷವಾಗಿದೆ ಎಂದು ತಿಳಿಸಿದಳು.
15. ಯುದ್ಧಕಾಲದಲ್ಲಿ ರಾತ್ರಿ ವೇಳೆ ಶತ್ರು ಸೈನಿಕರು ವೈಮಾನಿಕ ದಾಳಿಮಾಡಲು ಅವಕಾಶವಾಗದಂತೆ ವಿದ್ಯುತ್ ದೀಪ, ಬೆಂಕಿಯನ್ನು ಉರಿಸದೆ ಕತ್ತಲಿನಲ್ಲಿದ್ದು ರಕ್ಷಿಸಿಕೊಳ್ಳುವುದೇ 'ಬ್ಲಾಕ್ ಔಟ್' ನಿಯಮ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2ಅಂಕಗಳು) :

16. ವಿಮಾನದ ಪೈಲಟ್ ಡಾಕ್ಟರ್‌ರನ್ನು ಕುರಿತು "ಡಾಕ್ಟರ್! ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ?" ಎಂದು ಹೇಳಿದನು.
17. ಮಹಿಳೆಯ ಆರ್ತನಾದ ಕೇಳಿದ ರಾಹಿಲನ ಮನದಲ್ಲಿ "ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ

ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು? ಆ ಮನೆಯಿಂದ ಒಂದೇ ಒಂದು ಬೆಳಕಿನ ಕಿರಣವೂ ಹೊರಗಡೆಗೆ ಹಾಯುತ್ತಿಲ್ಲವಲ್ಲ. ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು 'ಬ್ಲಾಕ್ ಔಟ್' ನಿಯಮ ಪಾಲಿಸಲಾಗುತ್ತದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?" ಎಂಬ ಪ್ರಶ್ನೆಗಳು ಮೂಡಿದವು.

18. ಮುದುಕಿಯು ರಾಹಿಲನ ಬಳಿ, "ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೇವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆಯೆನ್ನು. ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ, ಯುದ್ಧ!" ಎಂದು ತಿರಸ್ಕಾರದಿಂದ ನುಡಿದಳು.

19. ನಿರ್ಜೀವಾಗಿರುವ ಮಗುವನ್ನು ನೋಡಿ ಮುದುಕಿಯು ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ? ಈ ಯುದ್ಧವಿಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ, ದೇವರೇ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ? ಎಂದು ನಿರಾಶೆಯಿಂದ ಹೇಳಿದಳು.

20. ರಾಹಿಲ್ ತಾನೋರ್ವ ಡಾಕ್ಟರ್ ಎಂದು ತಿಳಿಸಿದಾಗ, ಮುದುಕಿಯು "ಹೌದಾ ಎಂದು ಸಂತೋಷಪಟ್ಟಳು. ದೇವರೇ ನಿನ್ನನ್ನು ನಮ್ಮ ಬಳಿಗೆ ಕಳಿಸಿದನೆಂದು ತೋರುತ್ತದೆ. ಆದರೆ ನೀನು ತುಂಬಾ ಬಳಲಿದ್ದಿ, ನೀರಲ್ಲಿ ಒದ್ದೆಯಾಗಿದ್ದಿ, ಇರು ನನ್ನ ಮಗನ ಬಟ್ಟೆಯನ್ನು ತಂದುಕೊಡುವೆ" ಎನ್ನುತ್ತಾ ಒಳ ಹೋಗಿ ತನ್ನ ಮಗನ ಬಟ್ಟೆಗಳನ್ನು ರಾಹಿಲನಿಗೆ ನೀಡಿದಳು.

21. ನಿರ್ಜೀವವಾಗಿರುವ ಮಗುವಿನ ಬಳಿ ಕುಳಿತು ಮುದುಕಿ ಸೈನಿಕರಿಗೆ "ಹೂಂ...ನೋಡಿ; ನನ್ನ ಮೊಮ್ಮಗುವಿನ ಹೆಣವಿದೆ, ಅದನ್ನೂ ನೋಡಿ! ಈ ಯುದ್ಧ ನನ್ನ ಮೊಮ್ಮಗುವನ್ನೂ ಉಳಿಸಲಿಲ್ಲವಲ್ಲ? ಯಾರಿಗಾಗಿ, ಯಾತಕ್ಕಾಗಿ ಈ ಯುದ್ಧ? ಅದನ್ನಾದರೂ ಹೇಳಿರಿ" ಎಂದು ಹೇಳಿದಳು.

22. 'ಬಾಗಿಲು ತೆಗೆಯಿರಿ' ಎಂಬ ಗರ್ಜನೆಯ ಧ್ವನಿ ಕೇಳಿದ ಮುದುಕಿ ನಿಶ್ಯಬ್ದವಾಗಿ ರಾಹಿಲನನ್ನು ಸೊಸೆ ಮಲಗಿದ ಕೋಣೆಗೆ ಕಳುಹಿಸಿ ಮಂಚದಡಿಯನ್ನು ತೋರಿಸಿದಳು. ಬಾಗಿಲು ತೆರೆದಾಗ ಒಳ ನುಗ್ಗಿದ ಸೈನಿಕರು 'ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ' ಎಂದು ಹುಡುಕಲು ಮುಂದಾದಾಗ ನನ್ನ ಮೊಮ್ಮಗುವಿನ ಹೆಣವಿದೆ, ಅದನ್ನು ನೋಡಿ ಯಾರಿಗಾಗಿ, ಯಾತಕ್ಕಾಗಿ ಈ ಯುದ್ಧ? ಅದನ್ನಾದರೂ ಹೇಳಿರಿ. ಈ ಯುದ್ಧ ನನ್ನ ಮೊಮ್ಮಗುವನ್ನು ಉಳಿಸಲಿಲ್ಲವಲ್ಲ ಎಂದು ನಿರ್ಜೀವವಾಗಿರುವ ಮಗುವಿನ ಬಳಿ ಕುಳಿತು ಎದೆ ಬಡೆದುಕೊಂಡು ಅಳುತ್ತಾಳೆ. ಬಂದವರು ಮಗುವಿನ ಶವವನ್ನು ನೋಡಿದರು. ಕೋಣೆಯಿಂದ ಬರುತ್ತಿದ್ದ ಹಸಿ ನೆತ್ತರ ವಾಸನೆ ಮೂಗಿಗೆ ಬಡಿಯಿತು. ಬಂದ ಎಲ್ಲಾ ಸೈನಿಕರು ನಿಶ್ಯಬ್ದವಾಗಿ ಹಿಂದುರುಗಿದರು. ಹೀಗೆ ಮುದುಕಿ ರಾಹಿಲನನ್ನು ಸೈನಿಕರಿಂದ ರಕ್ಷಿಸಿದಳು.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

23. **ಸಾರಾ ಅಬೂಬಕ್ಕರ್ :** ಸಾರಾ ಅಬೂಬಕ್ಕರ್ ಅವರು ೩೦ ಜೂನ್ ೧೯೩೬ರಂದು ಕಾಸರಗೋಡಿನಲ್ಲಿ ಜನಿಸಿದರು. ಇವರು 'ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ, ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ ಪ್ರಶಸ್ತಿ' ಲಭಿಸಿದೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

24. ಆಳಾಗಬಲ್ಲವನು ಅರಸನಾಗಬಲ್ಲ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಗಾದೆಗಳು ಬದುಕಿನ ಪಾಠವನ್ನು ಒಂದು ಸಾಲಿನಲ್ಲಿ ಹಿಡಿದಿಡುತ್ತವೆ. ಪ್ರಸ್ತುತ ಗಾದೆಯು ಕಾಯಕ ಮತ್ತು ವ್ಯಕ್ತಿತ್ವದ ಮಹತ್ತ್ವವನ್ನು ತಿಳಿಸುವುದು.

ಶ್ರೀ ಕೃಷ್ಣನು "ಕರ್ತವ್ಯವೇ ದೇವರು" ಎಂದು ಗೀತೋಪದೇಶದಲ್ಲಿ ಸಾರಿ ಸಾರಿ ಹೇಳಿದ್ದಾನೆ. ಕಾಯಕದ ಘನತೆಯನ್ನು ಬಡವರು ಶ್ರೀಮಂತರೆನ್ನದೆ ತಿಳಿದುಕೊಳ್ಳ ಬೇಕಾಗಿರುವುದು ಅಗತ್ಯ. ತಾನು ಪುರುಷ ಗೃಹಕೃತ್ಯಗಳನ್ನು ಮಾಡುವುದು ಅವಮಾನ. ಎರಡು ಪದವಿಗಳನ್ನು ಪಡೆದಿರುವವನು ಹಳ್ಳಿಯಲ್ಲಿ ಕೃಷಿ ಮಾಡುವುದು ಅವಮಾನ ಎಂಬಂಥ ಧೋರಣೆ ಸರಿಯಲ್ಲ. ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ.

"ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ" ಎನ್ನುವ ನಾಣ್ನುಡಿಯಂತೆ ರೈತ ಅಚ್ಚುಕಟ್ಟಾಗಿ ಬೇಸಾಯ ಮಾಡಿದರೆ ಅನ್ನಕ್ಕೆ ಕೊರತೆಯಿಲ್ಲ. ರೈತನೆ ದುಡಿಯದಿದ್ದರೆ ಅರಸನೂ ಬಿಕ್ಕುತ್ತಾನೆ. ಆಳಿನ ದುಡಿಮೆ ಸಮಸ್ಯೆ ಸ್ಥಿತಿಗತಿಗಳನ್ನು ಸ್ವತಃ ಅವರೊಂದಿಗೆ ಬೆರೆತು ಅರ್ಥಮಾಡಿಕೊಂಡರಷ್ಟೇ ಅರಸ ಅದನ್ನು ಪರಿಹರಿಸಲು ಸಾಧ್ಯ. 'ಆಳಾಗಿ ದುಡಿ; ಅರಸರಾಗಿ ಮೆರೆ' ಎಂಬ ಮಾತು ಈ ಗಾದೆಯ ಮಾತನ್ನು ಸಮರ್ಥಿಸುತ್ತಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

25. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೇನಾ ಡಾಕ್ಟರ್ ರಾಹಿಲನು ಶತ್ರು ಸೈನಿಕರ ವೈಮಾನಿಕ ದಾಳಿಯಿಂದ ಸಮುದ್ರಕ್ಕೆ ಬಿದ್ದು, ಕಾಲಿಗೆ ಗಾಯಮಾಡಿಕೊಂಡು, ಕತ್ತಲಿನಲ್ಲೇ ಈಜಿ ದಡ ಸೇರುತ್ತಾನೆ. ಧಾರಾಕಾರವಾದ ಮಳೆ ಸುರಿಯುತ್ತಿತ್ತು. ರಕ್ಷಣೆ ಪಡೆಯಲೆಂದು ಹುಡುಕುತ್ತಿರುವಾಗ, ಒಂಟಿ ಮನೆಯೊಂದನ್ನು ಕಾಣುತ್ತಾನೆ. ಆ ಮನೆಯ ಬಳಿಗೆ ತೆವಳಿಕೊಂಡು ಹೋಗಿ ಬಾಗಿಲನ್ನು ತಟ್ಟುತ್ತ ಡಾಕ್ಟರ್ ರಾಹಿಲನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಶತ್ರುಗಳಿಂದ ತಪ್ಪಿಸಿಕೊಂಡು, ಶತ್ರುದೇಶದ ಮನೆಗೆ ಬಂದು, ಹೇಗಾದರೂ ಮಾಡಿ ರಕ್ಷಣೆ ಬೇಡಿ ಜೀವ ಉಳಿಸಿಕೊಳ್ಳಬೇಕೆಂಬ ರಾಹಿಲನ ಹಂಬಲ, ಆತನ ದಯನೀಯ ಸ್ಥಿತಿ ಪ್ರಸ್ತುತ ಮಾತಿನಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿದೆ.

26. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಮುದುಕಿಯು "ನನ್ನ ಸೊಸೆ ಹೆರಿಗೆ ಬೇನೆ ತಿನ್ನುತ್ತಿದ್ದಾಳೆ. ಸಂಜೆಯಿಂದಲೇ ನೋವು ಪ್ರಾರಂಭವಾಗಿದೆ. ಡಾಕ್ಟರ್ ಅಥವಾ ಸೂಲಗಿತ್ತಿಯನ್ನದರೂ ಕರೆಯೋಣವೆಂದರೇ ಈ ಬಾಂಬುಗಳು, ಬ್ಲಾಕ್‌ಔಟ್ ನಿಯಮ" ಎಂದು ಹೇಳಿದ ಮಾತುಗಳನ್ನು ಕೇಳಿದ ಸೇನಾವೈದ್ಯನಾದ ರಾಹಿಲನು ಮುದುಕಿಗೆ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ತನ್ನ ಕಾಲಿಗೆ ಪೆಟ್ಟಾಗಿ ಅತಿಯಾದ ನೋವಿದ್ದರೂ, ಅದನ್ನು ಲೆಕ್ಕಿಸದೆ ಮುದುಕಿಯ ಸೊಸೆಗೆ ಹೆರಿಗೆ ಮಾಡಿಸಲು ಮುಂದಾಗುವ ರಾಹಿಲನ ವೃತ್ತಿಧರ್ಮ ಮತ್ತು ಪರೋಪಕಾರದ ಗುಣ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ".

27. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ತನ್ನ ಮನೆಗೆ ಬಂದಿರುವಾತ ತಮ್ಮವನಲ್ಲ, ಶತ್ರುಗಳ ಕಡೆಯವನು. ತಮಗೆ, ತಮ್ಮ ದೇಶಕ್ಕೆ ದ್ರೋಹ ಬಗೆಯುವವನು ಎಂದು ಮುದುಕಿಯು ತಿಳಿದಾಗ, ಆಕೆಯ ಕಣ್ಣುಗಳು ರೋಷದಿಂದ ಕ್ಷಣಕಾಲ ಕೆರಳಿದವು. ನಂತರ ಬಾಗಿಲ ಬಳಿ ಸಮೀಪಿಸುತ್ತಾ ಆತನ ದಯನೀಯ ನೋಟದ ಮುಖ ನೋಡಿದಾಗ ಯುದ್ಧಕ್ಕೆ ಹೋದ ಮಗನ ನೆನಪಾಗಿ ಮುದುಕಿಯು ತನ್ನಲ್ಲೇ ಈ ಮಾತನ್ನು ಹೇಳಿಕೊಳ್ಳುತ್ತಾಳೆ.

ಸ್ವಾರಸ್ಯ : ಕಷ್ಟದಲ್ಲಿದ್ದರೂ ತನ್ನ ಸೊಸೆಯ ಪ್ರಾಣ ಉಳಿಸಿದ ರಾಹಿಲನಲ್ಲಿ ಮುದುಕಿಯು ತನ್ನ ಮಗನನ್ನು ಕಾಣುವ ಭಾವವು ಆಕೆಯಲ್ಲಿರುವ ಮಾತೃವಾತ್ಸಲ್ಯವನ್ನು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಳಿಸಿದೆ.

28. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ ಅದನ್ನೂ ನೋಡಿ!"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೈನಿಕರ ಉಡುಪಿನಲ್ಲಿದ್ದ ನಾಲ್ಕೈದು ಜನರು "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ?" ಎಂದು ಕೇಳುತ್ತಾ ಮುದುಕಿಯ ಮನೆಗೆ ನುಗ್ಗಿದಾಗ, ಮುದುಕಿಯು "ಇಲ್ಲವಲ್ಲಾ" ಎನ್ನುತ್ತಾಳೆ. ಆದರೆ ಅಧಿಕಾರಿ "ಆದರೂ ಮನೆಯಲ್ಲೊಮ್ಮೆ ನೋಡಿ ಬಿಡಿ" ಎಂದು ಸೈನಿಕರಿಗೆ ಅಪ್ಪಣೆ ಮಾಡುತ್ತಾನೆ. ಆಗ ಮುದುಕಿಯು ರಾಹಿಲನನ್ನು ರಕ್ಷಿಸುವ ಸಲುವಾಗಿ ಸತ್ತ ಮುಗುವಿನ ಬಳಿ ಕುಳಿತು ಎದೆ ಬಡಿದು ಕೊಳ್ಳುತ್ತಾ ಈ ಮಾತನ್ನು ಹೇಳುತ್ತಾಳೆ.

ಸ್ವಾರಸ್ಯ : ಶತ್ರು ದೇಶದವನಾದರೂ ತನ್ನ ಗಾಯದ ನೋವನ್ನು ಸಹಿಸಿಕೊಂಡು, ಸೊಸೆಯ ಪ್ರಾಣ ಉಳಿಸಿದ ರಾಹಿಲನನ್ನು ರಕ್ಷಿಸುವ ಮುದುಕಿಯ ಉಪಾಯ ಮತ್ತು ಮಾನವೀಯ ಗುಣ ಹಾಗೂ ಯುದ್ಧದ ಪರಿಣಾಮದ ವಾಚ್ಯಾರ್ಥ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

29. "ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ?"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೇನಾ ಡಾಕ್ಟರ್ ರಾಹಿಲನು ಶತ್ರು ಸೈನಿಕರ ವೈಮಾನಿಕ ದಾಳಿಯಿಂದ ಸಮುದ್ರಕ್ಕೆ ಬಿದ್ದು, ಕಾಲಿಗೆ ಗಾಯಮಾಡಿಕೊಂಡು, ಕತ್ತಲಿನಲ್ಲೇ ಈಜಿ ದಡ ಸೇರುತ್ತಾನೆ. ಅಲ್ಲಿಂದ ತಪ್ಪಿಸಿಕೊಂಡು ಬರುವಾಗ ಧಾರಾಕಾರವಾದ ಮಳೆ ಸುರಿಯುತ್ತಿತ್ತು. ರಕ್ಷಣೆ ಪಡೆಯಲೆಂದು ಹುಡುಕುತ್ತಿರುವಾಗ, ಒಂಟಿ ಮನೆಯೊಂದನ್ನು ಕಾಣುತ್ತಾನೆ. ಆ ಒಂಟಿಮನೆಯಿಂದ ಮಹಿಳೆಯೊಬ್ಬಳ ಆರ್ತನಾದ ರಾಹಿಲನು ಕೇಳಿ ಅವನ ಮನದಲ್ಲಿ ಅನೇಕ ಪ್ರಶ್ನೆಗಳು ಮೂಡಿದ ಸಂದರ್ಭದಲ್ಲಿ ಬಂದ ಪ್ರಶ್ನೆ ಇದು.

ಸ್ವಾರಸ್ಯ : ಶತ್ರುಗಳಿಂದ ತಪ್ಪಿಸಿಕೊಂಡು, ಶತ್ರುದೇಶದ ಮನೆಗೇ ಬಂದು, ಹೇಗಾದರೂ ಮಾಡಿ ರಕ್ಷಣೆ ಬೇಡಿ ಜೀವ ಉಳಿಸಿಕೊಳ್ಳಬೇಕೆಂಬ ಸಂದರ್ಭದಲ್ಲಿ ಒಂಟಿಮನೆಯ ಮಹಿಳೆಯ ಆರ್ತನಾದ ರಾಹಿಲನಲ್ಲಿ ಭಯವನ್ನುಂಟು ಮಾಡಿದ್ದು ಇಲ್ಲಿನ ಸ್ವಾರಸ್ಯವಾಗಿದೆ.

30. "ಯಾರಪ್ಪಾ ನೀನು? ನಮ್ಮ ಕಡೆಯವನು ತಾನೇ?"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೇನಾ ಡಾಕ್ಟರ್ ರಾಹಿಲನು ಶತ್ರು ಸೈನಿಕರ ವೈಮಾನಿಕ ದಾಳಿಯಿಂದ ಸಮುದ್ರಕ್ಕೆ ಬಿದ್ದು, ಕಾಲಿಗೆ ಗಾಯಮಾಡಿಕೊಂಡು, ಕತ್ತಲಿನಲ್ಲೇ ಈಜಿ ದಡ ಸೇರುತ್ತಾನೆ. ಅಲ್ಲಿಂದ ತಪ್ಪಿಸಿಕೊಂಡು ಬರುವಾಗ ಧಾರಾಕಾರವಾದ ಮಳೆ ಸುರಿಯುತ್ತಿತ್ತು. ರಕ್ಷಣೆ ಪಡೆಯಲೆಂದು ಹುಡುಕುತ್ತಿರುವಾಗ, ಒಂಟಿ ಮನೆಯೊಂದನ್ನು ಕಾಣುತ್ತಾನೆ. ನಂತರ ಆ ಮನೆಯ ಬಳಿಗೆ ತೆವಳಿಕೊಂಡು ಹೋಗಿ ಬಾಗಿಲನ್ನು ತೆರೆದಾಗ ಒಳ ಪ್ರವೇಶಿಸಿದ ಅಪರಿಚಿತ ರಾಹಿಲನ ಬಳಿಗೆ ಬಂದು ಆ ಒಂಟಿ ಮನೆಯಲ್ಲಿನ ಮುದುಕಿ ಪ್ರಶ್ನಿಸಿದ ಸಂದರ್ಭದಲ್ಲಿ ಬಂದ ಮಾತುಗಳಿವು.

ಸ್ವಾರಸ್ಯ : ಮುದುಕಿಯ ಈ ಮಾತುಗಳಲ್ಲಿ ಆಕೆಯಲ್ಲಿ ರಾಹಿಲನ ಬಗ್ಗೆ ಭಯ ಮತ್ತು ಸಂದೇಹದ ಛಾಯೆ ಇರುವುದು ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

31. "ಯಾರಮ್ಮಾ ಅದು? ಏನಾಗಿದೆ?"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೇನಾ ಡಾಕ್ಟರ್ ರಾಹಿಲನು ಶತ್ರು ಸೈನಿಕರ ವೈಮಾನಿಕ ದಾಳಿಯಿಂದ ರಕ್ಷಣೆ ಪಡೆಯಲೆಂದು ಹುಡುಕುತ್ತಿರುವಾಗ, ಒಂಟಿ ಮನೆಯೊಂದನ್ನು ಕಾಣುತ್ತಾನೆ. ನಂತರ ಆ ಮನೆಯ ಬಳಿಗೆ ತೆವಳಿಕೊಂಡು ಹೋಗಿ ಬಾಗಿಲನ್ನು ತೆರೆದಾಗ ಒಳ ಪ್ರವೇಶಿಸುತ್ತಾನೆ. ಅಲ್ಲಿ ಮುದುಕಿಯ ಸೊಸೆಯ ಹೆರಿಗೆ ನೋವಿನ ಆರ್ತನಾದ ಕೇಳಿ ರಾಹಿಲನು ಮುದುಕಿಯನ್ನು ಪ್ರಶ್ನಿಸುತ್ತ ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ತನ್ನ ಕಾಲಿಗೆ ಪೆಟ್ಟಾಗಿ ಅತಿಯಾದ ನೋವಿದ್ದರೂ, ಅದನ್ನು ಮರೆತು ಮುದುಕಿಯ ಸೊಸೆಯ ಬಗ್ಗೆ ರಾಹಿಲನು ವಿಚಾರಿಸುವಲ್ಲಿ ಪರರ ನೋವಿಗೆ ಸ್ಪಂದಿಸುವ ಮಾನವೀಯತೆಯ ಗುಣ ಹಾಗೂ ವೃತ್ತಿಧರ್ಮ ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

32. "ಹೊರಗೆ ಯುದ್ಧದ ಹೆಸರಿನಲ್ಲಿ ಮನುಷ್ಯ ಜೀವಿಗಳ ಸಾಮೂಹಿಕ ಕೊಲೆಯಾಗುತ್ತಿದೆ!"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ರಾಹಿಲನು ತನ್ನ ರಕ್ಷಣೆಗೆಂದು ಪ್ರವೇಶಿಸಿದ ಮನೆಯ ಹೆಂಗಸೊಬ್ಬಳು ಹೆರಿಗೆ ನೋವಿನಿಂದ ಬಳಲುತ್ತಿರುವುದನ್ನು ಕಂಡು ತಾನೋರ್ವ ವೈದ್ಯನಾಗಿರುವುದರಿಂದ ಆ ಮಹಿಳೆಯ ಹೆರಿಗೆ ಮಾಡಿಸಲು ಮುಂದಾಗುತ್ತಾನೆ. ಜೀವಿಯೊಂದನ್ನು ಹೊರಹಾಕಲು ಆ ಹೆಣ್ಣುಮಗಳು ತನ್ನ ಜೀವವನ್ನೇ ಪಣಕ್ಕಿಟ್ಟಿರುವುದನ್ನು ಕಂಡು ರಾಹಿಲನ ಮನದಲ್ಲಿ ಈ ಮೇಲಿನ ಮಾತು ಮೂಡಿಬಂದಿದೆ.

ಸ್ವಾರಸ್ಯ : ಒಂದೆಡೆ ಹೊಸ ಜೀವಿಗೆ ಜನ್ಮನೀಡಲು ತನ್ನ ಜೀವವನ್ನೇ ಪಣಕ್ಕಿಡುವ ತಾಯಿ, ಮತ್ತೊಂದೆಡೆ ಯುದ್ಧದ ಹೆಸರಿನಲ್ಲಿ ನಡೆಯುವ ರಕ್ತಪಾತದ ಸಾವು ರಾಹಿಲನಲ್ಲಿ ವೈಚಿತ್ರ್ಯವನ್ನು ಮೂಡಿಸಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

33. "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ?"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶತ್ರು ದೇಶದ ಸೈನಿಕನು ಮುದುಕಿಯ ಮನೆಯನ್ನು ಪ್ರವೇಶಿಸಿರಬಹುದು ಎಂಬ ಅನುಮಾನದಿಂದ ಮನೆಯ ಬಳಿ ಬಂದ ಸೈನಿಕರ ಉಡುಪಿನಲ್ಲಿದ್ದ ನಾಲ್ಕೈದು ಜನರು ಈ ಮಾತನ್ನು ಮುದುಕಿಗೆ ಕೇಳುತ್ತಾರೆ.

ಸ್ವಾರಸ್ಯ : ವಿಮಾನ ಹೊಡೆದುರುಳಿಸಿದರೂ ಯಾರಾದರೂ ಪ್ರಾಣಾಪಾಯದಿಂದ ಬದುಕಿ ಈ ಮನೆ ಪ್ರವೇಶಿಸಿರ ಬಹುದೆಂಬ ಅನುಮಾನದಿಂದ ಪ್ರಶ್ನಿಸಿರುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

34. "ಆದರೂ ಈ ಮನೆಯಲ್ಲೊಮ್ಮೆ ನೋಡಿ ಬಿಡಿ"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶತ್ರು ದೇಶದ ಸೈನಿಕನು ಆ ಮನೆಯನ್ನು ಪ್ರವೇಶಿಸಿರಬಹುದು ಎಂಬ ಅನುಮಾನದಿಂದ ಮುದುಕಿಯ ಮನೆಯನ್ನು ಪ್ರವೇಶಿಸಿದ ಸೈನಿಕರಲ್ಲಿ ಒಬ್ಬ ಸೈನಿಕ "ವಿಮಾನವನ್ನೇ ನಾವು ಹೊಡೆದುರುಳಿಸಿರುವಾಗ ಅದರಿಂದ ಯಾರು ಬದುಕಿರಲಾರರು. ಅಲ್ಲದೇ ಈ ಕತ್ತಲಿನಲ್ಲಿ ಸುಮ್ಮನೇ ವ್ಯರ್ಥಪ್ರಯತ್ನ ಮಾಡಬೇಕಿದೆ" ಎಂದು ಹೇಳಿದ ಸಂದರ್ಭದಲ್ಲಿ ಹಿರಿಯ ಸೈನಿಕ ಅಧಿಕಾರಿ ಈ ಮೇಲಿನ ಮಾತನ್ನು ಸೈನಿಕರಿಗೆ ಆದೇಶದ ರೀತಿಯಲ್ಲಿ ಹೇಳುತ್ತಾನೆ.

ಸ್ವಾರಸ್ಯ : ವಿಮಾನ ಹೊಡೆದುರುಳಿಸಿದರೂ ಯಾರಾದರೂ ಬದುಕಿ ಈ ಮನೆ ಪ್ರವೇಶಿಸಿರಬಹುದೆಂಬ ಅನುಮಾನದಿಂದ ಸೈನಿಕ ಅಧಿಕಾರಿ ಮನೆಯ ಸಂಪೂರ್ಣ ತಪಾಸಣೆ ಮಾಡಿಸಲು ಹೇಳಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

35. "ಇವರ ಮನೆ ಹಾಳಾಗ!"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ರಾಹಿಲನು ಮುದುಕಿಯ ಬಳಿ ಚರ್ಚಿಸುತ್ತ ಯುದ್ಧದ ಬಗೆಗೆ ಕೇಳುತ್ತಾನೆ. ಆಗ ಮುದುಕಿಯು ಇಲ್ಲಿನ ಜನರು ದುಡಿಯುವ ಜನರಿಂದ ಹಣ ದೋಚುವುದಲ್ಲದೇ, ಮನೆಯ ಮಕ್ಕಳನ್ನು ಯುದ್ಧಕ್ಕೆ ಕರೆದೊಯ್ಯುತ್ತಾರೆ. ಇವರ ಮನೆ ಹಾಳಾಗಿ ಹೋಗಲಿ ಎಂದು ಶಪಿಸುತ್ತ ಈ ಮೇಲಿನ ಮಾತನ್ನು ನುಡಿದಳು.

ಸ್ವಾರಸ್ಯ : ಮುದುಕಿಯು ತಾನು ವಾಸಿಸುವ ಊರಿನ ಜನರ ದೌರ್ಜನ್ಯ ಹಾಗೂ ಯುದ್ಧದಿಂದ ಬೇಸತ್ತು ಶಪಿಸುತ್ತ ನುಡಿದ ಈ ಮಾತು ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

36. "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ."

ಆಯ್ಕೆ : ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ರಾಹಿಲನು ತನ್ನ ರಕ್ಷಣೆಗಾಗಿ ಒಂಟಿ ಮನೆಯ ಸಮೀಪ ತೆರಳಿ ಬಾಗಿಲು ತಟ್ಟಿದನು. ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೆನೆ ಎಂದಾಗ ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ತಾನೇ? ಎಂದು ಮುದುಕಿ ಬಾಗಿಲು ತೆರೆದಳು. ಆ ಸಂದರ್ಭದಲ್ಲಿ ರಾಹಿಲನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಜನಸಾಮಾನ್ಯರಲ್ಲಿ ಯುದ್ಧದ ಬಗೆಗೆ ಇರುವ ತಿರಸ್ಕಾರ, ಯುದ್ಧದಲ್ಲಿ ನೊಂದವರು ಧರ್ಮ ಭಿನ್ನತೆ, ದೇಶ ಭಿನ್ನತೆ, ವೈರಿ-ಮಿತ್ರ ಎಂಬುದನ್ನು ಪರಿಗಣಿಸದೆ ಪರಸ್ಪರರು ಸಂಕಷ್ಟ ಪರಿಹಾರಕ್ಕೆ ರಕ್ಷಣೆಗೆ ತೊಡಗುವ ಮಾನವೀಯ ಮೌಲ್ಯಯುತ ನಡವಳಿಕೆಗಳು ಇಲ್ಲಿ ಮನೋಜ್ಞವಾಗಿ ಮೂಡಿಬಂದಿವೆ.

37. "ಈ ಮಳೆಯಲ್ಲಿ ಈ ಕತ್ತಲಲ್ಲಿ ನಾನು ಯಾರನ್ನು ಕರೆಯಲಿ?"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದ 'ಚಪ್ಪಲಿಗಳು' ಕೃತಿಯಿಂದ ಆಯ್ದ 'ಯುದ್ಧ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೇನಾ ಡಾಕ್ಟರ್ ರಾಹಿಲನು ಶತ್ರು ಸೈನಿಕರ ವೈಮಾನಿಕ ದಾಳಿಯಿಂದ ಸಮುದ್ರಕ್ಕೆ ಬಿದ್ದು ರಕ್ಷಣೆ ಪಡೆಯಲೆಂದು ಹುಡುಕುತ್ತಿರುವಾಗ , ಒಂಟಿ ಮನೆಯೊಂದನ್ನು ಕಾಣುತ್ತಾನೆ . ನಂತರ ಆ ಮನೆಯೊಳಗೆ ಹೆರಿಗೆ ನೋವಿನ ಆರ್ತನಾದವನ್ನು ರಾಹಿಲ್ ಕೇಳುತ್ತಿರುವಾಗ ಮುದುಕಿ ಸೊಸೆಗೆ ಹೇಳುವ ಸಂದರ್ಭವಾಗಿದೆ.

ಸ್ವಾರಸ್ಯ : 'ಬ್ಲಾಕ್‌ಔಟ್ ' ನಿಯಮದ ಸಮಯದಲ್ಲಿ ಸೊಸೆಯು ಹೆರಿಗೆ ನೋವನ್ನು ಅನುಭವಿಸುತ್ತಿರುವುದು ಹಾಗೂ ಸಹಾಯ ಮಾಡಲಾಗದ ಮುದುಕಿಯ ಅಸಹಾಯಕ ಸ್ಥಿತಿ ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

38. ರಾಹಿಲ ಮತ್ತು ಮುದುಕಿಯ ಮನದಲ್ಲಿ ಮೂಡಿ ಬಂದಿರುವ ಮಾನವೀಯತೆಯ ಸಹಕಾರವೆಂದರೆ ಸೈನಿದಲ್ಲಿ ವೈದ್ಯನಾಗಿದ್ದ ರಾಹಿಲನು ವಿಮಾನ ಸ್ಫೋಟದಿಂದ ಗಾಯಗೊಡು ನೀರಿಗೆ ಬಿದ್ದನು. ಪ್ರಯಾಸದಿಂದ ಈಜಿ ದಡ ಸೇರಿದರೂ ಕಾಲಿಗೆ ಗಾಯವಾದ್ದರಿಂದ ನಡೆಯಲಾರದೆ ಆ ಕತ್ತಲಲಿ ಮಿಂಚಿನ ಬೆಳಕನ್ನು ಅನುಸರಿಸಿ ಧಾರಾಕಾರ ಮಳೆಯಲ್ಲಿ ಒಂಟಿ ಮನೆಗೆ ತೆವಳುತ್ತಾ ಬಂದನು. ಆ ಮನೆಯಲ್ಲಿ ಮುದುಕಿಯ ಸೊಸೆ ಹೆರಿಗೆ ಬೇನೆಯನ್ನು ಅನುಭವಿಸುತ್ತಿದ್ದಳು. ರಾಹಿಲನು "ಅಮ್ಮಾ ನಾನೋರ್ವ ಡಾಕ್ಟರ್ ನಾನಾಕೆಯನ್ನು ಪರೀಕ್ಷಿಸಲೇ? ಎಂದು ಕೇಳಿದನು. ಮುದುಕಿಯು ಸಂತೋಷದಿಂದ ಒಪ್ಪಿಕೊಳ್ಳುವಳು. ರಾಹಿಲನು ತನ್ನ ಒದ್ದೆ ಬಟ್ಟೆ ಬದಲಿಗೆ ಮುದುಕಿ ಕೊಟ್ಟ ಆಕೆಯ ಮಗನ ಬಟ್ಟೆ ಧರಿಸುತ್ತಾನೆ. ತನಗೆ ತೀವ್ರವಾಗಿ ಕಾಲಿಗೆ ಪೆಟ್ಟಾಗಿದ್ದರೂ ಅದನ್ನು ಕಡೆಗಣಿಸಿ, ಸೊಸೆಯ ಆರೈಕೆಗೆ ಸಿದ್ಧನಾಗುತ್ತಾನೆ. ಸೊಸೆಯನ್ನು ಪರೀಕ್ಷಿಸುತ್ತಾನೆ. ಯಾವುದೇ ವೈದ್ಯಕೀಯ ಉಪಕರಣ ಔಷಧಿಗಳೂ ಇಲ್ಲದಿದ್ದರೂ ತನ್ನ ವೈದ್ಯ ವೃತ್ತಿಯ ಅನುಭವದ ಮೇಲೆ ಬಹಳಷ್ಟು ಪ್ರಯತ್ನಪಟ್ಟು ಸೊಸೆಯನ್ನು ಬದುಕಿಸುತ್ತಾನೆ. ಆದರೆ ಮಗುವನ್ನು ಬದುಕಿಸಲಾಗಲಿಲ್ಲ. ರಾಹಿಲನು ಇಲ್ಲದಿದ್ದರೆ ಸೊಸೆಯೂ ಬದುಕುತ್ತಿರಲಿಲ್ಲ. ಮುದುಕಿಯು ರಾಹಿಲನು ಯುದ್ಧದ ಅಪರಾತ್ರಿ ಮಳೆಯಲ್ಲಿ ಬಂದಾಗ ಆಶ್ರಯ ನೀಡುತ್ತಾಳೆ. ತನ್ನ ಮಗನ ಬಟ್ಟೆ ನೀಡುತ್ತಾಳೆ. ಸೊಸೆಯನ್ನು ರಕ್ಷಿಸಿದ್ದರಿಂದ ಆತನಲ್ಲಿ ತನ್ನ ಮಗನನ್ನು ಕಾಣುತ್ತಾಳೆ. ವೈರಿ ಸೈನಿಕರು ಮುದುಕಿಯ ಮನೆ ಶೋಧಿಸಲು ಮನೆಗೆ ಬಂದಾಗ ತನ್ನ ಸೊಸೆ ಮಲಗಿಕೊಂಡಿರುವ ಮಂಚದಡಿ ರಾಹಿಲನನ್ನು ಅಡಗಿಸುತ್ತಾಳೆ. ಸೈನಿಕರು ಒಳಬಂದಾಗ ಮೊಮ್ಮಗುವಿನ ಶವದ ಎದುರು ಗೋಳಾಡುತ್ತಾಳೆ. ಇದನ್ನು ಕಂಡು ಸೈನಿಕರು ಹೊರಟು ಹೋಗುತ್ತಾರೆ. ನಂತರ ಮುದುಕಿಯು ರಾಹಿಲನಿಗೆ ಉಳಿಯಲು ಬೇರೆ ಕೋಣೆ ವ್ಯವಸ್ಥೆ ಮಾಡುತ್ತಾಳೆ. ಒಂದೆರಡು ದಿನಗಳಲ್ಲಿ ಪರಸ್ಪರರಲ್ಲಿ ವಿಶ್ವಾಸ ಮೂಡುತ್ತದೆ.

39. ಮುದುಕಿಯು ಚಿಕ್ಕ ಮಕ್ಕಳನ್ನು ಯುದ್ಧಕ್ಕೆ ಕರೆದೊಯ್ಯುತ್ತಾರೆ ಎಂಬ ವಿಷಯವನ್ನು ಹೇಳಿದಾಗ ರಾಹಿಲನು "ಈಗ ನಿಮ್ಮ ಮಗನೆಲ್ಲಿದ್ದಾನಮ್ಮಾ?" ಎಂದು ಕೇಳಿದನು. ಆಗ

ಮುದುಕಿಯು ತನ್ನ ಮಗ ಯುದ್ಧಕ್ಕೆ ಹೋದ ಸಂದರ್ಭವನ್ನು ಹೀಗೆ ವಿವರಿಸಿದಳು. "ಯುದ್ಧಕ್ಕೆ ಹೋಗಿದ್ದಾನೆ! ನನ್ನ ಮಗನಿನ್ನೂ ಚಿಕ್ಕ ಹುಡುಗನಾಗಿದ್ದಾಗ ಯುದ್ಧಕ್ಕೆ ಹೋದ ಅವನ ತಂದೆ ಹಿಂತಿರುಗಲಿಲ್ಲ. ಎದೆ ತುಂಬ ಬೂದಿ ಮುಚ್ಚಿದ ಕೆಂಡ. ಎದೆಯ ಗಾಯ ಇಂದಿಗೂ ಇದೆ. ಎಲ್ಲಾ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲಹಿದೆ. ಮದುವೆಯನ್ನೂ ಮಾಡಿದೆ. ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗ ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ಧ! ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ..." ಮುದುಕಿಯ ಮಗ ಚಿಕ್ಕವನಿರುವಾಗ ಗಂಡನು ಯುದ್ಧದಲ್ಲಿ ತೀರಿಹೋದನು. ಈ ನೋವನ್ನು ಮಗನಿಗಾಗಿ ಸಹಿಸಿಕೊಂಡಳು. ಮಗನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡಿ ಮದುವೆ ಮಾಡಿದಳು. ಮೊಮ್ಮಗು ಬರುವ ಸಂತೋಷದಲ್ಲಿದ್ದರು. ಆದರೆ ಈಗ ಮೊಮ್ಮಗು ಸಹ ತೀರಿ ಹೋಯಿತು. ಯುದ್ಧಕ್ಕೆ ಹೋದ ಮಗ ಬಂದರೆ ಸಾಕು ಎಂದುಕೊಳ್ಳುತ್ತಿದ್ದಳು. ಒಟ್ಟಾರೆ ಯುದ್ಧವು ಮುದುಕಿಯ ಬಾಳಲ್ಲಿ ಬಹಳಷ್ಟು ದುರಂತ ತಂದಿತು ಎಂಬುದು ಅವಳ ಮಾತಲ್ಲಿ ಕಾಣುತ್ತದೆ.

ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

40. **ಅ.** ಸಾಧಕನಿಗೆ ಯಾವ ತೊಂದರೆಯೂ ಆಗಬಾರದೆಂದು ಎಲ್ಲ ಧರ್ಮಗಳೂ ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಹೇಳಿವೆ. ಧರ್ಮಶಾಲೆಗಳು, ವಿಹಾರಗಳು, ಅನ್ನಛತ್ರಗಳು-ಇವು ಏರ್ಪಟ್ಟಿರುವುದು ಇಂಥವರಿಗಾಗಿ. ಅನೇಕ ದೇವಸ್ಥಾನಗಳಲ್ಲಿಯೂ, ಮಠಗಳಲ್ಲಿಯೂ ಇಂಥ ಏರ್ಪಾಟಿದೆ. ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಂಡವರು ಇದ್ದಾರೆ.

ಆ. ಕೇಳಿ ದೊರಕಿಸಿಕೊಂಡ ಸಾಮಗ್ರಿ-ಸೌಕರ್ಯಗಳ ಮೇಲೆ ನಿಂತ ಸಾಧನೆ-ತಪಸ್ಸು, ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ ಅದಕ್ಕೆ ಸ್ವಯಂಪೂರ್ಣತೆ ಇಲ್ಲ. ಹಾಗಾಗಿ ಸಾಧಕನಾದವನು ಇನ್ನೊಬ್ಬರ ಮೇಲೆ ಎಂದಿಗೂ ಭಾರ ಹಾಕಿರಬಾರದು. ಇನ್ನೊಬ್ಬರು ತಾವಾಗಿಯೇ ಕೈಯೆತ್ತಿಕೊಡದೆ ಅವನು ಏನನ್ನೂ ಸ್ವೀಕರಿಸಬಾರದು. ದಾತೃವಿನ ಮನವನ್ನು ಹತ್ತುಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು.

ಪತ್ರಲೇಖನ ಬರೆಯುವುದು :

41.

ದಿನಾಂಕ : ೦೨.೧೦.೨೦೨೬
ಸ್ಥಳ : ಹಾವೇರಿ

ಇವರಿಂದ,
ಪ್ರಕಾಶ
ಹತ್ತನೆಯ ತರಗತಿ
ಸರಕಾರಿ ಪ್ರೌಢಶಾಲೆ
ಹಾವೇರಿ

ಇವರಿಗೆ,
ಮಾನ್ಯ ಕಾರ್ಯದರ್ಶಿಗಳು,
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ,
ಬೆಂಗಳೂರು.

ಮಾನ್ಯರೆ,

ವಿಷಯ : ಪರಿಷತ್ತಿನ ಪ್ರಕಟಣೆಯಾದ 'ಕನ್ನಡ ನಿಘಂಟಿ' ನ ಹತ್ತು ಪ್ರತಿಗಳನ್ನು ಕಳುಹಿಸಿ ಕೊಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪರಿಷತ್ತು ಪ್ರಕಟಿಸಿರುವ ಕನ್ನಡ ನಿಘಂಟಿನ ಹತ್ತು ಪ್ರತಿಗಳು ನನಗೆ ಮತ್ತು ನನ್ನ ಗೆಳೆಯರಿಗೆ ಬೇಕಾಗಿದೆ. ಅಧ್ಯಯನಕ್ಕೆ ಉಪಯುಕ್ತವಾಗಿರುವ ಈ ನಿಘಂಟು ಹತ್ತು ಪ್ರತಿಗಳನ್ನು ದಯಮಾಡಿ ನನ್ನ ವಿಳಾಸಕ್ಕೆ ವಿ.ಪಿ.ಪಿ. ಮಾಡಬೇಕಾಗಿ ಈ ಮೂಲಕ ಕೇಳಿ ಕೊಳ್ಳುತ್ತೇನೆ. ಆ ಬಗ್ಗೆ ಐನೂರು ರೂಪಾಯಿಗಳ ಬ್ಯಾಂಕ್ ಹುಂಡಿಯನ್ನು ಮುಂಗಡ ರೂಪವಾಗಿ ಈ ಪತ್ರದ ಜೊತೆ ಇರಿಸಿದ್ದೇನೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ
ಪ್ರಕಾಶ

ಹೊರವಿಳಾಸ :

ಇವರಿಗೆ, ಮಾನ್ಯ ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು.	ಇವರಿಂದ, ಪ್ರಕಾಶ ಹತ್ತನೆಯ ತರಗತಿ ಸರಕಾರಿ ಪ್ರೌಢಶಾಲೆ ಹಾವೇರಿ

ಪ್ರಬಂಧ ಬರೆವಣಿಗೆ :

42. ಸಾಮಾಜಿಕ ಪಿಡುಗುಗಳು :

ಪೀಠಿಕೆ : 'ವೈಜ್ಞಾನಿಕ ಪ್ರಗತಿಗಳು ಅಭಿವೃದ್ಧಿಯ ಸಂಕೇತ, ಸಾಮಾಜಿಕ ಪಿಡುಗುಗಳು ಅವನತಿಯ ಸಂಕೇತ'. ಸಮಾಜದ ಪ್ರಗತಿಗೆ ಮತ್ತು ಮಾನವನ ಅಭಿವೃದ್ಧಿಗೆ ಮಾರಕವಾಗುವ ಅಂಶಗಳನ್ನೇ ಸಾಮಾಜಿಕ ಪಿಡುಗುಗಳು ಎನ್ನುವರು. ದೇಹಕ್ಕೆ ಅನಾರೋಗ್ಯವಿದ್ದಂತೆ ಇವು ಸಮಾಜದ ರೋಗಗಳು. ಈ ರೋಗಗಳು ಹಲವಾರು ಇದ್ದರೂ ಚಿಕಿತ್ಸೆ ಇರುವಂತೆ ಸಾಮಾಜಿಕ ಪಿಡುಗುಗಳಿಗೂ ಪರಿಹಾರೋಪಾಯಗಳಿವೆ. ಸ್ವಾಸ್ಥ್ಯ ಸಮೃದ್ಧ ಸಮಾಜ ನಿರ್ಮಾಣವಾಗಲು ಸಾಮಾಜಿಕ ಪಿಡುಗುಗಳ ಮೇಲೆ ವಿಜಯ ಸಾಧಿಸಬೇಕಿದೆ.

ವಿಷಯ ನಿರೂಪಣೆ : ಪ್ರಮುಖ ಸಾಮಾಜಿಕ ಪಿಡುಗುಗಳೆಂದರೆ ಜಾತೀಯತೆ, ಅಸ್ಪೃಶ್ಯತೆ, ಮೂಢನಂಬಿಕೆ, ಮಹಿಳಾ ಶೋಷಣೆ, ಮಾದಕ ವಸ್ತು ಸೇವನೆ, ಭ್ರಷ್ಟಾಚಾರ, ಭಯೋತ್ಪಾದನೆ, ಬಡತನ, ಅನಕ್ಷರತೆ ಮುಂತಾದವು.

ಜಾತೀಯತೆ : ಭಾರತ ಜಾತ್ಯತೀತ ರಾಷ್ಟ್ರವಾಗಿದ್ದರೂ ಜಾತಿಯ ಹೆಸರಲ್ಲಿ ಮೇಲು ಕೀಳು, ಧರ್ಮಗಳಲ್ಲಿ ಒಡಕು, ಕೆಳಜಾತಿಯ ಜನರ ಶೋಷಣೆ ಇವೆಲ್ಲವೂ ಸಮಾನತೆಗೆ ಕಳಂಕವಾಗಿವೆ.

ಅಸ್ಪೃಶ್ಯತೆ : ವರ್ಣವ್ಯವಸ್ಥೆಯಲ್ಲಿ ಕೆಳವರ್ಗದವರನ್ನು ಮುಟ್ಟಿಸಿಕೊಳ್ಳದೆ ಅಥವಾ ದೂರವಿಟ್ಟು ಪಕ್ಷಪಾತ ಮಾಡಿ ಶೋಷಿಸಲಾಗಿತ್ತದೆ. ಇದು ಇಂದು ಕಡಿಮೆಯಾಗಿದ್ದರೂ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ.

ಮೂಢನಂಬಿಕೆ : ನಂಬಿಕೆಯೇ ಜೀವನ ಮೂಢನಂಬಿಕೆಯೇ ಮರಣ. ಬಲಿಕೊಡುವುದು, ಭೂತೋಚ್ಚಾಟನೆ, ಅಘೋರಿ, ಮಾಟ, ವಾಮಾಚಾರ, ಪಂಕ್ತಿ ಬೇಧ, ಬೆನ್ನಿಗೆ ಕೊಕ್ಕೆ ಸಿಕ್ಕಿಸುವ ಸಿಡಿಪದ್ಧತಿ ಹೀಗೆ ಹಲವು ಮೂಢನಂಬಿಕೆಗಳು ಮಾನವನ ಅಜ್ಞಾನದ ಸಂಕೇತಗಳಾಗಿವೆ.

ಮಹಿಳಾ ಶೋಷಣೆ : ವರದಕ್ಷಿಣೆ, ಹೆಣ್ಣು ಭ್ರೂಣ ಹತ್ಯೆ, ದೇವದಾಸಿ ಪದ್ಧತಿ, ಬಾಲ್ಯವಿವಾಹ, ಸತಿಸಹಗಮನ, ಅತ್ಯಾಚಾರ ಮುಂತಾದವುಗಳಿಂದ ಸ್ತ್ರೀಕುಲವು ಶೋಷಣೆಯಲ್ಲಿದೆ.

ಮಾದಕ ವಸ್ತು ಸೇವನೆ : ದೂಮ್ರಪಾನ, ಮದ್ಯಪಾನ, ತಂಬಾಕು ಮತ್ತು ಇತರ ಮಾದಕ ವಸ್ತುಗಳ ಸೇವನೆ ಮಾನವನ ಆರೋಗ್ಯ ಮಾತ್ರವಲ್ಲ ಸಮಾಜದ ಆರೋಗ್ಯವನ್ನು ಹಾಳು ಮಾಡುತ್ತವೆ. ಇದರ ನಶೆಯಲ್ಲಿ ಮಾನವ ಅಪರಾಧಗಳನ್ನು ಮಾಡುತ್ತಾನೆ.

ಭ್ರಷ್ಟಾಚಾರ : ದೇಶವನ್ನು ಅಭಿವೃದ್ಧಿಗೊಳಿಸಲು ಪ್ರಮುಖ ಅಡ್ಡಿಯೆಂದರೆ ಭ್ರಷ್ಟಾಚಾರ. ಹೆಚ್ಚಾಗಿ ರಾಜಕೀಯ ಪೋಷಣೆಯಲ್ಲಿ ಲಂಚದ ಹಾವಳಿ ಬೆಳೆದಿದೆ. ಸರ್ಕಾರಿ ಖಾಸಗಿ ಕ್ಷೇತ್ರಗಳಲ್ಲೂ ವ್ಯಾಪಿಸಿದೆ.

ಭಯೋತ್ಪಾದನೆ : ದೇಶವಿರೋಧಿ ಚಟುವಟಿಕೆಯಿಂದ ಹಿಂಸೆಯ ಮಾರ್ಗದ ಮೂಲಕ ಭಯೋತ್ಪಾದನೆ ವಿಶ್ವವನ್ನೆ ಕಾಡುವ ಸಮಸ್ಯೆಯಾಗಿದೆ. ಇದಕ್ಕೆ ಅಮಾಯಕರ ಬಲಿಯಾಗುತ್ತಿದೆ.

ಅನಕ್ಷರತೆ, ಬಡತನ : ಒಂದೇ ನಾಣ್ಯದ ಎರಡು ಮುಖಗಳಂತೆ ಅನಕ್ಷರತೆ ಹೆಚ್ಚಾದಷ್ಟು ಬಡತನ ಹೆಚ್ಚುತ್ತದೆ. ಭಾರತ ಮುಂದುವರೆದ ರಾಷ್ಟ್ರದತ್ತ ದಾಪುಗಾಲು ಹಾಕುತ್ತಿದ್ದರೂ ಪೂರ್ಣ ಪ್ರಮಾಣದ ಸಾಕ್ಷರತೆ ಸಾಧಿಸಿಲ್ಲ. ಇನ್ನೂ ಬಡತನದ ರೇಖೆಯಲ್ಲಿ ಜನ ಬದುಕುತ್ತಿದ್ದಾರೆ.

ಉಪಸಂಹಾರ : ಸಾಮಾಜಿಕ ಪಿಡುಗುಗಳಿಂದ ಪಾರಾಗಲು ಜನಸಂಖ್ಯೆ ನಿಯಂತ್ರಣ ಮತ್ತು ಸಾಕ್ಷರತೆ ಹೆಚ್ಚಬೇಕು. ವೈಜ್ಞಾನಿಕ ಮನೋಭಾವ ಬೆಳೆಯಬೇಕು. ಮತಧರ್ಮಗಳಲ್ಲಿ ಸಹಬಾಳ್ವೆ ವೃದ್ಧಿಯಾಗಬೇಕು. ಮಾದಕ ವ್ಯಸನದ ಹಾನಿಯ ಅರಿವು ಬೆಳೆಯಲಿ. ಮಹಿಳೆಯರ ಗೌರವ ಹೆಚ್ಚಲಿ. ಭ್ರಷ್ಟಾಚಾರ-ಭಯೋತ್ಪಾದನೆ ನಿಗ್ರಹಕ್ಕೆ ಕಾನೂನು ಇನ್ನಷ್ಟು ಬಲಿಷ್ಠವಾಗಲಿ. ಕೇಂದ್ರ ರಾಜ್ಯ ಸರ್ಕಾರಗಳು ಸಾಮಾಜಿಕ ಸುಧಾರಣೆಗೆ ಸಾಕಷ್ಟು ಯೋಜನೆಗಳನ್ನು ಕಾರ್ಯಗಳನ್ನು ರೂಪಿಸುತ್ತಿದೆ. ಪ್ರಜೆಗಳು ಸಮಾಜದ ಹಿತದಲ್ಲಿ ತನ್ನ ಹಿತ ಕಾಣಬೇಕು. ಸಂಘ ಸಂಸ್ಥೆಗಳು ಕೈಜೋಡಿಸಬೇಕು. ಮುಖ್ಯವಾಗಿ ಯುವಜನಾಂಗ ಜಾಗೃತವಾಗಬೇಕು. ಹೀಗಾದಾಗ ಸಾಮಾಜಿಕ ಪಿಡುಗುಗಳ ಮೇಲೆ ನಿಯಂತ್ರಣ ಸಾಧ್ಯವೆಂಬುದು ನನ್ನ ಅನಿಸಿಕೆ.

'ಸರ್ವೇ ಜನಾಃ ಸುಖಿನೋ ಭವಂತು'

ಮಾದರಿ ಉತ್ತರಗಳು : ಗದ್ಯಪಾಠ 6. ಶಬರಿ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಎ) ಗುಣ
2. (ಬಿ) ವಧೂಪೇತ
3. (ಎ) ಶ್ಚುತ್ವ
4. (ಸಿ) ಲೋಪಸಂಧಿ
5. (ಡಿ) ಜಶ್ತ್ವಸಂಧಿ
6. ((ಸಿ) ಅನುನಾಸಿಕ
7. (ಸಿ) ಗುಣ
8. (ಬಿ) ಲೋಪ
9. (ಸಿ) ಆದೇಶ
10. (ಬಿ) ಜಶ್ತ್ವ
11. (ಸಿ) ಗುಣ
12. (ಬಿ) ಗುಣ
13. (ಡಿ) ಗುಣ
14. (ಸಿ) ವಾಙ್ಮಯ
15. (ಡಿ) ಸನ್ಮಾನ

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :

16. ಆದೇಶಸಂಧಿ
17. ವೃದ್ಧಿಸಂಧಿ
18. ಯಣ್‌ಸಂಧಿ
19. ಸವರ್ಣದೀರ್ಘಸಂಧಿ
20. ಆಗಮಸಂಧಿ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

21. ಭೂಮಿಜಾತೆ' ಎಂದರೆ ಸೀತೆ.
22. ಶ್ರೀರಾಮನ ತಂದೆಯ ಹೆಸರು ದಶರಥ.
23. ಸೌಮಿತ್ರಿ ಎಂದರೆ ಲಕ್ಷ್ಮಣ.
24. ಶಬರಿಯು ಮತಂಗ ಋಷಿಯ ಆಶ್ರಮದಲ್ಲಿ ವಾಸವಿದ್ದಳು.
25. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು.
26. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಹೂವು, ಹಣ್ಣುಹಂಪಲು, ಮದುಪರ್ಕ ಮತ್ತು ತಳಿರು ತೋರಣಗಳನ್ನು ಸಂಗ್ರಹಿಸಿದ್ದಳು.
27. ರಾಮನ ಬರುವಿಕೆಗಾಗಿ ಮತಂಗಾಶ್ರದಲ್ಲಿ ಶಬರಿಯು ಕಾಯುತ್ತಿದ್ದಳು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

28. ರಾಮನು ಗಿರಿವನಗಳನ್ನು ಕುರಿತು "ಗಿರಿವನಗಳೇ, ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ, ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ? ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಪ್ರಾರ್ಥಿಸಿದನು.

29. ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯನೀಡುವವರು ಯಾರು?" ಎಂದು ಸಂತೈಸಿದನು.

30. ರಾಮನ ಸ್ವಾಗತಕ್ಕಾಗಿ ಶಬರಿಯು ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಸಂಗ್ರಹಿಸಿ ಸಿದ್ಧತೆಮಾಡಿಕೊಂಡಿದ್ದಳು.

31. ಶಬರಿಯು ರಾಮ ಲಕ್ಷಣರನ್ನು ನೋಡಿ ಅಚ್ಚರಿಪಡುತ್ತಾಳೆ. ನಂತರ ರಾಮನ ಹತ್ತಿರಕ್ಕೆ ಬಂದು ಆತನ ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಳ್ಳುತ್ತಾಳೆ. ತನ್ನ ಮನದಾಸೆಯಂತೆ ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ರಾಮನ ಕೊರಳಿಗೆ ಹಾಕಿ ಸಂತಸಪಡುತ್ತಾಳೆ. ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ; ನಿಮಗೆಂದೆ ತಂದೆನು ಎಂದು ಹೇಳುತ್ತ ತಿನ್ನಲು ಸವಿಯಾದ ಹಣ್ಣುಗಳನ್ನು ರಾಮಲಕ್ಷ್ಮಣರಿಗೆ ನೀಡಿ ಉಪಚರಿಸುತ್ತಾಳೆ.

32. ಆತಿಥ್ಯ ಸ್ವೀಕರಿಸಿದ ರಾಮಕ್ಷ್ಮಣರು ಶಬರಿಗೆ ನಾವು ನಿನ್ನ ಪ್ರೀತಿಯ ಸ್ವಾಗತದಿಂದ ಸಂತಸಗೊಂಡೆವು. ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು. ಕಣ್ಣಿಗೆ ಕಾಣದ ಆನಂದವನ್ನು ಈ ಕಾಡಿನಲ್ಲಿ ಅನುಭವಿಸುವ ಪುಣ್ಯ ನಮ್ಮದಾಯಿತು. ನಾವು ನಿನಗೆ ಎಂದೆಂದಿಗೂ ಋಣಿಗಳು. ನಿನ್ನ ಈ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆ ಇಲ್ಲ; ನಮ್ಮ ಅಯೋಧ್ಯೆ ಅರಮನೆಯಲ್ಲಿ ಇದಕ್ಕೂ ಒಳ್ಳೆಯ ಆತಿಥ್ಯ ದೊರೆಯದು. ಇಂದು ನಾವು ಕಾಡನ್ನು ಮರೆತಿದ್ದೆವೆ. ಇದನ್ನೇ ನಮ್ಮ ಮನೆಯೆಂದು ತಿಳಿದೆವು. ಇಷ್ಟು ಗೌರವ ತೋರುವ ನಿನ್ನನ್ನು ನಮ್ಮ ಮಾತೆ ಎಂದೆ ತಿಳಿದೆವು ಎಂದು ಹೇಳಿದರು.

34. ದಶರಥರಾಜನ ಮಗನಾಗಿರುವ ಶ್ರೀರಾಮನು, ಸಾಧುಸಜ್ಜನರ ಸ್ನೇಹಿತ, ಧೀರ ಶೂರ ವೀರ ಗಂಭೀರ ಸದ್ಗುಣಗಳ ಸಾರನಂತೆ ಇದ್ದಾನೆ. ಹೆದರಿಸುವವರು ಹೆದರುವರಂತೆ ಬಿಲ್ಲನ್ನು ಹಿಡಿದು ಬರುವ ಶ್ರೀರಾಮನು ಬಹಳ ಸೌಮ್ಯ ಸ್ವಭಾವದವನಾಗಿರುವನು. ನೋಡಲು ಮಗುವಿನಂತೆ ಕಾಣುವ ಶ್ರೀರಾಮನು ರಾಜ್ಯ ಪದವಿಯನ್ನು ತ್ಯಜಿಸಿ, ತಪಸ್ವಿತನವನ್ನು ಹಿಡಿದು, ತಮ್ಮನಾದ ಲಕ್ಷ್ಮಣನ ಜೊತೆಗೆ ಕಾಡಿಗೆ ಬಂದಿರುವ ಅವನ ಮನಸ್ಸಿಗೆ ಭಯವೆ ಇಲ್ಲ. ಶ್ರೀರಾಮನು ಕೆಟ್ಟ ಕನಸಿನ ರಾತ್ರಿಯನ್ನು ಕಳೆಯುವ ಬೆಳಗಿನ ಜಾವದಂತೆ ಇದ್ದಾನೆ. ಅವನನ್ನು ಗುರುಗಳು, ಸಿದ್ಧರು ಮೆಚ್ಚಿರುವರು. ಇಂತಹ ಶುಭಕರ ಮೂರ್ತಿಯಾದ ಶ್ರೀರಾಮನನ್ನು ಎಂದು ನಾನು ಕಾಣುತ್ತೇನೆ ಎಂದು ಶ್ರೀರಾಮನ ಗುಣಗಾನವನ್ನು ಶಬರಿ ಮಾಡುತ್ತಾಳೆ.

35. ನಿನ್ನ ಎಳೆಯತನ ಕೋಮಲತೆ ಅವನ ಸ್ಪರ್ಶಕ್ಕೆ ಸಿಗದೆ ಬರಿಗಾಳಿಗೆ ಒಣಗಿರುವ ನಿನ್ನೆಯ ಕೆಂಪಾದ ಚಿಗುರೇ, ದುಂಬಿ ಸಮೂಹದ ಹೊಗಳುವಿಕೆಗೆ ಆಶ್ರಯವಾದ ಸುವಾಸನೆಯಿಂದ ರಾಮನ ಜೀವವನ್ನು ಉತ್ತೇಜಿಸದೇ ಬಾಡಿದ ಹೂವುಗಳೇ, ಅವನ ಜೀವನಾಹಾರಕ್ಕೆ ದೊರೆಯದ ರುಚಿ ಹದ ಕೆಟ್ಟು ಹುಳುವಿಗೆ ಆಸರೆಯಾದ ಎಲೆ ಕಾಡಿನ ಹಣ್ಣುಗಳೇ,

ಬಳಸಲಾಗದೆ ಹೀಗೆ ಮಲಿನವಾಗುತ್ತಿರುವ ಇವುಗಳನ್ನು ಮತ್ತೆಮತ್ತೆ ಹೊಸತರಿಂದ ಸಿದ್ಧಮಾಡುವ ಹಠವೇ ಎಂದು ಶಬರಿಯು ರಾಮನಿಗಾಗಿ ತಂದಿರುವ ಹೂವು, ಹಣ್ಣು, ತಳಿರುಗಳನ್ನು ಉದ್ದೇಶಿಸಿ ಹಾಡುವಳು.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು:

35. ಪು. ತಿ. ನರಸಿಂಹಾಚಾರ್ : ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯ್ಯಂಗಾರ್ಯ ನರಸಿಂಹಾಚಾರ್ಯ ಅವರು ಸಾ. ಶ ೧೯೦೫ ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಶ್ರೀಯುತರು 'ಶಬರಿ, ಅಹಲ್ಯೆ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ರಥಸಪ್ತಮಿ ಶ್ರೀಹರಿಚರಿತೆ' ಇವರ ಪ್ರಮುಖ ಕೃತಿಗಳಾಗಿವೆ. ಇವರಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

36. ತಾಳಿದವನು ಬಾಳಿಯಾನು :ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಗಾದೆಗಳು ಬದುಕಿಗೆ ಮಾರ್ಗದರ್ಶನ ನೀಡಿ ಬದುಕನ್ನು ಹಸನುಗೊಳಿಸುತ್ತವೆ. ಜೀವನದಲ್ಲಿ ತಾಳ್ಮೆಯು ಅತ್ಯವಶ್ಯಕ ಎಂಬುದನ್ನು ಪ್ರಸ್ತುತ ಗಾದೆಯು ವಿವರಿಸುತ್ತದೆ.

ಜೀವನದಲ್ಲಿ ಏಳು ಬೀಳುಗಳು, ಕಷ್ಟಕಾರ್ಪಣ್ಯ, ಸುಖ ದುಃಖ, ದುಗುಡ ದುಮ್ಮಾನ, ಕೋಪ ತಾಪಗಳು ಸಹಜ. ಎಂತಹ ಸಂದರ್ಭದಲ್ಲೂ ವಿವೇಕವನ್ನು ಕಳೆದುಕೊಳ್ಳಬಾರದು ತಾಳ್ಮೆಯಿಂದಿರಬೇಕು. "ತಾಳುವಿಕೆಗಿಂತ ತಪವು ಇಲ್ಲ" ಎಂದಿದ್ದಾರೆ ಕನಕದಾಸರು. ಗಿಡ ನೆಟ್ಟ ಕೂಡಲೆ ಫಸಲು ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಂಗೀತಾಭ್ಯಾಸ ಮಾಡಿದರೆ ಒಂದೇ ತಿಂಗಳಿನಲ್ಲಿ ಕಛೇರಿ ನೀಡುವಂತಾಗಬೇಕು ಎನ್ನುವುದು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾಳ್ಮೆ ಬೇಕು.

ತಾಳ್ಮೆಗೆ ಕಾಯುವ ಗುಣ ಬೇಕು. "ಆತುರಗಾರನಿಗೆ ಬುದ್ದಿ ಕೆಳಮಟ್ಟ" ಜೀವನದಲ್ಲಿ ಸುಖ, ಶಾಂತಿ, ಸಮೃದ್ಧಿಯನ್ನು ಪಡೆಯಬೇಕೆಂದರೆ ಕಾಯಬೇಕು. ತಾಳ್ಮೆ ಎಂದರೆ ಕೇವಲ ಕಾಯುವಿಕೆಯಲ್ಲ. ಕಾಯುವಿಕೆಯ ಪ್ರಕ್ರಿಯೆಯಲ್ಲಿ ನಾವು ತೋರುವ ಉತ್ತಮ ನಡೆವಳಿಕೆ ತಾಳ್ಮೆ. ತಾಳ್ಮೆಗೆ ಬಂಗಾರಕ್ಕಿಂತ ಹೆಚ್ಚಿನ ಬೆಲೆಯಿದೆ. ಒಂದು ಕ್ಷಣದ ತಾಳ್ಮೆಯು ಸಾವಿರ ಕ್ಷಣಕ್ಕಾಗುವಷ್ಟು ದುಃಖವನ್ನು ತಡೆಯಬಲ್ಲದು. ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ. ಶ್ರುತಿಬದ್ಧ ಹಾಡುಗಾರಿಕೆಗೆ ಹಾಗೂ ನೃತ್ಯಕ್ಕೆ ತಾಳವೆಷ್ಟು ಮುಖ್ಯವೋ ಹಾಗೇ ಬದುಕಿಗೆ ತಾಳ್ಮೆ ಅಷ್ಟೇ ಮುಖ್ಯವೆಂಬುದನ್ನು ಪ್ರಸ್ತುತ ಗಾದೆಯು ಅರ್ಥೈಸುತ್ತದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

37. "ಆವುದೀ ಮರುಳು? ನಮ್ಮೊಡೆಗೆ ಬರುತಿಹುದು."

ಆಯ್ಕೆ : ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೀತಾಪಹರಣದ ಅನಂತರ ಶೋಕ ತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಬರುವಾಗ, ಮಾರ್ಗದ ಮಧ್ಯೆ ಭೇಟಿಯಾದ ದನುವಿನ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ. ಆ ಸಂದರ್ಭದಲ್ಲಿ ಎದುರಿಗೆ ಬರುತ್ತಿದ್ದ ವೃದ್ಧೆ (ಶಬರಿ)ಯನ್ನು ಕಂಡು ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಶ್ರೀರಾಮನ ಬರುವಿಕೆಗಾಗಿ ಕಾದು, ಹಂಬಲಿಸಿ, ಮರುಳಳಂತೆ ಆಗಿದ್ದ ವೃದ್ಧೆ ಶಬರಿಯನ್ನು ಕಂಡು ಕಬಂಧನನ್ನು ನೆನೆದು ಲಕ್ಷ್ಮಣನೊಡನೆ ರಾಮನು ಭಯಗೊಂಡ ಸ್ವಾರಸ್ಯ ಈ ಮಾತಿನಲ್ಲಿ ವರ್ಣಿತವಾಗಿದೆ.

38. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."

ಆಯ್ಕೆ : ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶ್ರೀರಾಮನು ಶಬರಿಯನ್ನು ಮತಂಗಾಶ್ರಮದಲ್ಲಿ ಕಂಡು, ತನ್ನ ಬರುವಿಕೆಗಾಗಿ ಹಂಬಲಿಸುವ ವೃದ್ಧೆ ಶಬರಿಗೆ ತನ್ನಿಂದ ಸ್ವಲ್ಪವೂ ಉಪಕಾರವಿಲ್ಲದಿದ್ದರೂ, ತನ್ನನ್ನು ಪ್ರೀತಿಯಿಂದ ನೆನೆಯುತ್ತಿರುವುದು ಸೋಜಿಗವೆನಿಸಿದೆ ಎಂದು ಲಕ್ಷ್ಮಣನಿಗೆ ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಪೂಜ್ಯೆಯಾದ ಶಬರಿಯು ತನ್ನನ್ನು ಪ್ರೀತಿಯಿಂದ ನೆನೆಯುತ್ತ, ಬರುವಿಕೆಗಾಗಿ ಭಕ್ತಿಯಿಂದ ಹಂಬಲಿಸುತಿರುವ ದೃಶ್ಯವನ್ನು ನೋಡಿ ರಾಮನು "ಅವಳ ಅನುರಾಗವನ್ನು ಕಂಡು ನಾಚಿದೆನು" ಎಂದು ಹೇಳಿರುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

39. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"

ಆಯ್ಕೆ: ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶ್ರೀರಾಮನು ಲಕ್ಷ್ಮಣನೊಡನೆ ಮತಂಗಾಶ್ರಮವನ್ನು ಪ್ರವೇಶಿಸಿಸುತ್ತಾನೆ. ಆ ಸಂದರ್ಭದಲ್ಲಿ "ಎಂದು ಕಾಣುವೆನು ಶ್ರೀರಾಮನನ್ನು ಸನ್ಮಂಗಳ ಮೂರುತಿಯನ್ನು" ಎಂದು ಹಾಡುತ್ತ ಶ್ರೀರಾಮನಿಗೆ ಹಂಬಲಿಸುತ್ತಿರುವ ಶಬರಿಗೆ ರಾಮನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ತನಗಾಗಿ ಹಂಬಲಿಸುತ್ತಿರುವ ಶಬರಿಗೆ ರಾಮನು ಏನೂ ಅರಿಯದವನಂತೆ ಪ್ರಶ್ನಿಸುತ್ತ ತನ್ನ ಸರಳತೆ ಎಂದು ಕೇಳಿರುವುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

40. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ?"

ಆಯ್ಕೆ : ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶ್ರೀರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು "ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು, ಇಷ್ಟೊಂದು ಪ್ರೀತಿಯನ್ನು ತೋರುವ ನಿನ್ನನ್ನು ನಾನು ತಾಯಿ ಎಂದು ತಿಳಿದಿದ್ದೇನೆ" ಎಂದು ನುಡಿದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ರಾಮಲಕ್ಷ್ಮಣರಿಗೆ ಹೇಳುತ್ತಾಳೆ.

ಸ್ವಾರಸ್ಯ : ರಾಮನು ನೋಡಲಷ್ಟೆ ಸುಂದರನಾಗಿರಲಿಲ್ಲ ಅವನ ನಡೆನುಡಿ ವರ್ತನೆಯಿಂದಲೂ ಉದಾರ ಭಾವ ಹೊಂದಿರುವ ಶ್ರೇಷ್ಠ ವ್ಯಕ್ತಿ ಎಂದಿರುವುದು, ರೂಪವು ನುಡಿಯಿಂದಲೂ ಸುಂದರವಾಗುತ್ತದೆ ಎಂದು ತಿಳಿಸಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

41. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."

ಆಯ್ಕೆ : ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಹಲವು ದಿನಗಳ ಬಯಕೆಯಂತೆ ರಾಮನ ದರ್ಶನದಿಂದ ಸಂತೃಪ್ತಳಾದ ಶಬರಿ ಮುಕ್ತಿಗಾಗಿ ರಾಮನ ಅನುಮತಿ ಪಡೆದು ವೇದಿಯಲ್ಲಿರುವ ಅಗ್ನಿಯನ್ನು ಪ್ರದಕ್ಷಿಣೆ ಹಾಕಿ ಪ್ರವೇಶಿಸುತ್ತಾಳೆ. ಆಗ ಲಕ್ಷ್ಮಣನಿಗೆ ರಾಮನು ಹೆಣ್ಣಿನ ರೀತಿಯನ್ನು ಅರಿಯುವುದೆ ಒಂದು ಸೋಜಿಗ. ಎಂಥ ನಿಷ್ಠೆ, ಎಂಥ ಪ್ರೀತಿ ಈ ಜಗತ್ತು ಈಕೆಯನ್ನು ಮರೆಯಲು ಸಾಧ್ಯವಿಲ್ಲ ಎನ್ನುತ್ತಾನೆ. ಆಗ ಲಕ್ಷ್ಮಣ ಯಾರು ಏನು ಎಂದೆನ್ನದೆ ಮಗುವಿನಂತೆ ಒಲಿದಳು. ನಮ್ಮನ್ನು ನೋಡುತ್ತಲೆ ನಲಿದಳು. ತನ್ನನ್ನೇ ತಾನು ಮರೆತಳು ಎಂದು ಹೇಳುತ್ತಾನೆ. ಆ ಸಂದರ್ಭದಲ್ಲಿ ರಾಮನು ಶಬರಿಯನ್ನು ಕುರಿತು ಲಕ್ಷ್ಮಣನಿಗೆ ಹೇಳುತ್ತಾನೆ.

ಸ್ವಾರಸ್ಯ : ಶಬರಿಯ ತ್ಯಾಗ ಪ್ರೀತಿ ಸಮರ್ಪಣಾಭಾವ, ಭಗವದ್ ಭಕ್ತಿ ನಂಬಿಕೆ ಮೊದಲಾದವು ಇಲ್ಲಿ ಧ್ವನಿತಗೊಂಡಿದೆ. ಅಂತೆಯೇ ಶಬರಿಯು ರಾಮದರ್ಶನಕ್ಕಾಗಿ ಹಲವು ವರ್ಷಗಳಿಂದ ಪರಿತಪಿಸಿ, ಅಂತಿಮವಾಗಿ ರಾಮನ ದರ್ಶನ ಪಡೆದು, ಆ ದಿನದ ಸಂತಸದಲ್ಲಿ ಆಕೆಯ ಹಿಂದಿನ ಕಷ್ಟಗಳು ಕನವರಿಕೆಗಳು ಗೌಣವಾಗಿರುವುದು ಹಾಗೂ ಶಬರಿಯ ರಾಮಭಕ್ತಿಯ ಶ್ರೇಷ್ಠತೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

42. "ರಾಮನೇ ಧೈರ್ಯಗೆಡೆ ಸ್ಥೈರ್ಯಕೆಡೆ ಯಾರು?"

ಆಯ್ಕೆ : ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೀತಾಪಹರಣದ ನಂತರ ರಾಮಲಕ್ಷ್ಮಣರು ಸೀತೆಯನ್ನು ಅರಸುತ್ತ ಶಬರಿಯ ಆಶ್ರಮದ ಬಳಿಗೆ ಬರುವರು. ಆಗ ಶ್ರೀರಾಮನು ಅಲ್ಲಿನ ಗಿರಿವನಗಳನ್ನು ಕುರಿತು ಗಿರಿವನಗಳೇ, ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ, ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ? ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ ಎಂದು ಸೀತೆಗಾಗಿ ಹಂಬಲಿಸುತ್ತಾ ಪ್ರಾರ್ಥಿಸಿದನು. ಆಗ ಶ್ರೀರಾಮನಿಗೆ ಸಮಾಧಾನಪಡಿಸುತ್ತ ಲಕ್ಷ್ಮಣನು ಈ ಮೇಲಿನ ಮಾತನ್ನು ಹೇಳುವನು.

ಸ್ವಾರಸ್ಯ : ಜಗತ್ತಿಗೆ ಬೆಳಕು ನೀಡುವ ಸೂರ್ಯನ ಹಾಗೆ ಅಖಿಲ ಲೋಕಕ್ಕೆ ಪ್ರಜಾರಕ್ಷಕನಾಗಿರುವ ಅಯೋಧ್ಯೆಯ ಅಧಿಪತಿ ಶ್ರೀರಾಮನು ಧೈರ್ಯವನ್ನು ಕಳೆದುಕೊಂಡರೆ, ಲೋಕದ ಗತಿಯೇನು? ಎಂಬ ಲಕ್ಷ್ಮಣನ ಆತಂಕ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

43. "ಅಯ್ಯೊ ಏನೂ ಅಣಿಯೆ ಇಲ್ಲ."

ಆಯ್ಕೆ : ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶಬರಿಯ ನಂಬಿಕೆಯಂತೆ ಶ್ರೀರಾಮ ಲಕ್ಷ್ಮಣರು ಶಬರಿ ಇರುವ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಆಶ್ರಮ ಪ್ರವೇಶಿಸಿದ ಶ್ರೀರಾಮಲಕ್ಷ್ಮಣರನ್ನು ಕಂಡ ಶಬರಿ ಪರಮಾನಂದದಿಂದ ಅವರನ್ನು ಬರಮಾಡಿಕೊಳ್ಳುತ್ತಾಳೆ. ಶ್ರೀರಾಮನ ಸ್ಪರ್ಶಮಾಡಿ ಸಂತಸ ಪಡುವಳು. ನಂತರ

ತನ್ನ ಮನದ ಬಯಕೆಯಂತೆ ಶ್ರೀರಾಮನ ಕೊರಳಿಗೆ ಬಗೆಬಗೆಯ ಸುವಾಸನೆ ನೀಡುವ ವನಮಾಲೆಯನ್ನು ಹಾಕಿ ಸಂಭ್ರಮಿಸುವ ಸಂದರ್ಭದಲ್ಲಿ ಈ ಮೇಲಿನ ಮಾತನ್ನು ಶಬರಿಯು ಶ್ರೀರಾಮಲಕ್ಷ್ಮಣರಿಗೆ ಹೇಳುತ್ತಾಳೆ.

ಸ್ವಾರಸ್ಯ : ಶ್ರೀರಾಮಲಕ್ಷ್ಮಣರ ಆಗಮನಕ್ಕಾಗಿ ಪ್ರತಿನಿತ್ಯದಂತೆ ಸಿದ್ಧತೆ ಮಾಡಿಕೊಂಡಿದ್ದರೂ, ತಾನೂ ಏನೂ ಸಿದ್ಧತೆ ಮಾಡಿಕೊಂಡಿಲ್ಲ ಎಂದು ತಿಳಿಸುವ ಶಬರಿಯ ಈ ಮಾತಿನಲ್ಲಿ ಆಕೆಯ ಮುಗ್ಧತೆ ಮತ್ತು ಆತಿಥ್ಯದ ರೀತಿ ಅರ್ಥಪೂರ್ಣವಾಗಿ ಮೂಡಿಬಂದಿದೆ.

44. "ನಿನ್ನಾದರದೊಳು ಸುಖಿ ನಾವು"

ಆಯ್ಕೆ : ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶಬರಿಯ ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ "ನಾವು ನಿನ್ನ ಪ್ರೀತಿಯ ಸ್ವಾಗತದಿಂದ ಸಂತಸಗೊಂಡೆವು. ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು. ಕಣ್ಣಿಗೆ ಕಾಣದ ಆನಂದವನ್ನು ಈ ಕಾಡಿನಲ್ಲಿ ಅನುಭವಿಸುವ ಪುಣ್ಯ ನಮ್ಮದಾಯಿತು. ನಾವು ನಿನಗೆ ಎಂದೆಂದಿಗೂ ಋಣಿಗಳು" ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತನ್ನು ಹೇಳುವರು.

ಸ್ವಾರಸ್ಯ : ಶ್ರೀರಾಮಲಕ್ಷ್ಮಣರ ಈ ಮಾತಿನಲ್ಲಿ ಅವರ ಸರಳ ಸಜ್ಜನಿಕೆ, ಹಿತಮಿತ ಮೃದುವಚನ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

45. "ಇಂಥ ಶಿಷ್ಯೆಯರ್ತಿ ಪಡೆದ ನಿನ್ನ ಗುರುಗಳೆಂಥರೋ"

ಆಯ್ಕೆ : ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ರಾಮನ ದರ್ಶನಕ್ಕಾಗಿ ಹಲವು ವರ್ಷಗಳ ಕಾಲ ತಪಸ್ಸಿನಂತೆ ಕಾಯುತ್ತಿದ್ದ ಶಬರಿಗೆ ಗುರುಗಳ ವರದಿಂದ ರಾಮನ ದರ್ಶನವಾಗುತ್ತದೆ. ಬಹು ಭಕ್ತಿಯಿಂದ ಶಬರಿ ರಾಮಲಕ್ಷ್ಮಣರನ್ನು ಉಪಚರಿಸುತ್ತಾಳೆ. ಶಬರಿಯ ಆತಿಥ್ಯದಿಂದ ಸಂತೃಪ್ತನಾದ ರಾಮ ನಿನ್ನಂತಹ ಪ್ರೀತಿಯ ಮೂರ್ತಿಯನ್ನು ಶಿಷ್ಯಳಾಗಿ ಪಡೆದ ನಿನ್ನ ಗುರುಗಳು ಮಹಾನುಭಾವರು. ಅವರು ಶಾಂತಿ ಸ್ವರೂಪರು. ಅವರ ಮಹಿಮೆಯನ್ನು ಕೇಳಿದ್ದೇನೆ ಎಂದು ಮತಂಗ ಮುನಿಗಳನ್ನು ಭಕ್ತಿಯಿಂದ ಸ್ಮರಿಸುವ ಸಂದರ್ಭದಲ್ಲಿ ಈ ಮೇಲಿನ ಮಾತನ್ನು ಶಬರಿಗೆ ಹೇಳುತ್ತಾನೆ.

ಸ್ವಾರಸ್ಯ : ರಾಜಮನೆತನದಲ್ಲಿ ಜನಿಸಿದವನಾದರು ಶ್ರೀರಾಮನಿಗೆ ಗುರುಗಳ ಬಗೆಗಿರುವ ಭಕ್ತಿ ಗೌರವ ಹಾಗೂ ಅವನ ವ್ಯಕ್ತಿತ್ವದ ಔದಾರ್ಯದ ಜೊತೆಗೆ ಶಬರಿಗೆ ತನ್ನ ಗುರುಗಳ ಬಗೆಗಿರುವ ನಂಬಿಕೆ, ವಿಶ್ವಾಸ, ಆಕೆಯ ಸರಳತೆ, ಮುಗ್ಧತೆ, ಪ್ರೀತಿಸುವ ಆರಾಧಿಸುವ ಗುಣ ಹಾಗೂ ಈಕೆಯನ್ನು ಶಿಷ್ಯೆಯನ್ನಾಗಿ ಪಡೆದ ಮತಂಗ ಮುನಿಗಳ ಶ್ರೇಷ್ಠತೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

46. "ಮನ ಒಪ್ಪಿದರೂ ಎದೆಯೊಪ್ಪದಲಾ!"

ಆಯ್ಕೆ : ಪ್ರಸ್ತುತ ವಾಕ್ಯವನ್ನು 'ಪು. ತಿ. ನರಸಿಂಹಾಚಾರ್' ಅವರು ಬರೆದ 'ಶಬರಿ' ಕೃತಿಯಿಂದಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶಬರಿಯು ಮೋಕ್ಷವನ್ನು ಶ್ರೀರಾಮನ ಬಳಿ ಬೇಡಿದಾಗ ರಾಮನು "ತಾಯಿಯ ರೀತಿಯಲ್ಲಿ ನೀನು ನಮ್ಮನ್ನು ಗೌರವಿಸಿದೆ. ನಂತರ ಈ ರೀತಿ ನುಡಿಯಿತ್ತಿರುವೆಯಲ್ಲ, ನಿನಗೆ ಈ ಆಲೋಚನೆ ಸರಿಯೇ? ಇಷ್ಟು ಪ್ರೀತಿ ತೋರಿದ ನಿನಗೆ ನಾವು ನೀಡುವ ಕಾಣಿಕೆ ಸಾವೇ?

ಎಂದಾಗ ಶಬರಿಯು "ಅದು ಸಾವಲ್ಲ, ಮೋಕ್ಷ. ಇದೇ ನನ್ನ ಬಯಕೆಯಾಗಿದೆ" ಎಂದು ತಿಳಿಸುತ್ತಾಳೆ. ಆ ಸಂದರ್ಭದಲ್ಲಿ ಶ್ರೀರಾಮನು ಈ ಮೇಲಿನ ಮಾತನ್ನು ಶಬರಿಗೆ ಹೇಳುವನು.

ಸ್ವಾರಸ್ಯ : ತನ್ನ ಆರಾಧ್ಯದೈವ ಶ್ರೀರಾಮನನ್ನು ಕಂಡು ಆನಂದಿಸಿ, ಧನ್ಯತೆಯ ಭಾವನೆಯಿಂದ ಮುಕ್ತಿಯನ್ನು ಬಯಸಿದ ಶಬರಿಗೆ ಶ್ರೀರಾಮನು ಹೇಳುವ ಈ ಮೇಲಿನ ಮಾತಿನಲ್ಲಿ ಶಬರಿಯ ಬಗೆಗೆ ಶ್ರೀರಾಮನಿಗಿರುವ ಕಾಳಜಿ ಅರ್ಥಪೂರ್ಣವಾಗಿ ಮೂಡಿಬಂದಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

47. ರಾಮಲಕ್ಷ್ಮಣರನ್ನು ಕಂಡು ಶಬರಿ ಹಿಗ್ಗಿ, ಸಂತಸವನ್ನು ತುಂಬಿಕೊಳ್ಳುತ್ತಾಳೆ. ರಾಮಲಕ್ಷ್ಮಣರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ರಾಮನನ್ನು ಕಂಡ ತಾನು ಪರಮಸುಖಿಯೆಂದು ನರ್ತಿಸುತ್ತಾಳೆ. ರಾಮನೂ ಕೂಡ "ನಿನ್ನ ಆದರದಿಂದ ನಾವುಸುಖಿ, ನಿನಗೆ ನಾವು ಋಣಿ" ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು "ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು ತೃಷೆ ಹಿಂಗಿತೇ? ನಾನೊಬ್ಬಳು ಬಡವಿ, ನನ್ನ ಮೇಲೆ ಮರುಕ ತೋರಿದಿರಾ?" ಎನ್ನುತ್ತಾಳೆ. ಶ್ರೀರಾಮನು"ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ, ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ, ನಿನ್ನ ಮನೆಯೇ ನಮ್ಮ ಮನೆ, ನೀನೇ ತಾಯಿಯಂತೆ" ಎನ್ನುತ್ತಾನೆ. ಶಬರಿಯು "ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ. ನಾನು ಧನ್ಯಳಾದೆ ಸಿದ್ಧಮತಂಗರ ವರ ನನಗೆ ಫಲಿಸಿತು. ನಿಮ್ಮನ್ನು ಕಂಡು ಪುಣ್ಯವು ತುಂಬಿತು. ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು" ಎನ್ನುತ್ತಾಳೆ. ಶ್ರೀರಾಮನು ಗುರುಗಳ ಮಹಿಮೆಯನ್ನು ಬಲ್ಲೆನೆಂದು ಹೇಳುತ್ತ. "ದುಃಖವನ್ನು ಮರೆಸಿ, ಶಾಂತಿ ನೀಡುವ ಈ ವನದಲ್ಲಿ ಶುದ್ಧಪ್ರೇಮಮೂರ್ತಿ ನೀನು ಇದ್ದೀಯೆ. ಈ ದಿನ ನಮಗೆ ಸುದಿನ" ಎಂದು ಶಬರಿಯನ್ನು ಬಾಯಿತುಂಬ ಹೊಗಳುತ್ತಾನೆ.

48. ರಾಮನು ಬಂದು ತನ್ನ ಆಶ್ರಮದಲ್ಲಿ ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯಪಟ್ಟಳು. ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ, ಪಾದಕ್ಕೆ ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು. ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು. ಸಿದ್ಧತೆಯೇ ಇಲ್ಲವಲ್ಲ ಎಂದು ಹಂಬಲಿಸಿದಳು. ಮನಸ್ಸಿನ ಬಯಕೆಯಂತೆ ಬಗೆಬಗೆಯ ಕಂಪು ಇರುವ ವನಮಾಲೆಯನ್ನು ರಾಮನ ಕೊರಳಿಗೆ ಇಟ್ಟು ಹಿಗ್ಗಿದಳು. ಜಗತ್ತಿನಲ್ಲಿ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತ, ನಿಮಗಾಗಿ ತಂದಿದ್ದೇನೆಂದು ತಿಳಿಸಿ ರಾಮನ ಕೈಗೆ ಇತ್ತಳು. ಶಬರಿಯ ಸೇವೆಯಿಂದ ರಾಮನು ಸುಪ್ರಸನ್ನನಾದನು. ರಾಮಲಕ್ಷ್ಮಣರು ಧನ್ಯತಾಭಾವದಿಂದ ಮಂದಹಾಸ ಬೀರಿದರು. ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

49. ಶಬರಿಯು ಮತಂಗ ಋಷಿಯ ಆಶ್ರಮದಲ್ಲಿ ಇದ್ದ ತಪಸ್ವಿನಿ. ಶಬರಿಯು ಮತಂಗ ಋಷಿಯ ಪ್ರಿಯ ಶಿಷ್ಯೆ. ಸಿದ್ಧರಾದ ಮತಂಗ ಋಷಿಗಳು ತಮ್ಮ ಅಂತ್ಯಕಾಲದಲ್ಲಿ ಶಬರಿಯ ಮೇಲೆ ಕರುಣೆಯನ್ನು ತೋರಿ ಶ್ರೀರಾಮಲಕ್ಷ್ಮಣರು ಈ ಆಶ್ರಮಕ್ಕೆ ಬರುತ್ತಾರೆ. ನಿನಗೆ ರಾಮಲಕ್ಷ್ಮಣರ ದರ್ಶನದಿಂದ ಒಳ್ಳೆಯದಾಗುತ್ತದೆ. ನಿನ್ನಿಷ್ಟಾರ್ಥ ನೆರವೇರುತ್ತದೆ ಎಂದು ಹೇಳಿದರು. ಗುರುಗಳ ಈ ಮಾತನ್ನು ನಂಬಿದ ಶಬರಿಯು ಶ್ರೀರಾಮನ ಆಗಮನಕ್ಕಾಗಿ ಪ್ರತಿನಿತ್ಯ ಕಾಯುತ್ತಿದ್ದಳು. ಶಬರಿಯು ಗುರುಗಳ ಮಾತಿನ ಮೇಲೆ ಇಟ್ಟ ನಂಬಿಕೆ ಹಾಗೂ ಶ್ರೀರಾಮನಿಗಾಗಿ ಹಂಬಲಿಸುತ್ತ ಕಾಯುತ್ತಿದ್ದ ಅವಳ ತಾಳ್ಮೆಯು ಹುಸಿಯಾಗಲಿಲ್ಲ. ಮತಂಗ

ಋಷಿಗಳು ಶಬರಿಗೆ ಹೇಳಿದ ಮಾತಿನಂತೆ ರಾಮಲಕ್ಷಣರು ಶಬರಿಯ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಶಬರಿಯು ಶ್ರೀರಾಮನ ದರ್ಶನದಿಂದ ಪುಳಕಿತಳಾಗುತ್ತಾಳೆ. ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಳ್ಳುತ್ತಾಳೆ. ಅಯ್ಯೋ, ಏನೂ ಸಿದ್ಧತೆಯಿಲ್ಲ; ನಿನ್ನೆಯಷ್ಟು ಚೆನ್ನವಿಲ್ಲ ಎಂದು ಹಂಬಲಿಸಿ, ತನ್ನ ಮನದ ಬಯಕೆಯಂತೆ ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ, ಅಬ್ಬಾ ಎಂದು ಹಿಗ್ಗಿಹಿಗ್ಗಿ ಸಂತಸ ಪಡುತ್ತಾಳೆ. ನಂತರ ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೆ ಇಲ್ಲ. ನಿಮಗೆಂದು ತಂದೆನೆಂದು ಎಂದು ಹೇಳುತ್ತ ತಾನೇ ಅವರ ಕೈಯಲ್ಲಿ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸುತ್ತಾಳೆ. ಶಬರಿಯು ಶ್ರೀರಾಮನಲ್ಲಿ ತನಗೆ ಮುಕ್ತಿಯನ್ನು ನೀಡುವಂತೆ ಬೇಡಿಕೊಂಡು ವೇದಿಯಲ್ಲಿದ್ದ ಅಗ್ನಿಯನ್ನು ಪ್ರವೇಶಿಸಿ ಮುಕ್ತಿಯನ್ನು ಪಡೆಯುತ್ತಾಳೆ. ಮುನಿಗಳ ಮಾತನ್ನು ನಂಬಿ, ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಸಹನೆಯಿಂದ ಕಾಯುತ್ತ, ಶ್ರೀರಾಮನು ತನ್ನ ಬಳಿಗೆ ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಗುತ್ತದೆ. ಶಬರಿಯ ಮನದಾಸೆ ಈಡೇರುತ್ತದೆ. ಹೀಗೆ ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿದೆ.

50. ವಿದ್ಯಾರ್ಥಿ ಸ್ವಂತಿಕೆಯಾಗಿ ಬರೆಯುವುದು.

ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

51. **ಅ.** ಓದಿದ ತರುವಾಯ ಪುಸ್ತಕವನ್ನು ಮುಚ್ಚಿಟ್ಟು ಓದಿದ್ದನ್ನು ಮತ್ತೆ ನೆನಪು ಮಾಡಿಕೊಳ್ಳಬೇಕು. ಕೇವಲ ಓದಿದರೆ ಪ್ರಯೋಜನವಿಲ್ಲ. ಓದಿದ್ದನ್ನು ಮನನ ಮಾಡಿಕೊಂಡರೆ ಮಾತ್ರ ಹೆಚ್ಚು ಪ್ರಯೋಜನವಾಗುತ್ತದೆ ಎಂಬುದನ್ನು ಅರ್ಥೈಸಿಕೊಂಡು ಓದಿನ ಸಫಲತೆಯನ್ನು ಪರೀಕ್ಷಿಸಿಕೊಳ್ಳಬಹುದು.

ಆ. ಓದಲು ಧೃಢವಾದ ಸಂಕಲ್ಪವಿರಬೇಕು. ಕಲಿಯಬೇಕೆನ್ನುವ ಹಂಬಲ ಮತ್ತು ಕಲಿಯುವೆ ಎಂಬ ಆತ್ಮವಿಶ್ವಾಸ ಹುಟ್ಟದಿದ್ದರೆ ಓದಿನಲ್ಲಿ ಅಭಿರುಚಿ ಹುಟ್ಟುವುದಿಲ್ಲ. ಎಷ್ಟು ಓದಿದರು ನೆನಪಲ್ಲೇ ಉಳಿಯುವುದಿಲ್ಲ ಎಂದು ಹಳಿಯುತ್ತ ಪುಸ್ತಕವನ್ನು ದೂರ ಎಸೆಯುವ ಬದಲಾಗಿ ಮತ್ತೆ ಮತ್ತೆ ಓದಿ ಸ್ಮರಣಶಕ್ತಿಯನ್ನು ಉದ್ದೀಪನಗೊಳಿಸಿಕೊಳ್ಳಲು ಪ್ರಯತ್ನಿಸಬೇಕು. ಅರ್ಥಮಾಡಿಕೊಂಡು ಓದಬೇಕು.

ಪತ್ರಲೇಖನ ಬರೆಯುವುದು :

52.

ದಿನಾಂಕ : ೧೨.೦೧.೨೦೨೬
ಸ್ಥಳ : ರಾಜಾಜಿನಗರ

ಇವರಿಂದ,
ಅನನ್ಯಾ
ರಾಜಾಜಿನಗರ,
ಬೆಂಗಳೂರ

ಇವರಿಗೆ,
ಮಾನ್ಯ ಮೇಯರ್
ಮಹಾನಗರಪಾಲಿಕೆ
ಬೆಂಗಳೂರು

ಮಾನ್ಯರೆ,
ವಿಷಯ : <u>ಶುದ್ಧ ಕುಡಿಯುವನೀರಿನ ಘಟಕವನ್ನು ಮಂಜೂರು ಮಾಡುವಂತೆ ಕೋರಿ.</u>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜಾಜಿನಗರ ಬಡಾವಣೆಯಲ್ಲಿ ವಾಸಿಸುವ 'ಅನನ್ಯಾ' ಎಂಬ ಹೆಸರಿನ ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ವಿಂತಿಸುವುದೆನೆಂದರೆ, ನಮ್ಮ ಬ್ಲಾಕಿನಲ್ಲಿ ಎಲ್ಲೂ ಶುದ್ಧನೀರಿನ ಘಟಕ ಇರುವುದಿಲ್ಲ. ಕುಡಿಯುವ ನೀರಿಗಾಗಿ ಇಲ್ಲಿನ ನಿವಾಸಿಗಳು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಅನೇಕ ಮಧ್ಯಮ ವರ್ಗದ ಕುಟುಂಬಗಳು ಇಲ್ಲಿ ವಾಸಿಸುತ್ತಿದ್ದು, ಪಾಲಿಕೆಯಿಂದ ಸರಬರಾಜಾಗುತ್ತಿರುವ ನಳದ ನೀರು ಕುಡಿಯಲು ಅಷ್ಟೊಂದು ಯೋಗ್ಯವಾಗಿರುವದಿಲ್ಲ. ಆದ್ದರಿಂದ ನಮ್ಮ ಬ್ಲಾಕಿನಲ್ಲಿ ಪಾಲಿಕೆಯ ವತಿಯಿಂದ ಒಂದು ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಿದರೆ ಬಹು ಉಪಯೋಗವಾಗುವುದು. ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
ಅನನ್ಯಾ
(ಬಡಾವಣೆಯ ಪ್ರಮುಖರ ಸಹಿಗಳಿವೆ)

ಹೊರವಿಳಾಸ :

ಇವರಿಗೆ, ಮಾನ್ಯ ಮೇಯರ್ ಮಹಾನಗರಪಾಲಿಕೆ ಬೆಂಗಳೂರು.	ಇವರಿಂದ, ಅನನ್ಯಾ ರಾಜಾಜಿನಗರ, ಬೆಂಗಳೂರು.

ಪ್ರಬಂಧ ಬರೆವಣಿಗೆ :

53. ಗ್ರಂಥಾಲಯಗಳ ಮಹತ್ವ :

ಪೀಠಿಕೆ : 'ದೇಶ ಸುತ್ತು ಕೋಶ ಓದು' ಎಂಬಂತೆ ಜ್ಞಾನ ಸಂಪಾದನೆಯ ಎರಡು ಸೆಲೆಗಳೆಂದರೆ ಒಂದು ಪ್ರವಾಸ ಮತ್ತೊಂದು ಗ್ರಂಥ. ಗ್ರಂಥಗಳ ಸುವ್ಯವಸ್ಥಿತ ಕೇಂದ್ರವೇ ಗ್ರಂಥಾಲಯ. ಗ್ರಂಥಗಳ ಅಧ್ಯಯನಕ್ಕೆ ಅವಕಾಶವಿರುವುದರಿಂದ ಇದು ವಾಚನಾಲಯ. 'ಗ್ರಂಥಗಳಿಲ್ಲದ ಮನೆ ಆತ್ಮವಿಲ್ಲದ ದೇಹದಂತೆ - ಗ್ರಂಥಾಲಯವಿಲ್ಲದ ಊರು ದೇವರಿಲ್ಲದ ದೇವಾಲಯದಂತೆ' ಗ್ರಂಥಾಲಯಗಳು ಜ್ಞಾನದ ಹಸಿವನ್ನು ನೀಗಿಸುವ ದಾಸೋಹ ಕೇಂದ್ರಗಳು. ದೇಹಕ್ಕೆ ಆಹಾರವಿದ್ದಂತೆ ಮನಕ್ಕೆ ಗ್ರಂಥಗಳಿವೆ. ವಾಚನಾಲಯಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಜ್ಞಾನ ಹಂಚುವ ಸಂಪರ್ಕ ಸಾಧನಗಳು.

ವಿಷಯ ನಿರೂಪಣೆ : ಗ್ರಂಥಗಳನ್ನು ಓದಲು ಅಥವಾ ಎರವಲು ಪಡೆಯಲು ವ್ಯವಸ್ಥಿತವಾಗಿ ಇಟ್ಟಿರುವ ಕೋಣೆ ಅಥವಾ ಕಟ್ಟಡವೇ ಗ್ರಂಥಾಲಯ. ದಿನ ಪತ್ರಿಕೆಗಳು, ವಾರ-ಮಾಸ ಪತ್ರಿಕೆಗಳು, ಭಾಷೆ-ವಿಜ್ಞಾನ-ಇತಿಹಾಸ-ಪುರಾಣ-ತಂತ್ರಜ್ಞಾನ ಹೀಗೆ ಪ್ರಾಚೀನ, ಆಧುನಿಕ ಎಲ್ಲಾ ಗ್ರಂಥಗಳು ಲಭ್ಯವಿರುವ ತಾಣವಾಗಿದೆ. ಪ್ರಾಚೀನ ಕಾಲದಲ್ಲಿ ಗ್ರಂಥಾಲಯ ಪರಂಪರೆಯನ್ನು ಭಾರತದ ನಳಂದಾ ಮತ್ತು ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಕಾಣುತ್ತೇವೆ. ಅರಸರೇ ಆಶ್ರಯದಾತರಾಗಿದ್ದರು. ಭಾರತ ಸ್ವಾತಂತ್ರ್ಯ ನಂತರ ಸರ್ಕಾರದ ಪೋಷಣೆಯಲ್ಲಿ ಗ್ರಂಥಾಲಯಗಳು ಅಭಿವೃದ್ಧಿಗೊಂಡವು. ಸಾರ್ವಜನಿಕಗ್ರಂಥಾಲಯ, ಶಾಲಾ ಕಾಲೇಜುಗಳ ಗ್ರಂಥಾಲಯ, ಖಾಸಗಿ ಸಂಸ್ಥೆಗಳ ಗ್ರಂಥಾಲಯ ಹೀಗೆ ವಿವಿಧ ಪ್ರಕಾರದ ಗ್ರಂಥಾಲಯಗಳು ಸೇವೆಯಲ್ಲಿವೆ. ಗ್ರಂಥಾಲಯಗಳು ಜ್ಞಾನ ಬಯಸುವ ಜನರಿಗೆ ದಾಹ ನೀಗಿಸುವ ಅಮೃತವಾಗಿವೆ. ವಿಶೇಷವಾಗಿ ವಿದ್ಯಾರ್ಥಿಗಳಿಗೆ ಸಂಜೀವಿನಿಯಂತಿವೆ. ಎಲ್ಲರೂ ಗ್ರಂಥಗಳನ್ನು ಖರೀದಿಸಿ ಓದಲಾಗದು ಅದರಲ್ಲೂ ಬಡವರಿಗಂತೂ ಕನಸಿನ ಮಾತು. ಇವರಿಗೆಲ್ಲಾ ಗ್ರಂಥಾಲಯಗಳು ವರದಾನವಾಗಿವೆ. ಗ್ರಂಥಾಲಯದಿಂದ ಓದುಗರಿಗೆ ಲಾಭವಾಗುವಂತೆ ಗ್ರಂಥ ರಚನಾಕಾರರಿಗೂ ಪ್ರಕಾಶಕರಿಗೂ ಪ್ರೋತ್ಸಾಹ ನೀಡುತ್ತದೆ. ಗ್ರಾಮ ಪಂಚಾಯಿತಿಯಿಂದ ರಾಜಧಾನಿವರೆಗೂ ಗ್ರಂಥಾಲಯಗಳು ಸ್ಥಾಪನೆಗೊಂಡಿವೆ. ಭಾರತದ ಗ್ರಂಥಾಲಯ ಪಿತಾಮಹ ಡಾ|| ಎಸ್. ಆರ್. ರಂಗನಾಥನ್ ಇವರು ಗ್ರಂಥಾಲಯಗಳ ವ್ಯವಸ್ಥಿತವಾದ ಅಭಿವೃದ್ಧಿಗೆ ಕಾರಣಕರ್ತರು. ಇಂದು ಗ್ರಂಥಾಲಯಗಳು ಆಧುನಿಕ ಜನರಿಗೆ ಅನುಕೂಲವಾಗುವಂತೆ ಡಿಜಿಟಲ್ ಹೈಟೆಕ್ ಇ-ಗ್ರಂಥಾಲಯ ಆಗುತ್ತಿವೆ. ವಾಚನಾಲಯದಲ್ಲಿ ಮೌನತೆ ಕಾಪಾಡಬೇಕು. ಪತ್ರಿಕೆ, ಪುಸ್ತಕಗಳು ಹಾಳಾಗದಂತೆ ನೋಡಿಕೊಳ್ಳಬೇಕು. ಎರವಲು ಪಡೆದ ಗ್ರಂಥಗಳನ್ನು ಸರಿಯಾದ ಸಮಯಕ್ಕೆ ಹಿಂದಿರುಗಿಸಬೇಕು. ಗ್ರಂಥಾಲಯದ ಅಭಿರುಚಿ ಬೆಳೆಸಿಕೊಂಡು, ಇತರರಲ್ಲೂ ಅಸಕ್ತಿ ಮೂಡಲು ಪ್ರೇರೇಪಿಸುತ್ತಿರಬೇಕು.

ಉಪಸಂಹಾರ : ಪುಸ್ತಕಗಳೇ ಮಾನವನ ನಿಜವಾದ ಮಿತ್ರರು. ಮೌಲ್ಯಯುತ ಬದುಕಿಗೆ ವೈಜ್ಞಾನಿಕ ಅಭಿವೃದ್ಧಿಗೆ ಗ್ರಂಥಾಲಯಗಳ ಪಾತ್ರ ಹಿರಿದು. ಇದರ ಸದುಪಯೋಗವನ್ನು ಎಲ್ಲರೂ ಪಡೆಯಬೇಕು. ಆದರೆ ಯಾಂತ್ರಿಕ ಬದುಕು ಮತ್ತು ಮೊಬೈಲ್ ಟಿ. ವಿ. ಪ್ರಭಾವದಿಂದ ಗ್ರಂಥಾಲಯಗಳ ಸಹವಾಸ ಕಡಿಮೆಯಾಗುತ್ತಿರುವುದು ವಿಷಾದನೀಯ. ಒಟ್ಟಾರೆ ಗ್ರಂಥಾಲಯ ಹೆಚ್ಚು ಜನರಿಗೆ ಉಪಯೋಗವಾಗಬೇಕು ಎಂಬುದು ನನ್ನ ಬಯಕೆಯಾಗಿದೆ.

"ಗ್ರಂಥಾಲಯವೇ ಮಂದಿರ. ಗ್ರಂಥಗಳೇ ದೇವರು. ಗ್ರಂಥಕರ್ತರೇ ಅರ್ಚಕರು. ಓದುಗರೇ ಭಕ್ತರು"

ಮಾದರಿ ಉತ್ತರಗಳು : ಗದ್ಯಪಾಠ 7. ಲಂಡನ್ ನಗರ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1ಅಂಕ) :

1. (ಬಿ) ಅನುಕರಣಾವ್ಯಯ
2. (ಬಿ) ಜೋಡುನುಡಿ
3. (ಡಿ) ದ್ವಿರುಕ್ತಿ
4. (ಎ) ಜೋಡುನುಡಿ
5. (ಸಿ) ದ್ವಿರುಕ್ತಿ

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1ಅಂಕ) :

6. ಜೋಡುನುಡಿ
7. ಬಯಲುಬಯಲು
8. ದ್ವಿರುಕ್ತಿ
9. ದ್ವಿರುಕ್ತಿ
10. ಜೋಡುನುಡಿ
11. ದ್ವಿರುಕ್ತಿ
12. ದ್ವಿರುಕ್ತಿ
13. ದ್ವಿರುಕ್ತಿ
14. ಜೋಡುನುಡಿ
15. ದ್ವಿರುಕ್ತಿ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

16. ಲಂಡನ್ನಿನ ರಸ್ತೆಗಳಲ್ಲಿ ನಿಲ್ಲುವುದನ್ನು ತಪ್ಪಿಸಲು ಭೂಗರ್ಭದಲ್ಲಿ ಗಾಡಿಗಳನ್ನು ಹಾಕಿದ್ದಾರೆ.
17. ಲೇಖಕರು ವರ್ಣಿಸಿದ ಲಂಡನ್ ನಗರದ ಸ್ಟೇಷನರಿ ಅಂಗಡಿಯ ಹೆಸರು 'ವೂಲವರ್ಥ್'.
18. ಲಂಡನ್ ನಗರದಲ್ಲಿ ಪ್ರಸಿದ್ಧಿ ಪಡೆದ ಸಿಂಪಿಗಳು 'ಸ್ಯಾವ್ಯೊಯ್'.
19. ಲಂಡನ್ ನಗರದಲ್ಲಿ ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರು 'ಟ್ರಾಫಲ್ಗಾರ್ ಸ್ಕ್ವೇರ್.
20. 'ವೆಸ್ಟ್ ಮಿನ್‌ಸ್ಟರ್ ಅಬೆ' ಸತ್ತು ಹೋಗಿರುವ ಸಾರ್ವಭೌಮರ, ಸಂತರ, ಕವಿಪುಂಗವರ ಸ್ಮಾರಕವಾಗಿದೆ.
21. ಚೇರಿಂಗ್ ಕ್ರಾಸ್' ಎಂಬುದು ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಲಂಡನ್ ನಗರದ ಓಣಿಯಾಗಿದೆ.
22. ಖನೇ ಎಡ್ವರ್ಡನು ತಂದ ಶಿಲೆಗೆ ಇರುವ ಹೆಸರು 'ಸ್ಟೋನ್ ಆಫ್ ಸ್ಕೋನ್'.
23. ಖನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ 'ಸ್ಟೋನ್ ಆಫ್ ಸ್ಕೋನ್' ಶಿಲೆಯನ್ನು ಕಿತ್ತುಕೊಂಡು ತಂದ್ದಿದ್ದನು.

24. ಬೇಕನ್ನನು ಪ್ರವಾಸವನ್ನು ಕುರಿತು "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ" ಎಂದು ಹೇಳಿರುವನು.
25. 'ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟಿದ್ದೇ' ಎಂದ ಆಂಗ್ಲ ಕವಿ ಷೇಕ್ಸ್ ಪಿಯರ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :
26. ಲಂಡನ್ ನಗರದ 'ವೂಲವರ್ಥ್' ಎಂಬ ಸ್ಟೇಷನರಿ ಅಂಗಡಿ ನೋಡುವ ಹಾಗಿದೆ. ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೊಟೋ, ಅಡವಿಯ ಹೂವು, ಯುದ್ಧ ಸಾಮಗ್ರಿ ಹೀಗೆ ಎಲ್ಲ ತರದ ಸಾಮಾನುಗಳು ಇಲ್ಲಿ ದೊರೆಯುತ್ತವೆ.
27. ಲಂಡನ್ನಿನ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಹಾರ ಗೃಹಗಳಲ್ಲಿ ಮತ್ತು ಯಾವುದಾದರೂ ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ ಕೂಡ ಒಬ್ಬ ಹೆಣ್ಣು ಮಗಳು. ಸಿನಿಮಾ ಗೃಹದಲ್ಲಿ ನಮ್ಮ ಜಾಗವನ್ನು ಹುಡುಕಿಕೊಡುವ ಕಾರ್ಯ ನಿರ್ವಹಿಸುವವರು ಹೆಣ್ಣುಮಕ್ಕಳು. ಕಾಲೇಜಿನಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ.
28. ಲಂಡನ್ನಿನಲ್ಲಿ ಹೆಣ್ಣು ಮಕ್ಕಳು ಧರಿಸುವ ಟೊಪ್ಪಿಗೆಯ ವಿಶೇಷತೆಯನ್ನು ತಿಳಿಸುತ್ತಾ ಲೇಖಕರು "ಇಲ್ಲಿನ ಹೆಣ್ಣು ಮಕ್ಕಳು ಧರಿಸುವ ಟೊಪ್ಪಿಗೆಗಳು ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಛವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ! ಕೋಟ್ಯವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ನಾವು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೇ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ" ಎಂದು ದಾಖಲಿಸಿದ್ದಾರೆ.
29. ಲಂಡನ್ನಿನ 'ವೆಸ್ಟ್ ಮಿನ್‌ಸ್ಟರ್ ಅಬೆ' ಸ್ಮಾರಕ ಮಂದಿರದಲ್ಲಿ 'ಪೊಯೆಟ್ಸ್ ಕಾರ್ನರ್' ಇದೆ. ಅಲ್ಲಿ ಪ್ರಸಿದ್ಧ ಲೇಖಕರಾದ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲ್ಡ್‌ಸ್ಮಿತ್, ಪ್ರಸಿದ್ಧ ವಿಮರ್ಶಕ ಡ್ರಾಯ್‌ಡನ್ ಮತ್ತು ಪ್ರಖ್ಯಾತ ನಾಟಕಕಾರ ಬೆನ್‌ಜಾನ್ಸನ್ ಹಾಗೂ ಮಹೋನ್ನತ ಆಂಗ್ಲಕವಿ ವರ್ಡ್ಸ್‌ವರ್ತ್ ಮೊದಲಾದ ಕವಿಶ್ರೇಷ್ಠರ ಸಮಾಧಿಗಳಿವೆ.
30. ವೆಸ್ಟ್ ಮಿನ್‌ಸ್ಟರ್ ಮಂದಿರದಲ್ಲಿಯ ಒಂದು ಭಾಗದಲ್ಲಿ ಶಿಲೆಯನ್ನು ಒಳಗೊಂಡ ಸಿಂಹಾಸನವಿದೆ. ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಈ ಸಿಂಹಾಸನದ ಮೇಲೆ ಒಂದು ಕಲ್ಲುಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು. 'ಸ್ಟೋನ್ ಆಫ್ ಸ್ಕೋನ್' ಎಂದು ಇದರ ಹೆಸರು. ೩ನೇ ಎಡ್ವರ್ಡ್ ಸ್ಕಾಟ್ ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ.
31. ಲಂಡನ್ ನಗರದ ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ 'ಚೇರಿಂಗ್ ಕ್ರಾಸ್' ಎಂಬ ಓಣಿಯಲ್ಲಿರುವ ಇಂಡಿಯಾ ಆಫೀಸು ನೋಡುವ ಹಾಗಿದೆ. ಇಲ್ಲಿನ ವಾಚನಾಲಯದಲ್ಲಿ ಅನೇಕ ಮಹತ್ತ್ವದ ಪುಸ್ತಕಗಳಿವೆ. ಕರ್ನಾಟಕದ ವಿಷಯವಾಗಿ ಎಷ್ಟೋ ಹೊಸ ಮಾತುಗಳು ಇಲ್ಲಿ ಗೊತ್ತಾಗುವುದು. ಇಲ್ಲಿನ ವಸ್ತು ಸಂಗ್ರಹಾಲಯದದಲ್ಲಿ ಹಿಂದೂಸ್ಥಾನದ ಲಲಿತ ಕಲೆಯ ಹಾಗೂ ಇನ್ನುಳಿದ ಮಾರ್ಗಗಳ ಮಾದರಿಗಳು ನೋಡಲು ದೊರೆಯುತ್ತವೆ.

ಹಿಂದೂಸ್ಥಾನದಲ್ಲಿ ಪ್ರಕಟವಾಗುವ ಎಲ್ಲ ಮುಖ್ಯವಾದ ಇಂಗ್ಲಿಷ್ ವರ್ತಮಾನ ಪತ್ರಿಕೆಗಳು ಬರುತ್ತವೆ.

32. ರಾಜದಂಡವೂ, ಕಿರೀಟವೂ ನೆಲಕ್ಕುರುಳಲೇಬೇಕು ಎಂಬುದು ನಿಜವಾಗಿದ್ದರೂ ಸತ್ತ ಮೇಲೆ ಅವರಿಗೊಂದು ವಿಶಿಷ್ಟ ಸ್ಥಾನ ಕಲ್ಪಿಸಿರುವುದು ಲಂಡನ್ ನಗರದ ವೆಸ್ಟ್ ಮಿನ್‌ಸ್ಟರ್ ಅಬೆ ಮಂದಿರದಲ್ಲಿನ ರಾಜವಿಭಾಗದಲ್ಲಿ ಕಾಣಬಹುದಾಗಿದೆ. ಇಲ್ಲಿ ಸಿಂಹದೆದೆಯ ರಿಚರ್ಡ್, ೨ನೇ ಎಡ್ವರ್ಡ್, ಅಲ್ರ್ ಆಫ್ ಸ್ಯಾಟ್ಸ್‌ಫೋರ್ಡ್, ರಾಣಿ ಎಲಿಜಬೆತ್, ೧ನೇ ಜೇಮ್ಸ್ ಮೊದಲಾದ ಅರಸು, ಅರಸಿಯರು ಗೋರಿಯ ಮೇಲೆ ಒರಗಿದ್ದಾರೆ. ಗೋರಿಯ ಮೇಲೆ ವ್ಯಕ್ತಿ ಮಲಗಿಕೊಂಡಂತೆ ಮೂರ್ತಿಯನ್ನು ಕಡೆಯಲಾಗಿದೆ. ಗೋರಿಗಳ ನಡುವೆ ಹಾಯ್ದು ಪ್ರಾರ್ಥನಾ ಮಂದಿರಕ್ಕೆ ಹೋಗಬಹುದು. ಇಲ್ಲಿನ ಕೆತ್ತನೆಯ ಕೆಲಸವೆಲ್ಲ ಬಂಗಾರದ ಬಣ್ಣದಲ್ಲಿಯೇ ಆಗಿವೆ. ಮಂದಿರದ ಹಿಂದೆ ಭವ್ಯವಾಗಿ ೭ನೇ ಹೆನ್ರಿಯ ಗೋರಿಯು ನಿಂತಿದೆ.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

33. ವಿ. ಕೃ. ಗೋಕಾಕ್ : ವಿನಾಯಕ ಕೃಷ್ಣ ಗೋಕಾಕ್ ಅವರು ಸಾ. ಶ. ೧೯೦೯ ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಶ್ರೀಯುತರು 'ಸಮುದ್ರದಾಚೆಯಿಂದ, ಸಮುದ್ರಗೀತೆಗಳು, ಪಯಣ, ಭಾರತ ಸಿಂಧುರಶ್ಮಿ, ಉಗಮ, ಇಜ್ಜೋಡು, ಸಮರಸವೇ ಜೀವನ, ದ್ಯಾವಾ ಪೃಥಿವೀ' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರ ಲಭಿಸಿವೆ.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಮಾಡುವುದು :

34. "ವೂಲವರ್ಥ ಸ್ಟೋಷನರಿ ಅಂಗಡಿ ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ."

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಂಕಾರ.

ಸಮನ್ವಯ : ಉಪಮೇಯ : ವೂಲವರ್ಥ ಸ್ಟೋಷನರಿ ಅಂಗಡಿ
ಉಪಮಾನ : ಪ್ರಾಚೀನ ಮಹಾಕಾವ್ಯ
ಉಪಮಾವಾಚಕ : ಅಂತೆ
ಸಮಾನಧರ್ಮ : ಮಹಾಕೋಶವಾಗಿರುವುದು

ಇಲ್ಲಿ ಉಪಮೇಯವಾದ ವೂಲವರ್ಥ ಸ್ಟೋಷನರಿ ಅಂಗಡಿಯನ್ನು ಉಪಮಾನವಾದ ಪ್ರಾಚೀನ ಮಹಾಕಾವ್ಯಕ್ಕೆ ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ಮಹಾಕೋಶವಾಗಿರುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರದ (ಪೂರ್ಣೋಪಮಾಲಂಕಾರದ) ಲಕ್ಷ್ಯವಾಗಿದೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

35. ದೇಶ ಸುತ್ತು ; ಕೋಶ ಓದು : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಇದು ಒಂದಾಗಿದೆ.

ಮನುಷ್ಯನಿಗೆ ಲೋಕಜ್ಞಾನ ಬಹಳ ಮುಖ್ಯ. ಅಂದರೆ ಒಂದು ದೇಶ ಸುತ್ತುವುದರಿಂದ ಪ್ರದೇಶದ ಜನರ ಆಚಾರ, ವಿಚಾರ, ಪದ್ಧತಿ, ರೀತಿ, ನೀತಿಗಳ ಅರಿವಾಗುತ್ತದೆ. ನಮಗೆ ತಿಳಿಯದೇ ಇರುವ ಎಷ್ಟೋ ವಿಷಯಗಳು ತಿಳಿಯುತ್ತವೆ. ಲೋಕಸುತ್ತುವುದೇ ಒಂದು ಬಗೆಯ ಜ್ಞಾನಾರ್ಜನೆ ಎನಿಸಿದೆ. ಅದರಂತೆ ಕೋಶ ಓದುವುದು ಎಂದರೆ ಬೇರೆಬೇರೆ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಅಧ್ಯಯನ ಮಾಡುವುದು, ಇಡೀ ಪ್ರಪಂಚದ ಜ್ಞಾನ ಪುಸ್ತಕಗಳಲ್ಲಿ ಅಡಗಿದೆ. ಹೀಗೆ ಅಡಕವಾಗಿರುವ ವಿಷಯಗಳನ್ನು ಓದಿ ಅದನ್ನು ಜೀವನದಲ್ಲಿ ಅನ್ವಯ ಮಾಡಿಕೊಂಡರೆ ನಮ್ಮ ಬದುಕು ಹಸನಾಗುತ್ತದೆ. ಇವೆರಡರ ಉದ್ದೇಶವು ಅಂತಿಮವಾಗಿ ಅನುಭವಗಳಿಸುವುದಾಗಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

36. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರು ಲಂಡನ್ ನಗರದ ಟ್ರಾಫಲ್ಗಾರ್ ಸ್ಕ್ವೇರ್ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಪ್ರತಿಯೊಂದು ಕೂಟಕ್ಕೂ ಆ ದೇಶದ ಪ್ರಸಿದ್ಧರ ಹೆಸರುಗಳು ಹಾಗೂ ಬೀದಿಬೀದಿಗೆ ಮೂಲೆಮೂಲೆಗೆ ಇತಿಹಾಸ ಪ್ರಸಿದ್ಧ ಪುರುಷರ ಪ್ರತಿಮೆಗಳನ್ನು ನಿಲ್ಲಿಸಿದ್ದನ್ನು ಕಂಡು ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೇ ದುಡಿದವರು ನಿಂತು ಕೈಯೆತ್ತಿ "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ" ಎಂದು ಹೇಳುತ್ತಿರುವಂತೆ ತೋರುತ್ತದೆ ಎಂದು ಈ ಮಾತನ್ನು ಲೇಖಕರು ಹೇಳುತ್ತಾರೆ.

ಸ್ವಾರಸ್ಯ : ರಾಷ್ಟ್ರಕ್ಕಾಗಿ ದುಡಿದ ಮಹನೀಯರಿಗೆ ಲಂಡನ್ ನಗರದಲ್ಲಿನ ಜನತೆ ತೋರಿರುವ ಗೌರವಭಾವನೆ ಮತ್ತು ರಾಷ್ಟ್ರ ಪ್ರೇಮದ ಭಾವವು ಪ್ರಸ್ತುತ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

37. "ಹೊತ್ತು! ಹೊತ್ತು! ಹೊತ್ತೇ ಹಣ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರು ತಮ್ಮ ಲಂಡನ್ ನಗರದ ಪ್ರವಾಸದ ಅನುಭವಗಳನ್ನು ದಾಖಲಿಸುತ್ತಾ ಲಂಡನ್ನಿನ ಬೀದಿಯಲ್ಲಿ ಲಕ್ಷಾನುಲಕ್ಷ ಜನರು ಅವಸರದಿಂದ ಓಡುತ್ತಾರೆ. ವಿದೇಶಗಳಲ್ಲಿ ಜನರು ಸಮಯವನ್ನು ವ್ಯರ್ಥ ಮಾಡದೆ ಅದರ ಸದ್ವಿನಿಯೋಗ ಮಾಡಿಕೊಳ್ಳುತ್ತಾ ದುಡಿದು ಹಣ ಗಳಿಸುತ್ತಾರೆ. ಇದು ಅಕ್ಷರಶಃ ವಿಲಾಯಿತಿಯಲ್ಲಿ ನಿಜವಾಗಿದೆ ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುವರು.

ಸ್ವಾರಸ್ಯ : ಸಮಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಅದರಲ್ಲೂ ವಿದೇಶಗಳಲ್ಲಿ ದುಡಿದು ಹಣ ಗಳಿಸಲು ಸಮಯವನ್ನು ವ್ಯರ್ಥಮಾಡದೇ ಸದುಪಯೋಗ ಮಾಡಿಕೊಳ್ಳುವುದು ನಿಜವಾಗಿ ಅನುಭವಕ್ಕೆ ಬರುತ್ತದೆ. ಲಂಡನ್ ವಾಣಿಜ್ಯ ನಗರವಾಗಿದ್ದು, ಹಣ ಸಂಪಾದನೆಯೇ ಮುಖ್ಯ ಗುರಿಯಾಗಿದೆ. ಇಲ್ಲಿ ಹಣದಷ್ಟೆ ಪ್ರಾಶಸ್ತ್ಯವನ್ನು ಸಮಯಕ್ಕೆ ನೀಡುತ್ತಾರೆ ಎಂಬುದು ಪ್ರಸ್ತುತ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

38. "ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು! ಮಣ್ಣು!"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲಂಡನ್ ನಗರದ 'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಆಕರ್ಷಣೀಯವಾದುದು. ಇಲ್ಲಿನ ಪೊಯೆಟ್ಸ್ ಕಾರ್ನರ್‌ನಲ್ಲಿ ಕವಿಗಳ, ಸಾರ್ವಭೌಮರ ನೆನಪಿಗಾಗಿ ಕಲ್ಲು ಹಾಸುಗಳನ್ನು ಇಟ್ಟಿದ್ದು ಅವುಗಳ ಮೇಲೆ ನಡೆದು ಹೋಗಬೇಕಾಗಿತ್ತು. ಕಿಕ್ಕಿರಿದು ತುಂಬಿದ್ದ ಕವಿಗಳ, ಸಾರ್ವಭೌಮರ ಸ್ಮಾರಕಗಳು ಲೇಖಕರ ಕಾಲಿನ ಹೆಜ್ಜೆಹೆಜ್ಜೆಗೂ ಸಿಗುತ್ತಿದ್ದ ವೇಳೆ, ಎಲ್ಲಿ ಅವುಗಳ ಮೇಲೆ ತುಳಿಯುತ್ತೇನೆ ಎಂಬ ಭಯದ ಭಾವ ಹೊಂದಿ ಲೇಖಕರು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಜೀವನ ಅಶಾಶ್ವತವಾದುದು. ಸಾಧಕರ ಮಾರ್ಗದಲ್ಲಿ ನಡೆಯುವಾಗ ಕೆಲವೊಮ್ಮೆ ದಿಕ್ಕು ತಪ್ಪಿದಂತಾಗುತ್ತದೆ. ಆಗ ಬರಿಯ ಮಣ್ಣು ಎಂಬುದು ಮನದಲ್ಲಿ ಮೂಡುತ್ತದೆ, ಎಲ್ಲವೂ ನಶ್ವರವಾಗಿ ಕಾಣುತ್ತದೆ ಎನ್ನುವುದು ಪ್ರಸ್ತುತ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

39. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲಂಡನ್ ನಗರದ ಪ್ರವಾಸದ ಅನುಭವಗಳನ್ನು ಲೇಖಕರು ದಾಖಲಿಸುತ್ತಾ ತಮ್ಮ ಅನುಭವಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಬೇಕನ್ ಹೇಳಿದ ಮಾತನ್ನು ಸ್ಮರಿಸುತ್ತಾರೆ. ಕಡಿಮೆ ದಿನಗಳಲ್ಲಿ ಮನಸ್ಸು ವಿಕಾಸಗೊಂಡಿದೆ. ದೃಷ್ಟಿ ವಿಶಾಲವಾಗಿದೆ, ಸಂಸ್ಕೃತಿ ಓರೆಗಲ್ಲಿನ ಮೇಲೆ ನಿಂತಿದೆ ಎಂದು ನೆನೆಯುತ್ತ ಬೇಕನ್ ಹೇಳಿದ ಮಾತನ್ನು ನೆನೆಪಿಸಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : "ದೇಶ ಸುತ್ತು ಇಲ್ಲವೇ ಕೋಶ ಓದು" ಎಂಬ ನುಡಿಯಂತೆ, ಪರಿಪೂರ್ಣ ಶಿಕ್ಷಣಕ್ಕೆ ಪ್ರವಾಸವು ಅತ್ಯಗತ್ಯ. ದೇಶ-ವಿದೇಶಗಳ ಪ್ರವಾಸದ ಅನುಭವವು ಜ್ಞಾನಾಭಿವೃದ್ಧಿಗೆ ಸಹಕಾರಿ, ಪ್ರವಾಸದಿಂದ ದೃಷ್ಟಿ ವಿಶಾಲವಾಗಿ ಮನಸ್ಸು ವಿಕಾಸಹೊಂದುವುದು ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

40. "ಗಾಡಿಗಳು ದಢದಢ ಹೋಗುತ್ತಿರುತ್ತವೆ! ವಿಚಿತ್ರ ಸೃಷ್ಟಿ!"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರು ಲಂಡನ್ ನಗರದ ಸಾರಿಗೆ ವ್ಯವಸ್ಥೆಯ ಬಗ್ಗೆ ಹೇಳುವಾಗ ಲಂಡನ್ ರಸ್ತೆಗಳಲ್ಲಿ ವ್ಯಾಪಾರವು ತುಂಬಿ ಟ್ರಾಮ್ ಬಸ್ಸುಗಳಿಗೆ ಸಕಾಲಕ್ಕೆ ಹೋಗಲಾಗುವುದಿಲ್ಲ. ಇದನ್ನು ತಪ್ಪಿಸಲು ಭೂಗರ್ಭದಲ್ಲಿ ಗಾಡಿಗಳನ್ನು ಒಯ್ದಿರುತ್ತಾರೆ ಎಂದು ಹೇಳುವ ಸಂದರ್ಭದಲ್ಲಿ ಈ ವಾಕ್ಯವನ್ನು ಹೇಳಲಾಗಿದೆ.

ಸ್ವಾರಸ್ಯ : ಬಹಳ ಹೊತ್ತು ನಡುನಡುವೆ ವಾಹನಗಳು ರಸ್ತೆಯಲ್ಲಿ ನಿಲ್ಲುವುದರಿಂದ ಸಮಯ ವ್ಯರ್ಥವಾಗುವುದನ್ನು ತಪ್ಪಿಸಲು ಲಂಡನ್ ನಗರದಲ್ಲಿ ಆಧುನಿಕ ವ್ಯವಸ್ಥೆ ಇರುವುದು ಸ್ವಾರಸ್ಯಕರವಾಗಿದೆ.

41. "ಈ ದೊಡ್ಡ ಬೀದಿಯು ಸಾಮ್ರಾಜ್ಯದ ಬೀದಿ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲಂಡನ್ ನಗರದ ಚೇರಿಂಗ್ ಕ್ರಾಸ್ ಓಣಿಯು ಆಂಗ್ಲರ ಸಾಮ್ರಾಜ್ಯದ ವೈಭವವು ಕಂಡು ಬರುವುದು. ಒಂದೊಂದು ವಸಾಹತಿನ ದೇಶದ ಮೇಲಿನ ಪ್ರಭುತ್ವವು ಇಲ್ಲಿಯ ಒಂದೊಂದು ಕಚೇರಿಯಿಂದ ನಡೆಯುತ್ತದೆ. ಹೀಗಾಗಿ ಲೇಖಕರು ಚೇರಿಂಗ್ ಕ್ರಾಸ್ ಓಣಿಯನ್ನು 'ದೊಡ್ಡ ಸಾಮ್ರಾಜ್ಯದ ಬೀದಿ' ಎಂದಿದ್ದಾರೆ.

ಸ್ವಾರಸ್ಯ : ಈ ವಾಕ್ಯವು ಆಂಗ್ಲರು ತಮ್ಮ ವಸಾಹತು ರಾಷ್ಟ್ರಗಳ ಮೇಲೆ ಹೊಂದಿದ್ದ ಪ್ರಭುತ್ವದ ಬಗ್ಗೆ ತಿಳಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

42. "ಹೆಜ್ಜೆ ಹೆಜ್ಜೆಗೆ ಇತಿಹಾಸದ ಅಡಿಗಲ್ಲುಗಳು ದೊರೆಯುತ್ತವೆ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರು ಲಂಡನ್ ನಗರದ ಬೀದಿಬೀದಿಯಲ್ಲೂ ಇತಿಹಾಸ ಪ್ರಸಿದ್ಧ ಪುರುಷರ ಪ್ರತಿಮೆಗಳನ್ನು ನೋಡಿ `ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದವರು ನಿಂತು ಕೈಯೆತ್ತಿ ``ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ' ಎಂದು ಹೇಳುತ್ತಿರುವಂತೆ ಹೆಜ್ಜೆ ಹೆಜ್ಜೆಗು ಇತಿಹಾಸದ ಅಡಿಗಲ್ಲುಗಳು ದೊರೆಯುತ್ತವೆ ಎಂದು ಈ ಸಂದರ್ಭದಲ್ಲಿ ಹೇಳಿದ್ದಾರೆ.

ಸ್ವಾರಸ್ಯ : ರಾ ರಾಷ್ಟ್ರಕ್ಕಾಗಿ ದುಡಿದ ಮಹನೀಯರಿಗೆ ಲಂಡನ್ ನಗರದಲ್ಲಿ ಅಲ್ಲಿನ ಜನ ತೋರಿಸಿರುವ ಗೌರವ ಭಾವನೆಯು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

43. "ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲಂಡನ್ ನಗರದ ಹೆಣ್ಣು ಮಕ್ಕಳ ಟೊಪ್ಪಿಗೆಯು ವಿಶೇಷವಾಗಿರುತ್ತದೆ. ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಎಂದು ಹೇಳುವಾಗ ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಮನುಷ್ಯನಂತೆ ಟೊಪ್ಪಿಗೆಯಲ್ಲೂ ಅಡಗಿರುವ ವೈವಿಧ್ಯತೆಯನ್ನು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಹೇಳಲಾಗಿದೆ.

44. "ಅಡಿಗಡಿಗೆ ಇತಿಹಾಸವನ್ನು ದಾಟುತ್ತೇವೆ! ಎಂಥ ವಿಚಿತ್ರ!"

ಆಯ್ಕೆ: ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : `ವೆಸ್ಟ್ ಮಿನ್‌ಸ್ಟರ್ ಅಬೆ' ಎಂಬ ಪ್ರಾರ್ಥನಾ ಮಂದಿರದ ಆವರಣದಲ್ಲಿ ಸ್ಥಾಪಿಸಲಾಗಿದ್ದ ಕವಿಗಳ, ಸಾರ್ವಭೌಮರ ನೆನಪಿಗಾಗಿ ಎಲ್ಲರಿಗೂ ಒಂದೊಂದು ಹಿಡಿ ಮಣ್ಣನ್ನು ಕೊಡುವಂತೆ ಕಲ್ಲು ಹಾಸುಗಳನ್ನು ಇಟ್ಟಿದ್ದು ಅವುಗಳ ಮೇಲೆ ನಡೆದು ಹೋಗಬೇಕಾಗಿತ್ತು. ಅವುಗಳ ಬಳಿ ನಡೆದು ಹೋಗುತ್ತಿದ್ದ ಸಂದರ್ಭದಲ್ಲಿ ಲೇಖಕರು

ಲಂಡನ್ ಜನರು ಕವಿಗಳು ಮತ್ತು ಸಾರ್ವಭೌಮರ ಮೇಲೆ ಇಟ್ಟಿರುವ ಗೌರವವನ್ನು ಕಾಣಬಹುದು ಎನ್ನುವ ಸಂದರ್ಭದಲ್ಲಿ ಹೀಗೆ ಹೇಳಿದ್ದಾರೆ.

ಸ್ವಾರಸ್ಯ : ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದ ಇತಿಹಾಸ ಪುರುಷರನ್ನು ಲಂಡನ್ ನಗರದ ಜನರು ನೆನೆಯುವ ಬಗೆಯನ್ನು ಇಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

45. "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲಂಡನ್ ನಗರವನ್ನು ನೋಡಿದ ಲೇಖಕರು ಅದರ ವರ್ಣನೆಯನ್ನು ಅದ್ಭುತವಾಗಿ ಮಾಡಿದ್ದಾರೆ. ಕೊನೆಯಲ್ಲಿ ಪ್ರವಾಸದಿಂದ ತನ್ನ ಮನಸ್ಸು ಎಷ್ಟೊಂದು ವಿಕಾಸ ಹೊಂದಿದೆ.ತನ್ನ ದೃಷ್ಟಿಯು ಎಷ್ಟೊಂದು ವಿಶಾಲವಾಗಿದೆ, ನನ್ನ ಸಂಸ್ಕೃತಿಯು ಎಂತಹ ಒರೆಗಲ್ಲಿನ ಮೇಲೆ ನಿಂತಿದೆ ಎಂದು ಬರೆಯುವ ಸಂದರ್ಭದಲ್ಲಿ ಅವರು ಬೇಕನ್ ಕವಿಯ 'ಪ್ರವಾಸವು ಶಿಕ್ಷಣದ ಭಾಗವಾಗಿದೆ.' ಎಂಬ ಮಾತು ಹಾಗೂ ಷೇಕ್ಸ್‌ಪಿಯರ್ ಕವಿಯ ಮಾತುಗಳನ್ನು ನೆನೆಪಿಸಿಕೊಳ್ಳುವಾಗ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : 'ದೇಶ ಸುತ್ತು ಕೋಶ ಓದು' ಎಂಬ ಗಾದೆಯಂತೆ ಪ್ರವಾಸದಿಂದ ವ್ಯಕ್ತಿಯ ಮನಸ್ಸು, ವ್ಯಕ್ತಿತ್ವ ವಿಕಾಸವಾಗುವುದಲ್ಲದೆ ಆಲೋಚಿಸುವ ದೃಷ್ಟಿಕೋನದಲ್ಲಿ ಸಾಕಷ್ಟು ಬದಲಾಗುತ್ತದೆ. ವಿಶಾಲ ಚಿಂತನೆಯನ್ನು ರೂಢಿಸಿಕೊಳ್ಳುತ್ತಾನೆ. ದೇಶ ಸುತ್ತದಿದ್ದರೆ ವ್ಯಕ್ತಿಯ ಮನಸ್ಸು ಸಂಕುಚಿತವಾಗುತ್ತದೆ. ಆತ ವಿಶಾಲವಾಗಿ ಚಿಂತಿಸಲಾರ ಹಾಗೂ ಬೆಳೆಯಲಾರ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

46. "ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರು ಲಂಡನ್‌ನಲ್ಲಿ 'ವೆಸ್ಟ ಮಿನ್‌ಸ್ಟರ್ ಅಬೆ' ಎಂಬ ಪ್ರಾರ್ಥನಾ ಮಂದಿರದಲ್ಲಿದ್ದ 'ಸ್ಟೋನ್ ಆಫ್ ಸ್ಕೋನ್' ಕಲ್ಲು ಪಾಟಿಯನ್ನು ನೋಡುತ್ತಾ ಮೂರನೆಯ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಈ ಕಲ್ಲುಪಾಟಿಯನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲಾ ಸಾಮ್ರಾಟರ ಪಟ್ಟಾಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಇಂಗ್ಲೆಂಡಿನ ಅತುಲ ವೈಭವವನ್ನು ನೋಡಿದಾಗ ಈ ಕಲ್ಲಿನಲ್ಲಿ ಯಾವುದೋ ಸಿದ್ಧಿ ಅಥವಾ ಮಂತ್ರವಿದೆ ಎಂದು ಆ ಕಲ್ಲುಪಾಟಿಯ ವಿಶೇಷತೆಯನ್ನು ವಿವರಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಈ ಕಲ್ಲುಪಾಟಿಯ ಮೇಲೆ ಇಂಗ್ಲೆಂಡಿನ ಎಲ್ಲಾ ಅರಸರ ಅಭಿಷೇಕ ನೆರವೇರಿದೆ. ಬಹುಶಃ ಆ ಕಲ್ಲುಪಾಟಿಯ ಮಹಿಮೆಯಿಂದಲೇ ಇಂಗ್ಲೆಂಡಿನಲ್ಲಿ ಅತುಲ ವೈಭವ ಮೆರೆದಿದೆ ಎಂದು ಹೇಳುವಲ್ಲಿ ಕಲ್ಲುಪಾಟಿಯ ಮಹಿಮೆ ಅದರ ಮೇಲೆ ಅವರಿಗಿರುವ ನಂಬಿಕೆ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

47. "ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿ ಕೊಡುವವರು ಹೆಣ್ಣು"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ವಿ. ಕೃ. ಗೋಕಾಕ್ ಅವರು ಬರೆದ 'ಸಮುದ್ರದಾಚೆಯಿಂದ' ಕೃತಿಯಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲಂಡನ್ನಿನ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಹಾರ ಗೃಹಗಳಲ್ಲಿ ಮತ್ತು ಯಾವುದಾದರೂ ದೊಡ್ಡ ಅಂಗಡಿಗೆ ಹೋದರೆ

ಅಲ್ಲಿಯ ಟೈಪಿಸ್ಟ್ ಕಾರಕೂನ ಕೂಡ ಒಬ್ಬ ಹೆಣ್ಣು ಮಗಳು. ಸಿನಿಮಾ ಗೃಹದಲ್ಲಿ ನಮ್ಮ ಜಾಗವನ್ನು ಹುಡುಕಿಕೊಡುವ ಕಾರ್ಯನಿರ್ವಹಿಸುವವರು ಹೆಣ್ಣುಮಕ್ಕಳು. ಕಾಲೇಜಿನಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ ಎಂದು ಲೇಖಕರು ತಿಳಿಸುವ ಸಂದರ್ಭದಲ್ಲಿ ಬಂದ ಮಾತಿದು.

ಸ್ವಾರಸ್ಯ : ಲಂಡನ್ನಿಗರು ಸ್ತ್ರೀಯರನ್ನು ಆದರಿಸುವ ರೀತಿ ಮತ್ತು ಅವರಿಗೆ ನೀಡುವ ಗೌರವ, ಸ್ವಾತಂತ್ರ್ಯ ಅನುಕರಣೀಯವಾದುದು ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

48. ಲಂಡನ್ ನಗರದಲ್ಲಿ ವಾಹನಗಳ ಸುಗಮ ಸಂಚಾರಕ್ಕಾಗಿ ಮಾಡಿರುವ ವ್ಯವಸ್ಥೆಯನ್ನು ಲೇಖಕರು ಮೊಟ್ಟಮೊದಲು ಗುರುತಿಸಿದ್ದಾರೆ. ಅಲ್ಲಿ ಭೂಗರ್ಭದೊಳಗೆ ಹಳಿಗಳನ್ನು ಜೋಡಿಸಿ, ಎಲೆಕ್ಟ್ರಿಕ್ ಗಾಡಿಗಳನ್ನು ಓಡಿಸಲು, ನಿಲ್ದಾಣಗಳನ್ನೂ ಹತ್ತಿ - ಇಳಿಯಲು ಎಸ್ಕಲೇಟರ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ ಎನ್ನುವುದನ್ನು ಲೇಖಕರು ಕಂಡುಕೊಂಡರು. ಸ್ಟೇಷನರಿ ಅಂಗಡಿಯಲ್ಲಿ ಎಲ್ಲ ಬೆಲೆಯ ಸಕಲ ವಸ್ತುಗಳನ್ನು ದೊರಕುವುದನ್ನು ನೋಡಿದರು. ಪ್ರಸಿದ್ಧರಾದ ದುಬಾರಿಯ ಸ್ಯಾವ್ಯೊಯ್ ಸಿಂಪಿಗಳು ಮತ್ತು ಸಾಮಾನ್ಯ ದರದ ಐವತ್ತು ಶೀಲಿಂಗಿನ ಸಿಂಪಿಗಳು ಇರುವುದನ್ನು ಅರಿತರು. ಲಂಡನ್ ನಗರದಲ್ಲಿ ಎಲ್ಲ ಕೆಲಸಗಳಲ್ಲೂ ಹೆಚ್ಚಾಗಿ ಸ್ತ್ರೀಯರೇ ದುಡಿಯುತ್ತಿರುವುದನ್ನು ಅವರು ಗುರುತಿಸಿದರು. ಅಲ್ಲಿಯ ಇಂಡಿಯಾ ಆಫೀಸಿನ ವಾಚನಾಲಯ, ವಸ್ತು ಸಂಗ್ರಹಾಲಯಗಳ ವೈಶಿಷ್ಟ್ಯವನ್ನು, ಆಂಗ್ಲರ ಸಾಮ್ರಾಜ್ಯದ ವೈಭವವನ್ನು ತೋರುವ 'ಚೇರಿಂಗ್ ಕ್ರಾಸ್' ಓಣಿ ಹಾಗೂ ಅಲ್ಲಿರುವ ಬೇರೆ ಬೇರೆ ದೇಶಗಳ ಕಚೇರಿಗಳು. ಬ್ಯಾಂಕುಗಳನ್ನು ಅವರು ಗಮನಿಸಿದರು. ಲಂಡನ್ ನಗರದಲ್ಲಿರುವ ಪ್ರತಿಯೊಂದು ಕೂಟಕ್ಕಿರುವ ಹೆಸರು, ಇತಿಹಾಸ ಪ್ರಸಿದ್ಧ ಪುರುಷರ ಶಿಲಾಮೂರ್ತಿಗಳು ಮತ್ತು ಅವರ ವಿವರಗಳ ಶಿಲಾಕೆತ್ತನೆಗಳನ್ನು ಅವರು ನೋಡಿದರು. ಲಂಡನ್ ನಾಗರಿಕರು ಸಮಯಕ್ಕೆ ನೀಡುವ ಬೆಲೆ, ಅವಸರದ ಓಡಾಟ, ಹೆಣ್ಣು ಮಕ್ಕಳ ಟೊಪ್ಪಿಗೆಯ ವೈವಿಧ್ಯ, ಅವರ ವ್ಯಕ್ತಿ ವಿಶಿಷ್ಟತೆಯನ್ನು ಗುರುತಿಸಿದರು. ಈ ನಗರದಲ್ಲಿರುವ ಒಂದು ಸಾವಿರ ವರ್ಷಗಳನ್ನು ಪುರಾತನ ಮಂದಿರವಾದ 'ವೆಸ್ಟ್ ಮಿನ್‌ಸ್ಟರ್ ಅಬೆ' ಎನ್ನುವ ಪ್ರಾರ್ಥನಾ ಮಂದಿರ ಲೇಖಕರ ಗಮನವನ್ನು ಸೆಳೆದಿದೆ. ಸಾಮ್ರಾಟರಿಂದ ಮೊದಲುಗೊಂಡು ಸಮಾಜದ ಎಲ್ಲ ವರ್ಗಗಳ ಸಮಾಧಿಗಳನ್ನು ಕಂಡ ಲೇಖಕರು, ಅಲ್ಲಿಯ ವ್ಯವಸ್ಥೆಗೆ, ಭವ್ಯತೆಗೆ ಮಾರುಹೋಗಿದ್ದಾರೆ. ಲಂಡನ್ ನಗರದಲ್ಲಿ ಸುತ್ತಾಡುತ್ತಾ ಅಲ್ಲಿರುವ ಕೆಲವು ವೈಶಿಷ್ಟ್ಯಗಳನ್ನು ಲೇಖಕರು ಗುರುತಿಸಿದ್ದಾರೆ.

49. ಲಂಡನ್ ನಗರದಲ್ಲಿರುವ 'ವೆಸ್ಟ್ ಮಿನ್‌ಸ್ಟರ್ ಅಬೆ' ಸಾವಿರ ವರ್ಷಗಳಷ್ಟು ಪುರಾತನವಾದ ಒಂದು ಪ್ರಾರ್ಥನಾ ಮಂದಿರವಾಗಿದೆ. ಕೆಲವು ಭಾಗಗಳನ್ನು ದುರಸ್ತಿ ಮಾಡಿದ್ದರೂ, ಮಂದಿರವು ಅಚ್ಚಳಿಯದಂತೆ ಉಳಿದುಕೊಂಡಿದೆ. ಅದು ಪ್ರಾರ್ಥನಾ ಮಂದಿರ ಮಾತ್ರವಾಗಿರದೆ, ಸತ್ತವರ ಸ್ಮಾರಕವೂ ಆಗಿದೆ. ಈ ಬಗೆಯ ಮಂದಿರ ವಿಶ್ವದಲ್ಲಿ ಬೇರೆಲ್ಲಿಯೂ ಇರಲಾರದು ಎನಿಸುವಂತಿದೆ. ಈ ಮಂದಿರದ ಬಗೆಗೆ ಬ್ಯೂಮಾಂಟ್ ಎಂಬ ಕವಿ ಹಾಡಿದ್ದಾರೆ, ಗೋಲ್ಡ್ ಸ್ಮಿತ್ ಮತ್ತು ಎಡಿಸನ್ ಎನ್ನುವ ಪ್ರಸಿದ್ಧ ಸಾಹಿತಿಗಳು ನಿಬಂಧಗಳನ್ನು ಬರೆದಿದ್ದಾರೆ. ಕಟ್ಟಡ ಭವ್ಯವಾಗಿದೆ. ಒಳಗೆ ಪ್ರಾರ್ಥನಾ ಮಂದಿರವಿದೆ. ಒಳಗೆ ನಡುವೆ ಇರುವ ಸಣ್ಣ ಹಾದಿಯ ಎಡಬಲಗಳಲ್ಲಿ ರಾಜಕಾರಣಿಗಳ ಶಿಲಾಮೂರ್ತಿಗಳಿವೆ. ಪಾದ್ರಿಯ ಆಸನ ಉತ್ತಮ ಕೆತ್ತನೆಯೊಂದಿಗೆ ಬಂಗಾರದ ಬಣ್ಣವನ್ನು ಹೊಂದಿದೆ. 'ಪೋಯೆಟ್ಸ್ ಕಾರ್ನರ್' (ಕವಿಗಳ

ಮೂಲೆ) ಎನ್ನುವಲ್ಲಿ ಕಿಪ್ಲಿಂಗ್, ಹಾರ್ಡಿ, ಮ್ಯಾಕಾಲೆ, ಜಾನ್ಸನ್, ಗೋಲ್ಡ್ ಸ್ಮಿತ್, ಡ್ರಾಯಡನ್ ಮೊದಲಾದ ಸುಪ್ರಸಿದ್ಧ ಕವಿಗಳ ಸಮಾಧಿಗಳಿವೆ. ಪ್ರತಿಯೊಬ್ಬರ ಸಮಾಧಿಯ ಮೇಲೂ ಕಲ್ಲುಗಳನ್ನು ಇರಿಸಲಾಗಿದೆ. ಅವುಗಳಲ್ಲಿ ಚಿಕ್ಕ ಅಕ್ಷರಗಳಲ್ಲಿ ಅವರವರ ವಿವರಗಳನ್ನು ಕೊರೆಯಲಾಗಿದೆ. ಯಾರ ಕಣ್ಣಿಗೂ ಬೀಳದ ಮೂಲೆಯಲ್ಲಿ ಸುಪ್ರಸಿದ್ಧ ಕವಿ ವರ್ಡ್ಸ್‌ವರ್ತ್‌ನ ಸಮಾಧಿ ಮತ್ತು ಮೂರ್ತಿಗಳಿವೆ. ಕವಿಗಳ ಮೂಲೆಯ ಹತ್ತಿರದಲ್ಲಿಯೇ ವೈಜ್ಞಾನಿಕರ ಮೂಲೆಯಿದೆ. ನ್ಯೂಟನ್ನನ ದೊಡ್ಡ ಶಿಲಾಮೂರ್ತಿ ಅಲ್ಲಿದೆ. ಡಾರ್ವಿನ್, ಹರ್ಶೆಲ್ ಮೊದಲಾದವರ ಸಮಾಧಿಗಳೂ ಅಲ್ಲಿವೆ. ಅಲ್ಲದೆ ಸಮೀಪದಲ್ಲಿಯೇ ವ್ಯಾಪಾರಿಗಳು, ವಾಸ್ತುಶಿಲ್ಪಿಗಳು, ಸರದಾರರು, ಸೇನಾಪತಿಗಳು ಮುಂತಾದವರ ಸಮಾಧಿಗಳಿವೆ. ಮಡಿದ ರಾಜರಿಗಾಗಿಯೇ ವಿಶಿಷ್ಟ ಸ್ಥಾನ ಕಲ್ಪಿಸಿರುವ ವಿಭಾಗವೇ ರಾಜವಿಭಾಗ. ಇಲ್ಲಿ ರಿಚರ್ಡ್, ಅರ್ಲ್ ಆಫ್ ಸ್ಯಾಲ್ಸ್‌ಬೋಡ್, ರಾಣಿ ಎಲಿಜಬೆತ್, ೧ನೇ ಜೇಮ್ಸ್ ಮುಂತಾದ ಅರಸು-ಅರಸಿಯರ ಸಮಾಧಿಗಳಿವೆ. ಗೋರಿಗಳ ಮೇಲೆ ಆಯಾ ವ್ಯಕ್ತಿಯು ಮಲಗಿಕೊಂಡಿರುವಂತೆ ಮೂರ್ತಿಯನ್ನು ಕೆತ್ತಲಾಗಿದೆ. ಎಲ್ಲವೂ ಬಂಗಾರದ ಬಣ್ಣದಲ್ಲಿದೆ. ಅಲ್ಲಿಂದ ಮುಂದೆ ಅರಸರ ಪ್ರಾರ್ಥನಾ ಮಂದಿರವಿದೆ. ಅದರ ಹಿಂದೆ ಒನೇ ಹೆನ್ರಿಯ ಗೋರಿ ಭವ್ಯವಾಗಿದೆ. 'ವೆಸ್ಟ್ ಮಿನ್‌ಸ್ಟರ್ ಅಬೆ' ಮಂದಿರದ ಒಂದು ಭಾಗದಲ್ಲಿ ಸಾಮ್ರಾಟರ ಪಟ್ಟಾಭಿಷೇಕಕ್ಕೆ ಬಳಸುವ ಸಿಂಹಾಸನವಿದೆ. ಅದರ ಮೇಲೆ ಒಂದು ಕಲ್ಲುಪಾಟಿಯನ್ನು ಇರಿಸುತ್ತಾರೆ. ಪಟ್ಟಾಭಿಷೇಕವಾಗುವಾಗ ಸಾಮ್ರಾಟರು ಆ ಕಲ್ಲಿನ ಮೇಲೆಯೇ ಕುಳಿತುಕೊಳ್ಳಬೇಕೆಂಬ ಸಂಪ್ರದಾಯವಿದೆ. ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೇಯೇ ಆಗಿದೆ. 'ವೆಸ್ಟ್ ಮಿನ್‌ಸ್ಟರ್ ಅಬೆ'ಯು ಕವಿಗಳು, ರಾಜಕಾರಣಿಗಳು, ವಿಜ್ಞಾನಿಗಳು, ಜನಸಾಮಾನ್ಯರು, ಸಾಮ್ರಾಟರು ಮೊದಲಾದವರ ಅಂತಿಮ ನೆಲೆಯಾಗಿರುವುದರೊಂದಿಗೆ, ಸಾಮ್ರಾಟರ ಅಧಿಕಾರ ಗ್ರಹಣದ ಮೊದಲ ಮನೆಯಾಗಿಯೂ ಹೆಸರು ಗಳಿಸಿದೆ.

50. `ವೆಸ್ಟ್ ಮಿನ್‌ಸ್ಟರ್ ಅಬೆ' ಎಂಬ ಪ್ರಾರ್ಥನಾ ಮಂದಿರ ಒಂದು ಸಾವಿರ ವರ್ಷದಷ್ಟು ಪುರಾತನವಾದ ಮಂದಿರ. ಇದರಲ್ಲಿ ಸಂತರು, ಸಾರ್ವಭೌಮರು ಹಾಗೂ ಕವಿಗಳ ಸ್ಮಾರಕಗಳಿವೆ. ಈ ಪ್ರಾರ್ಥನಾ ಮಂದಿರದಲ್ಲಿ ರಾಯಲ್ ಚಾಪೆಲ್(ರಾಜವಿಭಾಗ) ಎಂಬ ಭಾಗವಿದೆ. ಇಲ್ಲಿ ಇಂಗ್ಲೆಂಡನ್ನು ಆಳಿದ ರಾಜರಿಗೆ ವಿಶಿಷ್ಟ ಸ್ಥಾನ ಕಲ್ಪಿಸಲಾಗಿದೆ. ರಾಜದಂಡ ಕಿರೀಟ ಒಂದಲ್ಲ ಒಂದು ದಿನ ನೆಲಕ್ಕುರಳಲೇಬೇಕು. ಯಾರು ಶಾಶ್ವತವಲ್ಲ ಎಂಬ ಸತ್ಯ ತಿಳಿದಿದ್ದರೂ, ಸತ್ತ ಎಲ್ಲಾ ರಾಜರಿಗೂ ಸ್ಮಾರಕಗಳ ಮೂಲಕ ಗೌರವ ಸಲ್ಲಿಸಿದ್ದಾರೆ. ಬೆನ್ ಜಾನ್ಸನ್‌ನನ್ನು ಜನರು ತುಳಿಯುತ್ತ ನಡೆಯುತ್ತಾರೆ. ಸಿಂಹದೆದೆಯ ರಿಚರ್ಡ್, ಎರಡನೆಯ ಎಡ್ವರ್ಡ್, ಆರ್ಲ್ ಆಪ್ ಸ್ಯಾಲ್ಸ್‌ಬೋರ್ಡ್, ರಾಣಿ ಎಲಿಜೆಬೆತ್, ಒಂದನೇಯ ಜೇಮ್ಸ್ ಮೊದಲಾದ ಅರಸ ಅರಸಿಯರ ಸ್ಮಾರಕಗಳು ಈ ರಾಜಮಂದಿರದಲ್ಲಿದೆ. ಗೋರಿಯ ಮೇಲೆ ಈ ವ್ಯಕ್ತಿಗಳು ಮಲಗಿಕೊಂಡಂತೆ ಕೆತ್ತಲಾಗಿದೆ. ಈ ಗೋರಿಗಳ ನಡುವೆ ಹಾದು ಅರಸರ ಪ್ರಾರ್ಥನಾ ಮಂದಿರಕ್ಕೆ ಹೋಗಬಹುದು. ಇಲ್ಲಿಯ ಕೆತ್ತನೆಯ ಕೆಲಸವನ್ನೆಲ್ಲ ಬಂಗಾರದ ಬಣ್ಣದಲ್ಲಿಯೇ ಮಾಡಲಾಗಿದೆ. ಮಂದಿರದ ಹಿಂಭಾಗದಲ್ಲಿ ಏಳನೆಯ ಹೆನ್ರಿಯ ಭವ್ಯವಾದ ಗೋರಿ ಇದೆ. 'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರದ ಮಧ್ಯಭಾಗದಲ್ಲಿ 'ಸ್ಟೋನ್ ಆಪ್ ಸ್ಕೋನ್' ಎಂಬ ಕಲ್ಲುಪಾಟಿಯನ್ನು ಇರಿಸಲಾಗಿದೆ. ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಈ ಕಲ್ಲುಪಾಟಿಯನ್ನು ಹಾಕಲಾಗುತ್ತದೆ. ಪಟ್ಟಾಭಿಷೇಕವಾಗುವ ಎಲ್ಲಾ ಸಾಮ್ರಾಟರು ಇದರ ಮೇಲೆಯೇ ಕೂರಬೇಕು. ಮೂರನೆಯ ಎಡ್ವರ್ಡ್ ಸ್ಕಾಟ್‌ಲೆಂಡಿನ ಅರಸರಿಂದ ಕಿತ್ತುಕೊಂಡು ಬಂದಂತೆ ತೋರುತ್ತದೆ. ಅಂದಿನಿಂದ ಎಲ್ಲಾ ಸಾಮ್ರಾಟರ ಪಟ್ಟಾಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಇಂಗ್ಲೆಂಡಿನ

ಅತುಲ ವೈಭವವನ್ನು ನೋಡಿದರೆ ಈ ಕಲ್ಲಿನಲ್ಲಿ ಯಾವುದೋ ಸಿದ್ಧಿ, ಮಂತ್ರ, ಏನೋ ಒಂದು ವಿಶೇಷತೆ ಇದ್ದಂತೆ ತೋರುತ್ತದೆ.

51. ಲಂಡನ್ ನಗರದ ಪ್ರವಾಸದ ಸಂದರ್ಭದಲ್ಲಿ ಪೇಟೆಯಲ್ಲಿ ತಿರುಗಾಡುತ್ತಿದ್ದಾಗ ಲೇಖಕರು ವೂಲವರ್ಥ ಎಂಬ ಸ್ಟೇಷನರಿ ಅಂಗಡಿಯನ್ನು ನೋಡುತ್ತಾರೆ. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶದಂತೆ ತೋರುತ್ತದೆ. ಇಲ್ಲಿ ಎಲ್ಲಾ ತರಹದ ಸಾಮಾನುಗಳನ್ನು ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಅಂಗಡಿಯಲ್ಲಿ ವಿವಿಧ ವಿಭಾಗಗಳನ್ನು ನಿರ್ಮಿಸಿರುವ ಚಮತ್ಕಾರ ನೋಡಬೇಕಾದುದು. ಬೂಟು,ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಪೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿಗಳು ಹೀಗೆ ಎಲ್ಲಾ ವಿಧದ ವಸ್ತುಗಳು ವೂಲವರ್ಥ ಸ್ಟೇಷನರಿ ಅಂಗಡಿಯಲ್ಲಿ ದೊರೆಯುತ್ತವೆ. ಸ್ಕಾಟ್ಲಂಡ್‌ದಲ್ಲಿಯ ಸ್ಯಾವ್ಯೊಯ್ ಸಿಂಪಿಗಳು ಐವತ್ತು ಶೀಲಿಂಗಿನ ಸಿಂಪಿಗಳೆಂದೇ ಪ್ರಸಿದ್ಧಿಯಾಗಿದ್ದಾರೆ. ಸಾದಾ ಸೂಟು ಹೊಲಿಯಲು ನೂರು ರೂಪಾಯಿಗಳು ಬೇಕು. ಆದರೆ ಇವರು ಐವತ್ತು ರೂಪಾಯಿಗಳಿಗೆ ಹೊಲಿಯುತ್ತಾರೆ. ಇದರ ಶಾಖೆಗಳು ನಗರದ ಎಲ್ಲಾ ಕಡೆಗಳಲ್ಲೂ ಇವೆ. ಇಂಗ್ಲೆಂಡಿನಲ್ಲಿ ಹೆಣ್ಣುಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯನ್ನು ಕಾಣಬಹುದು. ಇಲ್ಲಿ ಗಂಡಿಗಿಂತ ಹೆಣ್ಣುಮಕ್ಕಳೇ ಹೆಚ್ಚಿದ್ದಂತೆ ಕಾಣುತ್ತದೆ. ಎಲ್ಲಾ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಾಹಾರ ಗೃಹಗಳಲ್ಲಿ ಮಾಣಿಗಳಿಲ್ಲ. ಬೆಂಗಳೂರಿನ ಮಾತಿನಲ್ಲಿ ಹೇಳುವುದಾದರೆ ಅಮ್ಮಣ್ಣಿಗಳಿರುತ್ತಾರೆ. ದೊಡ್ಡ ಅಂಗಡಿಗಳಲ್ಲಿ ಟೈಪಿಸ್ಟ್, ಕಾರಕೂನ ಹೆಣ್ಣುಮಕ್ಕಳೇ ಆಗಿರುತ್ತಾರೆ. ಸಿನಿಮಾ ಗೃಹಗಳಲ್ಲಿ ಜಾಗ ಹುಡುಕಿಕೊಡುವ ಕೆಲಸ, ಕಾಲೇಜುಗಳಲ್ಲಿ ಸಹ ವಿದ್ಯಾರ್ಥಿನಿಯರ ಅನೂಕೂಲಕ್ಕಾಗಿ ಸಿಪಾಯಿಣಿಯನ್ನು ನೇಮಿಸಿಕೊಂಡಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಹೆಣ್ಣುಮಕ್ಕಳಿಗೆ ವಿಶೇಷವಾದ ಸ್ಥಾನಮಾನ ನೀಡಿ ಗೌರವಿಸುವ ಸಂಸ್ಕೃತಿ ಇದೆ ಎಂದು ಲೇಖಕರು ತಿಳಿಸಿದ್ದಾರೆ.

ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

52. **ಅ.** ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ತಡವಾಗಿ ಎದ್ದು ಗಡಿಬಿಡಿಯಲ್ಲಿ ಹೊರಟು ಶಾಲೆಗೆ ಅಥವಾ ಕಾಲೇಜಿಗೆ ಓಡುವುದರಿಂದ ಉದ್ವಿಗ್ನತೆ ಹೆಚ್ಚಾಗುತ್ತದೆ. ಪರೀಕ್ಷೆಯ ಸಮಯದಲ್ಲಿ ರಾತ್ರಿ ಬಹಳ ಹೊತ್ತಿನವರೆಗೆ ಓದುವುದರಿಂದ ಬೆಳಗ್ಗೆ ಬೇಗ ಏಳಲಾಗದೆ ಸರಿಯಾದ ಸಮಯಕ್ಕೆ ಪರೀಕ್ಷಾ ಸ್ಥಳವನ್ನು ಸೇರಲಾಗುವುದಿಲ್ಲ. ಅಷ್ಟೇ ಅಲ್ಲ ಆ ಗಡಿಬಿಡಿಯಲ್ಲಿ ರಾತ್ರಿ ಓದಿದ್ದೆಲ್ಲಾ ಮರೆತುಹೋಗಬಹುದು.

ಆ. ವೇಳೆ ಎನ್ನುವುದು ಬಂಡವಾಳ ಹೂಡಿಕೆಯಿದ್ದಂತೆ. ಯಾರು ಇರುವ ಸಮಯವನ್ನು ಸರಿಯಾಗಿ, ಸಮರ್ಪಕವಾಗಿ ನಿರ್ವಹಿಸಬಲ್ಲರೋ ಅವರು ಜೀವನವನ್ನು ಚೆನ್ನಾಗಿ ನಿರ್ವಹಿಸಬಲ್ಲರು. 'ಹೊತ್ತೇ ಮುತ್ತು'. ಆದ್ದರಿಂದ ಸಮಯ ಪ್ರಜ್ಞೆ ಇರುವವರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿಯಾಗಿದೆ.

ಪತ್ರಲೇಖನ ಬರೆಯುವುದು :

53. ದಿನಾಂಕ : ೧೫.೦೫.೨೦೨೬
ಸ್ಥಳ : ಗದಗ

ಇವರಿಂದ,
ಸುಪ್ರೀತ
೧೦ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಗದಗ

ಇವರಿಗೆ,
ಮಾನ್ಯ ತಹಶೀಲ್ದಾರ್‌ರವರು
ಗದಗ ತಾಲ್ಲೂಕು
ಗದಗ

ಮಾನ್ಯರೆ,

ವಿಷಯ : <u>ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಕೋರಿ.</u>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾನು ಸುಪ್ರೀತ ಎಂಬ ಹೆಸರಿನವನಾದ ನಾನು ೨೦೨೬-೨೭ ನೇ ಶೈಕ್ಷಣಿಕ ವರ್ಷದಲ್ಲಿ ೧೦ನೇ ತರಗತಿ ತೇರ್ಗಡೆಯಾಗಿದ್ದೇನೆ. ಮುಂದಿನ ವ್ಯಾಸಂಗಕ್ಕಾಗಿ ಕಾಲೇಜಿಗೆ ಸೇರಲು ಜಾತಿ ಹಾಗೂ ಆದಾಯ ಪ್ರಮಾಣ ಪತ್ರದ ಅವಶ್ಯಕತೆ ಇದೆ. ನಾನು ..... ಧರ್ಮಕ್ಕೆ ಸೇರಿದ್ದು ಶಾಲಾ ದಾಖಲಾತಿ ಅನ್ವಯ ನನ್ನ ಜಾತಿ ..... ಎಂದಿದೆ. ನಮ್ಮ ಪಾಲಕರ ವಾರ್ಷಿಕ ಆದಾಯ ೧೫೦೦೦/- ರೂಪಾಯಿಗಳಾಗಿರುತ್ತದೆ. ನನ್ನ ಜಾತಿಗೆ ಸಂಬಂಧಿಸಿದಂತೆ ವರ್ಗಾವಣೆ ಪತ್ರದ ನಕಲನ್ನು ಲಗತ್ತಿಸಿರುತ್ತೇನೆ. ತಾವು ಇದನ್ನು ಪರಿಶೀಲಿಸಿ ನನಗೆ ಜಾತಿ ಹಾಗೂ ಆದಾಯ ಪತ್ರವನ್ನು ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ
ಸುಪ್ರೀತ

ಹೊರ ವಿಳಾಸ :

ಇವರಿಗೆ, ಮಾನ್ಯ ತಹಶೀಲ್ದಾರ್‌ರವರು ತಾಲೂಕು ಕಛೇರಿ ಗದಗ	ಇವರಿಂದ, ಸುಪ್ರೀತ ೧೦ನೇ ತರಗತಿ ಸರ್ಕಾರಿ ಪ್ರೌಢಶಾಲೆ ಗದಗ

ಪ್ರಬಂಧ ಬರೆವಣಿಗೆ :

53. ಪ್ರಾಚ್ಯ ಸ್ಮಾರಕ ಸಂರಕ್ಷಣೆ :

ಪೀಠಿಕೆ : 'ಇತಿಹಾಸ ಅರಿಯದವ ಇತಿಹಾಸ ಸೃಷ್ಟಿಸಲಾರ' ಎಂಬ ಮಾತಿನಂತೆ ಇತಿಹಾಸದ ಸಾಕ್ಷಿಗೆ ಪ್ರಮುಖ ಕೊಂಡಿಗಳೆಂದರೆ ಪ್ರಾಚ್ಯ ವಸ್ತು ಸ್ಮಾರಕಗಳು. ಪ್ರಾಚ್ಯವೆಂದರೆ ಪ್ರಾಚೀನ. ಈ ಪ್ರಾಚೀನ ಇತಿಹಾಸದ ಅಪರೂಪದ ಸ್ಮರಿಸಬಹುದಾದ ಅವಶೇಷಗಳೇ ಸ್ಮಾರಕಗಳು. ಪ್ರಾಚ್ಯ ವಸ್ತು-ಸ್ಮಾರಕ ಸಂರಕ್ಷಣೆಯಿಂದ ದೇಶದ ಇತಿಹಾಸ, ಸಂಸ್ಕೃತಿ, ಕಲೆ, ಸಾಮಾಜಿಕ, ರಾಜಕೀಯ, ಆರ್ಥಿಕ ಹೀಗೆ ವಿವಿಧ ಕ್ಷೇತ್ರಗಳ ಬಗೆಗೆ ತಿಳಿಯಲು ಸಹಕಾರಿಯಾಗುತ್ತದೆ. ದೇಶದ ಸಂಸ್ಕೃತಿಯ ಗತಕಾಲದ ವೈಭವವನ್ನು ಅಳೆಯುವ ಮಾನದಂಡಗಳೆಂದರೆ ಈ ಸ್ಮಾರಕಗಳು.

ವಿಷಯ ನಿರೂಪಣೆ : ಪ್ರಾಚ್ಯ ಸ್ಮಾರಕಗಳೆಂದರೆ ದೇವಾಲಯ-ಮಸೀದಿ-ಚರ್ಚು-ಬಸದಿಗಳು, ಕಟ್ಟಡಗಳು, ಪ್ರಾಚೀನ ಪಟ್ಟಣಗಳು, ಅರಮನೆಗಳು, ಮೂರ್ತಿಗಳು, ಶಾಸನಗಳು, ನಾಣ್ಯ-ಇತರ ವಸ್ತುಗಳು, ತಾಳೆಗರಿ ಗ್ರಂಥಗಳು ಮುಂತಾದವು. ವಿಶ್ವದಲ್ಲಿ ಏಳು ಪ್ರಾಚೀನ ಮತ್ತು ಏಳು ಆಧುನಿಕ ಅದ್ಭುತಗಳಿವೆ. ಇವುಗಳಲ್ಲಿ ಭಾರತದ ತಾಜ್ ಮಹಲ್ ಒಂದಾಗಿದೆ. ಭಾರತದಲ್ಲಿ ತಾಜಮಹಲ, ಕೆಂಪುಕೋಟೆ, ಸೂರ್ಯದೇವಾಲಯ, ಚಾರ್‌ಮಿನಾರ್, ಅಜಂತಾ, ಎಲ್ಲೋರಾ ಗುಹೆಗಳು, ಬಾದಾಮಿ ಗುಹೆ, ಆಗ್ರಾಕೋಟೆ, ಗೋಲ್ ಗುಂಬಜ್, ಹಂಪಿ, ಬೇಲೂರು, ಮೈಸೂರು ಅರಮನೆ, ಗೋಮ್ಮಟೇಶ್ವರ ವಿಗ್ರಹ ಹೀಗೆ ಅಸಂಖ್ಯಾತ ಸ್ಮಾರಕಗಳು ದೇಶದ ಹೆಮ್ಮೆಯ ಪ್ರತೀಕವಾಗಿವೆ. ಇವುಗಳಿಂದ ಪ್ರವಾಸೋದ್ಯಮ ಹೆಚ್ಚುತ್ತದೆ. ಭಾರತದ ಸ್ಮಾರಕಗಳು ವಿದೇಶಿ ದಾಳಿ ಹಾಗೂ ಸ್ವದೇಶಿ ಅತಿಕ್ರಮಣಕ್ಕೆ ಒಳಗಾಗಿ ತಮ್ಮ ಸೌಂದರ್ಯ ಕಳೆದುಕೊಂಡು ಅವಶೇಷಗಳಾಗಿ ಉಳಿದಿವೆ, ಹಾಳು ಹಂಪೆ ಇದಕ್ಕೆ ಸಾಕ್ಷಿ. ಈಗ ವ್ಯತಿರಿಕ್ತ ಪರಿಸರ ಮತ್ತು ವಿಕೃತ ಕಿಡಿಗೇಡಿಗಳಿಂದ ಸ್ಮಾರಕ ರಕ್ಷಣೆಯಾಗಬೇಕಿದೆ.

ಪ್ರಾಚ್ಯ ಸ್ಮಾರಕಗಳ ರಕ್ಷಣೆಗೆ ಪ್ರತ್ಯೇಕ ಇಲಾಖೆಯನ್ನು ಸರ್ಕಾರ ಸ್ಥಾಪಿಸಿದೆ. ಈ ಇಲಾಖೆಯು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ಸುಮಾರು ೪೦೦೦ ಸ್ಥಳಗಳು ಈ ಇಲಾಖೆಯ ವ್ಯಾಪ್ತಿಗೆ ಬರುತ್ತವೆ. ಉಳಿದ ಕ್ಷೇತ್ರಗಳನ್ನೂ ಸೇರಿಸಬೇಕಿದೆ. ಪ್ರವಾಸಿಗರು ಸ್ಮಾರಕಗಳ ಅಂದ ಹಾಳು ಮಾಡದೆ ವೀಕ್ಷಿಸಬೇಕು. ಪ್ರವಾಸಿ ತಾಣಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಸ್ಥಳೀಯ ಸ್ವಯಂ ಸೇವಕರನ್ನು ಬಳಸಿಕೊಳ್ಳಬೇಕು. ವಿದ್ಯಾರ್ಥಿ ಮತ್ತು ಯುವ ಜನಾಂಗದವರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು. ಹವ್ಯಾಸಿ ಪ್ರಾಚ್ಯ ವಸ್ತು ಸಂಗ್ರಹಕಾರರನ್ನು ಪ್ರೋತ್ಸಾಹಿಸಬೇಕು. ಸಂಘ ಸಂಸ್ಥೆಗಳು ಮಾಧ್ಯಮಗಳು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಸ್ಮಾರಕ ಸಂರಕ್ಷಣೆಯ ಕುರಿತು ಶಾಲಾ-ಕಾಲೇಜುಗಳಲ್ಲಿ ಕಾರ್ಯಕ್ರಮವಾಗಬೇಕು. ರಾಸಾಯನಿಕಮಾಲಿನ್ಯ, ವಾಯುಮಾಲಿನ್ಯ, ಶಬ್ದಮಾಲಿನ್ಯಗಳಿಂದ ರಕ್ಷಣೆ ನೀಡಬೇಕು. ಪರಿಸರ ಮಾಲಿನ್ಯದಿಂದಾಗಿ ಸ್ಮಾರಕಗಳು ತಮ್ಮ ಸೌಂದರ್ಯ ಮತ್ತು ಅಸ್ತಿತ್ವ ಕಳೆದುಕೊಳ್ಳುತ್ತಿವೆ. ಕಾರ್ಖಾನೆಗಳ ರಾಸಾಯನಿಕ ಪ್ರಭಾವದಿಂದ ಸ್ಮಾರಕಗಳು ಕಳಾಹೀನವಾಗುತ್ತಿವೆ. ತಾಜಮಹಲನಂತಹ ಸ್ಮಾರಕ ಕಳೆಗುಂದುತ್ತಿದೆ. ಏಳು ಬಾರಿ ಪ್ರತಿಧ್ವನಿಸುವ ಗೋಲ್‌ಗುಂಬಜ್ ನಾಲ್ಕೈದು ಬಾರಿಗೆ ಕುಸಿದಿದೆಯಂತೆ. ಇವುಗಳ ಬಗೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ಉಪಸಂಹಾರ : ಸ್ಮಾರಕಗಳು ದೇಶದ ಇತಿಹಾಸ ಸಂಸ್ಕೃತಿಯ ಪ್ರತೀಕಗಳು. ಇವುಗಳ ಸಂರಕ್ಷಣೆ ಸರ್ಕಾರದ ಹೊಣೆ ಮಾತ್ರವಲ್ಲ ಪ್ರಜೆಗಳ ಕರ್ತವ್ಯವಾಗಿದೆ. ಮುಂದುವರೆದ ದೇಶಗಳಿಗೆ ಹೋಲಿಸಿದರೆ ಪ್ರಾಚ್ಯ ಸ್ಮಾರಕ ರಕ್ಷಣೆಯಲ್ಲಿ ನಾವು ಹಿಂದೆ ಇದ್ದೇವೆ. ದೇಶದ ಆಸ್ತಿಯಾದ ಸ್ಮಾರಕಗಳನ್ನು ಒಟ್ಟಾಗಿ ಕಾಪಾಡಿಕೊಂಡು ಹೋಗೋಣವೆಂದು ಆಶಿಸುತ್ತೇನೆ.

ಗದ್ಯಪಾಠ 8. ಅಗ್ನಿಭೂತಿ ವಾಯುಭೂತಿಯರ ಕತೆ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಸಿ) ಜಾಣತನ
2. (ಎ) ಚೆಲುವಿಕೆ
3. (ಬಿ) ಕೃದಂತಭಾವನಾಮ
4. (ಎ) ತದ್ಧಿತಾಂತಭಾವನಾಮ
5. (ಬಿ) ಕೃದಂತಭಾವನಾಮ

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :

6. ತದ್ಧಿತಾಂತಭಾವನಾಮ
7. ತದ್ಧಿತಾಂತಭಾವನಾಮ
8. ಕೃದಂತಭಾವನಾಮ
9. ತದ್ಧಿತಾಂತಭಾವನಾಮ
10. ಕೃದಂತನಾಮ
11. ತದ್ಧಿತಾಂತಾವ್ಯಯ
12. ಕೃದಂತಾವ್ಯಯ
13. ತದ್ಧಿತಾಂತಾವ್ಯಯ
14. ನಿಷೇಧಕೃದಂತ
15. ಕೃದಂತಭಾವನಾಮ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

16. ಕೌಸಂಬಿಯ ಅರಸ ಅತಿಬಳ.
17. ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರು ಅಗ್ನಿಭೂತಿ ಮತ್ತು ವಾಯುಭೂತಿ.
18. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ತನ್ನ ಸಹೋದರ ಸೂರ್ಯಮಿತ್ರನ ಬಳಿಗೆ ಕಳುಹಿಸಿದಳು.
19. ಅಗ್ನಿಭೂತಿ ಮತ್ತು ವಾಯುಭೂತಿಯರು ಸೋದರಮಾವನೆಂಬ ಸಲುಗೆಯಿಂದ ಮೊದಲಿನಂತೆ ಗರ್ವಿಷ್ಠರಾಗಿ ಕೆಟ್ಟು ಹೋಗುವರೆಂದು ಭಾವಿಸಿ ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಿದನು.
20. ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ಮಂತ್ರಿ ಪದವಿ ದೊರೆಯಿತು.
21. ರಾಜಗೃಹ ಪಟ್ಟಣದ ಅರಸ ಸುಬಲ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

22. ಅತಿಬಳ ರಾಜನ ಮಂತ್ರಿ ಸೋಮಶರ್ಮ ಮತ್ತು ಆತನ ಹೆಂಡತಿ ಕಾಶ್ಯಪಿಯ ಮಕ್ಕಳಾದ ಅಗ್ನಿಭೂತಿ ವಾಯುಭೂತಿಯರು ತಂದೆತಾಯಿಯರ ಮಾತಿಗೆ ಕಿವಿಗೊಡದೆ, ಯಾವ

ವಿದ್ಯೆಯನ್ನು ಕಲಿಯದೆ, ತಂದೆ ಕೂಡಿಟ್ಟ ಹಣವನ್ನು ಪೋಲುಮಾಡುತ್ತ ಸಪ್ತವ್ಯಸನಗಳಿಗೆ ತುತ್ತಾಗಿದ್ದರು. ಸೋಮಶರ್ಮನ ಮರಣದ ನಂತರ ರಾಜನು ಮಕ್ಕಳನ್ನು ಅರಮನೆಗೆ ಕರೆಸಿಕೊಂಡು ಸತ್ಕರಿಸಿ ಸಂತಾಪವನ್ನು ಸೂಚಿಸಿ ಕಳುಹಿಸಿದನು. ಕೆಲವು ದಿವಸಗಳು ಕಳೆದ ಮೇಲೆ ಮತ್ತೆ ಅವರಿಬ್ಬರನ್ನೂ ರಾಜನು ಅರಮನೆಗೆ ಕರೆಸಿಕೊಂಡು "ನೀವು ಯಾವ ವಿದ್ಯೆಗಳನ್ನು ಬಲ್ಲಿರಿ?" ಎಂದು ವಿಚಾರಿಸಿದನು. ಅವರು ತಲೆತಗ್ಗಿಸಿ ಉತ್ತರ ಕೊಡಲಾರದೆ ಕಣ್ಣೀರನ್ನು ಸೂಸಿದರು. ನಾಚಿಕೆಯಿಂದ ಕಾಲಿನ ಬೆರಳುಗಳನ್ನು ನೆಲದ ಮೇಲೆ ಗೀರತೊಡಗಿದರು. ರಾಜಸಭೆಯಲ್ಲಿದ್ದವರೆಲ್ಲ ರಾಜನನ್ನು ಕುರಿತು "ಇವರು ಕಡುಮೂರ್ಖರು, ಇವರು ವಿದ್ಯೆಯನ್ನು ಅರಿಯರು, ಇವರು ಸಪ್ತವ್ಯಸನದಲ್ಲಿ ಮುಳುಗಿರುವರು" ಎಂದು ನಿವೇದಿಸಿದರು. ಇದನ್ನು ಕೇಳಿದ ರಾಜನು ಅವರನ್ನು ಮೂರ್ಖರೆಂದು ತೀರ್ಮಾನಿಸಿ ಅಲ್ಲಿಂದ ಓಡಿಸಿದನು.

23. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ಒಂದು ಕ್ಷಣವೂ ಬಿಡುವು ಕೊಡದೆ ಹಗಲಿರುಳೆನ್ನದೆ ಓದಿಸಿದನು. ಸೂರ್ಯಮಿತ್ರನಿಂದ ಅವರು ಏಳೆಂಟು ವರ್ಷದೊಳಗೆ ನಾಲ್ಕು ವೇದಗಳನ್ನೂ, ವೇದದ ಆರು ಅಂಗಗಳನ್ನೂ (ಜ್ಯೋತಿಷ್ಯ, ಕಲ್ಪ, ನಿರುಕ್ತ, ಶಿಕ್ಷಾ, ವ್ಯಾಕರಣ, ಛಂದಸ್ಸು), ಹದಿನೆಂಟು ಧರ್ಮಶಾಸ್ತ್ರಗಳನ್ನೂ, ಮೀಮಾಂಸೆ, ತರ್ಕಶಾಸ್ತ್ರ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಕೌಟಿಲ್ಯನ ಅರ್ಥಶಾಸ್ತ್ರ, ಸಾಮುದ್ರಿಕ, ಶಾಲಿಹೋತ್ರ (ಅಶ್ವಶಾಸ್ತ್ರ) ಪಾಳಕಾಪ್ಯ (ಗಜಶಾಸ್ತ್ರ), ವೈದ್ಯಶಾಸ್ತ್ರ, ಚರಕ, ಅಶ್ವಿನೀಮತ, ಅಷ್ಟಾಂಗ ಹೃದಯ, ಶುಶ್ರುತನ ವೈದ್ಯಶಾಸ್ತ್ರ, ಜೋತಿಷ್ಯ, ಮಂತ್ರವಾದ ಮೊದಲಾದ ಎಲ್ಲ ಶಾಸ್ತ್ರಗಳನ್ನು ಕಲಿತರು.

24. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರು ತನ್ನ ಸಹೋದರಿಯ ಮಕ್ಕಳು, ಸೋದರಳಿಯರು ಎಂದು ತಿಳಿದರೂ ಅವರಿಗೆ ಸಲುಗೆಯನ್ನು ಕೊಡಲಿಲ್ಲ. ತಾನು ಅವರ ಸೋದರಮಾವನೆಂದು ತಿಳಿಸಲಿಲ್ಲ. ಅವರು ಈಗಾಗಲೇ ತಂದೆ ಕೊಟ್ಟ ಸಲುಗೆಯಿಂದ ಯಾವ ವಿದ್ಯೆಯನ್ನು ಕಲಿಯದೆ ಸಪ್ತವ್ಯಸನಗಳಿಗೆ ತುತ್ತಾಗಿ ಕೆಟ್ಟು ಹೋಗಿದ್ದರು. ತಾನು ಅವರ ಸೋದರ ಮಾವನೆಂದು ಅವರು ತಿಳಿದರೆ ಇಲ್ಲಿಯೂ ಅದೇ ಸಲುಗೆಯಿಂದ ಕೆಟ್ಟು ಹೋಗಬಹುದು ಎಂದು ಸೂರ್ಯಮಿತ್ರನು ಭಾವಿಸಿದನು. ತನ್ನ ಸೋದರಳಿಯರನ್ನು ಯೋಗ್ಯರನ್ನಾಗಿ ಮಾಡುವ ಉದ್ದೇಶದಿಂದ ಸತ್ಯವನ್ನು ಮರೆಮಾಚಿದನು. ಅತಿ ಕಟ್ಟುನಿಟ್ಟಿನಿಂದ ಅವರನ್ನು ಎಲ್ಲ ವಿದ್ಯೆಗಳಲ್ಲಿ ಅರ್ಹರನ್ನಾಗಿ ಮಾಡಿದನು. ವಿದ್ವಾಂಸರಾದ ಅವರು ಸತ್ಯವನ್ನು ತಿಳಿದರೆ ಏನೂ ತೊಂದರೆ ಇಲ್ಲವೆಂದು ಭಾವಿಸಿ ಅವರಿಗೆ ತಾನು ಅವರ ಮಾವನೆಂದು ತಿಳಿಸಿದನು.

25. ಕಿರಿಯವನಾದ ವಾಯುಭೂತಿ ತನ್ನ ಸೋದರಮಾವ ಸೂರ್ಯಮಿತ್ರನು ತಮಗೆ ಮಾಡಿದ್ದೆಲ್ಲವು ಅನ್ಯಾಯವೆಂದು ಬಗೆದನು. ನಾವು ಭಿಕ್ಷೆ ಎತ್ತಿಕೊಂಡು ಬಂದ ಕೂಳಿಗೆ ತುಸು ಎಣ್ಣೆಯನ್ನಾಗಲಿ, ತುಸು ಮಜ್ಜಿಗೆಯನ್ನಾಗಲಿ ನಮ್ಮ ಮಾವ ಕೊಡಿಸಲಿಲ್ಲ. ಕೆರೆಗೆ ನಾವು ಮೀಯಲು ಹೋದಾಗಲೂ ಇವನು ಎಣ್ಣೆಯ ವಾಸನೆಯನ್ನೂ ನೋಡಿಸಲಿಲ್ಲ. ಆಗಾಗ ನೆಂಟರಿಷ್ಟರನ್ನೂ ಕರೆಸಿ ನಮ್ಮ ಕಣ್ಣೆದುರೆ ದಿವ್ಯಾಹಾರವನ್ನು ಇವನು ಉಣ್ಣುತ್ತಿದ್ದನು. ಆಳುಗಳಿಗೂ ಔತಣದೂಟವಾಗುತ್ತಿದ್ದಿತು. ಯಾವ ಹಬ್ಬದಲ್ಲೂ ನಮಗೆ ಒಳ್ಳೆಯ ಊಟ ಬಡಿಸಲಿಲ್ಲ. ಪಂಚಮಹಾಪಾತಕನೇ ಸರಿ. ಏಳೆಂಟು ವರ್ಷ ನಮ್ಮನ್ನು ಶತ್ರುಗಳಂತೆ ನಡೆಸಿಕೊಂಡನು ಎಂದು ತನ್ನ ಮನಸ್ಸಿನಲ್ಲಿ ವಾಯುಭೂತಿಯು ಸೂರ್ಯಮಿತ್ರನ ಬಗೆಗೆ ಕ್ರೋಧವನ್ನು ತುಂಬಿಕೊಂಡನು.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

26. ಶಿವಕೋಟ್ಯಾಚಾರ್ಯ : ಶಿವಕೋಟ್ಯಾಚಾರ್ಯರ ಕಾಲ ಕ್ರಿ. ಶ. ಸುಮಾರು ೧೦ ನೆಯ ಶತಮಾನ (ಕ್ರಿ. ಶ. ಸುಮಾರು ೯೨೦). ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೋಗಳಿನಾಡು ಇವರ ಜನ್ಮಸ್ಥಳವಾಗಿದೆ. ಇವರು 'ವಡ್ಡಾರಾಧನೆ' ಎಂಬ ಹಳಗನ್ನಡ ಗದ್ಯ ಕೃತಿಯನ್ನು ರಚಿಸಿದ್ದಾರೆ. ಜೈನ ಧಾರ್ಮಿಕ ಕಥೆಗಳ ಸಂಗ್ರಹವಾದ 'ವಡ್ಡಾರಾಧನೆ' ಕೃತಿಯಲ್ಲಿ ಮನೋಹರವಾದ ಹತ್ತೊಂಬತ್ತು ಪ್ರಧಾನ ಕಥೆಗಳಿವೆ. 'ವಡ್ಡಾರಾಧನೆ'ಗೆ 'ಉಪಸರ್ಗಕೇವಲಿಗಳ ಕಥೆ' ಎಂಬ ಮತ್ತೊಂದು ಹೆಸರೂ ಇದೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

27. ಕೈಕೆಸರಾದರೆ ಬಾಯಿ ಮೊಸರು : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿವೆ. ಕಾಯಕದ ಮಹತ್ತ್ವವನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

ಪ್ರಸ್ತುತ ಗಾದೆ 'ಕೈ ಕೆಸರಾದರೆ ಬಾಯಿ ಮೊಸರು' ಈ ದಿನಗಳಲ್ಲಿ ಎಚ್ಚರಿಕೆಯ ಗಂಟೆಯಾಗಿದೆ. ಕೈಕೆಸರಾದರೆ ಬಾಯಿ ಮೊಸರು ಅಂದರೆ ಕಷ್ಟಪಟ್ಟು ದುಡಿದರೆ ಸುಖವುಂಟು ಎಂದರ್ಥ. ಕೈ ಕೆಸರು ಅಥವಾ ಕೊಳೆಯಾಗುವುದು ಶ್ರಮದ ದುಡಿಮೆಯನ್ನು ಸಂಕೇತಿಸಿದರೆ, ಮೊಸರು ಅದರ ಪ್ರತಿಫಲವನ್ನು ಬಿಂಬಿಸುತ್ತದೆ. ಸೋಮಾರಿಯಾಗಿ ಸುಮ್ಮನೆ ಕುಳಿತುಕೊಳ್ಳಬಾರದು. ಯಾವುದಾದರೊಂದು ಕೆಲಸ ಮಾಡುವುದರಿಂದ ನಮ್ಮ ಹೊಟ್ಟೆ ತುಂಬುತ್ತದೆ. ನಮ್ಮ ಬಾಯಿ ಮೊಸರಿನ ರುಚಿ ನೋಡುವಂತಾಗುತ್ತದೆ. "ಅಯ್ಯೋ! ಕೈ ಕೆಸರಾಗುವುದಲ್ಲ! ಈ ಕೆಲಸ ಮಾಡುವುದಾದರೂ ಹೇಗೆ?" ಎಂದು ಯೋಚಿಸುತ್ತಾ ಕುಳಿತರೆ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. ಕೆಲಸ ಮಾಡದಿದ್ದರೆ ಹಣ ಸಂಪಾದನೆಯಾಗುವುದಿಲ್ಲ. ಸಂಪಾದನೆಯಾಗದಿದ್ದರೆ ಹೊಟ್ಟೆ ತುಂಬುವುದಿಲ್ಲ. ಜೀವನ ಸುಖವಾಗಿ ಸಾಗಬೇಕಾದರೆ ಕೈ ಕೆಸರಾಗಲೇ ಬೇಕು; ಕೈ ತುಂಬಾ ಸಂಪಾದನೆಯಾಗಲೇಬೇಕು. ಆಗ ನಮಗೆ ಒಳ್ಳೆಯ ಊಟ , ಆಹಾರ ಸಿಗುವಂತಾಗುತ್ತದೆ. ಪ್ರಕೃತಿಯಲ್ಲಿ ದೇಹ ದಂಡಿಸದೆ ಬದುಕಲು ಹೊರಟರೆ ಅಂಥಾ ದೇಹ ಶಿಥಿಲಗೊಳ್ಳುತ್ತದೆ. ಯಾವ ರೂಪದಲ್ಲಾದರೂ ಶ್ರಮ ಪಡಲೇಬೇಕು. ಅದಕ್ಕೇ ಹಿರಿಯರು ಹೇಳಿದ್ದು "ಕೈ ಕೆಸರಾದರೆ ಬಾಯಿ ಮೊಸರು" ಎಂದು.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

28. "ಕಣ್ಣ ನೀರಂ ತೀವಿ ನೆಲನಂ ಬರೆಯುತ್ತಿರೆ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಶಿವಕೋಟ್ಯಾಚಾರ್ಯ ಬರೆದ 'ವಡ್ಡಾರಾಧನೆ' ಕೃತಿಯಿಂದ ಆಯ್ದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೌಸಂಬಿಯ ರಾಜ ಅತಿಬಳ ಮಂತ್ರಿ ಸೋಮಶರ್ಮನ ಮರಣದ ನಂತರ ಆತನ ಮಕ್ಕಳಾದ ಅಗ್ನಿಭೂತಿ ಮತ್ತು ವಾಯುಭೂತಿಯರನ್ನು ಅರಮನೆಗೆ ಕರೆಸಿಕೊಂಡು ಸತ್ಕರಿಸಿ ಸಂತಾಪವನ್ನು ಸೂಚಿಸಿದನು. ಕೆಲವು ದಿವಸಗಳು ಕಳೆದ ಮೇಲೆ ಮತ್ತೆ ಅವರಿಬ್ಬರನ್ನೂ ರಾಜನು ಅರಮನೆಗೆ ಕರೆಸಿಕೊಂಡು "ನೀವು ಯಾವ ವಿದ್ಯೆಗಳನ್ನು ಬಲ್ಲಿರಿ?" ಎಂದು ವಿಚಾರಿಸಿದನು. ಅವರು ತಲೆತಗ್ಗಿಸಿ ಉತ್ತರ ಕೊಡಲಾರದೆ ಕಣ್ಣೀರು ಸುರುಸಿ ನಾಚಿಕೆಯಿಂದ

ಕಾಲಿನ ಬೆರಳುಗಳನ್ನು ನೆಲದ ಮೇಲೆ ಗೀರತೊಡಗಿದರು ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ತಂದೆತಾಯಿಯರ ಮಾತಿಗೆ ಕಿವಿಗೊಡದೆ, ತಂದೆ ಕೂಡಿಟ್ಟ ಹಣವನ್ನು ಪೋಲುಮಾಡುತ್ತ ಸಪ್ತವ್ಯಸನಗಳಿಗೆ ತುತ್ತಾಗಿದ್ದ ಮಕ್ಕಳು ಯಾವ ವಿದ್ಯೆಯನ್ನು ಕಲಿಯದೆ ತಮ್ಮ ಬಗ್ಗೆ ತಾವೇ ನಾಚಿಕೆ ಪಡುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

29. "ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಳ್ತಿಯೊಳ್ ಬಂದಿರಪ್ಪೊಡೆ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಶಿವಕೋಟ್ಯಾಚಾರ್ಯ ವಿರಚಿತ 'ವಡ್ಡಾರಾಧನೆ' ಕೃತಿಯಿಂದ ಆಯ್ದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಅಗ್ನಿಭೂತಿ ಮತ್ತು ವಾಯುಭೂತಿಯರು ವಿದ್ಯಾಭ್ಯಾಸ ಮಾಡುವುದಾಗಿ ತಿಳಿಸಿದಾಗ ತಾಯಿ ಕಾಶ್ಯಪಿ ತನ್ನ ಸಹೋದರ ಸೂರ್ಯಮಿತ್ರನ ಬಳಿ ಕಳಿಸಿದರೆ ಅವನು ಇವರನ್ನು ಯೋಗ್ಯರನ್ನಾಗಿ ಮಾಡುತ್ತಾನೆ ಎಂದು ನಿರ್ಧರಿಸಿ ಅವರ ಬಗೆಗೆ ಸಂಪೂರ್ಣ ಮಾಹಿತಿಯನ್ನೊಳಗೊಂಡ ಪತ್ರವನ್ನು ಬರೆದು ಸೂರ್ಯಮಿತ್ರನಿಗೆ ಅದನ್ನು ನೀಡುವಂತೆ ಹೇಳಿ ಮಕ್ಕಳನ್ನು ಕಳಿಸಿದಳು. ತಂಗಿ ಬರೆದ ಪತ್ರವನ್ನು ಓದಿದ ಸೂರ್ಯಮಿತ್ರನು ಅಗ್ನಿಭೂತಿ ಮತ್ತು ವಾಯುಭೂತಿಯರು ತಾನು ಅವರ ಸೋದರಮಾವನೆಂಬ ಸಲುಗೆಯಿಂದ ಮೊದಲಿನಂತೆ ಗರ್ವಿಷ್ಠರಾಗಿ ಕೆಟ್ಟುಹೋಗುವರೆಂದು ಭಾವಿಸಿ ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದ ಸಂದರ್ಭದಲ್ಲಿ ಅಗ್ನಿಭೂತಿ ಮತ್ತು ವಾಯುಭೂತಿಯರಿಗೆ ಈ ಮೇಲಿನ ಮಾತನ್ನು ಸೂರ್ಯಮಿತ್ರನು ಹೇಳಿದನು.

ಸ್ವಾರಸ್ಯ : ಸೂರ್ಯಮಿತ್ರನು ತನ್ನ ಸೋದರಳಿಯರನ್ನು ಯೋಗ್ಯರನ್ನಾಗಿ ಮಾಡುವ ಉದ್ದೇಶದಿಂದ ಸತ್ಯವನ್ನು ಮರೆಮಾಚಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

30. "ಪಸರಂಗೊಟ್ಟೆನಿಲ್ಲಿದರ್ಕ್ಕೆ ಮುಳಿಯದಿರಿಂ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಶಿವಕೋಟ್ಯಾಚಾರ್ಯ ವಿರಚಿತ 'ವಡ್ಡಾರಾಧನೆ' ಕೃತಿಯಿಂದ ಆಯ್ದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಅಗ್ನಿಭೂತಿ ಮತ್ತು ವಾಯುಭೂತಿಯರು ತಂದೆ ಕೊಟ್ಟ ಸಲುಗೆಯಿಂದ ಯಾವ ವಿದ್ಯೆಯನ್ನು ಕಲಿಯದೆ ಸಪ್ತವ್ಯಸನಗಳಿಗೆ ತುತ್ತಾಗಿ ಕೆಟ್ಟು ಹೋಗಿದ್ದರು. ತಾನು ಅವರ ಸೋದರ ಮಾವನೆಂದು ಅವರು ತಿಳಿದರೆ ಇಲ್ಲಿಯೂ ಅದೇ ಸಲುಗೆಯಿಂದ ಕೆಟ್ಟು ಹೋಗಬಹುದು ಎಂದು ಸೂರ್ಯಮಿತ್ರನು ಭಾವಿಸಿ ಸತ್ಯವನ್ನು ಮರೆಮಾಚಿದನು. ಅತಿ ಕಟ್ಟುನಿಟ್ಟಿನಿಂದ ಅವರನ್ನು ಎಲ್ಲ ವಿದ್ಯೆಗಳಲ್ಲಿ ಅರ್ಹರನ್ನಾಗಿ ಮಾಡಿದನು. ವಿದ್ವಾಂಸರಾದ ಅವರು ಸತ್ಯವನ್ನು ತಿಳಿದರೆ ಏನೂ ತೊಂದರೆ ಇಲ್ಲವೆಂದು ಭಾವಿಸಿ ಅವರಿಗೆ ತಾನು ಅವರ ಮಾವನೆಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಸೂರ್ಯಮಿತ್ರನು ತನ್ನ ಸೋದರಳಿಯರನ್ನು ಯೋಗ್ಯರನ್ನಾಗಿ ಮಾಡುವ ಉದ್ದೇಶ ಹಾಗೂ ಅದಕ್ಕಾಗಿ ಕಟ್ಟುನಿಟ್ಟಿನ ಅನಿವಾರ್ಯತೆ ಬಗೆಗೆ ಹೇಳಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

31. "ಪಂಡಿತಜನಮೆಲ್ಲ ಮೆಚ್ಚಿ ಬಿಚ್ಚಳಿಸಿ"

ಆಯ್ಕೆ : ಪ್ರಸ್ತುತ ವಾಕ್ಯವನ್ನು ಶಿವಕೋಟ್ಯಾಚಾರ್ಯ ವಿರಚಿತ 'ವಡ್ಡಾರಾಧನೆ' ಕೃತಿಯಿಂದ ಆಯ್ದ 'ಅಗ್ನಿಭೂತಿ ವಾಯುಭೂತಿಯರ ಕಥೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೂರ್ಯಮಿತ್ರನ ಬಳಿಯಲ್ಲಿ ವಿದ್ಯೆಯನ್ನು ಕಲಿತ ಅಗ್ನಿಭೂತಿ ಮತ್ತು ವಾಯುಭೂತಿಯರು ಕೌಶಂಬಿ ಪಟ್ಟಣಕ್ಕೆ ಮರಳಿ ರಾಜ ಅತಿಬಳನನ್ನು ಕಂಡರು. ರಾಜನ

ಬಳಿ ತಮ್ಮ ವಿದ್ವತ್ತನ್ನು ಪ್ರದರ್ಶಿಸಿದರು. ಅದರಿಂದ ರಾಜನು ಸಂತೋಷಗೊಂಡು ಅವರಿಗೆ ಮಂತ್ರಿ ಪದವಿಯನ್ನು ನೀಡಿದನು. ರಾಜಸಭೆಯಲ್ಲಿದವರೆಲ್ಲ ಅವರ ಪಾಂಡಿತ್ಯವನ್ನು ಹೊಗಳಿದರು ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಸಪ್ತವ್ಯಸನಗಳಿಗೆ ತುತ್ತಾಗಿ ರಾಜ ಸಭೆಯಲ್ಲಿ ಅವಮಾನಗೊಂಡ ಅಗ್ನಿಭೂತಿ ಮತ್ತು ವಾಯುಭೂತಿಯರು ಪುನಃ ವಿದ್ಯೆಯನ್ನು ಸಂಪಾದಿಸಿ ರಾಜನಿಂದ, ಸಭಾಸದರರಿಂದ ಮೆಚ್ಚುಗೆಯನ್ನು ಪಡೆದಿರುವುದು ಇಲ್ಲಿ ಅತ್ಯಂತ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

32. ಕೌಸಂಬಿಯನ್ನಾಳುತ್ತಿದ್ದ ಅತಿಬಳ ರಾಜನ ಮಂತ್ರಿ ಸೋಮಶರ್ಮ ಮತ್ತು ಆತನ ಹೆಂಡತಿ ಕಾಶ್ಯಪಿಯ ಮಕ್ಕಳಾದ ಅಗ್ನಿಭೂತಿ ವಾಯುಭೂತಿಯರು ತಂದೆತಾಯಿಯರ ಮಾತಿಗೆ ಕಿವಿಗೊಡದೆ, ಯಾವ ವಿದ್ಯೆಯನ್ನು ಕಲಿಯದೆ, ತಂದೆ ಕೂಡಿಟ್ಟ ಹಣವನ್ನು ಪೋಲುಮಾಡುತ್ತ ಸಪ್ತವ್ಯಸನಗಳಿಗೆ ತುತ್ತಾಗಿದ್ದರು. ಸೋಮಶರ್ಮನ ಮರಣದ ನಂತರ ರಾಜನು ಮಕ್ಕಳನ್ನು ಅರಮನೆಗೆ ಕರೆಸಿಕೊಂಡು ಸತ್ಕರಿಸಿ ಸಂತಾಪವನ್ನು ಸೂಚಿಸಿ ಕಳುಹಿಸಿದನು. ಕೆಲವು ದಿವಸಗಳು ಕಳೆದ ಮೇಲೆ ಮತ್ತೆ ಅವರಿಬ್ಬರನ್ನೂ ರಾಜನು ಅರಮನೆಗೆ ಕರೆಸಿಕೊಂಡು "ನೀವು ಯಾವ ವಿದ್ಯೆಗಳನ್ನು ಬಲ್ಲಿರಿ?" ಎಂದು ವಿಚಾರಿಸಿದನು. ಅವರು ತಲೆತಗ್ಗಿಸಿ ಉತ್ತರ ಕೊಡಲಾರದೆ ಕಣ್ಣೀರನ್ನು ಸುರಿಸಿದರು. ನಾಚಿಕೆಯಿಂದ ಕಾಲಿನ ಬೆರಳುಗಳನ್ನು ನೆಲದ ಮೇಲೆ ಗೀರತೊಡಗಿದರು. ರಾಜಸಭೆಯಲ್ಲಿದ್ದವರೆಲ್ಲ ರಾಜನನ್ನು ಕುರಿತು "ಇವರು ಕಡುಮೂರ್ಖರು, ಇವರು ವಿದ್ಯೆಯನ್ನು ಅರಿಯರು, ಇವರು ಸಪ್ತವ್ಯಸನದಲ್ಲಿ ಮುಳುಗಿರುವರು" ಎಂದು ನಿವೇದಿಸಿದರು. ಇದನ್ನು ಕೇಳಿದ ರಾಜನು ಅವರನ್ನು ಮೂರ್ಖರೆಂದು ತೀರ್ಮಾನಿಸಿ ಅಲ್ಲಿಂದ ಓಡಿಸಿದನು. ಅಪಮಾನಗೊಂಡ ಅಗ್ನಿಭೂತಿ ವಾಯುಭೂತಿಯರು ತಮ್ಮ ತಾಯಿಗೆ "ನಾವು ಚಿಂದಿಯನ್ನುಟ್ಟು, ಭಿಕ್ಷಾಟನೆ ಮಾಡಿಕೊಂಡು ನಾವು ಓದುವೆವು" ಎಂದು ದೈನ್ಯರಾಗಿ ತಿಳಿಸಿದರು. ಮಕ್ಕಳ ಮಾತುಗಳನ್ನು ಕೇಳಿದ ಕಾಶ್ಯಪಿ ಇವರನ್ನು ಮಗಧ ದೇಶದ ರಾಜಗೃಹದ ದೊರೆ ಸುಬಲನ ಮಂತ್ರಿಯಾಗಿರುವ ತನ್ನ ಸಹೋದರ ಸೂರ್ಯಮಿತ್ರನ ಬಳಿ ಕಳಿಸಿದರೆ ಅವನು ಇವರನ್ನು ಯೋಗ್ಯರನ್ನಾಗಿ ಮಾಡುತ್ತಾನೆ ಎಂದು ನಿರ್ಧರಿಸಿದಳು. ಎಲ್ಲ ವಿಚಾರವನ್ನು ಪತ್ರವೊಂದರಲ್ಲಿ ಬರೆದು ಸೋದರ ಸೂರ್ಯಮಿತ್ರನಿಗೆ ಇದನ್ನು ಕೊಡಿ ಎಂದು ಹೇಳಿ ಮಕ್ಕಳಿಬ್ಬರನ್ನು ಕಳಿಸಿಕೊಟ್ಟಳು. ಪತ್ರವನ್ನು ಓದಿದ ಸೂರ್ಯಮಿತ್ರನು ಅಗ್ನಿಭೂತಿ ಮತ್ತು ವಾಯುಭೂತಿಯರು ತಾನು ಅವರ ಸೋದರಮಾವನೆಂಬ ಸಲುಗೆಯಿಂದ ಮೊದಲಿನಂತೆ ಗರ್ವಿಷ್ಠರಾಗಿ ಕೆಟ್ಟುಹೋಗುವರೆಂದು ಭಾವಿಸಿ ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಿದನು. ಅಲ್ಲದೇ ನೀವು ಯಾರಾದರೂ ಆಗಿರಿ ವಿದ್ಯೆ ಕಲಿಯುವ ಆಸೆಯಿಂದ ಬಂದಿರುವಿರಿ. ನೀವು ಕಟ್ಟುನಿಟ್ಟಿನಿಂದ ಕಲಿಯುವುದಾದರೆ ನಿಮ್ಮನ್ನು ಓದಿಸುವೆನು ಎಂದು ತಿಳಿಸಿದನು. ಅವರು ಒಪ್ಪಿಗೆನ್ನು ಸೂಚಿಸಿದಾಗ ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರಿಗೆ ಒಂದು ಕ್ಷಣವೂ ಬಿಡುವು ಕೊಡದೆ ಹಗಲಿರುಳೆನ್ನದೆ ಓದಿಸಿದನು. ಸೂರ್ಯಮಿತ್ರನಿಂದ ಅವರು ಏಳೆಂಟು ವರ್ಷದೊಳಗೆ ನಾಲ್ಕು ವೇದಗಳನ್ನೂ, ವೇದದ ಆರು ಅಂಗಗಳನ್ನೂ (ಜ್ಯೋತಿಷ್ಯ, ಕಲ್ಪ, ನಿರುಕ್ತ, ಶಿಕ್ಷಾ, ವ್ಯಾಕರಣ, ಛಂದಸ್ಸು), ಹದಿನೆಂಟು ಧರ್ಮಶಾಸ್ತ್ರಗಳನ್ನೂ, ಮೀಮಾಂಸೆ, ತರ್ಕಶಾಸ್ತ್ರ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಕೌಟಿಲ್ಯನ ಅರ್ಥಶಾಸ್ತ್ರ, ಸಾಮುದ್ರಿಕ, ಶಾಲಿಹೋತ್ರ (ಅಶ್ವಶಾಸ್ತ್ರ), ಪಾಳಕಾಪ್ಯ (ಗಜಶಾಸ್ತ್ರ),

ವೈದ್ಯಶಾಸ್ತ್ರ, ಚರಕ, ಅಶ್ವಿನೀಮತ, ಅಷ್ಟಾಂಗ ಹೃದಯ, ಶುಶ್ರುತನ ವೈದ್ಯಶಾಸ್ತ್ರ, ಜೋತಿಷ್ಯ, ಮಂತ್ರವಾದ ಮೊದಲಾದ ಎಲ್ಲ ಶಾಸ್ತ್ರಗಳನ್ನು ಕಲಿತರು. ಇಬ್ಬರೂ ಪಂಡಿತರಾದರು.

33. ಸೂರ್ಯಮಿತ್ರನು ಅಗ್ನಿಭೂತಿ ವಾಯುಭೂತಿಯರು ತನ್ನ ಸಹೋದರಿಯ ಮಕ್ಕಳು, ಸೋದರಳಿಯರು ಎಂದು ತಿಳಿದರೂ ಅವರಿಗೆ ಸಲುಗೆಯನ್ನು ಕೊಡಲಿಲ್ಲ. ತಾನು ಅವರ ಸೋದರಮಾವನೆಂದು ತಿಳಿಸಲಿಲ್ಲ. ಅವರು ಈಗಾಗಲೇ ತಂದೆ ಕೊಟ್ಟ ಸಲುಗೆಯಿಂದ ಯಾವ ವಿದ್ಯೆಯನ್ನು ಕಲಿಯದೆ ಸಪ್ತವ್ಯಸನಗಳಿಗೆ ತುತ್ತಾಗಿ ಕೆಟ್ಟು ಹೋಗಿದ್ದರು. ತಾನು ಅವರ ಸೋದರ ಮಾವನೆಂದು ಅವರು ತಿಳಿದರೆ ಇಲ್ಲಿಯೂ ಅದೇ ಸಲುಗೆಯಿಂದ ಕೆಟ್ಟು ಹೋಗಬಹುದು ಎಂದು ಸೂರ್ಯಮಿತ್ರನು ಭಾವಿಸಿದನು. ತನ್ನ ಸೋದರಳಿಯರನ್ನು ಯೋಗ್ಯರನ್ನಾಗಿ ಮಾಡುವ ಉದ್ದೇಶದಿಂದ ಸತ್ಯವನ್ನು ಮರೆಮಾಚಿದನು. ಅತಿ ಕಟ್ಟುನಿಟ್ಟಿನಿಂದ ಅವರನ್ನು ಎಲ್ಲ ವಿದ್ಯೆಗಳಲ್ಲಿ ಅರ್ಹರನ್ನಾಗಿ ಮಾಡಿದನು. ಸೂರ್ಯಮಿತ್ರನು ವಿದ್ವಾಂಸರಾದ ಅಗ್ನಿಭೂತಿ ವಾಯುಭೂತಿಯರನ್ನು ಸತ್ಕರಿಸಿ ಅವರನ್ನು ಕುರಿತು "ನೀವು ನನ್ನ ತಂಗಿಯ ಮಕ್ಕಳೇ, ನಿಮ್ಮನ್ನು ಯೋಗ್ಯರನ್ನಾಗಿ ಮಾಡುವ ಉದ್ದೇಶದಿಂದ ಸಲುಗೆಯನ್ನು ನೀಡದೆ ಕಟ್ಟುನಿಟ್ಟಿನಿಂದ ಓದಿಸಿದೆನು" ಎಂದು ಸತ್ಯವನ್ನು ತಿಳಿಸಿದನು. ಇದರಿಂದ ಸಂತೋಷಗೊಂಡ ಅಗ್ನಿಭೂತಿ "ನಮ್ಮ ಮಾವ ಒಳ್ಳೆಯದನ್ನೆ ಮಾಡಿದನು. ನಿರ್ಬಂಧದಲ್ಲಿಟ್ಟು ನಮ್ಮಿಬ್ಬರನ್ನೂ ಯೋಗ್ಯರನ್ನಾಗಿ ಮಾಡಿದನು" ಎಂದು ತಿಳಿದನು. ಆದರೆ ಕಿರಿಯವನಾದ ವಾಯುಭೂತಿ ತನ್ನ ಸೋದರಮಾವ ಸೂರ್ಯಮಿತ್ರನು ತಮಗೆ ಮಾಡಿದ್ದೆಲ್ಲವು ಅನ್ಯಾಯವೆಂದು ಬಗೆದನು. ನಾವು ಭಿಕ್ಷೆ ಎತ್ತಿಕೊಂಡು ಬಂದ ಕೂಳಿಗೆ ತುಸು ಎಣ್ಣೆಯನ್ನಾಗಲಿ, ತುಸು ಮಜ್ಜಿಗೆಯನ್ನಾಗಲಿ ನಮ್ಮ ಮಾವ ಕೊಡಿಸಲಿಲ್ಲ. ಕೆರೆಗೆ ನಾವು ಮೀಯಲು ಹೋದಾಗಲೂ ಇವನು ಎಣ್ಣೆಯ ವಾಸನೆಯನ್ನೂ ನೋಡಿಸಲಿಲ್ಲ. ಆಗಾಗ ನೆಂಟರಿಷ್ಟರನ್ನೂ ಕರೆಸಿ ನಮ್ಮ ಕಣ್ಣೆದುರೆ ದಿವ್ಯಾಹಾರವನ್ನು ಇವನು ಉಣ್ಣುತ್ತಿದ್ದನು. ಆಳುಗಳಿಗೂ ಔತಣದೂಟವಾಗುತ್ತಿದ್ದಿತು. ಯಾವ ಹಬ್ಬದಲ್ಲೂ ನಮಗೆ ಇವನು ಊಟ ಬಡಿಸಲಿಲ್ಲ. ಇವನು ಪಂಚಮಹಾಪಾತಕನೇ ಸರಿ. ಏಳೆಂಟು ವರ್ಷ ನಮ್ಮನ್ನು ಶತ್ರುಗಳಂತೆ ನಡೆಸಿಕೊಂಡನಲ್ಲ ಎಂದು ತನ್ನ ಮನಸ್ಸಿನಲ್ಲಿ ವಾಯುಭೂತಿಯು ಸೂರ್ಯಮಿತ್ರನ ಬಗೆಗೆ ಕ್ರೋಧವನ್ನು ತುಂಬಿಕೊಂಡನು.

ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

34. **ಅ.** ರಾಹುಲ್ ದ್ರಾವಿಡ್ ಅವರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೆಟ್ಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ. ದಿನವಿಡಿ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದ್ದಾಗಿತ್ತು. ಆದ್ದರಿಂದ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಕರೆಯುವರು.

ಆ. ಬೌಂಡರಿ ಬಾರಿಸು ಅಥವಾ ಔಟಾಗು ಎಂಬ ಮನೋಭಾವದ ಆಟಗಾರರಿಗಿಂತ ಭಿನ್ನವಾದ ಶೈಲಿ ರಾಹುಲ್ ಅವರದ್ದು. ಸಂಯಮದ ಹೊಡೆತ, ಉತ್ತಮ ಎಸೆತವನ್ನು ಗೌರವಿಸುವುದು, ಕೆಟ್ಟ ಎಸೆತವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು, ಎಲ್ಲ ಬಗೆಯ ಹೊಡೆತಗಳಲ್ಲೂ ಶಿಸ್ತು, ಕಲಾತ್ಮಕತೆ, ಎಲ್ಲವೂ ನಯನ ಮನೋಹರ. ಇವು ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವಾಗಿತ್ತು.

ಪತ್ರಲೇಖನ ಬರೆಯುವುದು :

35.

ದಿನಾಂಕ: ೦೩.೦೮.೨೦೨೫
ಸ್ಥಳ: ಮೈಸೂರು

ಇವರಿಂದ,
ಮೇಘಾ
೧೦ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಹಾವೇರಿ.

ಇವರಿಗೆ,
ಮಾನ್ಯ ವ್ಯವಸ್ಥಾಪಕರು
ಕೆ. ಆರ್. ಎಸ್.
ಮೈಸೂರು.

ಮಾನ್ಯರೆ,

ವಿಷಯ : <u>ಕೆ. ಆರ್. ಎಸ್. ಬೃಂದಾವನದ ವೀಕ್ಷಣೆಗೆ ಪ್ರವೇಶ ಕೋರಿ.</u>

ನಾನು ಹಾವೇರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ೧೦ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ ಕುಮಾರಿ. ಮೇಘಾ ಎಂಬ ಹೆಸರಿನವಳಾಗಿದ್ದು, ನಾನು ನನ್ನ ಸ್ನೇಹಿತೆಯರೊಂದಿಗೆ ಇಂದು ಕೆ. ಆರ್. ಎಸ್. ಬೃಂದಾವನಕ್ಕೆ ಶೈಕ್ಷಣಿಕ ಉದ್ದೇಶದಿಂದ ಭೇಟಿ ನೀಡಬೇಕೆಂದಿದ್ದೇನೆ. ನಾವು ಕೆ. ಆರ್. ಎಸ್. ನ ಬೃಂದಾವನದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಮತ್ತು ವೀಕ್ಷಣೆಗೆ ಉತ್ಸುಕರಾಗಿರುತ್ತೇವೆ. ಕಾರಣ ತಾವು ನಮಗೆ ರಿಯಾಯತಿ ದರದಲ್ಲಿ ಕೆ. ಆರ್. ಎಸ್. ಬೃಂದಾವನದ ವೀಕ್ಷಣೆಗೆ ಅನೂಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
ಮೇಘಾ

ಹೊರವಿಳಾಸ :

ಇವರಿಗೆ, ಮಾನ್ಯ ವ್ಯವಸ್ಥಾಪಕರು ಕೆ. ಆರ್. ಎಸ್. ಮೈಸೂರು.	ಇವರಿಂದ, ಮೇಘಾ ೧೦ನೇ ತರಗತಿ ಸರ್ಕಾರಿ ಪ್ರೌಢಶಾಲೆ ಹಾವೇರಿ

ಪ್ರಬಂಧ ಬರೆವಣಿಗೆ :

36. ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ತ್ವ:

ಪೀಠಿಕೆ : ಶಿಕ್ಷಣ ಮಾನವನ ಅತಿ ದೊಡ್ಡ ಶಕ್ತಿ. ಸಂವಿಧಾನವು ಶಿಕ್ಷಣದ ಹಕ್ಕನ್ನು ಪ್ರತಿಪಾದಿಸುತ್ತದೆ. ಯಾವ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು. ಅವರಿಗೆ ಗುಣಮಟ್ಟದ ಶಿಕ್ಷಣ ನೀಡಿ, ದೇಶದ ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಹೀಗಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಜಾರಿಯಾಗಿದೆ. ಇದಕ್ಕಾಗಿ ಹಲವಾರು ಯೋಜನೆಗಳು ಜಾರಿಗೆ ಬಂದಿವೆ. ಅವುಗಳಲ್ಲಿ ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯದ ಮಹತ್ತ್ವ ಹಿರಿದಾಗಿದೆ.

ವಿಷಯ ನಿರೂಪಣೆ : ಅಕ್ಷರ ದಾಸೋಹ- ೧ ರಿಂದ ೧೦ನೆಯ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲಾಮಕ್ಕಳಿಗೆ ಉಚಿತ ಮಧ್ಯಾಹ್ನದ ಬಿಸಿಯೂಟ ನೀಡುವ ಯೋಜನೆಯೇ ಅಕ್ಷರ ದಾಸೋಹ. ಇದು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ. ನಮ್ಮ ರಾಜ್ಯದಲ್ಲಿ ೨೦೦೭-೦೮ನೆಯ ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಿತು. ಶಾಲಾ ಮಕ್ಕಳಲ್ಲಿ ಅಪೌಷ್ಟಿಕತೆ ಹೋಗಲಾಡಿಸಲು ಸಮರ್ಪಕ ಪೌಷ್ಠಿಕಾಂಶಯುಕ್ತ ಆಹಾರ ನೀಡಲಾಗುತ್ತಿದೆ.

ಕ್ಷೀರಭಾಗ್ಯ- ನಮ್ಮ ರಾಜ್ಯ ಸರ್ಕಾರವು ೨೦೦೩ ರ ಆಗಸ್ಟ್ ನಲ್ಲಿ ೧ ರಿಂದ ೧೦ ನೆಯ ತರಗತಿಯ ಸರ್ಕಾರಿ ಅನುದಾನಿತ ಶಾಲಾ ಮಕ್ಕಳಿಗೆ ತಲಾ ೧೫೦ ಎಂ. ಎಲ್. ಬಿಸಿಹಾಲನ್ನು ಉಚಿತವಾಗಿ ನೀಡುವ ಯೋಜನೆ ಜಾರಿಗೆ ತಂದಿದೆ. ಅಮೃತ ಸಮಾನ ಪೌಷ್ಠಿಕಾಂಶಯುಕ್ತ ಹಾಲನ್ನು ನೀಡುತ್ತಿರುವ ಈ ಕ್ಷೀರಭಾಗ್ಯ ಯೋಜನೆಯಿಂದ ಮಕ್ಕಳ ಆರೋಗ್ಯ ಉತ್ತಮವಾಗಲಿದೆ.

ಈ ಎರಡು ಯೋಜನೆಗಳು ಸಾಮಾಜಿಕ ಮಹತ್ತ್ವ ಪಡೆದಿವೆ. ಪ್ರತಿಭಾವಂತ ಆರೋಗ್ಯಕರ ಮಕ್ಕಳಿಂದ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಜೊತೆಗೆ ಧವಸ-ದಾನ್ಯ, ಹಾಲು ಉತ್ಪಾದಿಸುವ ನಾಡಿನ ರೈತರಿಗೂ ಅನುಕೂಲವಾಗುತ್ತಿದೆ. ವಿಶೇಷವಾಗಿ ಬಡ ಕುಟುಂಬದ ಜನರಿಗೆ ತಮ್ಮ ಮಕ್ಕಳ ಪೋಷಣೆಯ ಹೊಣೆಯು ಕಡಿಮೆಯಾಗಿದೆ. ಊಟಕ್ಕೂ ಪರದಾಡುತ್ತಿರುವ ಹಿಂದುಳಿದ ಬಡ ಕುಟುಂಬಗಳಿಗೆ ಈ ಯೋಜನೆ ಸಂಜೀವಿನಿಯಾಗಿದೆ. ಕೆಲವು ಮಕ್ಕಳು ದೂರದ ಪ್ರದೇಶದಿಂದ ಬರುತ್ತಾರೆ ಪಾಲಕರು ಅಷ್ಟು ಬೆಳಿಗ್ಗೆ ಊಟದ ಬುತ್ತಿ ಕಟ್ಟಿ ಕೊಡುವುದು ಕಷ್ಟವಾಗುತ್ತದೆ. ಕೆಲವು ಜಿಲ್ಲೆಗಳಲ್ಲಿ ರಜಾ ಸಮಯದಲ್ಲೂ ಈ ಯೋಜನೆಗಳನ್ನು ಜಾರಿಯಲ್ಲಿಡುವುದರ ಮೂಲಕ ಮತ್ತಷ್ಟು ಅನುಕೂಲ ಮಾಡಿದೆ.

ಉಪಸಂಹಾರ : ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯಗಳಿಂದ ಮಕ್ಕಳ ಆರೋಗ್ಯ ಉತ್ತಮಗೊಂಡು ಕಲಿಕೆಯೂ ಉತ್ತಮವಾಗುತ್ತದೆ. ಶಾಲಾ ಮಕ್ಕಳ ದಾಖಲಾತಿ ಹೆಚ್ಚಿದೆ. ಶಾಲೆಯಿಂದ ಹೊರಗುಳಿಯುವ ಮಕ್ಕಳ ಪ್ರಮಾಣ ಕಡಿಮೆಯಾಗಿದೆ. ಮಕ್ಕಳಲ್ಲಿ ಅಪೌಷ್ಠಿಕತೆ ನಿವಾರಣೆಯಾಗಿ ಉತ್ತಮ ಕಲಿಕಾ ವಾತಾವರಣ ಉಂಟಾಗಿದೆ. ಸಹಭೋಜನದಿಂದ ಸಮಾನತೆಯ ಭಾವೈಕ್ಯತೆ ಮೌಲ್ಯ ಬೆಳೆಯಲು ಸಹಕಾರಿಯಾಗಿದೆ.

'ಅನ್ನ ದಾನಕ್ಕಿಂತ ಅನ್ಯ ದಾನವಿಲ್ಲ.'

: ಪದ್ಯಪಾಠ 1. ಸಂಕಲ್ಪಗೀತೆ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಸಿ) ಅನ್ವರ್ಥನಾಮ
2. (ಡಿ) ಪರಿಮಾಣವಾಚಕ
3. (ಎ) ತನ್ನ
4. (ಡಿ) ಸಹದೇವ
5. (ಸಿ) ಕಮಲಾಕ್ಷ
6. (ಡಿ) ವಿದ್ಯಾಂಸ
7. (ಎ) ಹಳತು
8. (ಸಿ) ಅನಿತು
9. (ಎ) ಪರಿಮಾಣವಾಚಕ
10. (ಸಿ) ಅನ್ವರ್ಥ ನಾಮ

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1ಅಂಕ) :

11. ದಿಗ್ವಾಚಕ
12. ಪ್ರಥಮಪುರುಷ
13. ಪ್ರಥಮಪುರುಷ
14. ಸಂಖ್ಯೇಯವಾಚಕ
15. ಅನ್ವರ್ಥನಾಮ
16. ಪ್ರಶ್ನಾರ್ಥಕ ಸರ್ವನಾಮ
17. ಸಂಖ್ಯಾವಾಚಕ
18. ದಿಗ್ವಾಚಕ
19. ಅಂಕಿತನಾಮ
20. ಅನ್ವರ್ಥನಾಮ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

21. ಪ್ರೀತಿಯ ಹಣತೆಯನ್ನು ಸುತ್ತಲು ಕವಿದಿರುವ ಕತ್ತಲೆಯೊಳಗೆ ಹಚ್ಚಬೇಕು ಎಂದು ಕವಿ ಶಿವರುದ್ರಪ್ಪನವರು ಹೇಳಿದ್ದಾರೆ.
22. ಕವಿ ಶಿವರುದ್ರಪ್ಪನವರು ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು ಎಂದು ಹೇಳಿದ್ದಾರೆ.
23. ನದೀಜಲಗಳು ಕಲುಷಿತವಾಗಿವೆ.
24. ಕವಿ ಶಿವರುದ್ರಪ್ಪನವರು ಕಲುಷಿತವಾಗಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು ಎಂದು ಹೇಳಿದ್ದಾರೆ.
25. ಕಾಡುಮೇಡುಗಳು ಬರಡಾಗಿವೆ.

26. ಕವಿ ಶಿವರುದ್ರಪ್ಪನವರು ವಸಂತವಾಗುತ ಬರಡಾಗಿರುವ ಕಾಡುಮೇಡುಗಳನ್ನು ಮುಟ್ಟಬೇಕಿದೆ ಎಂದಿದ್ದಾರೆ.
27. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಕವಿ ಹೊಸಭರವಸೆಗಳ ಕಟ್ಟೋಣವೆಂದು ತಿಳಿಸುತ್ತಾರೆ.
28. ಮನುಜರ ನಡುವಿನ ಅಡ್ಡಗೋಡೆಗಳ ಕೆಡವುತ ಸೇತುವೆಯಾಗಬೇಕೆಂದು ಕವಿ ತಿಳಿಸುತ್ತಾರೆ.
29. ಕವಿ ಶಿವರುದ್ರಪ್ಪನವರು ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ ಎಂದು ಹೇಳಿದ್ದಾರೆ.
30. ಭಯ-ಸಂಶಯದಲ್ಲಿ ಕಂದಿದ ಕಣ್ಣಿನಲ್ಲಿ ನಾಳಿನ ಕನಸನ್ನು ಬಿತ್ತಬೇಕು ಎಂದು ಕವಿ ಜಿ. ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :
32. ನಮ್ಮ ಬದುಕಿನ ಸುತ್ತಮುತ್ತಲು ಕವಿದಿರುವ ದ್ವೇಷವೆಂಬ ಕತ್ತಲೆಯನ್ನು ಕಳೆಯಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಜ್ಞಾನದೀವಿಗೆಯ ಮೂಲಕ ಎಚ್ಚರಿಕೆಯಿಂದ ಮುನ್ನಡೆಸಬೇಕಿದೆ.
33. ಋತುಗಳ ರಾಜನಾದ ವಸಂತನು ಬರಡಾಗಿರುವ ಕಾಡುಮೇಡುಗಳನ್ನು ಹಚ್ಚಹಸಿರಿನಿಂದ ಕಂಗೊಳಿಸುವಂತೆ ಮುಟ್ಟಬೇಕಿದೆ. ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ ಎಂಬುದು ಕವಿಯ ಆಶಯವಾಗಿದೆ.
34. ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು. ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ.
35. ಎಲ್ಲ ಮತಧರ್ಮಗಳು ದಾರಿ ತೋರಿಸುವ ದೀಪಗಳಾಗಿರುವುದರಿಂದ ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸನ್ನು ಬಿತ್ತುತ್ತ ಬದುಕು ನಡೆಸಬೇಕು.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :
36. ಜಿ. ಎಸ್. ಶಿವರುದ್ರಪ್ಪ : ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ಅವರು ಸಾ. ಶ. ೧೯೨೬ ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಶ್ರೀಯುತರು 'ಎದೆತುಂಬಿ ಹಾಡಿದೆನು, ಸಾಮಗಾನ, ಚೆಲುವು-ಒಲವು, ದೇವಶಿಲ್ಪ, ದೀಪದಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ, ಕಾವ್ಯಾರ್ಥಚಿಂತನ' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿಗಳು ಲಭಿಸಿವೆ.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಮಾಡುವುದು :

37. "ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು."

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಂಕಾರ.

ಸಮನ್ವಯ : ಉಪಮೇಯ : ಗೀಜಗನ ಗೂಡುಗಳು
ಉಪಮಾನ : ತೊಟ್ಟಿಲು
ಉಪಮಾವಾಚಕ : ಅಂತೆ
ಸಮಾನಧರ್ಮ : ತೂಗಾಡುವುದು

ಇಲ್ಲಿ ಉಪಮೇಯವಾದ 'ಗೀಜಗನ ಗೂಡುಗಳನ್ನು ಉಪಮಾನವಾದ 'ತೊಟ್ಟಿಲಿಗೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ತೂಗಾಡುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರದ (ಪೂರ್ಣೋಪಮಾಲಂಕಾರದ) ಲಕ್ಷ್ಯವಾಗಿದೆ.

38. "ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು."

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಂಕಾರ.

ಸಮನ್ವಯ : ಉಪಮೇಯ : ಗಾಳಿಪಟಗಳು
ಉಪಮಾನ : ಹಕ್ಕಿಗಳು
ಉಪಮಾವಾಚಕ : ಅಂತೆ
ಸಮಾನಧರ್ಮ : ಹಾರುವುದು

ಇಲ್ಲಿ ಉಪಮೇಯವಾದ 'ಗಾಳಿಪಟಗಳನ್ನು' ಉಪಮಾನವಾದ 'ಹಕ್ಕಿಗಳಿಗೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, 'ಹಾರುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರದ (ಪೂರ್ಣೋಪಮಾಲಂಕಾರದ) ಲಕ್ಷ್ಯವಾಗಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

39. "ಪ್ರೀತಿಯ ಹಣತೆಯ ಹಚ್ಚೋಣ"

ಆಯ್ಕೆ : ಪ್ರಸ್ತುತ ಸಾಲನ್ನು ಜಿ. ಎಸ್. ಶಿವರುದ್ರಪ್ಪ ಅವರು ಬರೆದ 'ಎದೆತುಂಬಿ ಹಾಡಿದೆನು' ಕೃತಿಯಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ನಮ್ಮ ಸುತ್ತಲೂ ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಕಳೆಯುವುದಕ್ಕಾಗಿ ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ. ಆ ಮೂಲಕ ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ನಿರ್ಮೂಲನೆ ಮಾಡಬಹುದು. ಹೀಗೆ ಸಂಕಲ್ಪ ಮತ್ತು ಅನುಷ್ಠಾನ ಕುರಿತು ತಮ್ಮ ಅಭಿಪ್ರಾಯವನ್ನು ತಿಳಿಸುವ ಸಂದರ್ಭದಲ್ಲಿ ಕವಿ ಶಿವರುದ್ರಪ್ಪ ಅವರು ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ನಾವು ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ಅಸಾಧ್ಯವಾದದ್ದು ಯಾವುದು

ಇಲ್ಲ. ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜವನ್ನು ನಿರ್ಮಾಣ ಮಾಡಬಹುದು ಎಂಬ ಅಂಶಗಳು ಇಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿವೆ.

40. "ಮುಂಗಾರಿನ ಮಳೆಯಾಗೋಣ"

ಆಯ್ಕೆ : ಪ್ರಸ್ತುತ ಸಾಲನ್ನು ಜಿ. ಎಸ್. ಶಿವರುದ್ರಪ್ಪ ಅವರು ಬರೆದ 'ಎದೆತುಂಬಿ ಹಾಡಿದೆನು' ಕೃತಿಯಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ನಿಷ್ಠೆಯಿಂದ ಕ್ರಿಯಾಶೀಲರಾಗಿ ನಾವು ಧನಾತ್ಮಕ ಭಾವನೆ ಹಾಗೂ ದೃಢ ಸಂಕಲ್ಪವನ್ನು ಹೊಂದಿದಾಗ ಯಶಸ್ಸನ್ನು ತಲುಪಬಹುದು. ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಂತಹ ಪರಿಸರಪ್ರೇಮಿ ನಾವಾಗಬೇಕು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದೆಂಬುದು ಹಾಗೂ ಮನೆಮನಗಳನ್ನು ಸ್ವಾಸ್ಥ್ಯಯುತವಾಗಿ ಇಟ್ಟುಕೊಳ್ಳಬಹುದೆಂಬ ಭಾವವು ಕವಿಯ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

41. "ಹೊಸ ಭರವಸೆಗಳ ಕಟ್ಟೋಣ"

ಆಯ್ಕೆ : ಪ್ರಸ್ತುತ ಸಾಲನ್ನು ಜಿ. ಎಸ್. ಶಿವರುದ್ರಪ್ಪ ಅವರು ಬರೆದ 'ಎದೆತುಂಬಿ ಹಾಡಿದೆನು' ಕೃತಿಯಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಹಿಂದೆ ಗುರುವಿದ್ದ ಮುಂದೆ ಗುರಿಯಿತ್ತು; ಸಾಗುತಲಿತ್ತು ಧೀರರ ದಂಡು ಎಂಬ ವಾಕ್ಯವು, ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿರಬೇಕು ಎಂಬುದನ್ನು ತಿಳಿಸುತ್ತದೆ. ಜೀವನದಲ್ಲಿ ಧನಾತ್ಮಕ ಭಾವನೆಯನ್ನು ಹೊಂದಿರಬೇಕು ಯಾವುದೇ ರೀತಿಯ ಸವಾಲುಗಳು ಎದುರಾಗಲು ಆತ್ಮ ವಿಶ್ವಾಸ ಕಳೆದುಕೊಳ್ಳಬಾರದು. ಕ್ರಿಯಾಶೀಲರಾಗಿ ದುಡಿದಾಗ ಯಶಸ್ಸು ಲಭಿಸುತ್ತದೆ. ಜೀವನದಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಸೋಲಬಹುದು. ಮುಗ್ಗರಿಸಿ ಬೀಳಬಹುದು ಅದಕ್ಕಾಗಿ ದೃತಿಗೆಟ್ಟು ಕುಳಿತುಕೊಳ್ಳದೆ ಆತ್ಮ ವಿಶ್ವಾಸದಿಂದ, ವೈಚಾರಿಕತೆಯಿಂದ ಭರವಸೆಯನ್ನು ಕಟ್ಟಿಕೊಳ್ಳುತ್ತಾ ಮೇಲೆದ್ದು ನಿಲ್ಲಬೇಕು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಸತತ ಪ್ರಯತ್ನ ಧೃತಿಗೆಡದ ಆತ್ಮವಿಶ್ವಾಸ, ಪರಿಶ್ರಮದ ಮೂಲಕ, ಹೊಸಭರವಸೆಗಳ ಜೀವನವನ್ನು ಸ್ವಸ್ಥಗೊಳಿಸಿಕೊಳ್ಳಬೇಕೆಂಬುದನ್ನು ಪ್ರಸ್ತುತ ಹೇಳಿಕೆ ಸ್ವಾರಸ್ಯ ಪೂರ್ಣವಾಗಿ ನಿರೂಪಿಸುತ್ತದೆ.

42. "ಹೊಸ ಎಚ್ಚರದೊಳು ಬದುಕೋಣ"

ಆಯ್ಕೆ : ಪ್ರಸ್ತುತ ಸಾಲನ್ನು ಜಿ. ಎಸ್. ಶಿವರುದ್ರಪ್ಪ ಅವರು ಬರೆದ 'ಎದೆತುಂಬಿ ಹಾಡಿದೆನು' ಕೃತಿಯಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವಿಶ್ವದಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಕಾಣುವ ರಾಷ್ಟ್ರವೆಂದರೆ ಭಾರತವೊಂದೇ. ಇಲ್ಲಿ ಅನೇಕ ಧರ್ಮದವರಿದ್ದು ಅವರವರ ಆಚಾರ ವಿಚಾರಗಳು ಬೇರೆಬೇರೆಯಾಗಿವೆ. ದೇವನೊಬ್ಬ ನಾಮ ಹಲವು ಎನ್ನುವ ಹಾಗೆ, ಈ ಎಲ್ಲಾ ಧರ್ಮಗಳು ನಮ್ಮ ಆನಂದದ ಬದುಕಿಗೆ ಬೇಕಾದ ಸನ್ಮಾರ್ಗ ತೋರಿಸುವ ದಾರಿ ದೀವಿಗೆಗಳಾಗಬೇಕೆ ಹೊರತು, ದಾರಿ ತಪ್ಪಿಸುವಂತಾಗಬಾರದು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದೆಂಬ ಎಂಬ ಸ್ವಾರಸ್ಯಪೂರ್ಣವಾದ ಭಾವನೆಯು ಇಲ್ಲಿ ಅಭಿವ್ಯಕ್ತಗೊಂಡಿದೆ.

43. "ಎಚ್ಚರದಲಿ ಮುನ್ನಡೆಸೋಣ"

ಆಯ್ಕೆ : ಪ್ರಸ್ತುತ ಸಾಲನ್ನು ಜಿ. ಎಸ್. ಶಿವರುದ್ರಪ್ಪ ಅವರು ಬರೆದ 'ಎದೆತುಂಬಿ ಹಾಡಿದೆನು' ಕೃತಿಯಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಅಂಧಕಾರದ ಕತ್ತಲೆ ತುಂಬಿದ ಸಮಾಜವನ್ನು ಪ್ರೀತಿಯೆಂಬ ಹಣತೆ ಹಚ್ಚಿ, ಸಮಸ್ಯೆಗಳು ಪ್ರವಾಹದಂತೆ ಎರಗುವಾಗ ನಾವು ಬದುಕಿನ ಹಡಗನ್ನು ನಿಯಂತ್ರಿಸಬೇಕು ಜೊತೆಗೆ ಅದನ್ನು ಮುನ್ನಡೆಸಬೇಕು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ಜೀವನದಲ್ಲಿ ಯಾವುದೇ ಸವಾಲುಗಳಿಗೆ ಅಂಜದೆ ಧೈರ್ಯದಿಂದ ನಾವು ಬದುಕನ್ನು ಮುನ್ನಡೆಸಬೇಕು ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

44. "ವಸಂತವಾಗುತ ಮುಟ್ಟೋಣ"

ಆಯ್ಕೆ : ಪ್ರಸ್ತುತ ಸಾಲನ್ನು ಜಿ. ಎಸ್. ಶಿವರುದ್ರಪ್ಪ ಅವರು ಬರೆದ 'ಎದೆತುಂಬಿ ಹಾಡಿದೆನು' ಕೃತಿಯಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಕೈಗಾರಿಕೀಕರಣ, ಯಾಂತ್ರೀಕರಣಗಳಿಂದ ಪರಿಸರದಲ್ಲಿರುವ ಅನೇಕ ನದಿಜಲಗಳು ಕಲುಷಿತವಾಗಿವೆ. ಕಾಡುಗಳು ಬರಡಾಗಿವೆ. ಹಾಗೆಯೇ ಮನುಷ್ಯರಲ್ಲಿಯೂ ಪ್ರೀತಿ ವಿಶ್ವಾಸದಂತಹ ಭಾವನೆಗಳು ಬತ್ತಿ ಹೋಗಿವೆ. ಬರಡಾಗಿರುವ ಕಾಡುಗಳು ವಸಂತ ಕಾಲದಲ್ಲಿ ಚಿಗುರೊಡೆದು ಹಸಿರಾಗುವಂತೆ ಮನುಷ್ಯರಲ್ಲಿಯೂ ಧನಾತ್ಮಕ ಭಾವನೆ ಮೂಡಿಸಬೇಕು ಎಂದು ಹೇಳುವ ಸಂದರ್ಭದಲ್ಲಿ ಈ ಸಾಲು ಬಂದಿದೆ.

ಸ್ವಾರಸ್ಯ : ಸಂಕಲ್ಪದತ್ತ ದೃಢ ನಿರ್ಧಾರದಿಂದ ಕಾರ್ಯಶೀಲರಾದರೆ 'ಅಸಾಧ್ಯವಾದುದು ಯಾವುದು ಇಲ್ಲ', ದೃಢ ಸಂಕಲ್ಪದಿಂದ ಏನನ್ನು ಬೇಕಾದರೂ ಸಾಧಿಸಬಹುದು. ಐಕ್ಯದಿಂದ ಪ್ರಯತ್ನಶೀಲರಾದಾಗ ಬಲವರ್ಧಿಸುತ್ತದೆ ಹಾಗಾಗಿ ಮನೆಮನಗಳ ವೈಮನಸ್ಸನ್ನು ತೊರೆದು ಏಕತೆಯಿಂದ ಬದುಕು ಸಾಗಿಸುವ ದೃಢಸಂಕಲ್ಪ ಕೈಗೊಳ್ಳಬೇಕು ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

45 "ಕೆಡವುತ ಸೇತುವೆಯಾಗೋಣ"

ಆಯ್ಕೆ : ಪ್ರಸ್ತುತ ಸಾಲನ್ನು ಜಿ. ಎಸ್. ಶಿವರುದ್ರಪ್ಪ ಅವರು ಬರೆದ 'ಎದೆತುಂಬಿ ಹಾಡಿದೆನು' ಕೃತಿಯಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಜನರಲ್ಲಿ ಇಂದು ಭಾಷೆ, ಜಾತಿ, ಮತ, ಧರ್ಮಗಳಲ್ಲಿನ ಭೇದಭಾವಗಳಿಂದ ಅಸಮಾನತೆ, ಅಪನಂಬಿಕೆ, ಅಸ್ಪೃಶ್ಯತೆ ಮೊದಲಾದ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಸಮಾನತೆ, ಸ್ನೇಹ, ಪ್ರೀತಿ, ಒಳ್ಳೆಯ ಚಿಂತನೆಗಳ ಮೂಲಕ ಕೆಡವಿ ಪರಸ್ಪರರಲ್ಲಿ ನಂಬಿಕೆ ಮೂಡಿಸುವ ಸಹಬಾಳ್ವೆಗೆ ಸೇತುವೆಯಾಗುವ ಸಂಕಲ್ಪ ತೊಡಬೇಕೆಂದು ಕವಿ ಜಿ. ಎಸ್. ಶಿವರುದ್ರಪ್ಪ ಆಶಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ನಾವು ದ್ವೇಷ-ಅಸೂಯೆಗಳನ್ನು ಬಿಟ್ಟು ನಾವೆಲ್ಲಾ ಒಂದಾಗಿ ಬಾಳೋಣ. ಐಕ್ಯತೆಯನ್ನು ಕಾಪಾಡೋಣ. ವೈಮನಸ್ಸನ್ನು ತೊರೆದು ಎಲ್ಲರೂ ಪ್ರೀತಿ ವಿಶ್ವಾಸಗಳಿಂದ ಬದುಕಬೇಕೆಂಬ ಸ್ವಾರಸ್ಯಪೂರ್ಣವಾದ ಭಾವನೆಯು ಇಲ್ಲಿ ಅಭಿವ್ಯಕ್ತಗೊಂಡಿದೆ.

46. "ನಾಳಿನ ಕನಸನು ಬಿತ್ತೋಣ"

ಆಯ್ಕೆ : ಪ್ರಸ್ತುತ ಸಾಲನ್ನು ಜಿ. ಎಸ್. ಶಿವರುದ್ರಪ್ಪ ಅವರು ಬರೆದ 'ಎದೆತುಂಬಿ ಹಾಡಿದೆನು' ಕೃತಿಯಿಂದ ಆಯ್ದ 'ಸಂಕಲ್ಪಗೀತೆ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಎಲ್ಲಾ ಧರ್ಮಗಳು ನಮ್ಮ ಆನಂದದ ಬದುಕಿಗೆ ಬೇಕಾದ ಸನ್ಮಾರ್ಗ ತೋರಿಸುವ ದಾರಿ ದೀವಿಗೆಗಳಾಗಬೇಕೆ ಹೊರತು, ದಾರಿ ತಪ್ಪಿಸುವಂತಾಗಬಾರದು. ನಾವು ಧರ್ಮಗಳ ಹೆಸರಿನಲ್ಲಿ ಏಳುವ ಗಲಭೆಗಳನ್ನು ಹತ್ತಿಕ್ಕಬೇಕು. ಇಂತಹ ಗೊಂದಲಗಳ ಗೊಳಾಟದ ನಡುವೆ ಬಾಳುವ ಜನರಿಗೆ ಮುಂದಿನ ಭವಿಷ್ಯ ತಿಳಿಯದೆ ಮುಂದೇನು? ಎಂಬ ಭಯ ಭೀತಿಯಿಂದ ಬದುಕುತ್ತಾ ನಾಳಿನ ಬದುಕನ್ನು ಸಂಶಯದಿಂದ ನೋಡುತ್ತಿರುವ ಜನರಲ್ಲಿ ಇವುಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳಬೇಕೆಂಬ ಸಂದೇಶವನ್ನು ಸಾರುವ ಸಂದರ್ಭದಲ್ಲಿ ಕವಿ ಜಿ. ಎಸ್. ಶಿವರುದ್ರಪ್ಪನವರು ಈ ಮೇಲಿನ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಸಮಾಜದಲ್ಲಿರುವ ಆತಂಕಗಳಿಂದ ಭವಿಷ್ಯದ ಭರವಸೆ ಕಳೆದು ಕೊಳ್ಳದೆ ದೃಢವಾಗಿ ನಿಲ್ಲೋಣ ಹಾಗೂ ಜನರಲ್ಲಿ ಭವಿಷ್ಯದ ಹೊಂಗನಸನ್ನು, ಭವ್ಯ ಭಾರತ ನಿರ್ಮಾಣದ ಕನಸನ್ನು ಬಿತ್ತುವ ಮೂಲಕ ದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಬಹುದೆಂಬ ಸಮಾನತೆಯ ತತ್ತ್ವ ಮತ್ತು ಭರವಸೆಯ ಬದುಕಿನ ಮೌಲ್ಯಯುತ ಸಂದೇಶ ಸ್ವಾರಸ್ಯಪೂರ್ಣವಾಗಿ ಇಲ್ಲಿ ಅಭಿವ್ಯಕ್ತಗೊಂಡಿದೆ.

ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :

47. ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ.

ಅಥವಾ

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ-ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :

48. ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದಂತೆ. ದೃಢಸಂಕಲ್ಪದಿಂದ ಧನಾತ್ಮಕ ಭಾವನೆ, ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ "ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಕವಿ ಜಿ. ಎಸ್. ಶಿವರುದ್ರಪ್ಪನವರು 'ಸಂಕಲ್ಪಗೀತೆ' ಎಂಬ ಪದ್ಯಪಾಠದಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

ಇಂದು ಜಗತ್ತಿನಲ್ಲಿ ಜಾತಿ, ಮತ, ಭಾಷೆ, ಬಣ್ಣ, ಅಜ್ಞಾನ, ಮೂಢನಂಬಿಕೆಗಳೆಂಬ ವಿಚಾರಗಳಿಂದ ಜನರ ಸುತ್ತಲೂ ದ್ವೇಷದ ಕತ್ತಲೆಯು ಕವಿದಿದೆ. ಈ ಕತ್ತಲೆಯನ್ನು ಹೊಡೆದೊಡಿಸಲು ಬೆಳಕಿನ ಅಗತ್ಯತೆ ಇದೆ. ಅಂತೆಯೇ ನಾವು ಈ ದ್ವೇಷದ ಕತ್ತಲೆ ಹೊಡೆದೊಡಿಸಲು ಪ್ರೀತಿಯ ದೀಪವನ್ನು ಹಚ್ಚಬೇಕಿದೆ. ಆಗ ಮಾತ್ರ ಸ್ವಾಸ್ಥ್ಯ ಹಾಗೂ

ದ್ವೇಷರಹಿತ ಸಮಾಜ ನಿರ್ಮಾಣವಾಗುತ್ತದೆ. ಇಂದು ಸಂಸಾರವೆಂಬ ಹಡಗು ಅಜ್ಞಾನದ ಬಿರುಗಾಳಿಗೆ ಸಿಲುಕಿಹಾಕಿಕೊಂಡು ಹೊಯ್ದಾಡುತ್ತ ಎತ್ತೆತ್ತಲೋ ಸಾಗುತ್ತಿದೆ. ಆದ್ದರಿಂದ ನಾವು ಬಾಳನೌಕೆಯನ್ನು ಬಹು ಎಚ್ಚರಿಕೆಯಿಂದ ಗುರಿಯತ್ತ ಮುನ್ನಡೆಸಬೇಕು ಜೀವನದಲ್ಲಿ ಯಾವುದೇ ಸವಾಲುಗಳಿಗೆ ಅಂಜದೆ ಧೈರ್ಯದಿಂದ ನಾವು ಬದುಕು ಮುನ್ನಡೆಸಬೇಕು ಎಂದು ಕವಿ ಜಿ. ಎಸ್. ಶಿವರುದ್ರಪ್ಪ ಅವರು ಆಶಿಸುತ್ತಾರೆ.

ಎಲ್ಲರೂ ಪ್ರೀತಿಯಿಂದ, ಬಹು ಎಚ್ಚರಿಕೆಯಿಂದ ಬದುಕನ್ನು ಸಾಗಿಸಬೇಕು. ಇದು ಸ್ವಾಸ್ಥ್ಯಯುತ ಸಮಾಜ ನಿರ್ಮಾಣಕ್ಕೆ ಎಡೆ ಮಾಡುತ್ತದೆ ಎಂಬ ಮೌಲ್ಯಯುತ ಸಂದೇಶವನ್ನು ಪ್ರಸ್ತುತ ಪದ್ಯವು ತಿಳಿಸುತ್ತದೆ.

49. ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದಂತೆ. ಧನಾತ್ಮಕ ಭಾವನೆ, ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಕವಿ ಜಿ. ಎಸ್. ಶಿವರುದ್ರಪ್ಪನವರು ಸಂಕಲ್ಪಗೀತೆ ಎಂಬ ಪದ್ಯಪಾಠದಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

ನಿಷ್ಠೆಯಿಂದ ಕ್ರಿಯಾಶೀಲರಾಗಿ ನಾವು ಧನಾತ್ಮಕ ಭಾವನೆ ಹಾಗೂ ದೃಢ ಸಂಕಲ್ಪವನ್ನು ಹೊಂದಿದಾಗ ಯಶಸ್ಸನ್ನು ತಲುಪಬಹುದು. ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಂತಹ ಪರಿಸರಪ್ರೇಮಿ ನಾವಾಗಬೇಕು. ಇದರಿಂದ ವಸಂತಕಾಲದ ಆಗಮನದಿಂದ ಬರಡಾಗಿರುವ ಕಾಡುಮೇಡುಗಳು ಹಚ್ಚಹಸಿರಿನಿಂದ ಕಂಗೊಳಿಸಿ ಸಮೃದ್ಧವಾಗುವಂತೆ, ಸ್ವಾಸ್ಥ್ಯಯುತ ಹಾಗೂ ಐಕ್ಯತಾ ಸಮಾಜ ನಿರ್ಮಾಣ ಮಾಡಿ, ಸುಮನಸುಗಳು ಮೂಡಿಬಂದು, ಸುಂದರ ವಾತಾವರಣ ನೆಲೆಗೊಳ್ಳಲು ಅವಕಾಶವೀಯುತ್ತದೆ ಎಂದು ಕವಿ ಜಿ. ಎಸ್. ಶಿವರುದ್ರಪ್ಪ ಅವರು ಆಶಿಸುತ್ತಾರೆ.

'ಮನೆಮನಗಳ ವೈಮನಸ್ಸನ್ನು ತೊರೆದು ಏಕತೆಯಿಂದ ಬದುಕು ಸಾಗಿಸುವ ದೃಢಸಂಕಲ್ಪ ಕೈಗೊಳ್ಳಬೇಕು' ಎಂಬ ಮೌಲ್ಯಯುತ ಸಂದೇಶವನ್ನು ಪ್ರಸ್ತುತ ಪದ್ಯವು ತಿಳಿಸುತ್ತದೆ.

50. ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದಂತೆ. ದೃಢಸಂಕಲ್ಪದಿಂದ ಧನಾತ್ಮಕ ಭಾವನೆ, ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ "ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಕವಿ ಜಿ. ಎಸ್. ಶಿವರುದ್ರಪ್ಪನವರು ಸಂಕಲ್ಪಗೀತೆ ಎಂಬ ಪದ್ಯಪಾಠದಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

ಜನರಲ್ಲಿ ಇಂದು ನಾನಾ ಕಾರಣಗಳಿಗಾಗಿ ನಂಬಿಕೆ ವಿಶ್ವಾಸ, ಹೊಂದಿ ಬಾಳುವ ಗುಣ ಮುಂತಾದ ಸುಖಭಾವದ ಸ್ಥಂಭಗಳೇ ಬಿದ್ದುಹೋಗಿವೆ. ಹೀಗಾಗಿ ಚೆನ್ನಾಗಿ ಬದುಕುತ್ತೇವೆ ಎಂಬ ಭರವಸೆಯೇ ಹೊರಟುಹೋಗುತ್ತಿದೆ. ಆದ್ದರಿಂದ ನಂಬಿಕೆ, ವಿಶ್ವಾಸ, ಪ್ರೀತಿ ಸ್ನೇಹಗಳೆಂಬ ಆಧಾರಸ್ಥಂಭಗಳನ್ನು ಮತ್ತೆ ಮೇಲೆಬ್ಬಿಸಿ ಮನದಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುವ ಹೊಸ ಭರವಸೆಗಳನ್ನು ಕಟ್ಟೋಣ. ಭಾಷೆ, ಜಾತಿ, ಮತ, ಧರ್ಮಗಳಲ್ಲಿನ ಭೇದಭಾವಗಳಿಂದ ಜನರಲ್ಲಿ ಅಸಮಾನತೆ, ಅಪನಂಬಿಕೆ, ಅಸ್ಪೃಶ್ಯತೆ ಮೊದಲಾದ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಅವನ್ನು ಸಮಾನತೆ, ಸ್ನೇಹ, ಪ್ರೀತಿ, ಒಳ್ಳೆಯ ಚಿಂತನೆಗಳ ಮೂಲಕ ಮನುಜರ ನಡುವಿನ ಅಡ್ಡಗೋಡೆಗಳನ್ನು ಕೆಡವಿ ಪರಸ್ಪರರಲ್ಲಿ ನಂಬಿಕೆ ಮೂಡಿಸುವ ಸಹಬಾಳ್ವೆಗೆ ಸೇತುವೆಯಾಗುವ ಸಂಕಲ್ಪ ತೊಡಬೇಕೆಂದು ಕವಿ ಜಿ. ಎಸ್. ಶಿವರುದ್ರಪ್ಪ ಅವರು ಆಶಿಸುತ್ತಾರೆ.

'ಎಲ್ಲರೂ ಪ್ರೀತಿ ವಿಶ್ವಾಗಳಿಂದ ಬದುಕಬೇಕು' ಎಂಬ ಮೌಲ್ಯಯುತ ಸಂದೇಶವನ್ನು ಪ್ರಸ್ತುತ ಪದ್ಯವು ತಿಳಿಸುತ್ತದೆ.

51 ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದಂತೆ. ದೃಢಸಂಕಲ್ಪದಿಂದ ಧನಾತ್ಮಕ ಭಾವನೆ, ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ "ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಕವಿ ಜಿ. ಎಸ್. ಶಿವರುದ್ರಪ್ಪನವರು ಸಂಕಲ್ಪಗೀತೆ ಎಂಬ ಪದ್ಯಪಾಠದಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

ವಿಶ್ವದಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಕಾಣುವ ರಾಷ್ಟ್ರವೆಂದರೆ ಭಾರತವೊಂದೇ. ವೇಷ, ಭಾಷೆ, ಜಾತಿ, ಮತ ಆಚಾರ, ವಿಚಾರ ವಿಚಾರ ಮುಂತಾವುಗಳಲ್ಲಿ ಭಿನ್ನತೆಯಿದ್ದರೂ ನಾವೆಲ್ಲ ಒಂದು. ನಾವು ಭಾರತೀಯರು, ದೇವನೊಬ್ಬ ನಾಮ ಹಲವು, ಎಲ್ಲಾ ಧರ್ಮಗಳು ನಮ್ಮ ಆನಂದದ ಬದುಕಿಗೆ ಬೇಕಾದ ಸನ್ಮಾರ್ಗ ತೋರಿಸುವ ದಾರಿ ದೀವಿಗೆಗಳಾಗಬೇಕೆ ಹೊರತು, ದಾರಿ ತಪ್ಪಿಸುವಂತಾಗಬಾರದು. ನಾವು ಧರ್ಮಗಳ ಹೆಸರಿನಲ್ಲಿ ಏಳುವ ಗಲಭೆಗಳನ್ನು ಹತ್ತಿಕ್ಕಬೇಕು. ಇಂತಹ ಗೊಂದಲಗಳ ಗೋಳಾಟದ ನಡುವೆ ಬಾಳುವ ಜನರಿಗೆ ಮುಂದಿನ ಭವಿಷ್ಯ ತಿಳಿಯದೆ ಮುಂದೇನು? ಎಂಬ ಭಯ ಭೀತಿಯಿಂದ ಬದುಕುತ್ತಾ ನಾಳಿನ ಬದುಕನ್ನು ಸಂಶಯದಿಂದ ನೋಡುತ್ತಿರುವ ಜನರಲ್ಲಿ ಇವುಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಂಡು ಭವಿಷ್ಯದ ಹೊಂಗನಸನ್ನು, ಭವ್ಯ ಭಾರತ ನಿರ್ಮಾಣದ ಕನಸನ್ನು ಬಿತ್ತುವ ಮೂಲಕ ದೇಶದಲ್ಲಿ ಶಾಂತಿ ನೆಲೆಸುವಂತೆ ಮಾಡಬಹುದೆಂದು ಎಂದು ಕವಿ ಜಿ. ಎಸ್. ಶಿವರುದ್ರಪ್ಪನವರು ಆಶಿಸುತ್ತಾರೆ.

'ಸಮಾನತೆಯ ತತ್ತ್ವ ಮತ್ತು ಭರವಸೆಯ ಬದುಕಿನ' ಮೌಲ್ಯಯುತ ಸಂದೇಶವನ್ನು ಪ್ರಸ್ತುತ ಪದ್ಯವು ತಿಳಿಸುತ್ತದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

52. ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚುವ, ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ, ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಂತಹ ಪರಿಸರ ಪ್ರೇಮಿಯಾಗುವ, ಬರಡಾಗಿರುವ ಕಾಡುಮೇಡುಗಳು ಹಚ್ಚಹಸಿರಿನಿಂದ ಕಂಗೊಳಿಸಿ, ಸಮೃದ್ಧವಾಗುವಂತಹ ವಸಂತಕಾಲವಾಗುವ, ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ, ಅಸ್ಪೃಶ್ಯತೆ, ಅಸಮಾನತೆಗಳಿಂದ ಅಧಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವ, ಭಾಷೆ, ಜಾತಿ, ಮತ, ಧರ್ಮಗಳ ಭೇದಭಾವದಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ. ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗುವ, ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ, ಭಯ ಹಾಗೂ ಸಂಶಯಗಳಿಂದ ಮಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು" ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ.

53. ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು. ನಾವು ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನಡೆಯುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ

ಎದುರಿಸಬಹುದು. ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು. ನಾವು ವನಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಮೃದ್ಧವಾಗುವಂತೆ ಮಾಡಬಹುದು. ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ನಾವು ಸಮಾನತೆ ಮನೋಭಾವನೆಯುಳ್ಳವರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡುಹಬಹುದು. ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು. ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಭವಿಷ್ಯದ ಹೊಂಗನಸನ್ನು ಕಾಣಬಹುದು. ಹೀಗೆ ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪನವರು ಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಪದ್ಯಪಾಠ 2. ಹಕ್ಕಿ ಹಾರುತಿದೆ ನೋಡಿದಿರಾ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಎ) ಸಾಮಾನ್ಯಾರ್ಥಕಾವ್ಯಯ
2. (ಡಿ) ಅವಧಾರಣಾರ್ಥಕಾವ್ಯಯ
3. (ಡಿ) ಕ್ರಿಯಾರ್ಥಕಾವ್ಯಯ
4. (ಡಿ) ಅವಧಾರಣಾರ್ಥಕಾವ್ಯಯ
5. (ಬಿ) ಅನುಕರಣಾವ್ಯಯ
6. (ಎ) ಸಾಮಾನ್ಯಾರ್ಥಕಾವ್ಯಯ
7. (ಬಿ) ಅನುಕರಣಾವ್ಯಯ
8. (ಎ) ಉಂಟು
9. (ಬಿ) ಸಾಮಾನ್ಯಾರ್ಥಕಾವ್ಯಯ
10. (ಎ) ಅವಧಾರಣಾರ್ಥಕಾವ್ಯಯ

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :

11. ಅನುಕರಣಾವ್ಯಯ
12. ಕ್ರಿಯಾರ್ಥಕಾವ್ಯಯ
13. ಅನುಕರಣಾವ್ಯಯ
14. ಅವಧಾರಣಾರ್ಥಕಾವ್ಯಯ
15. ಅನುಕರಣಾವ್ಯಯ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

16. ಹಕ್ಕಿಯು ಕಣ್ಣು ತೆರೆದು ರೆಪ್ಪೆ ಮುಚ್ಚುವುದರೊಳಗೆ ಗಾವುದ ಗಾವುದ ವೇಗದಲ್ಲಿ ಹಾರುತಿದೆ.
17. ಹಕ್ಕಿಯ ಗರಿಯಲ್ಲಿ ಬಿಳಿಹೊಳೆ ಬಣ್ಣಗಳಿವೆ.
18. ಸೂರ್ಯ ಚಂದ್ರರು ಹಕ್ಕಿಯ ಕಣ್ಣುಗಳಾಗಿವೆ.
19. ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.
20. ಹಕ್ಕಿಯು ಹೊಸಗಾಲದ ಹಸು ಮಕ್ಕಳನ್ನು ಹರಸಿದೆ.
21. ಹಕ್ಕಿಯು ಕಾಲಪಕ್ಷಿಯ ಸಂಕೇತವಾಗಿದೆ.
22. ಹಕ್ಕಿಯ ಚುಂಚಗಳು ದಿಗ್ಮಂಡಲ ಅಂಚಿನ ಆಚೆಯವರೆಗೂ ಚಾಚಿದೆ.
23. ಹಕ್ಕಿಯು ಚಂದ್ರಲೋಕದಲ್ಲಿನ(ತಿಂಗಳೂರಿನ) ನೀರನ್ನು ಹೀರಿದೆ.
24. ಕವಿ ಶುಕ್ರಗ್ರಹವನ್ನು(ಬೆಳ್ಳಿಯನ್ನು) ಹಳ್ಳಿಗೆ ಹೋಲಿಸಿದ್ದಾರೆ.
25. ಹಕ್ಕಿಯು ಬ್ರಹ್ಮಾಂಡವನ್ನು ಒಡೆಯಲು ಹೊಂಚು ಹಾಕಿ ನಿಂತಿದೆ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

26. ಕಾಲವೆಂಬ ಹಕ್ಕಿಯು ಆಕಾಶ, ಮೋಡ, ಭೂಮಂಡಲಗಳ ಎಲ್ಲಾ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡಿದೆ. ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳೊಡೆದವೋ ಎಂಬಂತೆ, ಆಕಾಶದಲ್ಲಿ ಮಿನುಗುತ್ತಿರುವ ಚಿಕ್ಕೆಗಳ ಮಾಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು, ಅಕಾಶದಲ್ಲಿ ಬೆಳಗುತ್ತಿರುವ ಸೂರ್ಯಚಂದ್ರರನ್ನು ಕಣ್ಣುಗಳಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿ ಹೋಗುತ್ತಿದೆ ಎಂದು ಕವಿ ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

27. ಕಾಲವು ಯುಗಯುಗಗಳ ಹಣೆಬರಹವನ್ನು, ಅಳಿಸಿ ಹಾಕಿ ಹೊಸತನವನ್ನು ಹೊಸ ಹಣೆಬರೆಹವನ್ನು ಬರೆದು ಎಲ್ಲರಿಗೂ ಬದಲಾವಣೆಯಾಗುವ ಒಳ್ಳೆಯ ಭಾಗ್ಯವನ್ನು ತೆರೆದು ಕೊಟ್ಟಿದೆ. ತನ್ನ ರೆಕ್ಕೆ ಬೀಸುತ, ಮೇಲಕ್ಕೆ ಹಾರುತ್ತ ಈ ಹೊಸಗಾಲದ ಹಸುಮಕ್ಕಳಿಗೆ ಹೊಸ ಚೇತನವನ್ನು ನೀಡುತ್ತ, ಉತ್ತಮ ಭವಿಷ್ಯಕ್ಕಾಗಿ ಹರಸಿದೆ.

28. ಕಾಲದ ಹಕ್ಕಿಯು ಬೆಳ್ಳಿ ಚುಕ್ಕಿ ಎಂದು ಕರೆಯಲ್ಪಡುವ ಶುಕ್ರಗ್ರಹವೆಂಬ ಹಳ್ಳಿಯ ಮೇರೆಯನ್ನು ಮೀರಿ ಹಾರಿಹೋಗುತ್ತಿದೆ. ತಿಂಗಳೂರು ಅಂದರೆ ಚಂದ್ರಲೋಕ. ಈ ಚಂದ್ರಲೋಕಕ್ಕೆ ಹಕ್ಕಿ ಏರಿ ನೀರಿನ ಸೆಲೆಯನ್ನು ಹುಡುಕಿ ಅದನ್ನು ಹೀರುತ್ತ ಮಂಗಳ ಲೋಕವನ್ನು ಅಂಗಳ ಮಾಡಿಕೊಂಡು ಸಂತೋಷವಾಗಿ ಆಡುತ್ತಿದೆ.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

29. ದ. ರಾ. ಬೇಂದ್ರೆ : ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಸಾ.ಶ. ೧೮೯೬ ರಲ್ಲಿ ಧಾರವಾಡದಲ್ಲಿ ಜನಿಸಿದರು. ಶ್ರೀಯುತರು 'ಗರಿ, ಕೃಷ್ಣಕುಮಾರಿ, ನಗೆಯ ಹೊಗೆ, ಅರಳು-ಮರಳು, ನಾಕುತಂತಿ, ನಾದಲೀಲೆ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್ ಸ್ವರೂಪ' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರಗಳು ಲಭಿಸಿವೆ.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಮಾಡುವುದು :

30. "ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು."

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಂಕಾರ.

ಸಮನ್ವಯ : ಉಪಮೇಯ : ಭೀಮ ದುರ್ಯೋಧನರು
ಉಪಮಾನ : ಮದಗಜಗಳು
ಉಪಮಾವಾಚಕ : ಅಂತೆ
ಸಮಾನಧರ್ಮ : ಹೋರಾಡುವುದು

ಇಲ್ಲಿ ಉಪಮೇಯವಾದ 'ಭೀಮ ದುರ್ಯೋಧನರನ್ನು' ಉಪಮಾನವಾದ 'ಮದಗಜಗಳಿಗೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು,

'ಹೋರಾಡುವುದು' ಎಂಬ ಸಮಾನಧರ್ಮ ಇರುವುದರಿಂದ ಇದು ಉಪಮಾಲಂಕಾರದ (ಪೂರ್ಣೋಪಮಾಲಂಕಾರದ) ಲಕ್ಷ್ಯವಾಗಿದೆ

31. "ಮರವೇರಿದ ಮರ್ಕಟನಂತೆ"

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಂಕಾರ.

ಸಮನ್ವಯ : ಉಪಮೇಯ : ಸ್ಪಷ್ಟವಾಗಿಲ್ಲ (ಮನಸ್ಸು)

ಉಪಮಾನ : ಮರವೇರಿದ ಮರ್ಕಟ

ಉಪಮಾವಾಚಕ : ಅಂತೆ

ಸಮಾನಧರ್ಮ : ಸ್ಪಷ್ಟವಾಗಿಲ್ಲ (ಚಂಚಲತೆ)

ಇಲ್ಲಿ ಲುಪ್ತವಾದ ಉಪಮೇಯವನ್ನು ಉಪಮಾನವಾದ 'ಮರವೇರಿದ ಮರ್ಕಟಕ್ಕೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, ಸಮಾನಧರ್ಮ ಲುಪ್ತವಾಗಿರುವುದರಿಂದ ಇದು ಉಪಮಾಲಂಕಾರದ (ಲುಪ್ತೋಪಮಾಲಂಕಾರದ) ಲಕ್ಷ್ಯವಾಗಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

32. "ರೆಕ್ಕೆಗಳೆರಡೂ ಪಕ್ಕದಲ್ಲುಂಟು"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ದ. ರಾ. ಬೇಂದ್ರೆಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ ವೇಗವಾಗಿ ಸಾಗುವ ಕಾಲಪಕ್ಷಿಗೆ ಕರಿಯ ಪುಚ್ಛಗಳು ಇವೆ. ಬಿಳಿಯ ಬಣ್ಣದ ಗರಿಗಳಿವೆ. ಕೆಂಪಾದ ಹೊನ್ನಿನ ಬಣ್ಣದ ರೆಕ್ಕೆಗಳು ಎರಡೂ ಪಕ್ಕದಲ್ಲಿ ಇವೆ ಎಂದು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಕಾಲದ ಮೂರು ಅವಸ್ಥೆಗಳಾದ ಭೂತ, ವರ್ತಮಾನ ಮತ್ತು ಭವಿಷತ್ ಕಾಲಗಳನ್ನು ಬಣ್ಣದ ಹೋಲಿಕೆಯ ಮುಖಾಂತರ ವರ್ಣಿತವಾಗಿರುವುದು ಬಹು ಸ್ವಾರಸ್ಯವಾಗಿ ವರ್ಣಿತವಾಗಿದೆ.

33. "ಸಾರ್ವಭೌಮರಾ ನೆತ್ತಿಯ ಕುಕ್ಕಿ"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ದ. ರಾ. ಬೇಂದ್ರೆಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ, ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಕಟ್ಟಿ ಅವುಗಳ ಪ್ರಗತಿ ಮತ್ತು ವಿನಾಶಕ್ಕೆ ಕಾರಣವಾಗಿದೆ. ಅಲ್ಲದೇ ಗತಕಾಲದ ಭೂಮಂಡಲದ ಮೇಲೆ ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿನಿಂತಿದೆ ಎಂದು ಹೇಳುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ಕಾಲದ ಗತಿಯಲ್ಲಿ ವೈಭವದಿಂದ ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

34. "ಬಲ್ಲರು ಯಾರಾ ಹಾಕಿದ ಹೊಂಚ"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ದ. ರಾ. ಬೇಂದ್ರೆಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ, ವಿಶ್ವದ ಅನಂತ ದಿಕ್ಕುಗಳ ಅಂಚನ್ನು ಕಾಲದ ಪಕ್ಷಿಯು ಮುಟ್ಟಿದೆ. ಇಷ್ಟೆ ಅಲ್ಲ ಈ ಅನಂತತೆಯ ಆಚೆಯು ಕಾಲಪಕ್ಷಿಯ ಮನೋಗತ ಅರ್ಥವಾಗುವುದು ಅಸಾಧ್ಯವಾದುದು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಕಾಲಪಕ್ಷಿಯು ಸೃಷ್ಟಿಕರ್ತನ ಬ್ರಹ್ಮಾಂಡವನ್ನೇ ಒಡೆಯುವ ಸಂಚು ಹಾಗೂ ಹೊಸಸೃಷ್ಟಿಯ ನಿರ್ಮಾಣದ ಬೆರಗು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

35. "ಹೊಸಗಾಲದ ಹಸುಮಕ್ಕಳ ಹರಸಿ"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ದ. ರಾ. ಬೇಂದ್ರೆಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ, ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಮೇಲಿನ ಜೀವಿಗಳಿಗೆ ಚೈತನ್ಯ ನೀಡಿ, ಹೊಸ ಪೀಳಿಗೆಯ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುತ್ತಿದೆ ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

36. "ಮಂಗಳ ಲೋಕದ ಅಂಗಳಕೇರಿ"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ದ. ರಾ. ಬೇಂದ್ರೆಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ, ಕಾಲದ ಓಟದಲ್ಲಿ ಬೆಳ್ಳಿ ಅಂದರೆ ಶುಕ್ರಗ್ರಹವು ಮನುಷ್ಯನಿಗೆ ಕೇವಲ ಹಳ್ಳಿಯಾಗಬಹುದು. ಚಂದ್ರಲೋಕವು ಬರಿ ಊರಾಗಬಹುದು. ಹಾಗೂ ಮಂಗಳ ಲೋಕವು ಭೂಮಿಗೆ ಬರಿ ಅಂಗಳವಾಗಬಹುದು. ಈ ಆಕಾಶಕಾಯಗಳು ಮಾನವನಿಗೆ ಆಡಲು, ಹಾಡಲು ಹಾಗೂ ಹಾರಾಡಲು ಅಂಗಳ ಆಗಬಹುದು ಎಂದು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಮಾನವನು ಭೂಮಿಯಿಂದ ಇತರ ಗ್ರಹ, ಉಪಗ್ರಹಗಳಿಗೆ ಸಂಚರಿಸಬಹುದಾದ ದಾರ್ಶನಿಕ ಮುನ್ನೋಟ, ಮಾನವ ಪ್ರಪಂಚದಲ್ಲಾಗುವ ವೈಜ್ಞಾನಿಕ ವೈಚಿತ್ರ್ಯದ ವಿಸ್ಮಯ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

37. "ತಿಂಗಳಿನೂರಿನ ನೀರನು ಹೀರಿ"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ಬೇಂದ್ರೆ ಅವರು ಕಾಲವನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಬಹಳ ಮನೋಜ್ಞವಾಗಿ ಹಕ್ಕಿ ಹಾರುತಿದೆ ನೋಡಿದಿರಾ ಪದ್ಯವನ್ನು ರಚಿಸಿದ್ದಾರೆ. ನಿರಂತರವಾಗಿ ಚಲಿಸುತ್ತಿರುವ ಕಾಲವೆಂಬ ಹಕ್ಕಿಯು ಶುಕ್ರಗ್ರಹವೆಂಬ ಬೆಳ್ಳಿಯ ಹಳ್ಳಿಯ ಮೇರೆಯನ್ನು

ಮೀರಿ ಹಾರುತಿದೆ ಚಂದ್ರಲೋಕದ ಅಂಗಳಕ್ಕೂ ಹಾರಿದ್ದಲ್ಲವೇ ಮಂಗಳನ ಅಂಗಳಕ್ಕೆ ಕಾಲಿಟ್ಟು ತಾನು ಹಾಡಲು ಹಾರಾಡಲು ಹೊರಟಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ

ಸ್ವಾರಸ್ಯ : ಮಾನವನ ವೈಜ್ಞಾನಿಕ ಕ್ರಾಂತಿಯ ಬೆಳವಣಿಗೆಗಳು ಹಾಗೂ ಶುಕ್ರ, ಚಂದ್ರ, ಮಂಗಳ ಗ್ರಹಗಳಿಗೆ ಮಾನವ ಹೋಗಬಹುದಾದ ಸಾಧ್ಯತೆಗಳು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

38. "ರೆಕ್ಕೆಯ ಬೀಸುತ ಚೇತನಗೊಳಿಸಿ"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಕಾಲ ಪಕ್ಷಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತಾ ಹೊಸ ಮನ್ವಂತರಗಳ ಪರಿವರ್ತನೆಗೆ ಪ್ರಗತಿಗೆ ಕಾರಣವಾಗಿದೆ ಅದು ತನ್ನ ಹಗಲು ರಾತ್ರಿಗಳೆಂಬ ರೆಕ್ಕೆಗಳನ್ನು ಬೀಸುತ್ತಾ ಭೂಮಿಯ ಮೇಲಿನ ಜೀವರಾಶಿಗಳಿಗೆ ಚೈತನ್ಯ ನೀಡಿ ಮುಂದಿನ ಜನಾಂಗದ ಮಕ್ಕಳನ್ನು ಹರಸಿ ಉತ್ತಮ ಭವಿಷ್ಯಕ್ಕೆ ಶುಭಹಾರೈಸುತ್ತದೆ ಎಂದು ಕವಿ ಹೇಳುವ ಸಂದರ್ಭವಾಗಿದೆ.

ಸ್ವಾರಸ್ಯ : ಪರಿವರ್ತನೆ ಜಗದ ನಿಯಮ ಎಂಬಂತೆ ಯುಗಯುಗಗಳು ಕಳೆದರೂ ಮುಂದಿನ ಪೀಳಿಗೆಗೆ ಚೈತನ್ಯವನ್ನು ತುಂಬಿ ಉತ್ತಮ ಭವಿಷ್ಯಕ್ಕೆ ಕಾಲ ಪಕ್ಷಿಯು ಶುಭವನ್ನು ಹಾರೈಸುತ್ತಿರುವುದು ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ.

39. "ತೇಲಿಸಿ ಮುಳುಗಿಸಿ ಖಂಡಖಂಡಗಳ"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕಾಲ ಉರುಳಿದಂತೆ ಪ್ರತಿಯೊಂದು ಘಟನೆಗಳು ಇತಿಹಾಸವಾಗುತ್ತಾ ಹೋಗುತ್ತದೆ ಎಂಬುದನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಹೇಳಲಾಗಿದೆ. ಕಾಲ ಎಂಬ ಪಕ್ಷಿ ತನ್ನ ಪಯಣದಲ್ಲಿ ಸಣ್ಣಪುಟ್ಟ ರಾಜ ಮನೆತನ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ ಬೆಳೆಸಿ ಅದರ ಫಸಲನ್ನು ಕೊಯ್ಲು ಮಾಡಿದೆ. ಸಣ್ಣದೊಡ್ಡ ಕೋಟೆಕೊತ್ತಲಗಳನ್ನು ನಾಶಪಡಿಸಿ ಖಂಡ ಖಂಡಗಳನ್ನು ತೇಲಿಸಿ ಮುಳುಗಿಸಿದೆ ತಾನೇ ಸಾರ್ವಭೌಮ ಎಂದು ಮೆರೆಯುತ್ತಿದ್ದವರ ನೆತ್ತಿಯನ್ನು ಕುಕ್ಕಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಎಷ್ಟೇ ಪ್ರಭಾವಶಾಲಿಯಾದರು ಕಾಲಚಕ್ರದ ಮುಂದೆ ಎಲ್ಲರೂ ತಲೆಬಾಗಲೇಬೇಕು. ಎಷ್ಟೇ ದೊಡ್ಡ ವ್ಯಕ್ತಿಯಾಗಲಿ ಸಾಮ್ರಾಜ್ಯವಾಗಲಿ ಜಗತ್ತಿನಲ್ಲಿ ಯಾರೂ ಯಾವುದೂ ಶಾಶ್ವತವಲ್ಲ ಎಂಬುದು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

40. "ಬಿಳಿ ಹೊಳೆ ಬಣ್ಣದ ಗರಿ-ಗರಿ ಉಂಟು"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಬೇಂದ್ರೆಯವರು ಕಾಲದ ಗುರುತನ್ನು ಹಕ್ಕಿಯ ರೆಕ್ಕೆಗಳ ಬಣ್ಣದ ರೂಪಗಳಿಗೆ ಹೋಲಿಸುವ ಸಂದರ್ಭದಲ್ಲಿ ಈ ಮಾತನ್ನು ತಿಳಿಸಿದ್ದಾರೆ. ಹಕ್ಕಿಗೆ ಕರಿನರೆ ಬಣ್ಣದ

ಪುಚ್ಚಗಳಿವೆ. ಬಿಳಿಹೊಳೆ ಬಣ್ಣದ ಗರಿಗಳಿವೆ ಎಂದು ವರ್ಣಿಸುವ ಸಂದರ್ಭದಲ್ಲಿ ಈ ವಾಕ್ಯ ಬಂದಿದೆ.

ಸ್ವಾರಸ್ಯ : ಕಾಲವೆಂಬ ಹಕ್ಕಿಯ ರೆಕ್ಕೆಗಳಿಗಿರುವ ಬಣ್ಣಗಳ ಭೌತಿಕ ರೂಪವನ್ನು ಕಾಲದ ಗುರುತಾಗಿ ಅಭಿವ್ಯಕ್ತಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

41. "ಮಂಡಲ-ಗಿಂಡಲಗಳ ಗಡ ಮುಕ್ಕಿ"

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಹಲವಾರು ರಾಜ್ಯ ಸಾಮ್ರಾಜ್ಯಗಳು, ಮಂಡಲಗಿಂಡಲಗಳು, ಖಂಡ ಖಂಡಗಳು, ಸಾರ್ವಭೌಮರೂ ಸಹ ಈ ಕಾಲಚಕ್ರದ ಗತಿಗೆ ಸಿಲುಕಿರುವುದನ್ನು ಕಾಣಬಹುದು. ಕಾಲವೆಂಬ ಹಕ್ಕಿ ರಾಜ್ಯ ಸಾಮ್ರಾಜ್ಯಗಳ ತೆನೆಯನ್ನು ಒಕ್ಕಿ, ಮಂಡಲ ಗಿಂಡಲಗಳ ಗಡವನ್ನು ಮುಕ್ಕಿ ಖಂಡ ಖಂಡಗಳನ್ನು ತೇಲಿಸಿ ಮುಳುಗಿಸಿ ಸಾರ್ವಭೌಮರ ನೆತ್ತಿಯನ್ನು ಸಹ ಕುಕ್ಕಿ ಕಾಲಪಕ್ಷಿ ಹಾರುತ್ತಿದೆ ಎಂದು ಹೇಳುವ ಸಂದರ್ಭದಲ್ಲಿ ಕವಿ ಹೀಗೆ ಹೇಳಿದ್ದಾರೆ.

ಸ್ವಾರಸ್ಯ : ಎಂತಹ ಪ್ರಭಾವಶಾಲಿಯಾದರೂ ಕೋಟೆ ಕೊತ್ತಲಗಳನ್ನು ಕಟ್ಟಿ ಮೆರೆದವರೂ ಸಹ ಕಾಲಚಕ್ರದ ಎದುರಿಗೆ ತಲೆಬಾಗಲೇಬೇಕು ಎನ್ನುವುದನ್ನು ಕವಿ ಇಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾರೆ.

43. "ಮುಗಿಲಿಗೆ ರೆಕ್ಕೆಗಳೊಡೆದವು ಅಣ್ಣಾ "

ಆಯ್ಕೆ : ಪ್ರಸ್ತುತ ಸಾಲನ್ನು ದ.ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.'

ಸಂದರ್ಭ : ವರಕವಿ ಬೇಂದ್ರೆಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ, ಕಾಲವೆಂಬ ಹಕ್ಕಿಯ ಗಾತ್ರ ಬಹಳ ದೊಡ್ಡದು. ಹಕ್ಕಿಯು ನೀಲಾಗಸದ ಬಣ್ಣವನ್ನೇ ಹೊಂದಿದೆ. ವೇಗವಾಗಿ ಹಾರುವ ಹಕ್ಕಿಯ ರೆಕ್ಕೆಗಳು ವಿಸ್ತಾರವಾದ ಮುಗಿಲಿಗೆ ರೆಕ್ಕೆಗಳು ಮೂಡಿದಂತಿದೆ. ರೆಕ್ಕೆಯನ್ನು ಬಡಿಯುತ್ತಾ, ನಕ್ಷತ್ರಗಳ ಮಾಲೆಯನ್ನು ಧರಿಸಿಕೊಂಡು ಸೂರ್ಯಚಂದ್ರರನ್ನೇ ತನ್ನ ಕಣ್ಣುಗಳಾಗಿ ಹೊಂದಿರುವ ಕಾಲವೆಂಬ ಹಕ್ಕಿ ವೇಗವಾಗಿ ಹಾರುತ್ತಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : 'ಕಾಲಾಯ ತಸ್ಮೈ ನಮಃ ಕಾಲದ ಗತಿಗೆ ಎಲ್ಲರೂ ತಲೆಬಾಗಲೇಬೇಕು. ಕಾಲದ ವ್ಯಾಪ್ತಿ ಭೂಮಿ-ಆಕಾಶಗಳಲ್ಲಿ ವ್ಯಾಪಿಸಿಕೊಂಡಿದೆ. ಕಾಲ ಎಲ್ಲವನ್ನು ತನ್ನ ತೆಕ್ಕೆಯಲ್ಲಿ ಮರೆಮಾಚುವಷ್ಟು ಶಕ್ತಿಶಾಲಿಯಾಗಿದೆ. ಕಾಲವನ್ನು ಹಕ್ಕಿಯ ಹಾರುವಿಕೆಯ ಸಹಜ ಕ್ರಿಯೆಯೊಂದಿಗೆ ಸಮೀಕರಿಸಿ ವರ್ಣಿಸಿರುವುದು ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

ಪದ್ಯಭಾಗ ಪೂರ್ಣ ಮಾಡುವದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :

44. ನೀಲಮೇಘಮಂಡಲ-ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ಅಥವಾ

ಯುಗಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :

45. ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ. ಬದಲಾವಣೆ ಜಗದ ನಿಯಮ. ವೇಗವಾಗಿ ಓಡುತ್ತಿರುವ ಕಾಲದೊಂದಿಗೆ ಅದರ ಮಹತ್ತ್ವವನ್ನು ಅರಿತು ಬದುಕಬೇಕು. ಈ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನವನ್ನು ಕವಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ?' ಪದ್ಯದಲ್ಲಿ ಮಾಡಿದ್ದಾರೆ.

'ಇರುಳು ಇರುಳು ಅಳಿದು ದಿನ ದಿನ ಬೆಳಗೆ' ಅನ್ನುವುದು ಕಾಲಮಾನದ ಪುನರಾವರ್ತನೆಯಾಗಿದೆ. ಕಾಲವು ಚಲನಾಶೀಲವಾದುದು. ಅದು ವಿಶ್ವವ್ಯಾಪಿಯಾದುದು. ಈ ಕಾಲಪಕ್ಷಿಯು ಕೇವಲ ಗತಿಶೀಲವಾಗದೆ ಪ್ರಗತಿಶೀಲವೂ ಆಗಿದೆ ಎನ್ನುತ್ತಾರೆ ಕವಿ ಬೇಂದ್ರೆ. ಗಾವುದ ದೂರವನ್ನು ಸಂಚರಿಸಲು ಈ ಕಾಲಪಕ್ಷಿಗೆ ಬೇಕಾಗುವ ಸಮಯ ಮಾತ್ರ 'ಎವೆ ತೆರೆದಿಕ್ಕುವ ಹೊತ್ತು'. ಅಂದರೆ ನಿಮಿಷ ಮಾತ್ರ. ಅತಿ ಚಿಕ್ಕ ಕಾಲಮಾನದಲ್ಲಿ, ಕೇವಲ ಕಣ್ಣು ಮಿಟುಕಿಸುವ ಸಮಯದಲ್ಲಿ ಈ ಕಾಲ ಪಕ್ಷಿಯು ಗಾವುದ ದೂರ ಗಮಿಸಬಲ್ಲದು. ಬೇಂದ್ರೆಯವರು ಪರಿಚಯಿಸುವ ಕಾಲಪಕ್ಷಿ ಕೇವಲ ಸಮಯ ಪಕ್ಷಿಯಲ್ಲ. ವಿಶ್ವವನ್ನೇ ತನ್ನ ಚಲನೆಯಲ್ಲಿ ಬದಲಾಯಿಸುವ ಬೃಹತ್ ಚೈತನ್ಯ ಪಕ್ಷಿ. ಇಂತಹ ಪಕ್ಷಿಯನ್ನು ನೀವು ನೋಡಿದಿರಾ? ಎಂದು ಸಹೃದಯರನ್ನು ಪ್ರಶ್ನಿಸುತ್ತಾರೆ.

ವರಕವಿ ಬೇಂದ್ರೆ ಹೀಗೆ ಮೊದಲ ನುಡಿಯಲ್ಲಿಯೇ ಕಾಲ ಪಕ್ಷಿಯನ್ನು ಪರಿಚಯಿಸುವ ವಿಧಾನ ತುಂಬಾ ಸ್ವಾರಸ್ಯಕರವಾಗಿದೆ. ಕಲ್ಪನೆಯಂತೆ ಕಾಣುವ ಪದ್ಯದಲ್ಲಿ ವಾಸ್ತವತೆಯನ್ನು ಹಿಡಿದಿಡುವ, ಚಮತ್ಕಾರಿಕವಾಗಿ ಬಳಸುವ ಬೇಂದ್ರೆ ಪ್ರತಿಭೆಯ, ರಸಸ್ವಾದನೆಯ ಮೌಲ್ಯವನ್ನು ಕಾಣಬಹುದು.

46. ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ. ಬದಲಾವಣೆ ಜಗದ ನಿಯಮ. ವೇಗವಾಗಿ ಓಡುತ್ತಿರುವ ಕಾಲದೊಂದಿಗೆ ಅದರ ಮಹತ್ತ್ವವನ್ನು ಅರಿತು ಬದುಕಬೇಕು. ಈ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನವನ್ನು ಕವಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ?' ಪದ್ಯದಲ್ಲಿ ಮಾಡಿದ್ದಾರೆ.

ಕವಿ ಬೇಂದ್ರೆಯವರು ಇಲ್ಲಿ ಚೈತನ್ಯರೂಪಿ ಕಾಲಪಕ್ಷಿಯ ಭೌತಿಕ ವಿವರಗಳನ್ನು ಈ ನುಡಿಯಲ್ಲಿ ವಿವರಿಸಿದ್ದಾರೆ. ಪುಚ್ಛ ಅಂದರೆ ಅದು ಪಕ್ಷಿಯ ಬಾಲ. ಇದು ಹಿಂದಿರುತ್ತದೆ. ಇದು ಭೂತಕಾಲ. ಆದುದರಿಂದ ಇದರ ಬಣ್ಣವು ಕರಿ. ಇನ್ನು ಕಣ್ಣಿಗೆ ಕಾಣುತ್ತಿರುವ ಹೊಳೆಯುತ್ತಿರುವ ಗರಿಯ ಬಣ್ಣ ಬಿಳಿ. ಆದುದರಿಂದ ಇದು ವರ್ತಮಾನಕಾಲ. ನಮ್ಮ ಮುಂದೆ ಕಾಣುವುದು ಭವಿಷ್ಯತ್ ಕಾಲ. ಇದು ಉದಯಿಸುತ್ತಿರುವ ಸೂರ್ಯನಂತೆ ಕೆಂಪಾಗಿ ಬಂಗಾರದ ಬಣ್ಣದ್ದಾಗಿರುತ್ತದೆ. ಈ ಮೂರು ಕಾಲಗಳು ಚಲನೆಯ ಅಂಶಗಳು. ಇಂತಹ ಒಂದು ಬೃಹತ್ ಪಕ್ಷಿಯನ್ನು ನೀವು ನೋಡಿದಿರಾ? ಎಂದು ಸಹೃದಯರನ್ನು ಪ್ರಶ್ನಿಸುತ್ತಾರೆ ವರಕವಿ ಬೇಂದ್ರೆ.

ಪ್ರಸ್ತುತ ನುಡಿಯಲ್ಲಿ ಬೇಂದ್ರೆಯವರು ಕಾಲವು ಚಲನಶೀಲವಾದುದು. ಚಲನಶೀಲತೆ ಜೀವಂತಿಕೆಯ ಗುಣ. ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಅದಕ್ಕೆ ತಡೆ ಎಂಬುದಿಲ್ಲ. ಅದಕ್ಕೆ ಹೊಂದಿಕೊಳ್ಳಬೇಕು ಎಂದು ಕಾಲದ ಮೂರು ಅವಸ್ಥೆಗಳನ್ನು ಬಣ್ಣಗಳ ಹೋಲಿಕೆಯ ಮುಖಾಂತರ ಬಹುಸ್ವಾರಸ್ಯಯುತ ಮತ್ತು ಮೌಲ್ಯಯುತವಾಗಿ ವರ್ಣಿಸಿದ್ದಾರೆ.

47. ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ. ಬದಲಾವಣೆ ಜಗದ ನಿಯಮ. ವೇಗವಾಗಿ ಓಡುತ್ತಿರುವ ಕಾಲದೊಂದಿಗೆ ಅದರ ಮಹತ್ತ್ವವನ್ನು ಅರಿತು ಬದುಕಬೇಕು. ಈ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನವನ್ನು ಕವಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ?' ಪದ್ಯದಲ್ಲಿ ಮಾಡಿದ್ದಾರೆ.

ಕಾಲದ ದೃಷ್ಟಿ ವೈಶಾಲ್ಯತೆಯುಳ್ಳ ಹಾಗೂ ತರತಮರಹಿತವಾದ ಸಮದೃಷ್ಟಿ. ಆಕಾಶವು ಅನಂತವಾದುದು. ಅದರ ಬಣ್ಣ ಕಾಲ ಪಕ್ಷಿಯ ಬಣ್ಣ. ಅಂದರೆ ಕಾಲ ಪಕ್ಷಿಯೂ ಸಹ ಅನಂತವಾದುದು. ಅನಂತವಾದ ಆಕಾಶಕ್ಕೆ ರೆಕ್ಕೆ ಮೂಡಿ, ಚಿಕ್ಕೆಯ ಮಾಲೆಯನ್ನು ಹಾಕಿಕೊಂಡು ಹಾರುತ್ತಿದೆ. ನಾವು ಕಾಲಗಣನೆಗೆ ಬಳಸುವ, ಪ್ರಭಾಬಿಂಬಗಳಾದ ಸೂರ್ಯ ಚಂದ್ರರನ್ನೆ ತನ್ನ ಕಣ್ಣಾಗಿಸಿಕೊಂಡಿದೆ ಎಂದು ಅರ್ಥವತ್ತಾಗಿ ಕವಿ ಬೇಂದ್ರೆ ನುಡಿದಿರುವರು.

ಪ್ರಸ್ತುತ ನುಡಿಯಲ್ಲಿ ಕವಿ ಬೇಂದ್ರೆಯವರು ಕಾಲಪಕ್ಷಿಯು ತರತಮರಹಿತ ಸಮದೃಷ್ಟಿಯಿಂದ ಕೂಡಿದ ನೀಲಮೇಘಮಂಡಲ ಸಮಬಣ್ಣದಂತೆ, ಅನಂತ ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳು ಮೂಡಿದಂತೆ, ನಕ್ಷತ್ರಮಾಲೆಯನ್ನು ಧರಿಸಿಕೊಂಡು, ಸೂರ್ಯಚಂದ್ರರನ್ನು ಕಣ್ಣಾಗಿಸಿಕೊಂಡು ಅದು ಹಾರಾಡುತ್ತಿರುವ ನೋಟ ಅದ್ಭುತವಾದುದು ಎಂದು ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಿರುವರು.

48. ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ. ಬದಲಾವಣೆ ಜಗದ ನಿಯಮ. ವೇಗವಾಗಿ ಓಡುತ್ತಿರುವ ಕಾಲದೊಂದಿಗೆ ಅದರ ಮಹತ್ತ್ವವನ್ನು ಅರಿತು ಬದುಕಬೇಕು. ಈ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನವನ್ನು ಕವಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ?' ಪದ್ಯದಲ್ಲಿ ಮಾಡಿದ್ದಾರೆ.

ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಸಿ, ಅವುಗಳ ಫಲಿತವನ್ನು ಕೊಯ್ಲು ಮಾಡಿದೆ. ಅದೇ ರೀತಿ ಅನೇಕ ಸಾಮ್ರಾಜ್ಯಗಳನ್ನು, ರಾಜ್ಯಗಳನ್ನು, ಕೋಟೆಕೊತ್ತಲಗಳನ್ನು ನಾಶಗೊಳಿಸಿದೆ. ಕಾಲಪಕ್ಷಿಯು ತನ್ನ ಪಯಣದಲ್ಲಿ ಭೂಮಂಡಲದ ಮೇಲಿರುವ ಖಂಡಗಳನ್ನು ತೇಲಿಸಿ, ಮುಳುಗಿ ಪ್ರಾಕೃತಿಕ (ಪ್ರಗತಿ ಮತ್ತು ವಿನಾಶ) ಬದಲಾವಣೆಗಳಿಗೂ ಕಾರಣವಾಗಿದೆ. ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂದು ಕವಿ ಬೇಂದ್ರೆಯವರು ವರ್ಣಿಸಿದ್ದಾರೆ.

ಪ್ರಸ್ತುತ ಪದ್ಯದಲ್ಲಿ ಕವಿ ಬೇಂದ್ರೆಯವರು ಚಲನಶೀಲತೆ ಎಂಬುದು ಬದುಕಿನ ಜೀವಂತಿಕೆಯ ಗುಣವಾಗಿದೆ. ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಅದಕ್ಕೆ ತಡೆ ಎಂಬುದಿಲ್ಲ. ಎಂತಹ ಪ್ರಭಾವಶಾಲಿಯಾದರೂ ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕು. ಅದಕ್ಕೆ ಹೊಂದಿಕೊಳ್ಳಬೇಕು. ಆಯಾ ಕಾಲದಲ್ಲಿ ನಡೆದ ಪ್ರತಿಯೊಂದು ಘಟನೆಯೂ ಕಾಲ ಉರುಳಿದಂತೆ ಇತಿಹಾಸವಾಗುತ್ತಾ ಹೋಗುತ್ತದೆ ಎಂಬ ಮೌಲ್ಯವನ್ನು ವ್ಯಕ್ತಪಡಿಸಿರುವರು.

49. ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ. ಬದಲಾವಣೆ ಜಗದ ನಿಯಮ. ವೇಗವಾಗಿ ಓಡುತ್ತಿರುವ ಕಾಲದೊಂದಿಗೆ ಅದರ ಮಹತ್ತ್ವವನ್ನು ಅರಿತು ಬದುಕಬೇಕು. ಈ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನವನ್ನು ಕವಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ?' ಪದ್ಯದಲ್ಲಿ ಮಾಡಿದ್ದಾರೆ.

ಕಾಲಪಕ್ಷಿಯು ಯುಗಯುಗಗಳ ಆಗು ಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭಹಾರೈಸುತ್ತಿದೆ ಎನ್ನುವರು ಕವಿ ಬೇಂದ್ರೆ ನುಡಿದಿರುವರು. ಇದನ್ನೆಲ್ಲ ಪರಿವೀಕ್ಷಿಸುವ ಕಣ್ಣು ನಮಗೆ ಬೇಕು. ಅಂತಲೇ ಕವಿ ಬೇಂದ್ರೆಯವರು ನಮ್ಮನ್ನು "ಹಕ್ಕಿ ಹಾರುತಿದೆ ನೋಡಿದಿರಾ?" ಎಂದು ಕೇಳುತ್ತಿದ್ದಾರೆ.

ಮಾನವ ದೃಷ್ಟಿ ತತ್ಕಾಲಕ್ಕೆ ಸೀಮಿತವಾಗಿರುತ್ತದೆ. ಆದರೆ ಕವಿಯ ನೋಟ ಕಾಲಾತೀತ, ದೇಶಾತೀತ. ಇಲ್ಲಿ ಕಾಲಪಕ್ಷಿಯ ಕೆಲಸ ಕೇವಲ ವಿನಾಶಕಾರಿಯಲ್ಲ. ಹೊಸ ಮನ್ವಂತರದ ಶುಭೋದಯವಾಗುವುದು ಈ ಕಾಲ ಪಕ್ಷಿಯಿಂದಲೇ. ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಪ್ರಾಣ ವಾಯುವನ್ನು ಕೊಟ್ಟು ನಿರ್ಜೀವ ಮನ್ವಂತರಗಳನ್ನು ಸಜೀವಗೊಳಿಸುವುದು ಈ ಕಾಲಪಕ್ಷಿ. ಭೂಮಂಡಲದಲ್ಲಿ ಜರುಗಿದ ಸಾಂಸ್ಕೃತಿಕ ಬದಲಾವಣೆಗಳು, ಪುನಶ್ಚೇತನಗಳು ಕಾಲಪಕ್ಷಿಯ ಮಹಿಮೆಯಿಂದಲೇ ಎಂಬ ಮೌಲ್ಯಯುತ ಸಂದೇಶವನ್ನು ವರಕವಿ ಬೇಂದ್ರೆಯವರು ನೀಡಿರುವರು.

50. ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ. ಬದಲಾವಣೆ ಜಗದ ನಿಯಮ. ವೇಗವಾಗಿ ಓಡುತ್ತಿರುವ ಕಾಲದೊಂದಿಗೆ ಅದರ ಮಹತ್ತ್ವವನ್ನು ಅರಿತು ಬದುಕಬೇಕು. ಈ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನವನ್ನು ಕವಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ?' ಪದ್ಯದಲ್ಲಿ ಮಾಡಿದ್ದಾರೆ.

ಶುಕ್ರ, ಚಂದ್ರ, ಮಂಗಳ ಲೋಕ ಸಂಚಾರ ಕಾಲದ ಒಂದು ಭೌತಿಕ ಲಕ್ಷಣ. ಬ್ರಿಟಿಷರ ಸಾಮ್ರಾಜ್ಯಶಾಹಿಯಿಂದ ಪಾರಾಗುವ ಚಿಂತನದ ಕಲ್ಪನಾ ಪಕ್ಷಿಯ ಹಾರಾಟವು ಇನ್ನೊಂದು ಲಕ್ಷಣ. ಅಂತೆಯೇ ಕಾಲದ ಓಟದಲ್ಲಿ ಬೆಳ್ಳಿ ಅಂದರೆ ಶುಕ್ರಗ್ರಹವು ಮನುಷ್ಯನಿಗೆ ಕೇವಲ ಹಳ್ಳಿಯಾಗಬಹುದು. ಚಂದ್ರಲೋಕವು ಬರಿ ಊರಾಗಬಹುದು. ಹಾಗೂ ಮಂಗಳ ಲೋಕವು ಭೂಮಿಗೆ ಬರಿ ಅಂಗಳವಾಗಬಹುದು. ಹೀಗೆ ಮಾನವನಿಗೆ ಈ ಆಕಾಶಕಾಯಗಳು ಆಡಲು, ಹಾಡಲು ಹಾಗೂ ಹಾರಾಡಲು ಅಂಗಳ ಆಗಬಹುದು! ಇಲ್ಲಿ ಮಂಗಳ ಲೋಕದ ಅಂಗಳಕ್ಕೆ ಮಾನವನು ಏರುವ ಸೂಚನೆಯನ್ನು ಸಾರಿದ ಕವನ ಇದಾಗಿದೆ ಎನ್ನುವುದು ಗಮನಾರ್ಹ.

ಪ್ರಸ್ತುತ ನುಡಿಯಲ್ಲಿ ಮಾನವನು ಭೂಮಿಯಿಂದ ಇತರಗ್ರಹ, ಉಪಗ್ರಹಗಳಿಗೆ ಸಂಚರಿಸಬಹುದಾದ ದಾರ್ಶನಿಕ ಮುನ್ನೋಟ, ಮಾನವ ಪ್ರಪಂಚದಲ್ಲಾಗುವ ವೈಚಿತ್ರ್ಯದ ವಿಸ್ಮಯ ಮೌಲ್ಯಯುತವಾಗಿ ವ್ಯಕ್ತಗೊಂಡಿದೆ.

51. ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ. ಬದಲಾವಣೆ ಜಗದ ನಿಯಮ. ವೇಗವಾಗಿ ಓಡುತ್ತಿರುವ ಕಾಲದೊಂದಿಗೆ ಅದರ ಮಹತ್ತ್ವವನ್ನು ಅರಿತು ಬದುಕಬೇಕು. ಈ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನವನ್ನು ಕವಿ ಬೇಂದ್ರೆಯವರು 'ಹಕ್ಕಿ ಹಾರುತಿದೆ ನೋಡಿದಿರಾ?' ಪದ್ಯದಲ್ಲಿ ಮಾಡಿದ್ದಾರೆ.

ವಿಶ್ವಗಳು ಅನೇಕವಿರಬಹುದು, ಆ ವಿಶ್ವದಿಕ್ಕುಗಳು ಅನಂತವಿರಬಹುದು ಆದರೆ ಈ ಕಾಲಪಕ್ಷಿಯು ಈ ಎಲ್ಲ ಮಂಡಲಗಳ ಅಂಚನ್ನು ಮುಟ್ಟಿದೆ. ಇಷ್ಟೆ ಅಲ್ಲ ಈ

ಅನಂತತೆಯ ಆಚೆಗೂ ಸಹ ಇದು ತನ್ನ ಚುಂಚವನ್ನು ಚಾಚಿದೆ. ಕಾಲಪಕ್ಷಿಯ ಮನೋಗತ ಅರ್ಥವಾಗುವುದು ಅಸಾಧ್ಯವಾದುದು. ಸೃಷ್ಟಿಕರ್ತೃವಿನ ಈ ಬ್ರಹ್ಮಾಂಡವನ್ನೆ ಕಾಲಪಕ್ಷಿಯು ಒಡೆಯಲು ಹೊಂಚು ಹಾಕುತ್ತಿದೆ. ಅಂಡವು ಒಡೆದಾಗಲೇ ಹೊಸಸೃಷ್ಟಿ ಹೊರಗೆ ಬರುವುದು ಎಂಬುದು ಇಲ್ಲಿನ ಭಾವ. ಇಂತಹ ಪಕ್ಷಿ ಹಾರುತ್ತಿರುವುದನ್ನು ನೀವು ನೋಡಿದಿರಾ? ಎನ್ನುವ ವರಕವಿಗೆ ಮಾತ್ರ ಈ ಕಾಣ್ಕೆ, ಈ ನೋಟ ಮಾತ್ರ ಸಾಧ್ಯ.

ಪ್ರಸ್ತುತ ಪದ್ಯವು ಶಂಕರಾಚಾರ್ಯರ ಹೇಳಿಕೆ "ಮಾಯಾ ಕಲ್ಪಿತ ದೇಶ ಕಾಲಕಲನಾ (ದೇಶ ಮತ್ತು ಕಾಲ ಇವು ಕೇವಲ ಭ್ರಮೆ)" ಎಂಬುದನ್ನು ಪುಷ್ಟಿಕರಿಸುವಂತೆ, ಅನಂತತೆಯ ಆಚೆಯು ಕಾಲಪಕ್ಷಿಯ ಮನೋಗತ ಅರ್ಥವಾಗುವುದು ಅಸಾಧ್ಯವಾದುದು. ಕಾಲ ಪಕ್ಷಿಯ ಹೊಡೆತಕ್ಕೆ ಮಾನವ ಪ್ರಪಂಚದಲ್ಲಾಗುವ ವೈಚಿತ್ರ್ಯದ ವಿಸ್ಮಯದಲ್ಲಿ ಒಂದು ಉದ್ಗಾರವಿದೆ ಎಂಬುದನ್ನು ಮೌಲ್ಯಯುತವಾಗಿ ಅರ್ಥೈಸಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

52. ಕವಿ 'ದ. ರಾ. ಬೇಂದ್ರೆ' ಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ, ಕಾಲ ರಾತ್ರಿ ಕಳೆದು ದಿನ ಬೆಳಕಾಗಿ ಹೀಗೆ ಪುರಾವರ್ತನೆಯಾಗಿ ಮೇಲೆ, ಕೆಳಗೆ ಸುತ್ತಮುತ್ತ ಕಣ್ಣು ತೆರೆದು ರೆಪ್ಪೆ ಮುಚ್ಚುವುದರೊಳಗೆ ಗಾವುದ ರೀತಿಯಲ್ಲಿ ವೇಗವಾಗಿ ಹಾರಿಹೋಗುತ್ತಿದೆ. ಇಂತಹ ಹಕ್ಕಿ ಹಾರಿ ಹೋಗುವುದಕ್ಕೆ ತಡೆಯಿಲ್ಲ. ಹಕ್ಕಿಯ ಪುಚ್ಛ ಗರಿ, ರೆಕ್ಕೆಗಳನ್ನು ಭೂತ, ವರ್ತಮಾನ, ಭವಿಷ್ಯತ್ ಕಾಲಗಳಿಗೆ ಹೋಲಿಸಿದ್ದಾರೆ. ನೀಲಮೇಘಮಂಡಲಗಳ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡು ಸಮತೆಯನ್ನು ಕಾಣುತ್ತದೆ. ಮುಗಿಲಿಗೆ ರೆಕ್ಕೆಗಳೊಡೆದವೋ ಎಂಬಂತೆ ಅನಂತವಾಗಿ ಹಾರಿಹೋಗುತ್ತಿದೆ. ಚಿಕ್ಕೆಗಳ ಮಾಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು, ಸೂರ್ಯಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿಹೋಗಿದೆ ನೋಡಿದಿರಾ ಎಂಬ ಮಾತನ್ನು ಹೇಳುತ್ತಾರೆ. ರಾಜ್ಯ, ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿದ್ದು ಇದೇ ಕಾಲವೆಂಬ ಹಕ್ಕಿ. ರಾಜ- ಮಹಾರಾಜರ ಸಣ್ಣದೊಡ್ಡ ಕೋಟೆಕೊತ್ತಲಗಳನ್ನು ಗಬಕ್ಕನೆ ನಾಶಮಾಡಿದ್ದು ಕಾಲವೇ. ವಿಶ್ವದ ಎಲ್ಲಾ ಭಾಗಗಳನ್ನು ತೇಲಿಸಿ ಮುಳುಗಿಸಿ, ಸಾರ್ವಭೌಮರ ನೆತ್ತಿಯ ಕುಕ್ಕಿ ಹಾರಿಹೋಗಿದೆ. ಕಾಲವು ಯುಗಯುಗಗಳ ಹಣೆಬರೆಹವನ್ನು ಅಳಿಸಿ ಹಾಕಿ ಹೊಸತನದ ಭಾಗ್ಯವನ್ನು ತೆರೆದು ಕೊಟ್ಟಿದೆ. ಹೊಸಗಾಲದ ಹಸುಮಕ್ಕಳಿಗೆ ಹೊಸ ಚೇತನವನ್ನು ನೀಡಿ, ಉತ್ತಮ ಭವಿಷ್ಯಕ್ಕಾಗಿ ಹರಸಿದೆ. ಬೆಳ್ಳಿಚುಕ್ಕಿ ಎಂದು ಕರೆಯಲ್ಪಡುವ ಶುಕ್ರಗ್ರಹವೆಂಬ ಹಳ್ಳಿಯ ಮೇರೆಯನ್ನು ಮೀರಿ, ಚಂದ್ರಲೋಕಕ್ಕೆ ಏರಿ ನೀರನ್ನು ಹುಡುಕಿ ಹೀರಿದೆ. ಮಂಗಳನ ಅಂಗಳಕ್ಕೆ ಹೋಗಿ ಸಂಶೋಧನೆ ಮಾಡುವ ಗುರಿಯನ್ನು ಹೊಂದಿದ್ದಾರೆ ಎಂಬ ಮಾತನ್ನು ಪರೋಕ್ಷವಾಗಿ ಅಭಿವ್ಯಕ್ತಪಡಿಸಿದ್ದಾರೆ. ದಶದಿಕ್ಕುಗಳ ತುತ್ತತುದಿಗೆ ಮುಟ್ಟಿ ಅದರ ಆಚೆಗೆ ತನ್ನಯ ಚುಂಚನ್ನು ಚಾಚಿದೆ. ಜಗತ್ತಿನ ಮೂಲವನ್ನು ಒಡೆಯಲು, ಪ್ರಪಂಚದ ವಿಸ್ಮಯವನ್ನು ಭೇದಿಸಲೋ ಎಂಬಂತೆ ಹೊಂಚುಹಾಕಿದೆ ಎಂಬ ಮಾತನ್ನುಕವಿ ಹೇಳುತ್ತಾರೆ.

53. ಬೇಂದ್ರೆಯವರು ಪ್ರಸ್ತುತ ಕವನದಲ್ಲಿ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನ ಮಾಡಿದ್ದಾರೆ. ಕವಿ ಬೇಂದ್ರೆಯವರ ಕಲ್ಪನೆ ಅಗಾಧವಾದುದು. ಕಾಲಪಕ್ಷಿಯ ವರ್ಣನೆ, ಅದರ ಕಾರ್ಯಸೂಚಿಯನ್ನು ಬೇಂದ್ರೆಯವರು ಹೆಣೆದ ಪರಿಯನ್ನು ನೋಡಿದರೆ ಅವರ ಕಲ್ಪನಾ ಸಾಮರ್ಥ್ಯ ಅರಿವಾಗುವುದು. ಕವಿ ದ. ರಾ. ಬೇಂದ್ರೆಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ, ಕಾಲ ರಾತ್ರಿ ಕಳೆದು ದಿನ ಬೆಳಕಾಗಿ ಹೀಗೆ ಪುರಾವರ್ತನೆಯಾಗಿ ಮೇಲೆ, ಕೆಳಗೆ

ಸುತ್ತಮುತ್ತ ಕಣ್ತೆರೆದು ರೆಪ್ಪೆ ಮುಚ್ಚುವುದರೊಳಗೆ ಗಾವುದ ವೇಗದಲ್ಲಿ ಹಾರಿಹೋಗುತ್ತಿದೆ. ಇಂತಹ ಹಕ್ಕಿ ಹಾರಿ ಹೋಗುವುದಕ್ಕೆ ತಡೆಯಿಲ್ಲ. ಹಕ್ಕಿಯ ಪುಚ್ಛ, ಗರಿ, ರೆಕ್ಕೆಗಳನ್ನು ಭೂತ, ವರ್ತಮಾನ, ಭವಿಷ್ಯತ್ ಕಾಲಗಳಿಗೆ ಹೋಲಿಸಿದ್ದಾರೆ. ನೀಲಮೇಘಮಂಡಲಗಳ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡು ಸಮತೆಯನ್ನು ಕಾಣುತ್ತದೆ. ಮುಗಿಲಿಗೆ ರೆಕ್ಕೆಗಳೊಡೆದವೋ ಎಂಬಂತೆ ಅನಂತವಾಗಿ ಹಾರಿಹೋಗುತ್ತಿದೆ. ಚಿಕ್ಕೆಗಳ ಮಾಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು, ಸೂರ್ಯಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿಹೋಗಿದೆ ನೋಡಿದಿರಾ ಎಂಬ ಮಾತನ್ನು ಹೇಳುತ್ತಾರೆ. ರಾಜ್ಯ, ಸಾಮ್ರಾಜ್ಯಗಳನ್ನು ವೈಭವದಿಂದ ಮೆರೆಯುವಂತೆ ಮಾಡಿದ್ದು ಇದೇ ಕಾಲವೆಂಬ ಹಕ್ಕಿ. ರಾಜ-ಮಹಾರಾಜರ ಸಣ್ಣದೊಡ್ಡ ಕೋಟೆಕೊತ್ತಲಗಳನ್ನು ನಾಶಮಾಡಿದ್ದು ಕಾಲವೇ. ವಿಶ್ವದ ಎಲ್ಲಾ ಭಾಗಗಳನ್ನು ತೇಲಿಸಿ ಮುಳುಗಿಸಿ, ಸಾರ್ವಭೌಮರ ನೆತ್ತಿಯ ಕುಕ್ಕಿ ಹಾರಿಹೋಗಿದೆ. ಕಾಲವು ಯುಗಯುಗಗಳ ಹಣೆಬರೆಹವನ್ನು ಅಳಿಸಿ ಹಾಕಿ ಹೊಸತನದ ಭಾಗ್ಯವನ್ನು ತೆರೆದು ಕೊಟ್ಟಿದೆ. ಹೊಸಗಾಲದ ಹಸುಮಕ್ಕಳಿಗೆ ಹೊಸ ಚೇತನವನ್ನು ನೀಡಿ, ಉತ್ತಮ ಭವಿಷ್ಯಕ್ಕಾಗಿ ಹರಸಿದೆ. ಬೆಳ್ಳಿಚುಕ್ಕಿ ಎಂದು ಕರೆಯಲ್ಪಡುವ ಶುಕ್ರಗ್ರಹವೆಂಬ ಹಳ್ಳಿಯ ಮೇರೆಯನ್ನು ಮೀರಿ, ಚಂದ್ರಲೋಕಕ್ಕೆ ಏರಿ ನೀರನ್ನು ಹುಡುಕಿ ಹೀರಿದೆ. ಮಂಗಳನ ಅಂಗಳಕ್ಕೆ ಹೋಗಿ ಸಂಶೋಧನೆ ಮಾಡುವ ಗುರಿಯನ್ನು ಹೊಂದಿದ್ದಾರೆ ಎಂಬ ಮಾತನ್ನು ಪರೋಕ್ಷವಾಗಿ ಅಭಿವ್ಯಕ್ತಪಡಿಸಿದ್ದಾರೆ. ದಶದಿಕ್ಕುಗಳ ತುತ್ತತುದಿಗೆ ಮುಟ್ಟಿ ಅದರ ಆಚೆಗೆ ತನ್ನಯ ಚುಂಚವನ್ನು ಚಾಚಿದೆ. ಜಗತ್ತಿನ ಮೂಲವನ್ನು ಒಡೆಯಲು, ಪ್ರಪಂಚದ ವಿಸ್ಮಯವನ್ನು ಭೇದಿಸಲೋ ಎಂಬಂತೆ ಹೊಂಚುಹಾಕಿದೆ ಎಂಬ ಮಾತನ್ನು ಹೇಳುತ್ತಾರೆ.

ಪದ್ಯಪಾಠ 3. ಕೌರವೇಂದ್ರನ ಕೊಂದೆ ನೀನು

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಬಿ) ಮಾದ್ರಮಾಗಧಯಾದವರು
2. (ಸಿ) ಕ್ರಿಯಾಸಮಾಸ
3. (ಸಿ) ಬಹುವ್ರೀಹಿ
4. (ಸಿ) ಪೂದೋಟ
5. (ಬಿ) ಕರ್ಮಧಾರಯ
6. (ಬಿ) ದ್ವಿಗು
7. (ಡಿ) ಅಂಶಿ
8. (ಎ) ದ್ವಿಗು
9. (ಡಿ) ಅಂಶಿ
10. (ಸಿ) ತತ್ಪುರುಷ
11. (ಬಿ) ಕ್ರಿಯಾ ಸಮಾಸ
12. (ಎ) ಕ್ರಿಯಾ
13. (ಡಿ) ದ್ವಿಗು
14. (ಸಿ) ಕಣ್ದೆರೆ
15. (ಎ) ತತ್ಪುರುಷ
16. (ಸಿ) ಕ್ರಿಯಾ
17. (ಸಿ) ಬಹುವ್ರೀಹಿ
18. (ಡಿ) ಕ್ರಿಯಾ
19. (ಸಿ) ಬಹುವ್ರೀಹಿ
20. (ಡಿ) ಗಮಕ

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ1 ಅಂಕ) :

21. ದ್ವಿಗುಸಮಾಸ
22. ಅಂಶಿಸಮಾಸ
23. ಕ್ರಿಯಾಸಮಾಸ
24. ಕ್ರಿಯಾಸಮಾಸ
25. ಕರ್ಮಧಾರಯಸಮಾಸ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

26. ಶ್ರೀಕೃಷ್ಣನು ಕರ್ಣನ ಸಂಗಡ ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು ರಥದ ಪೀಠದಲ್ಲಿ ಕೂರಿಸಿಕೊಂಡನು.
27. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ.
28. ಕರ್ಣನಿಗೆ ಶ್ರೀಕೃಷ್ಣನು ಆಮಿಷಗಳನ್ನು ಒಡ್ಡಿದನು.

29. ಕರ್ಣನು ಸೂರ್ಯದೇವನ ಅನುಗ್ರಹದಿಂದ ಜನಿಸಿದನು.
30. ಧರ್ಮರಾಜನು ಯಮಧರ್ಮರಾಯನ ಅನುಗ್ರಹದಿಂದ ಜನಿಸಿದನು.
31. ಭೀಮನು ವಾಯುದೇವನ ಅನುಗ್ರಹದಿಂದ ಜನಿಸಿದನು.
32. ಅರ್ಜುನನು ಇಂದ್ರದೇವನ ಅನುಗ್ರಹದಿಂದ ಜನಿಸಿದನು.
33. ಫಲುಗುಣ ಎಂದು ಅರ್ಜುನನ್ನು ಕರೆಯುತ್ತಾರೆ.
34. ನಕುಲ ಸಹದೇವರ ತಾಯಿಯ ಹೆಸರು 'ಮಾದ್ರಿ'.
35. ಕೃಷ್ಣನು ಕರ್ಣನಿಗೆ ಹಸ್ತಿನಾಪುರದ ರಾಜನನ್ನಾಗಿ ಮಾಡುವೆನೆಂದು ತಿಳಿಸುತ್ತಾನೆ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

36. ಕೃಷ್ಣನು "ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ ಎಂದು ಹೇಳುತ್ತ ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು.
37. ಕುಂತಿಯು ಸೂರ್ಯನ ಅನುಗ್ರಹದಿಂದ ಕರ್ಣನನ್ನು, ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನ್ನು ಪಡೆದಳು. ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.
38. ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾಯಿತು" ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದಿಲ್ಲ. ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು.
39. ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಉತ್ಸಾಹದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ" ಎಂದನು.
40. ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರನ್ನು ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.
41. ಕೃಷ್ಣನು ಕರ್ಣನ ಮನದಲ್ಲಿ ಎಲೈ ಕರ್ಣನೇ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಚೆನ್ನಾಗಿ ವಿಚಾರ ಮಾಡಿ ಹೇಳುವುದಾದರೆ ವಂಶದ ಮೂಲದಲ್ಲಿ ಮೊದಲು ಎರಡಿಲ್ಲ. ನಿನ್ನಾಣೆ, ರಾಜ್ಯದ ಒಡೆಯ ನೀನು. ಹಿಂದೆ ನಡೆದು ಹೋದ ಸಂಗತಿಯ ತಿಳಿವಳಿಕೆ ನಿನಗಿಲ್ಲ ಎಂಬುದಾಗಿ ದಾನವ ಧ್ವಂಸಿಯಾದ ಕೃಷ್ಣನು ಸೂರ್ಯಪುತ್ರನಾದ ಕರ್ಣನ ಕಿವಿಯಲ್ಲಿ ಅವನ ಜನ್ಮ ವೃತ್ತಾಂತವನ್ನು ತಿಳಿಸುತ್ತಾ ಅವನಲ್ಲಿ ಭಯವನ್ನು(ದ್ವಂದ್ವವನ್ನು) ಬಿತ್ತಿದನು.

42. ಕೃಷ್ಣನು ಕರ್ಣನಿಗೆ "ನೀನು ರಾಜನಾದರೆ, ಎಡದ ಭಾಗದಲ್ಲಿ ಕೌರವ ರಾಜರ ಸಮೂಹ, ಬಲ ಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಎದುರಿನಲ್ಲಿ ಮಾದ್ರ ಮಾಗಧ ಯಾದವ ಮೊದಲಾದವರು ಇರುತ್ತಾರೆ. ಇವರ ನಡುವೆ ನೀನು ರಾಜಸಭೆಯಲ್ಲಿ ಸಿಂಹಾಸನದಲ್ಲಿ ಕುಳಿತು ಅತಿಯಾದ ಸೊಬಗಿನಿಂದ ಶೊಭಿಸಬಹುದೆಂದು ತಿಳಿಸುತ್ತಾನೆ.

43. ಕೃಷ್ಣನು ಅಸಹಾಯಕನಾದ ಸ್ಥಿತಿಯಲ್ಲಿ ನೋವು, ಸಂಕಟದಿಂದ ಬಳಲುವ ಕರ್ಣನನ್ನು ಕುರಿತು "ಏನು ಹೇಳು ಕರ್ಣ ನಿನ್ನ ಮನೋವೇದನೆ ಯಾವುದು? ನಿನಗೆ ಕುಂತಿಯ ಮಕ್ಕಳಿಂದ ಸೇವೆ ಮಾಡಿಸಿಕೊಳ್ಳುವುದು ಇಷ್ಟವಿಲ್ಲವೇ? ನನ್ನಾಣೆಗೂ ನಿನಗೆ ಇದರಿಂದ ಯಾವುದೇ ನಷ್ಟವಿಲ್ಲ, ಮಾತನಾಡು ಮೌನವು ಏತಕೆ? ಭ್ರಮೆಗೊಳಗಾಗುವುದು ಬೇಡ. ನಾನು ನಿನ್ನ ದುರ್ದೆಸೆಯನ್ನು ಬಯಸುವನಲ್ಲ, ನನ್ನ ಮಾತನ್ನು ಕೇಳು" ಎಂದು ಪ್ರಶ್ನಿಸುವನು.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

44. ಕುಮಾರವ್ಯಾಸ : ಕವಿ ಕುಮಾರವ್ಯಾಸನು ಸಾ. ಶ. ೧೪೩೦ ರಲ್ಲಿ ಗದಗ ಪ್ರಾಂತದ ಕೋಳಿವಾಡದಲ್ಲಿ ಜನಿಸಿದನು. ಈತನು 'ಕರ್ಣಾಟ ಭಾರತ ಕಥಾಮಂಜರಿ, ಐರಾವತ' ಎಂಬ ಕೃತಿಗಳನ್ನು ರಚಿಸಿದ್ದಾನೆ. ಈತನಿಗೆ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ.

ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :

45.

ಸ	ಳ	ಸ	ಳ	
UUU	UU -	- U	- -	
ಲಲನೆ	ಪಡೆದೀ	ಯ್ಯೆದು	ಮಂತ್ರಂ	= ೧೪

ಸ	ಳ	ಸ	ಳ	
UUU	U UUU	-U	-U U	
ಗಳಲಿ	ಮೊದಲಿಗ	ನೀನು	ನಿನ್ನಯ	= ೧೪

ಸ	ಳ	ಸ	ಳ	ಸ	ಸ	೨
UU U	- UU	- U	- U U	-U	UU-	-
ಬಳಿಯು	ಧಿಷ್ಮಿರ	ದೇವ	ಮೂರನೆ	ಯಾತ	ಕಲಿಭೀ	ಮ = ೨೩

ಛಂದಸ್ಸು : ಇದು ಮಾತ್ರಾಗಣ ಆಧಾರಿತ 'ಭಾಮಿನಿ ಷಟ್ಪದಿ'ಯ ಲಕ್ಷ್ಯವಾಗಿದೆ.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಮಾಡುವುದು :

46. ಮಾರಿಗೌತಣವಾಯಿತು ನಾಳಿನ ಭಾರತವು. (ಗ್ರಹಿಕೆ-ಸಾಧಾರಣ) **2024**.

ಅಲಂಕಾರದ ಹೆಸರು : ರೂಪಕಾಲಂಕಾರ

ಲಕ್ಷಣ : ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವುದೇ ರೂಪಕಾಲಂಕಾರ.

ಸಮನ್ವಯ : ಉಪಮೇಯ : ನಾಳಿನ ಭಾರತಯುದ್ಧ
ಉಪಮಾನ : ಮಾರಿಗೆ ನೀಡುವ ಔತಣ

ಇಲ್ಲಿ ಉಪಮೇಯವಾದ 'ನಾಳಿನ ಭಾರತಯುದ್ಧ' ಹಾಗೂ ಉಪಮಾನವಾದ 'ಮಾರಿಗೆ ನೀಡುವ ಔತಣ' ಇವೆರಡರ ನಡುವೆ ಅಭೇದವನ್ನು ರೂಪಿಸಿರುವುದರಿಂದ ಇದು 'ರೂಪಕಾಲಂಕಾರದ' ಲಕ್ಷ್ಯವಾಗಿದೆ.

47. "ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ."

ಅಲಂಕಾರದ ಹೆಸರು : ರೂಪಕಾಲಂಕಾರ

ಲಕ್ಷಣ : ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವುದೇ ರೂಪಕಾಲಂಕಾರ.

ಸಮನ್ವಯ : ಉಪಮೇಯ : ಒಡಲಬೇಗೆ

ಉಪಮಾನ : ಬೆಂಕಿಯುರಿ

ಇಲ್ಲಿ ಉಪಮೇಯವಾದ 'ಒಡಲಬೇಗೆ' ಹಾಗೂ ಉಪಮಾನವಾದ 'ಬೆಂಕಿಯುರಿ' ಇವೆರಡರ ನಡುವೆ ಅಭೇದವನ್ನು ರೂಪಿಸಿರುವುದರಿಂದ ಇದು 'ರೂಪಕಾಲಂಕಾರದ' ಲಕ್ಷ್ಯವಾಗಿದೆ.

48. "ಸೀತೆಯ ಮುಖ ಕಮಲ ಅರಳಿತು "

ಅಲಂಕಾರದ ಹೆಸರು : ರೂಪಕಾಲಂಕಾರ

ಲಕ್ಷಣ : ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವುದೇ ರೂಪಕಾಲಂಕಾರ.

ಸಮನ್ವಯ :

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

ಇಲ್ಲಿ ಉಪಮೇಯವಾದ 'ಸೀತೆಯ ಮುಖ' ಹಾಗೂ ಉಪಮಾನವಾದ 'ಕಮಲ' ಇವೆರಡರ ನಡುವೆ ಅಭೇದವನ್ನು ರೂಪಿಸಿರುವುದರಿಂದ ಇದು 'ರೂಪಕಾಲಂಕಾರ'ದ ಲಕ್ಷ್ಯವಾಗಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

49. "ರವಿ ಸುತನ ಕಿವಿಯಲಿ ಬಿತ್ತಿದನು ಭಯವ"

ಆಯ್ಕೆ : ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದು ಕುಳ್ಳಿರಿಸಿಕೊಂಡು, ಮೃದುನತನದ ಸರಸದಲ್ಲಿ ಮಾತನಾಡಿಸುತ್ತಾ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ, ನೀನೇ ರಾಜ, ಇದು ಅರಿವಿಲ್ಲ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.

ಸ್ವಾರಸ್ಯ : ಕೃಷ್ಣನು ಕರ್ಣನ ಬಲವನ್ನು ಕುಗ್ಗಿಸಲು ಕಿವಿಯಲ್ಲಿ ಉಭಯ(ದ್ವಂದ್ವ)ವನ್ನು ಬಿತ್ತಿದನು ಎಂದು ಕವಿಯು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

50. "ಬಾಯ್ದಂಬುಲಕೆ ಕೈಯಾನುವರೆ"

ಆಯ್ಕೆ : ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೃಷ್ಣನು ಪಾಂಡವ ಕೌರವರ ನಡುವೆ ಸಂದಿ, ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ : ಕರ್ಣ ನೀನು ರಾಜನಾಗಿ ಮೆರೆಯ ಬೇಕಾದವನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ" ಎಂದು ಕೃಷ್ಣನು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

51. "ಜೀಯ ಹಸಾದವೆಂಬುದು ಕಷ್ಟ"

ಆಯ್ಕೆ : ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು. ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ : ಕೌರವರು, ಪಾಂಡವರು, ಮಾದ್ರ ಮಾಗಧ ಯಾದವಾದಿಗಳ ನಡುವೆ ಓಲಗದಲ್ಲಿ ವಿಲಾಸದಿಂದ ಮೆರೆಯ ಬೇಕಾದವನು, ಸೇವಕನಂತಿರುವುದು ಕಷ್ಟ ಎಂದು ಕೃಷ್ಣನು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

52. "ನಿನ್ನಪದೆಸೆಯ ಬಯಸುವನಲ್ಲ"

ಆಯ್ಕೆ: ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೃಷ್ಣನು ಪಾಂಡವ ಕೌರವರ ನಡುವೆ ಸಂದಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ : ತನ್ನ ಜನ್ಮರಹಸ್ಯವನ್ನು ಅರಿತು ಕರ್ಣನು ಮನದಲ್ಲಿ ಚಿಂತಿತನಾಗಿ ಮೌನವಾದಾಗ, ಕೃಷ್ಣನು ಈ ಮಾತನ್ನು ಹೇಳುವುದರ ಮೂಲಕ ಕರ್ಣನನ್ನು ಸಮಾಧಾನಪಡಿಸಿ ತನ್ನ ಕಾರ್ಯ ಸಾಧನೆ ಮಾಡಿಕೊಳ್ಳುವುದು ಸ್ವಾರಸ್ಯಪೂರ್ಣವಾಗಿದೆ.

53. "ಮಾರಿಗೌತಣವಾಯ್ತು ನಾಳಿನ ಭಾರತವು"

ಆಯ್ಕೆ : ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೃಷ್ಣನು ಪಾಂಡವ ಕೌರವರ ನಡುವೆ ಸಂದಿ, ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ : ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರ ಯುದ್ಧದ ಭೀಕರತೆ ಹಾಗೂ ಒಡೆಯನ ಋಣ ತೀರಿಸುವ ಇಂಗಿತ ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

54. "ಹರಿಯ ಹಗೆ ಹೊಗೆದೋರದುರುಹದೆ ಬರಿದೆ ಹೋಹುದೆ"

ಆಯ್ಕೆ : ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೃಷ್ಣನ ಆಮಿಷ, ಕರ್ಣನಿಗೆ ಕೃಷ್ಣ ತಿಳಿಸುವ ಜನ್ಮ ರಹಸ್ಯದಿಂದ ಕರ್ಣನ ಕೊರಳಿನ ರಕ್ತನಾಳಗಳು ಹಿಗ್ಗಿದವು, ಕಂಬನಿಯು ರಭಸದಿಂದ ಮುನ್ನುಗ್ಗಿ ಬಂದು ಅಧಿಕವಾಗಿ ಕರ್ಣನು ನೊಂದನು. ಕರ್ಣನು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡುಂಟಾಯಿತಲ್ಲಾ" ಎಂದು ಸಂಕಟಪಟ್ಟನು. ಹರಿಯ ಹಗೆತನ ಹೊಗೆ ಕಾಣಿಸಿಕೊಳ್ಳದೆ, ಸುಡದೆ ಬಿಡುತ್ತದೆಯೇ? ಎಂದು ಈ ಮೇಲಿನ ಮಾತನ್ನು ತನ್ನೊಳಗೆ ಪ್ರಶ್ನಿಸಿಕೊಳ್ಳುವನು.

ಸ್ವಾರಸ್ಯ : ಅಸಹಾಯಕನಾದ ಸ್ಥಿತಿಯಲ್ಲಿ ನೋವು, ಸಂಕಟದಿಂದ ಬಳಲುವ ಕರ್ಣನ ವ್ಯಕ್ತಿತ್ವದ ಹಿರಿಮೆ, ಸ್ವಾಮಿನಿಷ್ಠೆ, ಗೆಳೆಯನ ಮೇಲಿನ ಪ್ರೀತಿ ಮತ್ತು ಪ್ರಾಮಾಣಿಕತೆ ಹಾಗೂ ಕೃಷ್ಣನ ದ್ವೇಷ ಕಾಣಿಸದೇ ನಾಶಮಾಡುವುದಾಗಿದೆ ಎಂಬ ಧ್ವನಿ ಪ್ರಸ್ತುತ ಮಾತಿನಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿದೆ.

55. "ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು"

ಆಯ್ಕೆ : ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೃಷ್ಣನು ಕರ್ಣನಿಗೆ ಆತನ ಜನ್ಮರಹಸ್ಯವನ್ನುಕುರಿತು, "ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಪರಾಕ್ರಮಿಯಾದ ಭೀಮ. ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದನು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲಸಹದೇವರು ಇಬ್ಬರು ಜನಿಸಿದರು" ಎಂದು ತಿಳಿಸುವ ಸಂದರ್ಭದಲ್ಲಿ ಈ ಮಾತು ಬರುತ್ತದೆ.

ಸ್ವಾರಸ್ಯ : ಪಾಂಡವರ ರಕ್ಷಣೆಗೆ ನಿಂತ ಕೃಷ್ಣನು ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣನಿಗೆ ಜನ್ಮರಹಸ್ಯವನ್ನು ತಿಳಿಸುವ ಮೂಲಕ ಕರ್ಣನ ಆವೇಶದ ಬಲವನ್ನು ಕ್ಷೀಣಿಸಿ, ಪಾಂಡವರ ಬಗ್ಗೆ ಆತನಲ್ಲಿ ಅನುಕಂಪ ಹುಟ್ಟುವಂತೆ ಹಾಗೂ ಕರ್ಣನ ಮನಸ್ಸನ್ನು ಅವನಲ್ಲಿನ ನಿಷ್ಠೆಯನ್ನು ಭೇದತಂತ್ರದಿಂದ ಒಡೆದಿರುವುದು ಅರ್ಥಪೂರ್ಣವಾಗಿ ಬಿತ್ತರಗೊಂಡಿದೆ.

56. "ನಿನ್ನಯ ವೀರರೈವರ ನೋಯಿಸೆನು ರಾಜೀವ ಸಖನಾಣೆ"

ಆಯ್ಕೆ : ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೃದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ : ತನ್ನ ಸಹೋದರರ ಮೇಲಿನ ವಾತ್ಸಲ್ಯ ಪ್ರೀತಿಯನ್ನು ಪರೋಕ್ಷವಾಗಿ ವ್ಯಕ್ತಪಡಿಸಿ, ಕೃಷ್ಣನ ಮಾತಿಗೆ ಸ್ಪಂದಿಸಿ ಒಡೆಯನ ಋಣ ತೀರಿಸುವ ನಿರ್ಧಾರ ಬಹು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

57. "ನಿಮ್ಮಡಿಗಳಲಿ ಸಮಸೇವನೆಯೆ ದೇವ"

ಆಯ್ಕೆ : ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸೂರ್ಯನ ಮಗನಾದ ಕರ್ಣನ ಸಂಗಡ ಕೃಷ್ಣನು ಮೈದುನನ ರೀತಿಯ ಸರಸವನ್ನು ಮಾಡಿ, ಕೈಹಿಡಿದು ಎಳೆದು ರಥದ ಪೀಠದ ಮೇಲೆ ಕುಳ್ಳಿರಿಸುವನು. ಆಗ ನನಗೆ ನಿಮ್ಮ ಪಾದಗಳ ಬಳಿ ಸಮನಾದ ಗೌರವವೇ! ದೇವ ಮುರಾರಿ ನನಗೆ ಹೆದರಿಕೆಯಾಗುತ್ತಿದೆ ಎಂದು ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.

ಸ್ವಾರಸ್ಯ : ಪ್ರಸ್ತುತ ಮಾತಿನಲ್ಲಿ ಕರ್ಣನು ತಾನು ದೇವ ಸ್ವರೂಪಿಯಾದ ಕೃಷ್ಣನ ಸರಿ ಸಮಾನನಲ್ಲ, ಆತನ ಪಕ್ಕವಲ್ಲ, ಪಾದದ ಬಳಿಯೂ ಕೂಡುವಷ್ಟು ತಾನು ಅರ್ಹನಲ್ಲವೆಂದು ತಿಳಿಸುವಲ್ಲಿ ಹಿರಿಯರೂ, ಗೌರವಾರ್ಹರೊಂದಿಗೆ ನಡೆದು ಕೊಳ್ಳುವ ಕರ್ಣನ ಶ್ರೇಷ್ಠ ವ್ಯಕ್ತಿತ್ವ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

58. "ಕೌರವೇಂದ್ರನ ಕೊಂದೆ ನೀನೆಂದ"

ಆಯ್ಕೆ : ಪ್ರಸ್ತುತ ಸಾಲನ್ನು ಕುಮಾರವ್ಯಾಸನು ಬರೆದ 'ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕೃಷ್ಣನ ಮಾತುಗಳನ್ನು ಸಮಾಧಾನದಿಂದ ಆಲಿಸಿದ ಕರ್ಣನು ಕೃಷ್ಣನಿಗೆ "ಮರುಳು ಮಾಧವ, ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ. ಪಾಂಡವರು, ಕೌರವರು ಸೇವೆಯನ್ನು ನನಗೆ ಮಾಡುವಲ್ಲಿ, ಅವರಿಂದ ಸೇವೆಯನ್ನು ಮಾಡಿಸಿಕೊಳ್ಳುವಲ್ಲಿ ನನಗೆ ಮನಸ್ಸು ಇಲ್ಲ. ಆದರೆ ನನ್ನನ್ನು ಕಾಪಾಡಿದ, ಆಶ್ರಯ ನೀಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುತ್ತೇನೆಂಬ ಅತೀ ಉತ್ಸಾಹದಿಂದ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ" ಎಂದು ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಅಸಾಮಾನ್ಯನೂ ಶೌರ್ಯಕ್ಕೆ, ದಾನಕ್ಕೆ, ಉದಾತ್ತತೆಗೆ, ಕರುಣೆಗೆ ಹೆಸರಾಗಿದ್ದ ಕರ್ಣ ಅಸಹಾಯಕನಾದ ಸ್ಥಿತಿಯಲ್ಲಿಯೂ, ನೋವು, ಸಂಕಟದಿಂದ ಬಳಲುವ ಸಂದರ್ಭದಲ್ಲೂ ಉದಾತ್ತ ವ್ಯಕ್ತಿತ್ವದ ಕರ್ಣನ ಸ್ವಾಮಿನಿಷ್ಠೆಯು ಪ್ರಸ್ತುತ ಮಾತಿನಲ್ಲಿ ವ್ಯಕ್ತಗೊಂಡಿದೆ.

ಪದ್ಯಭಾಗ ಪೂರ್ಣ ಮಾಡುವದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :

59. ಕೊರಳಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಅಥವಾ

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :

60. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಸೂರ್ಯನ ಮಗನಾದ ಕರ್ಣನ ಸಂಗಡ ಕೃಷ್ಣನು ಮೈದುನನ ರೀತಿಯ ಸರಸವನ್ನು ಮಾಡಿ, ಕೈಹಿಡಿದು ಎಳೆದು ರಥದಲ್ಲಿ ಪೀಠದ ಮೇಲೆ ಕುಳ್ಳಿರಿಸುವನು. ಆಗ ನನಗೆ ನಿಮ್ಮ ಪಾದಗಳ ಬಳಿ ಸಮನಾದ ಗೌರವವೇ! ದೇವ ಮುರಾರಿ ನನಗೆ ಹೆದರಿಕೆಯಾಗುತ್ತಿದೆ ಎಂದು ಕರ್ಣ ಹೇಳಿದಾಗ ಕೃಷ್ಣನು ತೊಡೆ ತಾಗುವಂತೆ ಕರ್ಣನ ಹತ್ತಿರ ಬಂದು ಕರ್ಣನಿಗೆ ಹಲವು ಆಮಿಷ ಒಡ್ಡುವನು.

ಶತ್ರುವಿನೊಂದಿಗೆ ಸಮರಕ್ಕಿಳಿದು ಕಾದಾಡುವ ಮುನ್ನ ಶತ್ರುಬಲದ ವಿವಿಧ ಆಯಾಮಗಳನ್ನು ಶಮನಗೊಳಿಸಿದಾಗ ಗೆಲುವು ಸಾಧ್ಯ ಎಂಬುದು ಒಂದು ರಾಜತಂತ್ರ. ಕೌರವನ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಇನ್ನೋರ್ವ ಬಲಶಾಲಿ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಕೃಷ್ಣ ಅದಕ್ಕಾಗಿ ವೇದಿಕೆ ಸಿದ್ಧಪಡಿಸಿ ಕರ್ಣನನ್ನು ತನ್ನ ಬಳಿ ಕರೆದರೂ, ಕರ್ಣನು ತಾನು ದೇವ ಸ್ವರೂಪಿಯಾದ ಕೃಷ್ಣನ ಸರಿ ಸಮಾನನಲ್ಲ, ಆತನ ಪಕ್ಕವಲ್ಲ, ಪಾದದ ಬಳಿಯೂ ಕೂಡುವಷ್ಟು ತಾನು ಅರ್ಹನಲ್ಲವೆಂದು ತಿಳಿಸುವಲ್ಲಿ ಹಿರಿಯರೂ, ಗೌರವಾರ್ಹರೊಂದಿಗೆ ನಡೆದುಕೊಳ್ಳುವ ಕರ್ಣನ ಶ್ರೇಷ್ಠ ವ್ಯಕ್ತಿತ್ವದ ಮೌಲ್ಯ ಅಡಕವಾಗಿದೆ,

61. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಎಲೈ ಕರ್ಣನೇ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಚೆನ್ನಾಗಿ ವಿಚಾರ ಮಾಡಿ ಹೇಳುವುದಾದರೆ ವಂಶದ ಮೂಲದಲ್ಲಿ ಎರಡಿಲ್ಲ. ನಿನ್ನಾಣೆ, ರಾಜ್ಯದ ಒಡೆಯ ನೀನು. ಹಿಂದೆ ನಡೆದು ಹೋದ ಸಂಗತಿಯ ತಿಳಿವಳಿಕೆ ನಿನಗಿಲ್ಲ ಎಂಬುದಾಗಿ ದಾನವ ಧ್ವಂಸಿಯಾದ ಕೃಷ್ಣನು ಸೂರ್ಯಪುತ್ರನಾದ ಕರ್ಣನ ಕಿವಿಯಲ್ಲಿ ಅವನ ಜನ್ಮ ವೃತ್ತಾಂತವನ್ನು ತಿಳಿಸುತ್ತಾ ಅವನಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು.

ಪ್ರಕೃತ ಕಾವ್ಯಭಾಗದಲ್ಲಿ ಪಾಂಡವರ ರಕ್ಷಣೆಗೆ ನಿಂತ ಕೃಷ್ಣನು ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣನಿಗೆ ಜನ್ಮ ರಹಸ್ಯವನ್ನು ತಿಳಿಸುತ್ತ, ಆತನಿಗೆ ವಿವಿಧ ಆಮಿಷಗಳನ್ನು ಒಡ್ಡುವ ಮುಖೇನ ಕರ್ಣನಲ್ಲಿ ಉಭಯ ಸಂಕಟವನ್ನು ತಂದೊಡ್ಡಿರುವ ಮೌಲಿಕ ಅಂಶಗಳು ವ್ಯಕ್ತಗೊಂಡಿವೆ.

62. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಕೃಷ್ಣನು ಕರ್ಣನಿಗೆ ಆತನ ಜನ್ಮರಹಸ್ಯವನ್ನು ಕುರಿತು, "ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಪರಾಕ್ರಮಿಯಾದ ಭೀಮ. ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದನು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲಸಹದೇವ ಇಬ್ಬರು ಹುಟ್ಟಿದರು" ಎಂದು ತಿಳಿಸುವನು.

ಪ್ರಕೃತ ಕಾವ್ಯಭಾಗದಲ್ಲಿ ಪಾಂಡವರ ರಕ್ಷಣೆಗೆ ನಿಂತ ಕೃಷ್ಣನು ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣನಿಗೆ ಜನ್ಮ ರಹಸ್ಯವನ್ನು ತಿಳಿಸುವ ಮೂಲಕ ಕರ್ಣನ ಆವೇಶದ ಬಲವನ್ನು ಕ್ಷೀಣಿಸಿ, ಪಾಂಡವರ ಬಗ್ಗೆ ಆತನಲ್ಲಿ ಅನುಕಂಪ ಹುಟ್ಟುವಂತೆ ಹಾಗೂ ಕರ್ಣನ ಮನಸ್ಸನ್ನು ಅವನಲ್ಲಿನ ನಿಷ್ಠೆಯನ್ನು ಭೇದ ತಂತ್ರದಿಂದ ಒಡೆದಿರುವ ಮೌಲಿಕ ಅಂಶಗಳು ವ್ಯಕ್ತಗೊಂಡಿದೆ.

63. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಕೃಷ್ಣನು ಪುನಃ ಕರ್ಣನಿಗೆ ಆಮಿಷ ಒಡ್ಡುತ್ತಾ, "ನಿನ್ನನ್ನು ಹಸ್ತಿನಾಪುರಕ್ಕೆ ರಾಜನನ್ನಾಗಿ ಮಾಡುತ್ತೇನೆ. ಪಾಂಡವರಾಜರೂ ಕೌರವರಾಜರೂ ನಿನ್ನ ಗದ್ದುಗೆಯನ್ನು ಒಲೈಸುವರು. ನಿನಗೆ ಎರಡು ಸಂತತಿಯವರು ಮರುಮಾತನಾಡದೆ ಸೇವೆಯನ್ನು ಮಾಡುವರು. ಇದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ" ಎಂದು ಹೇಳುತ್ತಾನೆ.

ಪ್ರಕೃತ ಕಾವ್ಯಭಾಗದಲ್ಲಿ ಕೃಷ್ಣನು ಕರ್ಣನಿಗೆ ರಾಜ್ಯದ ಅಧಿಕಾರದ ಗದ್ದುಗೆಯ ಆಮಿಷ ಒಡ್ಡಿ ಕರ್ಣನ ಮನಗೆಲ್ಲಲು ಪ್ರಯತ್ನಿಸಿರುವ ಮೌಲಿಕ ಅಂಶ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

64. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಕೃಷ್ಣನು ಕರ್ಣನಿಗೆ ರಾಜ್ಯದ ಅಧಿಕಾರದ ಗದ್ದುಗೆಯ ಆಮಿಷವನ್ನು ಒಡ್ಡುತ್ತಾ "ನೀನು ರಾಜನಾದರೆ, ಎಡದ ಪಕ್ಕದಲ್ಲಿ ಕೌರವ ರಾಜರ ಸಮೂಹ, ಬಲದಲ್ಲಿ ಪಾಂಡು ಮಕ್ಕಳ ಸಮೂಹ, ಎದುರಿನಲ್ಲಿ ಮಾದ್ರ ಮಾಗಧ ಯಾದವ ಮೊದಲಾದವರು, ಇವರ ನಡುವೆ ನೀನು ರಾಜಸಭೆಯ ಸಿಂಹಾಸನದಲ್ಲಿ ಶೋಭಿಸುವ ವಿಶೇಷ ಸಂಭ್ರಮವನ್ನು ಬಿಟ್ಟು, ದುರ್ಯೋಧನ ಆಜ್ಞಾಪಿಸಲು ಪ್ರಭು, ತಮ್ಮ ಅನುಗ್ರಹ, ಆಗಲಿ ಎಂಬುದು ನಿನಗೆ ಬಹಳ ಕಷ್ಟಕರವಾದುದು" ಎಂದನು.

ಪ್ರಕೃತ ಕಾವ್ಯಭಾಗದಲ್ಲಿ ಪಾಂಡವರ ರಕ್ಷಣೆಗೆ ನಿಂತ ಕೃಷ್ಣನು ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣನಿಗೆ ನೀನು ರಾಜನಾದರೆ ಎಲ್ಲರೂ ಒಪ್ಪುವರು. ಅವರ ಮಧ್ಯದಲ್ಲಿ ಸಿಂಹಾಸನದಲ್ಲಿ ಕುಳಿತು ನೀನು ಅತ್ಯಂತ ಸಂತೋಷದಿಂದ ರಾಜ್ಯಭಾರ ಮಾಬಹುದು ಎಂದು ಕರ್ಣನ ಮನ ಗೆಲ್ಲಲು ಹೂಡಿದ ತಂತ್ರದ ಮೌಲ್ಯ ವ್ಯಕ್ತಗೊಂಡಿದೆ.

65. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಕೃಷ್ಣನ ಆಮಿಷಗಳು ಮತ್ತು ಕೃಷ್ಣ ತಿಳಿಸುವ ತನ್ನ ಜನ್ಮರಹಸ್ಯದಿಂದ ಕರ್ಣನ ಕೊರಳಿನ ರಕ್ತನಾಳಗಳು ಹಿಗ್ಗಿದವು. ಕಂಬನಿಯು ರಭಸದಿಂದ ಮುನ್ನುಗ್ಗಿ ಬಂದು ಅಧಿಕವಾಗಿ ಕರ್ಣನು ನೊಂದುಕೊಂಡನು. ಕರ್ಣನು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡುಂಟಾಯಿತಲ್ಲಾ" ಎಂದು ಸಂಕಟಪಟ್ಟನು. ಹರಿಯ ಈ ವೈರತ್ವದ ಹೊಗೆ ಕಾಣಿಸಿಕೊಳ್ಳದೆ, ಸುಡದೆ ಬಿಡದು. ನನ್ನ ವಂಶವನ್ನು ತಿಳಿಸಿ ಕೊಂದನು. ಇನ್ನು ಹೆಚ್ಚಿಗೆ ಹೇಳುವುದೇನಿದೆ ಎಂದು ತನ್ನ ಮನದಲ್ಲಿ ಚಿಂತಿಸಿದನು.

ಪ್ರಕೃತ ಕಾವ್ಯಭಾಗದಲ್ಲಿ ಪಾಂಡವರ ರಕ್ಷಣೆಗೆ ನಿಂತ ಕೃಷ್ಣ ಒಂದು ಕಡೆ, ಸ್ವಾಮಿನಿಷ್ಠೆಗೆ ಬದ್ಧನಾದ ಅಸಾಮಾನ್ಯನೂ ಶೌರ್ಯಕ್ಕೆ, ದಾನಕ್ಕೆ, ಉದಾತ್ತತೆಗೆ, ಕರುಣೆಗೆ ಹೆಸರಾಗಿದ್ದ ಕರ್ಣ ಇನ್ನೊಂದು ಕಡೆಗೆ. ಶ್ರೀಕೃಷ್ಣನ ಪ್ರಲೋಭನೆಗೆ ಒಳಗಾಗದ ಕರ್ಣನು ಅಸಹಾಯಕನಾದ ಸ್ಥಿತಿಯಲ್ಲಿ ನೋವು, ಸಂಕಟದಿಂದ ಬಳಲುವ ವ್ಯಕ್ತಿತ್ವದ ಹಿರಿಮೆಯ ಮೌಲ್ಯ ಬಿತ್ತರಗೊಂಡಿದೆ.

66. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಅಸಹಾಯಕನಾದ ಸ್ಥಿತಿಯಲ್ಲಿ ನೋವು, ಸಂಕಟದಿಂದ ಬಳಲುವ ಕರ್ಣನನ್ನು ಕುರಿತು "ಕರ್ಣ ನಿನ್ನ ಮನೋವೇದನೆ ಯಾವುದು? ನಿನಗೆ ಕುಂತಿಯ ಮಕ್ಕಳಿಂದ ಸೇವೆ ಮಾಡಿಸಿಕೊಳ್ಳುವುದು ಇಷ್ಟವಿಲ್ಲವೇ? ಇದರಿಂದಾಗಿ ನನಗೆನೂ ನಷ್ಟವಿಲ್ಲ. ನನ್ನಾಣೆಗೂ ಇದು ನಿಜ. ಮಾತನಾಡು ಏಕೆ ನೀನು ಮೌನಿಯಾಗಿರುವೆ? ನೀನು ಭ್ರಮೆಗೊಳಗಾಗುವುದು ಬೇಡ. ನಾನು ನಿನ್ನ ದುರ್ದೆಸೆಯನ್ನು ಬಯಸುವವನೂ ಅಲ್ಲ ನನ್ನ ಮಾತನ್ನು ನೀನು ಕೇಳು" ಎಂದು ಕೃಷ್ಣನು ಹೇಳುವನು.

ಪ್ರಕೃತ ಕಾವ್ಯಭಾಗದಲ್ಲಿ ಸ್ವಾಮಿನಿಷ್ಠೆಗೆ ಬದ್ಧನಾದ ಅಸಾಮಾನ್ಯನೂ ಶೌರ್ಯಕ್ಕೆ, ದಾನಕ್ಕೆ, ಉದಾತ್ತತೆಗೆ, ಕರುಣೆಗೆ ಹೆಸರಾಗಿದ್ದ ಕರ್ಣ ಪ್ರಲೋಭನೆಗೆ ಒಳಗಾಗದೆ ಅಸಹಾಯಕನಾದ ಸ್ಥಿತಿಯಲ್ಲಿ ನೋವು, ಸಂಕಟದಿಂದ ಬಳಲುವ ಸಂದರ್ಭದಲ್ಲಿಯೂ ಪಾಂಡವರ ರಕ್ಷಣೆಗೆ ನಿಂತ ಕೃಷ್ಣ ಪುನಃ ತನ್ನ ಮಾತಿನ ಮೋಡಿಯಿಂದ ಕರ್ಣನನ್ನು ಕಟ್ಟಿಹಾಕಿ ಗೊಂದಲಕ್ಕೀಡು ಮಾಡುವುದು ಮೌಲ್ಯಯುತವಾಗಿ ಬಿಂಬಿತವಾಗಿದೆ.

67. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಶ್ರೀಕೃಷ್ಣನು ಕರ್ಣನಿಗೆ "ಪಾಂಡವರಲ್ಲಿ ನೀನೇ ಹಿರಿಯನಾದುದರಿಂದ ಸಾಮ್ರಾಜ್ಯಕ್ಕೆ ನೀನೇ ಅಧಿಪತಿಯಾಗುವೆ" ಎಂಬ ಆಮಿಷವನ್ನು ಒಡ್ಡುತ್ತಾನೆ. ಕೃಷ್ಣನ ಮಾತುಗಳನ್ನು ಸಮಾಧಾನದಿಂದ ಕೇಳಿದ ಕರ್ಣನು ತನ್‌ನ ಜನ್ಮವತ್ತಾಂತವನ್ನು ತಿಳಿದು "ಕುರುಪತಿಯಾದ ದುರ್ಯೋಧನನಿಗೆ ಕೇಡಾಯಿತು" ಎಂದು ತನ್ನ ಮನದೊಳಗೆ ನೊಂದುಕೊಳ್ಳುತ್ತಾನೆ. ಕೊನೆಗೆ ಕೃಷ್ಣನು "ಯಾಕೆ ಸುಮ್ಮನಿದ್ದಿಯ ಕರ್ಣ. ನಿನ್ನ ಮನಸ್ಸಿನಲ್ಲಾದ ತಲ್ಲಣಗಳೇನು? ಚಿಂತಿಸಬೇಡ. ನಿನ್ನ ಅಪದೆಸೆಯನ್ನು ನಾನು ಬಯಸುವುದಿಲ್ಲ. ಆದರೆ ಮರುಳುತನ ಮಾಡಬೇಡ" ಎಂದು ಹೇಳಿದಾಗ ಕೋಪಗೊಂಡ ಕರ್ಣ ಕೃಷ್ಣನಿಗೆ "ಮರುಳು ಮಾಧವ" ಎಂದು ಕರೆಯುತ್ತಾನೆ. ಮುಂದುವರೆದು "ಈ ಮಹಿಯ ರಾಜ್ಯದ ಸಿರಿ-ಸಂಪತ್ತಿಗೆ ನಾನು ಸೋಲುವುದಿಲ್ಲ. ನನಗೆ ಕೌರವರು ಮತ್ತು ಪಾಂಡವರು ಸೇವಕರಾಗುವುದು ಇಷ್ಟವಿಲ್ಲ. ನನ್ನನ್ನು ಸಾಕಿ ಸಲುಹಿದ ದೊರೆ ದುರ್ಯೋಧನನ ಶತ್ರುಗಳ ಶಿರವನ್ನು ಕಡಿದು ಅರ್ಪಿಸಬೇಕೆಂಬ ಆವೇಶದ ಭರದಲ್ಲಿ ನಾನಿದ್ದೆ, ಆದರೆ ನೀನು ನನ್ನ ಜನ್ಮರಹಸ್ಯವನ್ನು ಹೇಳಿ, ನನ್ನಲ್ಲಿ ಹೋರಾಡುವ ಬಲವನ್ನು ಕ್ಷೀಣಿಸಿ ನನ್ನ ದೊರೆ ದುರ್ಯೋಧನನನ್ನು ಕೊಂದೆ" ಎಂದು ತನ್ನ ಮನಸ್ಸಿನಲ್ಲಾದ ನೋವನ್ನು ಕೃಷ್ಣನ ಬಳಿ ಹೇಳಿಕೊಳ್ಳುತ್ತಾನೆ.

ಪ್ರಸ್ತುತ ಪದ್ಯ ಭಾಗದಲ್ಲಿ ಕೃಷ್ಣನ ಧರ್ಮ ಪ್ರತಿಷ್ಠಾಪನ ಕಾರ್ಯ ಮತ್ತು ದುರ್ಯೋಧನನ ಆಶ್ರಯ ಪಡೆದ ಕರ್ಣನು ತನ್ನ ದೊರೆ, ಅವನ ಮೇಲೆ ಇಟ್ಟಿರುವ ನಂಬಿಕೆಗೆ ದ್ರೋಹ ಬಗೆಯದ ಪ್ರಾಮಾಣಿಕತೆ. ಸ್ವಾಮಿನಿಷ್ಠೆ ಅತ್ಯಮೂಲ್ಯ ಮೌಲ್ಯವಾಗಿ ಅಭಿವ್ಯಕ್ತಗೊಂಡಿದೆ. ಇದರೊಂದಿಗೆ ಉದಾತ್ತ ವ್ಯಕ್ತಿತ್ವವನ್ನು ಹೊಂದಿದ ಕರ್ಣನ ಮುಂದೆ ಕೃಷ್ಣನ ಆಮಿಷಗಳು ಹೇಗೆ ವ್ಯರ್ಥಗೊಂಡಿವೆ ಎಂಬುದು ಮೌಲ್ಯಯುತವಾಗಿ ವ್ಯಕ್ತಗೊಂಡಿದೆ.

68. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಕರ್ಣನು ಕೃಷ್ಣನನ್ನು ಕುರಿತು "ಪರಾಕ್ರಮಿಯಾದ ವೀರ ದುರ್ಯೋಧನನೇ ಒಡೆಯನಾಗಿದ್ದಾನೆ. ಆತನ ಶತ್ರು ನನಗೆ ಶತ್ರು. ಅವನ ಹೊಗಳಿಕೆಯೆ ನನಗೆ ಹೊಗಳಿಕೆ.

ದುರ್ಯೋಧನ ಆದಂತೆ ಆಗುವೆನು. ಕೃಷ್ಣನೇ ಕೇಳು, ನಾಳೆ ಬರಲಿರುವ ಸಮರದಲ್ಲಿ ನನ್ನ ಭುಜಬಲದ ಪರಾಕ್ರಮದ ಶ್ರೇಷ್ಠತನವನ್ನು ಪಾಂಡವರ ಮೇಲೆ ತೋರುವೆನು" ಎಂದನು.

ಪ್ರಕೃತ ಕಾವ್ಯಭಾಗದಲ್ಲಿ ಸ್ವಾಮಿನಿಷ್ಠೆ ಶೌರ್ಯ, ದಾನ, ಉದಾತ್ತತೆ, ಕರುಣೆಗೆ ಹೆಸರಾಗಿದ್ದ ಕರ್ಣ ಅಸಹಾಯಕ ಸ್ಥಿತಿಯಲ್ಲಿ ನೋವು, ಸಂಕಟದಿಂದ ಬಳಲುವ ಸಂದರ್ಭದಲ್ಲೂ ಕೃಷ್ಣನ ಪ್ರಲೋಭನೆಗೆ ಒಳಗಾಗದೆ ತನ್ನ ಮನೋನಿರ್ಧಾರವನ್ನು ಕೃಷ್ಣನಿಗೆ ತಿಳಿಸಿರುವಲ್ಲಿ ಉದಾತ್ತ ವ್ಯಕ್ತಿತ್ವದ ಕರ್ಣನ ಸ್ವಾಮಿನಿಷ್ಠೆಯ ಮುಂದೆ ಕೃಷ್ಣನ ಆಮಿಷ ಹೇಗೆ ವ್ಯರ್ಥಗೊಂಡಿತೆಂಬುದು ಬಿತ್ತರಗೊಂಡಿದೆ. ಅಲ್ಲದೇ ತಾನೂ ಯುದ್ಧ ಮಾಡಿಯೆ ತೀರುತ್ತೇನೆ. ಅಲ್ಲಿ ತನ್ನ ಪರಾಕ್ರಮದ ಪರಾಕಾಷ್ಠೆಯನ್ನು ತೋರಿಸುವುದಾಗಿ ಹೇಳಿರುವುದು ಮೌಲ್ಯಯುತವಾಗಿ ಮೂಡಿಬಂದಿದೆ.

69. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವನು ನಿರಾಕರಿಸುತ್ತಾನೆ. ಯುದ್ಧ ಅನಿವಾರ್ಯವೆಂದಾದಾಗ ಧರ್ಮಪಕ್ಷಪಾತಿಯಾದ ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಂದ ಪಾಂಡವರಿಗೆ ಅಪಾಯವಾಗದಂತೆ ಮಾಡುವುದು ಕವಿ ಕುಮಾರವ್ಯಾಸನು ಬರೆದ 'ಕೌರವೇಂದ್ರನ ಕೊಂದೆ ನೀನು' ಪದ್ಯಪಾಠದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಯುದ್ಧವು ಆನೆ, ಕುದುರೆ, ರಥ ಮತ್ತು ಯೋಧರಿಂದ ಕೂಡಿದ ಚತುರಂಗ ಸೈನ್ಯಬಲದಲ್ಲಿ ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ಕೌರವನ ಉಪಕಾರ ಸಂದು ಹೋಗುವಂತೆ ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ಕೋಟಿಗಟ್ಟಲೇ ವೀರಯೋಧರನ್ನು ಕೊಂದು, ಒಡೆಯನ ಅವಶ್ಯಕತೆಗೆ ಶರೀರವನು ತ್ಯಜಿಸುವೆನು. ಸೂರ್ಯನ ಸಾಕ್ಷಿಯಾಗಿ ನಿನ್ನ (ಪ್ರಾಣಪ್ರಿಯರಾದ) ಯ ವೀರರಾದ ಪಾಂಡವರೈವರನ್ನು ನೋಯಿಸುವುದಿಲ್ಲ" ಎಂದನು.

ಪ್ರಕೃತ ಕಾವ್ಯಭಾಗದಲ್ಲಿ ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣ ತಾನೂ ಯುದ್ಧ ಮಾಡಿಯೇ ತಿರುತ್ತೇನೆ. ಯುದ್ಧಭೂಮಿಯಲ್ಲಿ ತನ್ನ ಪರಾಕ್ರಮದಿಂದ ಮಾರಣಹೋಮವಾಗುವುದು, ಮೃತ್ಯದೇವತೆಗೆ ಔತಣ ನೀಡಿ ಒಡೆಯನ ಋಣ ತೀರಿಸುವುದಾಗಿ ಹೇಳಿರುವಲ್ಲಿ ಯದ್ಧದ ಗಂಭೀರತೆ, ಆತನ ಸ್ವಾಮಿನಿಷ್ಠೆ ಹಾಗೂ ಪಾಂಡವರಿಗೆ ತಾನೂ ತೊಂದರೆ ಕೊಡುವುದಿಲ್ಲ ಎಂಬಲ್ಲಿ ಕರ್ಣನ ಉದಾತ್ತ ವ್ಯಕ್ತಿತ್ವದ ಮೌಲ್ಯ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

70. ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನು ಸಂಧಿಯ ನೆಪದಲ್ಲಿ ದುರ್ಯೋಧನನ ಬಲವನ್ನು ಕುಗ್ಗಿಸುವ ಸಲುವಾಗಿ ಮೊದಲು ವಿದುರನಲ್ಲಿಗೆ ಹೋಗಿ ಆತನು ಯುದ್ಧದಿಂದ ವಿಮುಖವಾಗುವಂತೆ ಮಾಡುತ್ತಾನೆ. ನಂತರ ಕರ್ಣನ ಹತ್ತಿರ ಬಂದ ಶ್ರೀಕೃಷ್ಣನು ಕರ್ಣನಿಗೆ ಹಲವು ಆಸೆ-ಆಮಿಷಗಳನ್ನು ಒಡ್ಡುತ್ತಾನೆ. "ಕರ್ಣ ನಿಮಗೂ ಯಾದವ, ಕೌರವರಿಗೂ ಭೇದವಿಲ್ಲ. ನಿನ್ನಾಣೆ ನೀನು ನಿಜವಾಗಿ ಮೇಧಿನಿಪತಿ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ." ಎಂದು ಹೇಳುತ್ತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಕಲಿಭೀಮ, ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದರು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ ಸಹದೇವರು ಇಬ್ಬರು ಹುಟ್ಟಿದರು. ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವ ರಾಜರು ನಿನ್ನನ್ನು

ಒಲೈಸುವರು. ನಿನಗೆ ಎರಡು ವಂಶವು ಮರು ಮಾತನಾಡದೆ ಸೇವೆಯನ್ನು ಮಾಡುವುವು. ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ ಹೇಳು? ನಿನಗೆ ಎಡಭಾಗದಲ್ಲಿ ಕೌರವರು, ಬಲಭಾಗದಲ್ಲಿ ಪಾಂಡವರು, ಎದುರಿಗೆ ಮಾದ್ರ ಮಾಗದ ಯಾದವಾದಿಗಳು ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆದು, ದುರ್ಯೋಧನನು ನುಡಿಸಲು 'ಒಡೆಯ ಅನುಗ್ರಹವಾಗಲಿ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ?" ಎಂದು ಆಮಿಷ ಒಡ್ಡಿದನು.

71. ಮಹಾಭಾರತದಲ್ಲಿ ಪಾಂಡವರ ಪಾಲಿನ ರಾಜ್ಯವನ್ನು ನೀಡಲು ಕೌರವ ನಿರಾಕರಿಸುತ್ತಾನೆ. ಸಂಧಾನದ ಮೂಲಕ ರಾಜ್ಯವನ್ನು ಮರಳಿ ಪಡೆಯುವ ಯತ್ನವನ್ನು ಧರ್ಮರಾಯನು ಕೃಷ್ಣನ ಮೂಲಕ ಪ್ರಯತ್ನಿಸುತ್ತಾನೆ. ಆದರೆ ಅದು ದುರ್ಯೋಧನನ ಹಠದಿಂದ ತಿರಸ್ಕೃತವಾದಾಗ ಯುದ್ಧ ಅನಿವಾರ್ಯವಾಗುತ್ತದೆ. ಆಗ ಧರ್ಮ ಪ್ರತಿಷ್ಠಾಪನೆಗಾಗಿ ಕೃಷ್ಣನು ಶತ್ರುಗಳ ಬಲವನ್ನು ಕುಗ್ಗಿಸುವ ಭೇದ ತಂತ್ರವನ್ನು ಪ್ರಯೋಗಿಸಲಾರಂಭಿಸುತ್ತಾನೆ. ಆ ಮೂಲಕ ಕರ್ಣನನ್ನು ತನ್ನ ರಥದಲ್ಲಿ ಕೂರಿಸಿಕೊಂಡು ಅವನ ಜನ್ಮವೃತ್ತಾಂತವನ್ನು ಹೇಳುತ್ತಾನೆ. ಅಷ್ಟೇ ಅಲ್ಲದೆ "ಪಾಂಡವರಲ್ಲಿ ನೀನೇ ಹಿರಿಯನಾದುದರಿಂದ ಸಾಮ್ರಾಜ್ಯಕ್ಕೆ ನೀನೇ ಅಧಿಪತಿಯಾಗುವೆ." ಎಂಬ ಆಮಿಷವನ್ನು ಒಡ್ಡುತ್ತಾನೆ. ಕೃಷ್ಣನ ಮಾತುಗಳನ್ನು ಸಮಾಧಾನದಿಂದ ಕೇಳಿದ ಕರ್ಣನು ತನ್ನ ಜನ್ಮವತ್ತಾಂತವನ್ನು ತಿಳಿದು "ಕುರುಪತಿಯಾದ ದುರ್ಯೋಧನನಿಗೆ ಕೇಡಾಯಿತು" ಎಂದು ತನ್ನ ಮನದೊಳಗೆ ನೊಂದುಕೊಳ್ಳುತ್ತಾನೆ. ಕೃಷ್ಣನ ಆಮಿಷ, ಕರ್ಣನಿಗೆ ಕೃಷ್ಣ ತಿಳಿಸುವ ಜನ್ಮರಹಸ್ಯದಿಂದ ಕರ್ಣನ ಕೊರಳಿನ ರಕ್ತನಾಳಗಳು ಹಿಗ್ಗಿದವು, ಕಂಬನಿಯು ರಭಸದಿಂದ ಮುನ್ನುಗ್ಗಿ ಬಂದು ಅಧಿಕವಾಗಿ ಕರ್ಣನು ನೊಂದನು. ಕರ್ಣನು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡುಂಟಾಯಿತಲ್ಲಾ" ಎಂದು ಸಂಕಟಪಟ್ಟನು. ಹರಿಯ ಹಗೆತನ ಹೊಗೆ ಕಾಣಿಸಿಕೊಳ್ಳದೆ, ಸುಡದೆ ಬಿಡುತ್ತದೆಯೇ? ನನ್ನ ವಂಶವನು ತಿಳಿಸಿ ಕೊಂದನು. ಹೆಚ್ಚಿಗೆ ಹೇಳುವುದು ಇನ್ನೇನಿದೆ ಎಂದು ಚಿಂತಿಸಿದನು. ಕೊನೆಗೆ ಕೃಷ್ಣನು "ಯಾಕೆ ಸುಮ್ಮನಿದ್ದಿಯ ಕರ್ಣ. ನಿನ್ನ ಮನಸ್ಸಿನಲ್ಲಾದ ತಲ್ಲಣಗಳೇನು? ಚಿಂತಿಸಬೇಡ. ನಿನ್ನ ಅಪದೆಸೆಯನ್ನು ನಾನು ಬಯಸುವುದಿಲ್ಲ. ಆದರೆ ಮರಳುತನ ಮಾಡಬೇಡ" ಎಂದು ಹೇಳಿದಾಗ ಸಿಟ್ಟಿಗೆದ್ದ ಕರ್ಣ ಕೃಷ್ಣನಿಗೆ "ಮರುಳು ಮಾಧವ" ಎಂದು ಕರೆಯುತ್ತಾನೆ. ಮುಂದುವರೆದು "ಈ ಮಹಿಯ ರಾಜ್ಯದ ಸಿರಿ-ಸಂಪತ್ತಿಗೆ ನಾನು ಸೋಲುವುದಿಲ್ಲ. ನನಗೆ ಕೌರವರು ಮತ್ತು ಪಾಂಡವರು ಸೇವಕರಾಗುವುದು ಇಷ್ಟವಿಲ್ಲ. ನಾನು ಇಲ್ಲಿಯವರೆಗೂ ನನ್ನನ್ನು ಸಾಕಿಸಲುಹಿದ ದೊರೆ ದುರ್ಯೋಧನನ ಶತ್ರುಗಳ ಶಿರವನ್ನು ಕಡಿದು ಅರ್ಪಿಸಬೇಕೆಂಬ ಭರದಲ್ಲಿದ್ದೆ, ಆದರೆ ನೀನು ನನ್ನ ಜನ್ಮರಹಸ್ಯವನ್ನು ಹೇಳಿ ನನ್ನ ದೊರೆ ದುರ್ಯೋಧನನನ್ನು ಕೊಂದೆ" ಎಂದು ತನ್ನ ಮನಸ್ಸಿನಲ್ಲಾದ ನೋವನ್ನು ಕೃಷ್ಣನ ಬಳಿ ಹೇಳಿಕೊಳ್ಳುತ್ತಾನೆ.

ಮಾದರಿ ಉತ್ತರಗಳು : ಪದ್ಯಪಾಠ 4. ಛಲಮನೆ ಮೆಱೆವೆಂ

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. (ಸಿ) ೬ಳ

2. (ಡಿ) ಸಗಣ

3. (ಬಿ) ಉತ್ಪಲ

4. (ಬಿ) ತ ಗಣ

5. (ಸಿ) ೧ಳ

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :

6. ಭಗಣ

7. ಚಂಪಕ

8. ೧ಳಳ

9. ಜ-ರ ಗಣ

10. ೨೨ ಅಕ್ಷರ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

11. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಭೀಷ್ಮಾರಿಗೆ ಹೇಳುವನು.

12. ದಿನಪಸುತ ಎಂದರೆ ಕರ್ಣ.

13. ಅರ್ಜುನ (ಪಾರ್ಥ) ಮತ್ತು ಭೀಮ ಇಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.

14. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ದುರ್ಯೋಧನ.

15. ಅಂತಕಾತ್ಮಜ ಎಂದರೆ ಧರ್ಮರಾಯ (ಯಮನ ಮಗ).

16. ದುರ್ಯೋಧನನು ತನ್ನ ತಂದೆ-ತಾಯಿಯರ ಸಲಹೆ ಮೇರೆಗೆ ರಣರಂಗಕ್ಕೆ ಬರುತ್ತಾನೆ.

17. ದುರ್ಯೋಧನ ಸಲಹೆಯನ್ನು ಪಡೆಯಲು ಭೀಷ್ಮರ ಬಳಿಗೆ ಬರುತ್ತಾನೆ.

18. ಭೀಷ್ಮರು ದುರ್ಯೋಧನನಿಗೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ನೀಡುತ್ತಾರೆ.

19. ದುರ್ಯೋಧನನು ಕರ್ಣನನ್ನು ಕೊಲ್ಲಿಸಿದ ಭೂಮಿಯನ್ನು ಹಾಳುನೆಲಕ್ಕೆ(ಪಾಳ್ನೆಲಕ್ಕೆ) ಹೋಲಿಸುವನು.

20. ದುರ್ಯೋಧನನು ತಾನು ಪಾಂಡವರೊಂದಿಗೆ ಛಲಕ್ಕಾಗಿ ಹೋರಾಟ ಮಾಡುವುದಾಗಿ ತಿಳಿಸುತ್ತಾನೆ.

21. ಅರ್ಜುನ ಮತ್ತು ಭೀಮರು ಕರ್ಣ ಮತ್ತು ದುಶ್ಶಾಸನರನ್ನು ಕೊಂದರು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

22. ದುರ್ಯೋಧನನು ಭೀಷ್ಮಾಚಾರ್ಯರ ಕುರಿತು "ನಾನು ಭೂಮಿಗಾಗಿ ಹೋರಾಡುತ್ತಿಲ್ಲ ಆದರೆ ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ಮಿತ್ರನಾದ ಕರ್ಣನನ್ನು, ಪ್ರೀತಿಯ ಸಹೋದರ ದುಶ್ಶಾಸನನನ್ನು ಕೊಲ್ಲಿಸಿದ ಈ ಭೂಮಿಯೊಡನೆ ಮತ್ತೆ ನಾನು ಬಾಳುವುದುಂಟೆ? ನನ್ನ ಒಡ ಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಆಗ ನನ್ನಲ್ಲಿ ಕೋಪವು ಹುಟ್ಟಿ ಹೊರಹೊಮ್ಮಿತು. ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೆ ಮೆರೆಯುತ್ತೆನೆ" ಎಂದು ಹೇಳುತ್ತಾನೆ.

23. ಭೀಷ್ಮಾಚಾರ್ಯರು ಪಾಂಡವರೊಡನೆ ಸಂಧಿ ಮಾಡಿಕೋ ಎಂದು ಸಲಹೆ ನೀಡಿದಾಗ ದುರ್ಯೋಧನನು ಅದಕ್ಕೆ ಒಪ್ಪುವುದಿಲ್ಲ. ತನ್ನ ಪ್ರೀತಿಯ ಸಹೋದರ ದುಶ್ಶಾಸನ ಮತ್ತು ಸ್ನೇಹಿತ ಕರ್ಣನನ್ನು ಕಳೆದಕೊಂಡ ಆ ಭೂಮಿ ದುರ್ಯೋಧನನಿಗೆ ಪಾಳು ಭೂಮಿಗೆ ಸಮವೆನಿಸುತ್ತದೆ. "ತನ್ನ ಪ್ರೀತಿಗೆ ಪಾತ್ರರಾದವರನ್ನು ಕೊಲ್ಲಿಸಿದ ಭೂಮಿಯೊಡನೆ ಮತ್ತೆ ತಾನು ಸಹಬಾಳ್ವೆಯನ್ನು ಮಾಡುವುದಿಲ್ಲ" ಎನ್ನುತ್ತಾನೆ.

24. "ನನ್ನ ಪ್ರೀತಿಯ ಗೆಳೆಯ ಕರ್ಣನನ್ನೂ ಮತ್ತು ಪ್ರೇಮದ ಸಹೋದರ ದುಶ್ಶಾಸನನ್ನು ಕೊಂದ ಅರ್ಜುನಭೀಮರು ಬದುಕಿರುವರು. ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ, ನಾನು ಸಂಧಿ ಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುತ್ತೇನೆ. ನನ್ನ ದುಃಖ ಆರಿದ ಮೇಲೆ ಅದು ಬೇಡವೆನ್ನುವೆನೆ" ಎಂದು ಪಾರ್ಥಭೀಮರ ಬಗೆಗೆ ದುರ್ಯೋಧನನು ಅಭಿಪ್ರಾಯ ಪಡುತ್ತಾನೆ.

25. ಮಹಾಭಾರತ ಯುದ್ಧದಲ್ಲಿ ತನ್ನೆಲ್ಲ ಸಹೋದರರನ್ನೂ ಆಪ್ತಮಿತ್ರನಾದ ಕರ್ಣನನ್ನು ಕಳೆದುಕೊಂಡ ದುರ್ಯೋಧನನು ತಂದೆತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು "ಪಾಂಡವರನ್ನು ತಾವು ಒಪ್ಪಿಸಿ ಒಪ್ಪಂದ ಮಾಡಿ ಮೊದಲಿನಂತೆ ಕೂಡಿ ನಡೆಯುವ ಹಾಗೆ ಮಾಡುತ್ತೇನೆ. ಅವರು ನನ್ನ ಮಾತನ್ನು ಮೀರುವವರಲ್ಲ. ನೀನು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ" ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ.

26. ದುರ್ಯೋಧನನು "ನನ್ನ ಒಡ ಹುಟ್ಟಿದ ನೂರುಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಆಗ ನನ್ನಲ್ಲಿ ಕೋಪವು ಹುಟ್ಟಿ ಹೊರಹೊಮ್ಮಿತು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ" ಎಂದು ಹೇಳುತ್ತಾನೆ.

27. ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ಭೀಷ್ಮನು ದುರ್ಯೋಧನನಿಗೆ ನೀಡುತ್ತಾನೆ. ಆದರೆ ದುರ್ಯೋಧನ ಇದಕ್ಕೊಪ್ಪದೆ 'ನನ್ನ ಪ್ರಿಯ ಗೆಳೆಯ ಕರ್ಣನನ್ನು ಕೊಂದ ಅರ್ಜುನ, ಪ್ರಿಯ ತಮ್ಮ ದುಶ್ಶಾಸನನನ್ನು ಕೊಂದ ಭೀಮ, ಅವರಿಬ್ಬರು ಇರುವವರೆಗೂ ಸಂಧಿ ಸಾಧ್ಯವಿಲ್ಲ. ಮೊದಲು ಪಾರ್ಥ-ಭೀಮರನ್ನು ಕೊಂದ ಬಳಿಕ ನನ್ನ ದುಃಖ ಕಡಿಮೆಯಾದ ಬಳಿಕ ನಿನ್ನ ಸಲಹೆಯಂತೆ ಅಂತಕಾತ್ಮಜನೊಂದಿಗೆ ಸಂಧಿ ಮಾಡಿಕೊಳ್ಳುವುದಾಗಿ ಹೇಳುತ್ತಾನೆ.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

28. ರನ್ನ : ಕವಿ ರನ್ನನು ಸಾ. ಶ. ಸುಮಾರು ೯೪೯ ರಲ್ಲಿ (೧೦ನೇ ಶತಮಾನದಲ್ಲಿ) ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಈತನು 'ಸಾಹಸ ಭೀಮ ವಿಜಯಂ (ಗದಾಯುದ್ಧ), ಅಜಿತತೀರ್ಥಂಕರ ಪುರಾಣತಿಲಕಂ, ಪರಶುರಾಮಚರಿತಂ, ಚಕ್ರೇಶ್ವರಚರಿತಂ, ರನ್ನಕಂದ' ಎಂಬ ಕೃತಿಗಳನ್ನು ರಚಿಸಿದ್ದಾನೆ. ಇವನಿಗೆ ಚಾಲುಕ್ಯ ದೊರೆ ತೈಲಪನು 'ಕವಿಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿರುವನು.

ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :

29.

ಳ	ಳ	ಳ	
-UU	- U U	- U U	
ಪುಟ್ಟಿದ	ನೂರ್ವರು	ಮೆನ್ನೊಡ	= ೧೨

ಳ	ಳ	ಳ	ಳ	ಳ	
-UU	- U U	- U U	- U U	- -	
ವುಟ್ಟಿದ	ನೂರ್ವರು	ಮಿದಿರ್ಚಿ	ಸತ್ತೊಡೆ	ಕೋಪಂ	= ೨೦

ಛಂದಸ್ಸು : ಇದು ಮಾತ್ರಾಗಣ ಆಧಾರಿತ 'ಕಂದಪದ್ಯ'ದ ಲಕ್ಷ್ಯವಾಗಿದೆ.

30.

ಭ	ರ	ನ	ಭ	ಭ	ರ	ಲ. ಗು.
-UU	-U-	U U U	- U U	-UU	- U -	U -
ಎನ್ನಣು	ಗಾಳನೆ	ನ್ನಣುಗ	ದಮ್ಮನ	ನಿಕ್ಕಿದ	ಪಾರ್ಥಭೀ	ಮರುಂ

ಛಂದಸ್ಸು : ಇದು ಅಕ್ಷರಗಣಗಣ ಆಧಾರಿತ 'ಉತ್ಪಲಮಾಲಾವೃತ್ತ'ದ ಲಕ್ಷ್ಯವಾಗಿದೆ.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು :

31. "ಅಚ್ಚೊದ ಸರೋವರವು ತ್ರೈಲೋಕ್ಯ ಲಕ್ಷ್ಮೀಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು."

ಅಲಂಕಾರ : ಉತ್ಪ್ರೇಕ್ಷಾಲಂಕಾರ'

ಲಕ್ಷಣ : ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ'.

ಸಮನ್ವಯ : ಉಪಮೇಯ : ಅಚ್ಚೊದ ಸರೋವರ

ಉಪಮಾನ : ರನ್ನಗನ್ನಡಿ

ಇಲ್ಲಿ ಉಪಮೇಯವಾದ 'ಅಚ್ಚೊದ ಸರೋವರವನ್ನು' ಉಪಮಾನವಾದ 'ರನ್ನಗನ್ನಡಿ' ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ. ಆದ್ದರಿಂದ ಇದು 'ಉತ್ಪ್ರೇಕ್ಷಾಲಂಕಾರ'ದ ಲಕ್ಷ್ಯವಾಗಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

32. "ನೆಲಕಿಱಿವೆನೆಂದು ಬಗೆದಿರೆ ಚಲಕಿಱಿವೆಂ"

ಆಯ್ಕೆ : ಪ್ರಸ್ತುತ ಸಾಲನ್ನು ರನ್ನನು ಬರೆದ 'ಸಾಹಸಭೀಮ ವಿಜಯಂ' ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಮಹಾಭಾರತ ಯುದ್ಧದಲ್ಲಿ ತನ್ನೆಲ್ಲಾ ಸಹೋದರರನ್ನು ಮತ್ತು ಆಪ್ತಮಿತ್ರನಾದ ಕರ್ಣನನ್ನು ಕಳೆದುಕೊಂಡ ದುರ್ಯೋಧನನು ತಂದೆತಾಯಿಯರ ಸಲಹೆ ಮೇರೆಗೆ ಶರಶಯ್ಯೆದಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬಂದಾಗ, ಭೀಷ್ಮರು ನೀನು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆಗ ದುರ್ಯೋಧನನು ನಿಮಗೆ ನಮಸ್ಕರಿಸಿ ಆಶೀರ್ವಾದ ಪಡೆಯಲು ಬಂದೆನಷ್ಟೇ ಹೊರತು, ನನ್ನ ಶತ್ರುಗಳೊಂದಿಗೆ ಒಪ್ಪಂದ ಮಾಡಿಸಿ ಎಂದು ಕೇಳಲು ಬಂದಿಲ್ಲ. ನೆಲ ಕಿರಿದಾಗಿರಬಹುದು ನನ್ನ ಛಲ ಹಿರಿದಾಗಿದೆ ಅದಕ್ಕಾಗಿ ಹೋರಾಡುತ್ತೇನೆ ಎನ್ನುತ್ತಾನೆ.

ಸ್ವಾರಸ್ಯ : ಛಲದಿಂದ ಬದುಕುವುದು ಕ್ಷತ್ರೀಯನ ಹುಟ್ಟುಗುಣ, ಅದು ಅವನಿಗೆ ಭೂಷಣ ಅದರಲ್ಲೂ ದುರ್ಯೋಧನನ ಛಲದ ಗುಣ ಅವನ ವ್ಯಕ್ತಿತ್ವಕ್ಕೆ ತಕ್ಕುದಾಗಿದೆ ಎಂಬ ಮಾತು ಸ್ವಾರಸ್ಯಕರವಾಗಿ ಮೂಡಿಬಂದಿದೆ.

33. "ಸಮರದೊಳೆನಗಜ್ಜ ಪೇೞಿಮಾವುದು ಕಜ್ಜಂ"

ಆಯ್ಕೆ : ಪ್ರಸ್ತುತ ಸಾಲನ್ನು ರನ್ನನು ಬರೆದ 'ಸಾಹಸಭೀಮ ವಿಜಯಂ' ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಭೀಷ್ಮರು ಪಾಂಡವರನ್ನು ತಾವು ಒಪ್ಪಿಸಿ ಒಪ್ಪಂದ ಮಾಡಿ, ಮೊದಲಿನಂತೆ ಕೂಡಿ ನಡೆಯುವ ಹಾಗೆ ಮಾಡುತ್ತೇನೆ. ನೀನು ಸಂಧಿಯನ್ನು ಮಾಡಿಕೋ ಎಂದಾಗ ಅದಕ್ಕೊಪ್ಪದ ದುರ್ಯೋಧನನು ಯುದ್ಧದಲ್ಲಿ ನನ್ನ ಕಾರ್ಯವನ್ನು ತಿಳಿಸಿ, ನನಗೆ ಆಶೀರ್ವದಿಸಿ ಎಂದಾಗ ರಣರಂಗದಲ್ಲಿ ಯೋಧನಾದವನು ಮಾಡಬೇಕಾದ ಕಾರ್ಯವೇನು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತುಬಂದಿದೆ.

ಸ್ವಾರಸ್ಯ : ಯುದ್ಧವನ್ನು ಮಾಡಲೇಬೇಕು ಎನ್ನುವ ತವಕ ಮತ್ತು ಒಬ್ಬಂಟಿಯಾಗಿದ್ದರೂ ಸಂಧಿ ಮಾಡಿಕೊಳ್ಳಲೊಪ್ಪದ ವೀರತನ ದುರ್ಯೋಧನನ ರಕ್ತದಲ್ಲಿ ಅಡಗಿರುವುದು ಸ್ವಾರಸ್ಯಕರವಾಗಿ ಇಲ್ಲಿ ಅಭಿವ್ಯಕ್ತಗೊಂಡಿದೆ.

34. "ಪಾಂಡವರೊಳಿಱಿದು ಛಲಮನೆ ಮೆರೆವೆಂ"

ಆಯ್ಕೆ : ಪ್ರಸ್ತುತ ಸಾಲನ್ನು ರನ್ನನು ಬರೆದ 'ಸಾಹಸಭೀಮ ವಿಜಯಂ' ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸಂಧಿಗೆ ಒಪ್ಪದ ದುರ್ಯೋಧನನು ಭೀಷ್ಮರನ್ನು ಕುರಿತು ನಾನು ಭೂಮಿಗಾಗಿ ಹೋರಾಡುತ್ತಿಲ್ಲ. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ನನ್ನವರನ್ನು ಕೊಂದ ಪಾಂಡವರನ್ನು ಇರಿದು ಅವರನ್ನು ಕೊಂದು ಛಲವನ್ನು ಮೆರೆಯುತ್ತೇನೆಂದು ಸಂಧಿಗೊಪ್ಪದ ದುರ್ಯೋಧನನು ಛಲದಿಂದ ಹೇಳುವ ಸಂದರ್ಭದಲ್ಲಿ ಈ ಮಾತು ಉಲ್ಲೇಖವಾಗಿದೆ.

ಸ್ವಾರಸ್ಯ : ತನ್ನ ವೈರಿಗಳಾದ ಪಾಂಡವರೊಂದಿಗೆ ಹೋರಾಡುವ ಅಚಲ ವೀರತನ ದುರ್ಯೋಧನನಲ್ಲಿ ಅಡಗಿರುವುದು ಹಾಗೂ ತಾನು ಯುದ್ಧವನ್ನು ಮಾಡಿಯೇ ತೀರುತ್ತೇನೆಂದು ಹೇಳುವಲ್ಲಿ ಅವನ ಗಟ್ಟಿತನ ಸ್ವಾರಸ್ಯಕರವಾಗಿ ಮೂಡಿಬಂದಿದೆ.

35. "ಮೇಣಾಯ್ತು ಕೌರವಂಗವನಿತಳಂ"

ಆಯ್ಕೆ : ಪ್ರಸ್ತುತ ಸಾಲನ್ನು ರನ್ನನು ಬರೆದ 'ಸಾಹಸಭೀಮ ವಿಜಯಂ' ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಭೀಷ್ಮರ ಸಲಹೆಗೆ ಒಪ್ಪದ ಅಂತಿಮವಾಗಿ ಯುದ್ಧವನ್ನು ಮಾಡಿಯೇ ತೀರುತ್ತೇನೆಂದು ತೀರ್ಮಾನಿಸಿದ ದುರ್ಯೋಧನನು ಪಾಂಡವರೊಡನೆ ಕಾದಾಡಿಯೇ ತೀರುತ್ತೇನೆ ಎಂದು ತೀರ್ಮಾನಿಸುತ್ತಾನೆ. ಉಳಿದರೆ ನಾನು ಒಡೆಯನಾಗುತ್ತೇನೆ, ಅಳಿದರೆ ಅವರು ಒಡೆಯರಾಗುತ್ತಾರೆ ಎನ್ನುವ ಸಂದರ್ಭದಲ್ಲಿ ಈ ವಾಕ್ಯವನ್ನು ಪ್ರಸ್ತಾಪಿಸಲಾಗಿದೆ.

ಸ್ವಾರಸ್ಯ : ತಾನು ಇರುವವರೆಗೂ ಪಾಂಡವರೊಂದಿಗೆ ಕೂಡಿ ಬಾಳುವುದು ಅಸಾಧ್ಯದ ಮಾತು ನಾಳೆಯ ಸಮರದ ಸಾರದಲ್ಲಿ ಇದು ತೀರ್ಮಾನವಾಗುತ್ತದೆಯೆಂದು ಹೇಳುವ ಮಾತು ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

36. "ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು"

ಆಯ್ಕೆ : ಪ್ರಸ್ತುತ ಸಾಲನ್ನು ರನ್ನನು ಬರೆದ 'ಸಾಹಸಭೀಮ ವಿಜಯಂ' ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬಾಳಲು ನೀಡಿದ ಭೀಷ್ಮರ ಸಲಹೆಯನ್ನು ಒಪ್ಪದ ದುರ್ಯೋಧನನು ಭೀಷ್ಮರನ್ನು ಕುರಿತು ನಾನು ಭೂಮಿಗಾಗಿ ಹೋರಾಡುತ್ತಿಲ್ಲ. ಛಲಕ್ಕಾಗಿ ಹೋರಾಡುತ್ತೇನೆ. ಕರ್ಣನನ್ನು ಕೊಲ್ಲಿಸಿದ ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ನನ್ನವರನ್ನು ಕೊಂದ ಪಾಂಡವರನ್ನು ಇರಿದು ಅವರನ್ನು ಕೊಂದು ಛಲವನ್ನು ಮೆರೆಯುತ್ತೇನೆಂದು ಹೇಳುವ ಸಂದರ್ಭದಲ್ಲಿ ಈ ಮಾತು ಉಲ್ಲೇಖವಾಗಿದೆ.

ಸ್ವಾರಸ್ಯ : ತನ್ನ ಸಹೋದರ ಮತ್ತು ಸ್ನೇಹಿತನನ್ನು ಕೊಂದ ಭೀಮಾರ್ಜುನರ ಮೇಲಿದ್ದ ಅವನ ಕೋಪ, ಯುದ್ಧವನ್ನು ಮಾಡಿಯೇ ತೀರುತ್ತೇನೆಂಬ ದುರ್ಯೋಧನನ ಛಲದ ಗುಣ ಅವನ ಸ್ವಭಾವಕ್ಕೆ ತಕ್ಕುದಾಗಿ ಮೂಡಿಬಂದಿರುವುದು ಸ್ವಾರಸ್ಯಕರವಾಗಿ ವ್ಯಕ್ತಗೊಂಡಿದೆ.

37. "ಮುನ್ನಮವಂದಿರಿರ್ಬರುಮನಿಕ್ಕುವೆನಿಕ್ಕಿ ಬಲಿಕ್ಕೆ ಸಂಧಿಗೆಯ್ವೊನ್"

ಆಯ್ಕೆ : ಪ್ರಸ್ತುತ ಸಾಲನ್ನು ರನ್ನನು ಬರೆದ 'ಸಾಹಸಭೀಮ ವಿಜಯಂ' ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದುರ್ಯೋಧನನು ಭೀಷ್ಮರ ಸಂಧಾನದ ಸಲಹೆಗೊಪ್ಪದೆ ಅವರನ್ನು ಕುರಿತು "ಅಜ್ಜ, ನನ್ನ ಪ್ರೀತಿಯ ಬಂಟನಾದ (ಸೇವಕನಾದ) ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಶಾಸನನನ್ನು ಕೊಂದ ಅರ್ಜುನ ಭೀಮರು ಇರುವವರೆಗೆ ಹಾಗೂ ನನ್ನ ದೇಹದಲ್ಲಿ ನನ್ನ ಪ್ರಾಣ ಇರುವವರೆಗೆ ನಾನು ಸಂಧಿಯನ್ನು ಒಪ್ಪುವುದಿಲ್ಲ. ತಾತ ಮೊದಲು ಅವರಿಬ್ಬರನ್ನು ಕೊಲ್ಲುತ್ತೇನೆ. ಕೊಂದ ಬಳಿಕ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳುವೆನು. ನನ್ನ ದುಃಖವು ತಣ್ಣಗಾದಾಗ ಸಂಧಿಯನ್ನು ಮಾಡಿಕೊಳ್ಳಲು ನಾನು ಬೇಡವೆನ್ನುತ್ತೇನೆಯೇ?" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ತಾನು ಭೀಮ ಅರ್ಜುನರನ್ನು ಕೊಂದ ಬಳಿಕ ಸಂಧಾನ ಮಾಡಿಕೊಳ್ಳುವುದಾಗಿ ತಿಳಿಸಿರುವಲ್ಲಿ ದುರ್ಯೋಧನನಿಗೆ ಭೀಮಾರ್ಜುನರ ಮೇಲಿನ ಕೋಪದ ತೀವ್ರತೆ ಹಾಗೂ ಕರ್ಣ ದುಶ್ಶಾಸನರ ಮೇಲಿದ್ದ ಅತಿಯಾದ ವಾತ್ಸಲ್ಯ ಅಭಿವ್ಯಕ್ತಗೊಂಡಿದೆ.

38. "ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳಪೆನೇ"

ಆಯ್ಕೆ : ಈ ವಾಕ್ಯವನ್ನು ಮಹಾಕವಿ ರನ್ನ ಬರೆದ ಸಾಹಸ ಭೀಮ ವಿಜಯ " ಎಂಬ ಕೃತಿಯಿಂದ ಆಯ್ದ ' ಛಲಮನೆ ಮೆಜಿವೆಂ ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳುತ್ತಾನೆ. ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರು ದುರ್ಯೋಧನನಿಗೆ ಪಾಂಡವರೊಡನೆ ಸಂಧಿ ಮಾಡಿಕೊಳ್ಳುವ ಸಲಹೆ ನೀಡುತ್ತಾರೆ. ಆದರೆ ದುರ್ಯೋಧನನು ನಾನು ಈ ನೆಲಕ್ಕಾಗಿ ಯುದ್ಧ ಮಾಡುವೆನೆಂದು ಭಾವಿಸಿರುವಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳುಬಿದ್ದ ನೆಲಕ್ಕೆ ಸಮ. ನನ್ನ ಪ್ರೀತಿಯ ಗೆಳೆಯ ಕರ್ಣನನ್ನು ಕೊಲ್ಲಿಸಿದ ನೆಲದೊಡನೆ ಹೊಂದಿಕೊಂದು ಬಾಳುವುದು ಸಾಧ್ಯವೇ ಎಂದು ಹೇಳಿದ ಸಂದರ್ಭವಾಗಿದೆ.

ಸ್ವಾರಸ್ಯ : ಈ ಮಾತಿನಲ್ಲಿ ದುರ್ಯೋಧನನ ನೆಲದ ಮೇಲಿನ ವ್ಯಾಮೋಹಕ್ಕಿಂತ ಛಲದ ಗುಣ. ಗೆಳೆಯ ಕರ್ಣನ ಮೇಲಿದ್ದ ಪ್ರೀತಿ ತೋರುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

ಪದ್ಯಭಾಗ ಪೂರ್ಣ ಮಾಡುವದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :

39. ನೆಲಕಿಱಿವೆನೆಂದು ಬಗೆದಿರೆ
ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ
ಟಿನ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾ¿ೆದಪೆನೇ

ಅಥವಾ

ಪುಟ್ಟಿದ ನೂರ್ವರುಮೆನ್ನೊಡ
ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ
ಪುಟ್ಟಿ ಪೊದಟ್ಟಿದು ಸತ್ತರ್
ಪುಟ್ಟರೆ ಪಾಂಡವರೊಳಿಱಿದು ಛಲಮನೆ ಮೆಱೆವೆಂ

ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :

40. ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ! ಯುದ್ಧಕ್ಕೆ ಕಾರಣ, ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಮಹಾಭಾರತದಲ್ಲಿ ದುರ್ಯೋಧನ ಛಲವನ್ನೇ ಮುಖ್ಯಗುಣವಾಗುಳ್ಳವನು. ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುವ ಸನ್ನಿವೇಶವನ್ನು ಕವಿ ರನ್ನನು ತನ್ನ 'ಛಲಮನೆ ಮೆರೆವೆಂ' ಪದ್ಯಪಾಠದಲ್ಲಿ ಸುಂದರವಾಗಿ ವ್ಯಕ್ತಪಡಿಸಿದ್ದಾನೆ.

ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಭೀಷ್ಮರು ಪಾಂಡವರೊಂದಿಗೆ ಸಂಧಾನದ ಸಲಹೆ ಕೇಳಿದ ದುರ್ಯೋಧನನು ಮುಗುಳು ನಗೆಬೀರಿ, ಭೀಷ್ಮರನ್ನು ಕುರಿತು " ಅಜ್ಜ, ನಿಮಗೆ ವಂದಿಸಿ, ಆಶೀರ್ವಾದವನ್ನು ಪಡೆದು ಹೋಗುವ ನಿರ್ಧಾರದಿಂದ ನಾನು ನಿಮ್ಮ ಬಳಿಗೆ ಬಂದೆನು. ಶತ್ರುಗಳಾದ ಪಾಂಡವರೊಂದಿಗೆ ಸಂಧಿಯ ಒಪ್ಪಂದವನ್ನು ಮಾಡಿಕೊಳ್ಳಲೆಂದು ಬಂದಿಲ್ಲ. ತಾತ ಯುದ್ಧದಲ್ಲಿ ನಾನು ಮಾಡಬೇಕಾದ ಕಾರ್ಯ ಯಾವುದು ಹೇಳಿರಿ. ನಾನು ಆ

ಕಾರ್ಯವನ್ನು ನಿರ್ವಹಿಸುತ್ತೇನೆ ಆದರೆ ಸಂಧಾನ ಅಸಾಧ್ಯ ಎಂದು ದುರ್ಯೋಧನ ಸಂಧಿಗೊಪ್ಪದೆ, ತಾನು ಯುದ್ಧವನ್ನೇ ಮಾಡುವುದಾಗಿ ತಿಳಿಸುತ್ತಾನೆ.

ಪ್ರಕೃತ ಕಾವ್ಯಭಾಗದಲ್ಲಿ ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದ ದುರ್ಯೋಧನ ಯುದ್ಧಮಾಡಿಯೇ ತೀರಬೇಕೆಂಬಲ್ಲಿ ಅವನ 'ಛಲ' ಅವನ ಸ್ವಭಾವಕ್ಕೆ ತಕ್ಕನಾಗಿ ಮೌಲ್ಯಯುತವಾಗಿ ವ್ಯಕ್ತಗೊಂಡಿರುವುದನ್ನು ಕಾಣಬಹುದು.

41. ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ! ಯುದ್ಧಕ್ಕೆ ಕಾರಣ, ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಮಹಾಭಾರತದಲ್ಲಿ ದುರ್ಯೋಧನ ಛಲವನ್ನೇ ಮುಖ್ಯಗುಣವಾಗುಳ್ಳವನು. ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುವ ಸನ್ನಿವೇಶವನ್ನು ಕವಿ ರನ್ನನು ತನ್ನ 'ಛಲಮನೆ ಮೆರೆವೆಂ' ಪದ್ಯಪಾಠದಲ್ಲಿ ಸುಂದರವಾಗಿ ವ್ಯಕ್ತಪಡಿಸಿದ್ದಾನೆ.

ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡಿದಾಗ "ನಾಳಿನ ಯುದ್ಧದಲ್ಲಿ ನನ್ನ ಕೆಲಸ ಯಾವುದು ತಿಳಿಸಿ. ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ನೀವು ತಿಳಿದಿರುವಿರೇ? ಇಲ್ಲ! ನಾನು ಛಲಕ್ಕಾಗಿ ಯುದ್ಧ ಮಾಡುತ್ತೇನೆ. ನನ್ನ ಪಾಲಿಗೆ ಇದು ಪಾಳುಭೂಮಿ. ಮಿತ್ರನಾದ ಸೂರ್ಯಪುತ್ರ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಜೊತೆಗೂಡಿ ಹೊಸಬಾಳು ಬಾಳುತ್ತೇನೆಯೇ?" ಎಂದು ಹೇಳಿದನು.

ಪ್ರಕೃತ ಕಾವ್ಯಭಾಗದಲ್ಲಿ ದುರ್ಯೋಧನ ಭೀಷ್ಮರ ಸಂಧಾನದ ಸಲಹೆಗೊಪ್ಪದೆ, ತಾನು ಭೂಮಿಯ ಮೇಲಿನ ಆಸೆಗೆ ಯುದ್ಧ ಮಾಡುತ್ತಿಲ್ಲ, ಛಲಕ್ಕಾಗಿ ಯುದ್ಧ ಮಾಡುವೆನೆಂದು ತಿಳಿಸಿರುವುದು ಆ ಸಂದರ್ಭದಲ್ಲಿ ಪ್ರಕಟಗೊಳ್ಳುವ ದುರ್ಯೋಧನನ ಛಲದ ಗುಣ, ಅವನ ಸ್ವಭಾವಕ್ಕೆ ತಕ್ಕುದಾಗಿ ಇಲ್ಲಿ ನಿರೂಪಿತವಾಗಿದೆ. ಅಲ್ಲದೆ ಪ್ರಿಯ ಗೆಳೆಯನಾದ ಕರ್ಣನನ್ನು ಕೊಲ್ಲಿಸಿದ ಭೂಮಿಯನ್ನು ಪಾಳುಭೂಮಿಗೆ ಹೋಲಿಸಿರುವುದು ಔಚಿತ್ಯಪೂರ್ಣವಾಗಿ ಮೂಡಿಬಂದಿದೆ.

42. ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ! ಯುದ್ಧಕ್ಕೆ ಕಾರಣ, ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಮಹಾಭಾರತದಲ್ಲಿ ದುರ್ಯೋಧನ ಛಲವನ್ನೇ ಮುಖ್ಯಗುಣವಾಗುಳ್ಳವನು. ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುವ ಸನ್ನಿವೇಶವನ್ನು ಕವಿ ರನ್ನನು ತನ್ನ 'ಛಲಮನೆ ಮೆರೆವೆಂ' ಪದ್ಯಪಾಠದಲ್ಲಿ ಸುಂದರವಾಗಿ ವ್ಯಕ್ತಪಡಿಸಿದ್ದಾನೆ.

ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಭೀಷ್ಮರ ಸಂಧಾನದ ಸಲಹೆಗೊಪ್ಪದ ದುರ್ಯೋಧನನು ಅವರನ್ನು ಕುರಿತು "ಅಜ್ಜ, ನನ್ನ ಪ್ರೀತಿಯ ಬಂಟನಾದ (ಸೇವಕನಾದ) ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಶಾಸನನನ್ನು ಕೊಂದ ಅರ್ಜುನ ಭೀಮರು ಇರುವವರೆಗೆ ಹಾಗೂ ನನ್ನ ದೇಹದಲ್ಲಿ ನನ್ನ ಪ್ರಾಣ ಇರುವವರೆಗೆ ನಾನು ಸಂಧಿಯನ್ನು ಒಪ್ಪುವುದಿಲ್ಲ. ತಾತ ಮೊದಲು ಅವರಿಬ್ಬರನ್ನು ಕೊಲ್ಲುತ್ತೇನೆ. ಬಳಿಕ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳುವೆನು. ನನ್ನ ದುಃಖವು ತಣ್ಣಗಾದಾಗ ಸಂಧಿಯನ್ನು ಮಾಡಿಕೊಳ್ಳಲು ನಾನು ಬೇಡವೆನ್ನುತ್ತೇನೆಯೇ?" ಎಂದು ಹೇಳಿದನು.

ಪ್ರಕೃತ ಕಾವ್ಯಭಾಗದಲ್ಲಿ ದುರ್ಯೋಧನ ಭೀಷ್ಮರ ಸಂಧಾನದ ಸಲಹೆಗೊಪ್ಪದೆ, ತಾನು ಭೀಮ ಅರ್ಜುನರನ್ನು ಕೊಂದ ಬಳಿಕ ಸಂಧಾನ ಮಾಡಿಕೊಳ್ಳುವುದಾಗಿ ತಿಳಿಸಿರುವಲ್ಲಿ ದುರ್ಯೋಧನನಿಗೆ ಭೀಮಾರ್ಜುನರ ಮೇಲಿನ ಕೋಪದ ತೀವ್ರತೆ ಹಾಗೂ ಕರ್ಣ ದುಶ್ಶಾಸನರ ಮೇಲಿದ್ದ ಅತಿಯಾದ ವಾತ್ಸಲ್ಯ ಅಭಿವ್ಯಕ್ತಗೊಂಡಿದೆ. ಆ ಸಂದರ್ಭದಲ್ಲಿ ಪ್ರಕಟಗೊಳ್ಳುವ ದುರ್ಯೋಧನನ ಛಲದ ಗುಣ, ಸಮರದ ಅಗತ್ಯತೆ ಅವನ ಸ್ವಭಾವಕ್ಕೆ ತಕ್ಕುದಾಗಿ ಇಲ್ಲಿ ನಿರೂಪಿತವಾಗಿದೆ.

43. ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ! ಯುದ್ಧಕ್ಕೆ ಕಾರಣ, ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಮಹಾಭಾರತದಲ್ಲಿ ದುರ್ಯೋಧನ ಛಲವನ್ನೇ ಮುಖ್ಯಗುಣವಾಗುಳ್ಳವನು. ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುವ ಸನ್ನಿವೇಶವನ್ನು ಕವಿ ರನ್ನನು ತನ್ನ 'ಛಲಮನೆ ಮೆರೆವೆಂ' ಪದ್ಯಪಾಠದಲ್ಲಿ ಸುಂದರವಾಗಿ ವ್ಯಕ್ತಪಡಿಸಿದ್ದಾನೆ.

ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ದುರ್ಯೋಧನನು ಭೀಷ್ಮರ ಸಂಧಾನದ ಸಲಹೆಗೊಪ್ಪದೆ ಅವರನ್ನು ಕುರಿತು "ಹುಟ್ಟಿದ ನೂರು ಜನ ಮಕ್ಕಳು, ನನ್ನ ನೂರು ಜನ ತಮ್ಮಂದಿರು ಶತ್ರುಗಳನ್ನು ಎದುರಿಸಿ ಯುದ್ಧಮಾಡಿ ಸತ್ತರು. ಇದರಿಂದ ನನ್ನಲ್ಲಿ ಕೋಪವು ಹುಟ್ಟಿ ವ್ಯಾಪಿಸಿದೆ. ಸತ್ತವರು ಮತ್ತೆ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಯುದ್ಧಮಾಡಿ, ನನ್ನಲ್ಲಿರುವ ಛಲವನ್ನೇ ಮೆರೆಯುವೆನು" ಎಂದು ಹೇಳಿದನು.

ಪ್ರಕೃತ ಕಾವ್ಯಭಾಗದಲ್ಲಿ ದುರ್ಯೋಧನ ಭೀಷ್ಮರ ಸಂಧಾನದ ಸಲಹೆಗೊಪ್ಪದೆ, ತಾನು ಛಲಕ್ಕಾಗಿ ಯುದ್ಧ ಮಾಡುತ್ತಿರುವೆ, ಅಲ್ಲದೇ ತನ್ನ ಮಕ್ಕಳು ಹಾಗೂ ಸಹೋದರರು ತನಗಾಗಿ ರಣರಂಗದಲ್ಲಿ ಹೋರಾಡಿ ಮಡಿದಿರುವಾಗ ಆ ಸೇಡಿನ ಕೋಪ ತೀರಿಸಿಕೊಳ್ಳಲು ಪಾಂಡವರ ಮೇಲಿನ ಯುದ್ಧ ಅನಿವಾರ್ಯ. ಅಲ್ಲಿ ನನ್ನ ಪರಾಕ್ರಮ ಮೆರೆಯಿಸುತ್ತೇನೆಂದು ಹೇಳುವ ಸಂದರ್ಭದಲ್ಲಿ ಪ್ರಕಟಗೊಳ್ಳುವ ದುರ್ಯೋಧನನ ಛಲದ ಗುಣ, ಅವನ ಸ್ವಭಾವಕ್ಕೆ ತಕ್ಕುದಾಗಿ ಇಲ್ಲಿ ನಿರೂಪಿತವಾಗಿದೆ.

44. ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ! ಯುದ್ಧಕ್ಕೆ ಕಾರಣ, ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಮಹಾಭಾರತದಲ್ಲಿ ದುರ್ಯೋಧನ ಛಲವನ್ನೇ ಮುಖ್ಯಗುಣವಾಗುಳ್ಳವನು. ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುವ ಸನ್ನಿವೇಶವನ್ನು ಕವಿ ರನ್ನನು ತನ್ನ 'ಛಲಮನೆ ಮೆರೆವೆಂ' ಪದ್ಯಪಾಠದಲ್ಲಿ ಸುಂದರವಾಗಿ ವ್ಯಕ್ತಪಡಿಸಿದ್ದಾನೆ.

ದುರ್ಯೋಧನನು ಭೀಷ್ಮರ ಸಂಧಾನದ ಸಲಹೆಗೊಪ್ಪದೆ ಅವರನ್ನು ಕುರಿತು "ಅಜ್ಜ, ನಾನು ಪಾಂಡವರೊಡನೆ ಯುದ್ಧ ಮಾಡದೆ ಇರುವುದಿಲ್ಲ. ಇಂದಿನ ಯುದ್ಧದಲ್ಲಿ ಒಂದೋ ಪಾಂಡವರು ಭೂಮಿಗೆ ಒಡೆಯರಾಗುವರು ಅಥವಾ ನಾನು ಭೂಮಿಗೆ ಒಡೆಯನಾಗುವೆನು. ಭೂಮಿಯನ್ನು ಪಾಂಡವರೊಂದಿಗೆ ಪಾಲು ಮಾಡಿಕೊಂಡು ಪಾಂಡವರ ಜೊತೆಯಲ್ಲಿ ಆಳುವ ಮಾತೇ ಇಲ್ಲ. ಆದ್ದರಿಂದ ನಾನು ಯುದ್ಧವನ್ನು ಮಾಡುವೆನು" ಎಂದು ಹೇಳಿದನು.

ಪ್ರಕೃತ ಕಾವ್ಯಭಾಗದಲ್ಲಿ ದುರ್ಯೋಧನ ಭೀಷ್ಮರ ಸಂಧಾನದ ಸಲಹೆಗೊಪ್ಪದೆ, ತಾನು ಛಲಕ್ಕಾಗಿ ಯುದ್ಧ ಮಾಡುತ್ತಿದ್ದೇನೆ. ಯದ್ಧದಲ್ಲಿ ವೀರ ಮರಣ ಇಲ್ಲವೇ ವಿಜಯ. ತಾನೂ ಯುದ್ಧ ಮಾಡಿಯೇ ತಿರುತ್ತೇನೆ ಎಂಬ ಸಂದರ್ಭದಲ್ಲಿ ಪ್ರಕಟಗೊಳ್ಳುವ ದುರ್ಯೋಧನನ ಮನೋನಿರ್ಧಾರ, ಅವನ ಸ್ವಭಾವಕ್ಕೆ ತಕ್ಕುದಾಗಿ ಇಲ್ಲಿ ಮೌಲ್ಯಯುತವಾಗಿ ನಿರೂಪಿತವಾಗಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

45. ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರು ನೀನು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆಗ ದುರ್ಯೋಧನ ಅದಕ್ಕೊಪ್ಪದೆ ಅಜ್ಜಾ, ನಾನು ನಿಮಗೆ ನಮಸ್ಕರಿಸಿ ಹೋಗಲೆಂದು ಇಲ್ಲಿಗೆ ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದಿಲ್ಲ. ನಾನು ಭೂಮಿಗಾಗಿ ಹೋರಾಡುತ್ತಿಲ್ಲ ಆದರೆ ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ಕರ್ಣನನ್ನು ಕೊಲಿಸಿದ ಭೂಮಿಯೊಡನೆ ಮತ್ತೇ ನಾನು ಬಾಳುವುದಂಟೆ? ನನ್ನ ಪ್ರೀತಿಯ ಗೆಳೆಯ ಕರ್ಣನನ್ನೂ ಮತ್ತು ಪ್ರೀತಿಯ ಸಹೋದರ ದುಶ್ಶಾಸನನ್ನು ಕೊಂದ ಅರ್ಜುನ-ಭೀಮರು ಬದುಕಿರುವವರೆಗೆ ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ, ನಾನು ಸಂಧಿ ಮಾಡಿಕೊಳ್ಳಲು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನು ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳೋಣ. ನನ್ನ ದುಃಖ ಆರಿದ ಮೇಲೆ ಅದು ಬೇಡವೆನ್ನುವೆನೆ ಎಂದು ಹೇಳುವನು. ನನ್ನ ಒಡ ಹುಟ್ಟಿದ ನೂರುಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಆಗ ನನ್ನಲ್ಲಿ ಕೋಪವು ಹುಟ್ಟಿ ಹೊರಹೊಮ್ಮಿತು. ಸತ್ತವರೇನು ಮತ್ತೇ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ. ಪಾಂಡವರೊಡನೆ ಕಾದಾಡಿಯೇ ತೀರುತ್ತೇನೆ. ಯುದ್ಧದಲ್ಲಿ ತಾನು ಉಳಿದು ತಾನು ಭೂಮಿಗೆ ಒಡೆಯನಾಗಬೇಕು ಅಥವಾ ಪಾಂಡವರು ಉಳಿದು ಅವರು ಭೂಮಿಗೆ ಒಡೆಯರಾಗಬೇಕು ಎನ್ನುವಲ್ಲಿ ದುರ್ಯೋಧನನು ಯುದ್ಧವು ನಡೆಯುವುದು ನಿಶ್ಚಿತ ಎಂಬುದನ್ನು ತಿಳಿಸುತ್ತ ಸೋಲು ಗೆಲುವಿಗೂ ತಾನು ಬದ್ಧ ಎಂದು ಹೇಳುವಲ್ಲಿ ಬಂದದ್ದನ್ನು ಅನುಭವಿಸಬೇಕೆಂಬ ಛಲದ ದೃಡತೆಯನ್ನು ವ್ಯಕ್ತಪಡಿಸಿರುವನು.

46. ಮಹಾಭಾರತ ಯುದ್ಧದಲ್ಲಿ ತನ್ನೆಲ್ಲ ಸಹೋದರರನ್ನೂ ಆಪ್ತಮಿತ್ರನಾದ ಕರ್ಣನನ್ನು ಕಳೆದುಕೊಂಡ ದುರ್ಯೋಧನನು ತಂದೆತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆದಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು "ಪಾಂಡವರನ್ನು ತಾವು ಒಪ್ಪಿಸಿ ಒಪ್ಪಂದ ಮಾಡಿ ಮೊದಲಿನಂತೆ ಕೂಡಿ ನಡೆಯುವ ಹಾಗೆ ಮಾಡುತ್ತೇನೆ. ಅವರು ನನ್ನ ಮಾತನ್ನು ಮೀರುವವರಲ್ಲ. ನೀನು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿಮಾಡಿಕೊಂಡು ಬದುಕಬೇಕೆಂಬ" ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಇಲ್ಲಿ ಭೀಷ್ಮರು ಯುದ್ಧದಿಂದ ಮುಂದಾಗುವ ಅನಾಹುತ ಮತ್ತು ಪಾಂಡವರ ಮೇಲೆ ಅವರಿಗಿದ್ದ ನಂಬಿಕೆ ವ್ಯಕ್ತಪಡಿಸಿದ್ದಾರೆ. ಆದರೆ ದುರ್ಯೋಧನ ಅದಕ್ಕೊಪ್ಪದೆ ಅಜ್ಜಾ, ನಾನು ನಿಮಗೆ ನಮಸ್ಕರಿಸಿ ಹೋಗಲೆಂದು ಇಲ್ಲಿಗೆ ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದಿಲ್ಲ ಎಂದು ತನ್ನ ಗಟ್ಟಿಯಾದ ನಿರ್ಧಾರ ಪ್ರಕಟಿಸುತ್ತಾನೆ. ನಾನು ಭೂಮಿಗಾಗಿ ಹೋರಾಡುತ್ತಿಲ್ಲ ಆದರೆ ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು ಎಂದು ತನ್ನ ಛಲದ ಕುರಿತಾದ ಅಭಿಮಾನ

ತಿಳಿಸುತ್ತಾನೆ. ಈ ಭೂಮಿ ನನಗೆ ಪಾಳು ಭೂಮಿಗೆ ಸಮ. ಕರ್ಣನನ್ನು ಕೊಲಿಸಿದ ಭೂಮಿಯೊಡನೆ ಮತ್ತೇ ನಾನು ಬಾಳುವುದುಂಟೆ? ನನ್ನ ಒಡ ಹುಟ್ಟಿದ ನೂರುಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ ಎಂದು ಹೇಳುತ್ತಾ ತನ್ನ ನೋವನ್ನು ವ್ಯಕ್ತಪಡಿಸುತ್ತಾನೆ. ನನ್ನ ಪ್ರೀತಿಯ ಗೆಳೆಯ ಕರ್ಣನನ್ನೂ ಮತ್ತು ಪ್ರೇಮದ ಸಹೋದರ ದುಶ್ಶಾಸನನನ್ನು ಕೊಂದ ಅರ್ಜುನ-ಭೀಮರು ಬದುಕಿರುವವರೆಗೆ ನನ್ನ ದೇಹದಲ್ಲಿ ಪ್ರಾಣ ಇರುವವರೆಗೆ, ನಾನು ಸಂಧಿ ಮಾಡಿಕೊಳ್ಳುವುದಿಲ್ಲ. ನನ್ನ ದುಃಖ ಆರಿದ ಮೇಲೆ ಅದು ಬೇಡವೆನ್ನುವೆನೆ ಎಂದು ಹೇಳುವ ಮೂಲಕ ಪಾರ್ಥ-ಭೀಮರ ಬಗೆಗೆ ದುರ್ಯೋಧನನು ತನಗಿದ್ದ ರೋಷವನ್ನು ತಿಳಿಸುತ್ತಾನೆ. ನನ್ನಲ್ಲಿ ಕೋಪವು ಕೆರಳಿ ಅತಿಶಯವಾಗಿದೆ. ಪಾಂಡವರೊಡನೆ ಕಾದಾಡಿಯೇ ತೀರುತ್ತೇನೆ ಎಂಬ ದೃಢತೆಯನ್ನು ವ್ಯಕ್ತಪಡಿಸುವನು. ಹೀಗೆ ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆ ಸ್ವಾರಸ್ಯಕರವಾಗಿ ಮೂಡಿಬಂದಿದೆ.

ಮಾದರಿ ಉತ್ತರಗಳು : ಪದ್ಯಪಾಠ 5. ಹಸುರು

ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1ಅಂಕ) :

1. (ಎ) ಸೀರೆ
2. (ಸಿ) ತಪಸ್ವಿ
3. (ಎ) ದೃಷ್ಟಿ
4. (ಡಿ) ಬೊಮ್ಮ
5. (ಸಿ) ಕಳಸ

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :

6. ಸಕ್ಕದ
7. ಹಸಾದ
8. ಬೊಮ್ಮ
9. ಎಕ್ಕ
10. ಬೀಯ
11. ದಿಟ್ಟಿ
12. ವಂಧ್ಯಾ
13. ಸಂದೆಯ
14. ತಪಸ್ವಿ
15. ಕಜ್ಜ
16. ಕೊಡಲಿ
17. ಬಂಜೆ
18. ಬಣ್ಣ
19. ಜುದ್ಧ
20. ಬಿಜ್ಜೋಧರ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

21. ಆಶ್ವಯುಜದ ಬತ್ತದಗದ್ದೆಯ ಬಣ್ಣ ಗಿಳಿಯದೆ ಹಸುರಿನಂತಿದೆ.
22. ಕವಿಯು ನೋಡಿದ ಅಡಕೆಯ ತೋಟ ಬನದಂಚಿನಲ್ಲಿದೆ.
23. 'ಹಸುರು' ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿನ ಪ್ರಕೃತಿಯ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.
24. ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಹೊಸಪಚ್ಚೆಯ ಜಮಖಾನೆಯ ರೀತಿ ಕಂಡಿದೆ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

25. ಕವಿಗೆ ನವರಾತ್ರಿಯಲ್ಲಿ ಹಸುರಿನಿಂದ ಕಂಗೊಳಿಸುವ ಭೂಮಿಯಲ್ಲಿ, ನೀಲ ಸಮುದ್ರದಲ್ಲಿ, ಹಸುರಾದ ಕವಿಯ ಹೃದಯಕ್ಕೆ ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು, ಕಾಡಂಚಿನ ಅಡಕೆಯ ತೋಟ, ಹೂವಿನ ಕಂಪಿನಲ್ಲಿ, ಎಲರಿನ ತಂಪಿನಲ್ಲಿ, ಹಕ್ಕಿಯ ಕೊರಳಿನಲ್ಲಿ, ಹೀಗೆ ಆಗಸದಿಂದ ಬಿಸಿಲವರೆಗೂ ಕವಿಗೆ ಹಸುರು ಕಾಣುತ್ತಿದೆ.

26. ಹಸುರಾದ ಭೂಮಿ, ಆಗಸ, ಮುಗಿಲು, ಗದ್ದೆಯ ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು, ಕಾಡಂಚಿನ ಅಡಕೆಯ ತೋಟ ಇವೆಲ್ಲಾ ಕಣ್ಣಿಗೆ ಹಸುರಾಗಿ ಗೋಚರವಾಗಿವೆ. ಹೂವಿನ ಕಂಪಿನ ಹಸುರು ಮೂಗಿಗೆ, ಎಲರಿನ ತಂಪಿನ ಸ್ಪರ್ಶ ಚರ್ಮಕ್ಕೆ, ಹಕ್ಕಿಯ ಕೊರಲಿನ ಚಿಲಿಪಿಲಿ ಗಾನ ಕಿವಿಗೆ, ಶ್ಯಾಮಲ ಸಮುದ್ರದ ಹಸುರು ಕವಿಯಾತ್ಮಕ್ಕೆ ರಸಪಾನ ಮಾಡಿದಂತಾದುದು ನಾಲಗೆಗೆ - ಹೀಗೆ ಪ್ರಕೃತಿಯ ಹಸುರು ಸಕಲ ಇಂದ್ರೀಯಗಳನ್ನೂ ವ್ಯಾಪಿಸಿದೆ ಎಂಬುದನ್ನು ಕವಿ ಕುವೆಂಪು ಅವರು ಅಭೂತಪೂರ್ಣವಾಗಿ ವರ್ಣಿಸಿದ್ದಾರೆ.

27. ಕವಿಯಾತ್ಮವು ಹಸುರುಗಟ್ಟಲು ಆಶ್ವಯುಜ ಮಾಸದ ನವ ರಾತ್ರಿಯಲ್ಲಿ ವಿಶಾಲವಾದ ಶಾಮಲ ಕಡಲು, ಹಸುರಾಗಸ; ಹಸುರು ಮುಗಿಲು; ಹಸುರು ಗದ್ದೆಯ ಬಯಲು; ಹಸುರಿನ ಮಲೆ; ಹಸುರು ಕಣಿವೆ; ಸಂಜೆಯ ಬಿಸಿಲು; ಆಶ್ವಿಜದ ಶಾಲಿವನದ ಗಿಳಿಯ ಹಸುರು ಬಣ್ಣದ ನೋಟ: ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ: ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಪಸರಿಸಿದಂತೆ ಭೂಮಿಯು ಹಸುರುಟ್ಟಿದೆ. ಹಾಗೆ ಹೊಸ ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದ ಗಾನ; ಎತ್ತೆತ್ತ ನೋಡಿದರೂ ಹಸುರು.. ಹಸುರು.. ಹಸುರು.. ಇವೆಲ್ಲ ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾಗಿವೆ.

28. ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಕವಿ ಕುವೆಂಪು ಅವರಿಗುಂಟಾದ ಸೌಂದರ್ಯಾನುಭವ, ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧ ವಿಶೇಷವಾದುದು. ಸಸ್ಯ ಸಮೃದ್ಧಿಯ ಹಸುರೇ ಆಗಸ, ಮುಗಿಲು, ಗದ್ದೆ, ಬಯಲು, ಸಂಜೆ, ಹೂಗಂಪು, ಹಕ್ಕಿಯ ಧ್ವನಿ, ಕಡಲಿನವರೆಗೂ ವ್ಯಾಪಿಸುವ ಮಟ್ಟಿಗೆ ಕವಿ ಹಸುರಿನಲ್ಲಿ ತಲ್ಲೀನರಾಗಿದ್ದಾರೆ.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

29. ಕುವೆಂಪು : ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಸಾ. ಶ. ೧೯೦೪ ಡಿಸೆಂಬರ್ ೨೯ ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ಶ್ರೀಯುತರು 'ಪಕ್ಷಿಕಾಶಿ, ಕೊಳಲು, ಪಾಂಚಜನ್ಯ, ಪ್ರೇಮ ಕಾಶ್ಮೀರ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಯಮನ ಸೋಲು, ಬೆರಳ್ಗೆ ಕೊರಳ್, ನೆನಪಿನ ದೋಣಿಯಲ್ಲಿ, ಶ್ರೀರಾಮಾಯಣ ದರ್ಶನಂ' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ ಮೊದಲಾದ ಪ್ರಶಸ್ತಿಗಳು ಲಭಿಸಿವೆ.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಮಾಡುವುದು :

30. "ಮಾತು ಬಲ್ಲವನಿಗೆ ಜಗಳವಿಲ್ಲ; ಊಟಬಲ್ಲವನಿಗೆ ರೋಗವಿಲ್ಲ."

ಅಲಂಕಾರ : ದೃಷ್ಟಾಂತಾಲಂಕಾರ

ಲಕ್ಷಣ : ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು ದೃಷ್ಟಾಂತಾಲಂಕಾರ.

ಸಮನ್ವಯ : ಉಪಮೇಯ : ಮಾತು ಬಲ್ಲವ

ಉಪಮಾನ : ಊಟ ಬಲ್ಲವ

ಇಲ್ಲಿ ಉಪಮೇಯವಾದ 'ಮಾತು ಬಲ್ಲವ' ಹಾಗೂ ಉಪಮಾನವಾದ 'ಊಟ ಬಲ್ಲವ' ಇಬ್ಬರೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ. ಆದ್ದರಿಂದ ಇದು 'ದೃಷ್ಟಾಂತಾಲಂಕಾರ'ದ ಲಕ್ಷ್ಯವಾಗಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

31. "ಹಸುರಾದುದುಕವಿಯಾತ್ಮಂ"

ಆಯ್ಕೆ : ಪ್ರಸ್ತುತ ಸಾಲನ್ನು 'ಕುವೆಂಪು'ರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ನವರಾತ್ರಿಯ, ನವಧಾತ್ರಿಯ ಈ ಶ್ಯಾಮಲ ವರ್ಣದ ಕಡಲು, ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದ ಗಾನ; ಎತ್ತೆತ್ತ ನೋಡಿದರೂ ಹಸುರು.. ಹಸುರು.. ಹಸುರು.. ಈ ಹಸುರಿನ ವಿಸ್ಮಯವನ್ನು ಕಂಡ ಕವಿಯ ಆತ್ಮ ಹಸುರಾಯಿತು. ಹಸುರಿನ ರಸಪಾನದಲ್ಲಿ ಮಿಂದಿತು. ಎಂದು ಪ್ರಕೃತಿಯಲ್ಲಿ ವ್ಯಾಪಿಸಿರುವ ಹಸುರಿನ ಬಗ್ಗೆ ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ಪ್ರಕೃತಿಯ ಸೌಂದರ್ಯವೆಲ್ಲ ಹಸುರು ಮೇಳೈಸಿಕೊಂಡು ಈ ಭೂಮಿ ಹಚ್ಚ ಹಸುರಿನಿಂದ ಕಂಗೊಳಿಸಿದಾಗ ಮಾತ್ರ ಉಸಿರು ಇರಲು ಸಾಧ್ಯವೆಂಬ ಎಚ್ಚರಿಕೆಯ ಧ್ವನಿ ಹಾಗೂ ಕವಿಯ ಕಲ್ಪನೆ ಕಾವ್ಯ ಸೌಂದರ್ಯದೊಂದಿಗೆ ಹಸುರಿನ ಅಂದರೆ ಕಾಡಿನ ರಕ್ಷಣೆಯ ಅನಿವಾರ್ಯತೆಯನ್ನು ಸೂಚ್ಯವಾಗಿ ತಿಳಿಸಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

32. "ಬೇರೆ ಬಣ್ಣವನೆ ಕಾಣೆ"

ಆಯ್ಕೆ : ಪ್ರಸ್ತುತ ಸಾಲನ್ನು 'ಕುವೆಂಪು'ರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಆಶ್ವೀಜ ಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ; ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸ ಪಚ್ಚೆಯ ಜಮಖಾನೆ ಹರಡಿದಂತೆ ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ಭೂಮಿಯ ಮೇಲೆ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ಕವಿ ಬೇರೆ ಬಣ್ಣಗಳೇ ಕಾಣದಾದವು ಎಂದು ಹೇಳಿರುವಲ್ಲಿ ಅವರ ರಸಸ್ವಾದನೆಯ ಔನ್ನತ್ಯವನ್ನು ಅಭಿವ್ಯಕ್ತಪಡಿಸಿರುವುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

33. "ಹಸುರು ಹಸುರಿಳೆಯುಸಿರೂ"

ಆಯ್ಕೆ : ಪ್ರಸ್ತುತ ಸಾಲನ್ನು 'ಕುವೆಂಪು'ರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರನ್ನು ಕಂಡು ಕವಿ ಮೂಕವಿಸ್ಮಿತರಾಗಿದ್ದಾರೆ. ಕವಿಗೆ ಎಲ್ಲೆಲ್ಲಿಯೂ ಹಸುರು ಬಣ್ಣವೇ ಗೋಚರಿಸುತ್ತಿದೆ. ಹೊಸ ಹೂವಿನ ಕಂಪು, ಬೀಸುವ ಗಾಳಿಯ ತಂಪು, ಹಕ್ಕಿಯ ಕೊರಳಿನಿಂದ ಹೊರಟ ಗಾನದ ಇಂಪು, ಅಲ್ಲದೆ ಇಡೀ ಭೂಮಿಯ ಶ್ವಾಸವೆಲ್ಲಾ ಹಸುರುಮಯವಾಗಿದೆ. ಎಂದು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ಪ್ರಕೃತಿಯ ಸೌಂದರ್ಯವೆಲ್ಲ ಹಸುರು ಮೇಳೈಸಿಕೊಂಡು ಈ ಭೂಮಿ ಹಚ್ಚ ಹಸುರಿನಿಂದ ಕಂಗೊಳಿಸಿದಾಗ ಮಾತ್ರ ಉಸಿರು ಇರಲು ಸಾಧ್ಯವೆಂಬ ಎಚ್ಚರಿಕೆಯ ಧ್ವನಿ ಹಾಗೂ ಕವಿಯ ಕಲ್ಪನೆ ಕಾವ್ಯ ಸೌಂದರ್ಯದೊಂದಿಗೆ ಹಸುರಿನ ಅಂದರೆ ಕಾಡಿನ ರಕ್ಷಣೆಯ ಅನಿವಾರ್ಯತೆಯನ್ನು ಸೂಚ್ಯವಾಗಿ ತಿಳಿಸಿರುವುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

34. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"

ಆಯ್ಕೆ : ಪ್ರಸ್ತುತ ಸಾಲನ್ನು 'ಕುವೆಂಪು'ರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ನವರಾತ್ರಿಯ, ನವಧಾತ್ರಿಯ ಈ ಶ್ಯಾಮಲ ವರ್ಣದ ಕಡಲು, ಹೂವಿನ ಕಂಪು; ತಂಗಾಳಿಯ ತಂಪು; ಹಕ್ಕಿಯ ಇಂಪಾದ ಗಾನ; ಎತ್ತೆತ್ತ ನೋಡಿದರೂ ಹಸುರು.. ಹಸುರು.. ಹಸುರು.. ಅತ್ತ-ಇತ್ತ-ಎತ್ತಲೂ ಹಸುರೇ ಆವರಿಸಿರುವುದನ್ನು ಕಂಡ ಕವಿಯಾತ್ಮವು ಹಸುರುಗಟ್ಟಿತಲ್ಲದೆ ಅವರ ದೇಹದಲ್ಲಿನ ರಕ್ತವೂ ಹಸುರಾಯಿತು ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿ ಕುವೆಂಪುರವರು ಹೇಳಿದ್ದಾರೆ.

ಸ್ವಾರಸ್ಯ : ಹಸುರು ಕೇವಲ ಸಸ್ಯವರ್ಗಕ್ಕೆ ಮಾತ್ರ ಸೀಮಿತವಲ್ಲ ಇಡೀ ಪ್ರಕೃತಿಯ ಚೈತನ್ಯಕ್ಕೆ ಕಾರಣವಾದುದಾಗಿದೆ. ಪ್ರಕೃತಿಗಷ್ಟೇ ಅಲ್ಲದೆ ರಕ್ತದಲ್ಲೂ ಹಸುರು ವ್ಯಾಪಿಸಿದೆ ಎಂಬ ಕವಿಯವಾಣಿಯಿಂದ ಹಸುರಿನ ಸೌಂದರ್ಯ ಮತ್ತು ಹಸುರಿನ ಮಹತ್ವ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

35. "ಗಿಳಿಯೆದೆ ಬಣ್ಣದ ನೋಟ"

ಆಯ್ಕೆ : ಪ್ರಸ್ತುತ ಸಾಲನ್ನು 'ಕುವೆಂಪು'ರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿನ ಕವಿ ಕುವೆಂಪು ಅಲ್ಲಿನ ಕಾಡಿನಂಚಿನಲ್ಲಿದ್ದ ಫಲಭರಿತ ಅಡಕೆಯ ತೋಟ, ಹುಲ್ಲಿನ ಹಾಸುಗಳು ಹೊಸಪಚ್ಚೆಯ ಜಮಖಾನೆ ಪಸರಿಸಿದಂತೆ, ಭತ್ತದ ಗದ್ದೆಯ ಗಿಳಿಯ ಹಸುರು ಬಣ್ಣದ ನೋಟ ಸುಂದರವಾಗಿ ಕಾಣುತ್ತಿತ್ತು ಎಂದು ಕವಿ ಭೂಮಿಯ ಹಸುರಿನಿಂದ ಮೈಮುಚ್ಚಿರುವ ಬಗೆಯನ್ನು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಹಸುರಿನ ವಿವಿಧ ರೂಪಗಳನ್ನು ಗಿಳಿಯೆದೆ, ಪೊಸಪಚ್ಚೆ, ಜಮಖಾನೆ ಮೊದಲಾದವುಗಳ ಮೂಲಕ ಚಿತ್ರಿಸಿ ಕವಿ ಪ್ರಕೃತಿಯ ಆರಾಧನೆ ಆನಂದದ ಸಾಧನ ಎಂಬುದನ್ನು ಮನವರಿಕೆ ಮಾಡಿರುವ ರೀತಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

36. "ಹಸುರು ಸಂಜೆಯೀ ಬಿಸಿಲೂ!"

ಆಯ್ಕೆ : ಪ್ರಸ್ತುತ ಸಾಲನ್ನು 'ಕುವೆಂಪು'ರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಕವಿ ಕುವೆಂಪು

ಅವರಿಗೆ ಆಗಸ ಹಾಗೂ ಆಗಸದಲ್ಲಿನ ಮುಗಿಲ ಬಣ್ಣವು ಹಸುರಾಗಿ ಕಾಣುತ್ತದೆ. ಅಲ್ಲದೇ ಸಂಜೆಯ ಬಿಸಿಲಿನಲ್ಲೂ ಸಹ ಹಸುರು ಕಾಣುತ್ತಿದೆ ಎಂದು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಪ್ರಸ್ತುತ ಕವಿಯ ಈ ಮಾತಿನಲ್ಲಿ ಸಸ್ಯ ಸಮೃದ್ಧಿಯ ಹಸುರೇ ಆಗಸ ಮತ್ತು ಸಂಜೆಯವರೆಗೂ ವ್ಯಾಪಿಸುವ ಮಟ್ಟಿಗೆ ಕವಿ ಹಸುರಿನಲ್ಲಿ ತಲ್ಲೀನರಾಗಿರುವುದು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

ಪದ್ಯಭಾಗ ಪೂರ್ಣ ಮಾಡುವದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :

37. ಹಸುರಾಗಸ; ಹಸುರುಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ ಬಿಸಿಲೂ!

ಅಥವಾ

ಹೊಸ ಹೂವಿನ ಕಂಪು ಹಸುರು,
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು!
ಹಸುರು ಹಸುರಿಳೆಯುಸಿರೂ!

ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :

38. ಕವಿ ಕುವೆಂಪು ಅವರ ಮೆಚ್ಚಿನ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ. ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ಪ್ರಸ್ತುತ 'ಹಸುರು' ಪದ್ಯವು ತೋರಿಸುತ್ತದೆ. ಸಸ್ಯ ಸಮೃದ್ಧಿಯ ಹಸುರಿನಲ್ಲಿ ತಲ್ಲೀನರಾಗಿರುವ ಕವಿ ಕುವೆಂಪು ಅವರ 'ಪ್ರಕೃತಿ ತನ್ಮಯತೆಗೂ', 'ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿಗೂ' ಸಮರ್ಥ ನಿದರ್ಶನವಾಗಿದೆ 'ಹಸುರು' ಪದ್ಯ.

ಕವಿಗಾದ ಅಪೂರ್ವ ಅನುಭವದ ಜೊತೆಗೆ ಎಲ್ಲೆಡೆಗೂ ಮೈಕೊಡವಿ ಬಿದ್ದ ಹಸುರಿನ ಪರಿಚಯವಾಗುವುದು. ನಿತ್ಯ ಪರಿವರ್ತನಾಶೀಲಳಾದ ಪ್ರಕೃತಿ ಅದುವರೆಗಿನ ಮಳೆಯಿಂದ ಮುಕ್ತಳಾಗಿ, ಆಶ್ವಿಜ ಮಾಸದ ಹೊಚ್ಚಹೊಸ ಬಣ್ಣ ತಳೆದು ವಿರಾಜಿಸುತ್ತಿರುವಳು. ಕಡಲಾಗಿ ಹಬ್ಬಿದ ಹಸುರು ರಸ ಋಷಿಯ ದರ್ಶನಕೆ ಹೊಸ ಅನುಭವದ ರಸಪಾನ ಸ್ನಾನ ಮಾಡಿಸಿ ಕವಿಯಾತ್ಮವೂ ಹಸುರಾಗಿದೆ. ಇಲ್ಲಿ ಕವಿಯ ದೃಷ್ಟಿಗೆ ಹಸುರಿನ ಸೌಂದರ್ಯ ಬರಿಯ ಇಂದ್ರೀಯ ಸೌಂದರ್ಯವಾಗಿ ಮಾತ್ರ ಗೋಚರವಾಗಿಲ್ಲ. ಕವಿ ಕಾಣುತ್ತಿರುವುದು ಬರಿಯ ಸುಂದರವಾದ, ಆಕರ್ಷಕವಾದ ಹಸುರನ್ನಲ್ಲ; ಹಾಗಾಗಿದ್ದರೆ ಕವಿಯಾತ್ಮ ಹಸುರಾಗುತ್ತಿರಲಿಲ್ಲ. ಕವಿಯ ಆತ್ಮ ಹಸುರಾದುದು ಕಾಣುವ ಹಸುರಿನ ಆತ್ಮದಲ್ಲಿ ಎಂದರೆ ರಸದಲ್ಲಿ ಒಂದಾದುದರಿಂದ. ಅದ್ದರಿಂದ ಕವಿಗೆ ಇಲ್ಲಿ ಕಂಡದ್ದು ಹಸುರಲ್ಲ, ಹಸುರಾಗಿ ಮೈದೋರಿರುವ ರಸ. ಸೃಷ್ಟಿ ಶಕ್ತಿರೂಪಿಯಾದ ಮೂಲ ಸೌಂದರ್ಯ ಸೃಷ್ಟಿಯ ರಸ ಸೌಂದರ್ಯವಾಗಿ ಹೊಮ್ಮಿ ಹರಿದಿರುವುದನ್ನು ಅನುಭವಿಸಿದ ಕವಿಯ ಆತ್ಮ, ಆ ರಸಪಾನ ಸ್ನಾನದಿಂದ ಹಸುರೇ ಆಗಿದೆ. ಈ ಅನುಭವದಲ್ಲಿ ಕವಿ ಮತ್ತು ಆ ದೃಶ್ಯ ಅಭಿನ್ನ.

ದೃಶ್ಯದ ಮತ್ತು ವ್ಯಕ್ತಿತ್ವದ ಸಂಯೋಗದಿಂದ ಆಗಿರುವ ನಿಷ್ಪತ್ತಿ. ವ್ಯಕ್ತಿ ವೈಶಿಷ್ಟ್ಯವಾದ ಆ ರಸಾನುಭೂತಿಯನ್ನು ಪ್ರತ್ಯೇಕಿಸುವುದು ಸಾಧ್ಯವಲ್ಲ; ಹಾಗೆ ಪ್ರತ್ಯೇಕಿಸಿದರೆ ಅದು ಇರುವುದೂ ಇಲ್ಲ. ಆ ಒಂದು ತಾದಾತ್ಮ್ಯ ಅನುಭವವೇ ಇಲ್ಲಿ ಹಸುರಾದುದೊ ಕವಿಯಾತ್ಮ ರಸಪಾನ ಸ್ನಾನದಲ್ಲಿ ಎಂಬ ಮಾತಿನಲ್ಲಿ ಮೂಡಿಬಂದಿದೆ.

ನವರಾತ್ರಿಯ ಕಪ್ಪುಕಡಲಿನಲ್ಲೂ ಹಸುರನ್ನು ಕಾಣುವ ಕವಿ ಕುವೆಂಪುರವರ ಕವಿಯಾತ್ಮವು ಪ್ರಕೃತಿಯ ರಸಸ್ವಾದನೆಯ ಆನಂದ ಅನುಭವಿಸುವ ಭಾವವು ಪ್ರಸ್ತುತ ಪದ್ಯದಲ್ಲಿ ಮೌಲ್ಯಯುತವಾಗಿ ವ್ಯಕ್ತಗೊಂಡಿದೆ.

39. ಕವಿ ಕುವೆಂಪು ಅವರ ಮೆಚ್ಚಿನ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ. ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ಪ್ರಸ್ತುತ 'ಹಸುರು' ಪದ್ಯವು ತೋರಿಸುತ್ತದೆ. ಸಸ್ಯ ಸಮೃದ್ಧಿಯ ಹಸುರಿನಲ್ಲಿ ತಲ್ಲೀನರಾಗಿರುವ ಕವಿ ಕುವೆಂಪು ಅವರ 'ಪ್ರಕೃತಿ ತನ್ಮಯತೆಗೂ', 'ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿಗೂ' ಸಮರ್ಥ ನಿದರ್ಶನವಾಗಿದೆ 'ಹಸುರು' ಪದ್ಯ.

ಹಸುರಾಗಿರುವ ಆಕಾಶ, ಹಸುರಿನ ಮುಗಿಲು, ಹಚ್ಚಹಸುರಿನ ಗದ್ದೆಯ ಬಯಲು, ಹಸುರಿನಿಂದ ಕಂಗೊಳಿಸುವ ಬೆಟ್ಟಗಳು, ಹಸುರಾಗಿರುವ ಕಣಿವೆಗಳು, ಸಂಜೆಯ ಬಿಸಿಲೂ ಹಸುರಾಗಿ ಕಂಗೊಳಿಸುತ್ತಿವೆ. ಆಶ್ವಯುಜ ಮಾಸದ ಆ ದಿನ ಭತ್ತದ ಗದ್ದೆಗಳ ಹಸುರಾದ ತೋಟಕ್ಕೆ ಬಂದ ಗಿಳಿಗಳ ಬಣ್ಣವು ಕೂಡ ಹಸುರಾಗಿದೆ. ಅದರ ಪಕ್ಕದಲ್ಲಿ ಬನದ (ಕಾಡಿನ) ಅಂಚಿನಲ್ಲಿ(ತುದಿಯಲ್ಲಿ) ಗೊನೆಯನ್ನು ಹೊತ್ತು ನಿಂತಿರುವ ಅಡಕೆಯ ತೋಟ ಮತ್ತು ಅದರಲ್ಲಿ ಬಿಟ್ಟ ಅಡಿಕೆಯ ಗೊನೆಯೂ ಹಸುರಾಗಿದೆ. ಸಮೃದ್ಧವಾಗಿ ಬೆಳೆದು ನಿಂತ ಕಾಡು ಹಸುರಾಗಿದೆ. ಹೀಗೆ ಹಸುರಿನಲ್ಲಿ ತಲ್ಲೀನನಾದ ಕವಿಗೆ ಕಂಡದ್ದೆಲ್ಲವೂ ಹಸುರಾಗಿ ಕವಿಯನ್ನು ವಿಸ್ಮಯಗೊಳಿಸಿದ ಹಸುರಿನ ವರ್ಣನೆ ಇಲ್ಲಿ ಸುಂದರವಾಗಿ ಮೂಡಿಬಂದಿದೆ.

ಈ ಮೇಲಿನ ಪ್ರಸ್ತುತ ಪದ್ಯದಲ್ಲಿ ಭೂಮಿಯ ಮೇಲೆ ಎತ್ತೆತ್ತಲು ವಿವಿಧರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ್ದ ಕವಿಗೆ, ಹಸುರುಟ್ಟ ಮಧುಮಗಳಂತೆ ಭೂಮಿತಾಯಿಯು ಕಂಡಿರುವಳು. ಹಸುರಿನಲ್ಲಿ ಲೀನನಾದ ಕವಿಗೆ ರಸಸ್ವಾದನೆಯ ಔನ್ನತ್ಯದಿಂದಾಗಿ ಬೇರೆಬಣ್ಣಗಳೇ ಅಲ್ಲಿ ಕಾಣದ ಭಾವದ ಮೌಲ್ಯವು ಸ್ವಾರಸ್ಯಪೂರ್ಣವಾಗಿ ಈ ಪದ್ಯದಲ್ಲಿ ಮೂಡಿಬಂದಿದೆ.

40. ಕವಿ ಕುವೆಂಪು ಅವರ ಮೆಚ್ಚಿನ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ. ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ಪ್ರಸ್ತುತ 'ಹಸುರು' ಪದ್ಯವು ತೋರಿಸುತ್ತದೆ. ಸಸ್ಯ ಸಮೃದ್ಧಿಯ ಹಸುರಿನಲ್ಲಿ ತಲ್ಲೀನರಾಗಿರುವ ಕವಿ ಕುವೆಂಪು ಅವರ 'ಪ್ರಕೃತಿ ತನ್ಮಯತೆಗೂ', 'ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿಗೂ' ಸಮರ್ಥ ನಿದರ್ಶನವಾಗಿದೆ 'ಹಸುರು' ಪದ್ಯ.

ಹಸುರು ಸೊಬಗಿನ ನೆಲೆಬೀಡಾದ ಕವಿಶೈಲದಿಂದ ಸುತ್ತಮುತ್ತಲಿನ ಪ್ರಕೃತಿಯು ಸೌಂದರ್ಯ ದೇವತೆಯಾಗಿ ಕಾಣುತ್ತಾಳೆ. ಅಲ್ಲಿರುವ ಹಚ್ಚಹಸುರಿನ ಹುಲ್ಲಿನ ಹಾಸಿಗೆಯು ನಯವಾದ ಹಚ್ಚಹಸುರಿನ ಬಣ್ಣದ ಜಮಖಾನೆಯನ್ನು ಹರಡಿ ಭೂಮಿತಾಯಿಯ ಮೈಮುಚ್ಚಿರುವಂತೆ ಕಾಣುತ್ತಿದೆ. ಹಸಿರನ್ನು ಬಿಟ್ಟು ಬೇರೆ ಯಾವ ಬಣ್ಣವೂ ಕಾಣದ ಕವಿಯ ಆತ್ಮ, ಒಡಲು, ನೆತ್ತರು ಎಲ್ಲವೂ ಹಸಿರುಮಯವಾಗಿದೆ ಎಂದು ಕವಿ ವಿಸ್ಮಿತರಾಗಿದ್ದಾರೆ.

ಈ ಮೇಲಿನ ಪ್ರಸ್ತುತ ಪದ್ಯದಲ್ಲಿ ಭೂಮಿಯ ಮೇಲೆ ಎತ್ತೆತ್ತಲು ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ್ದ ಕವಿಗೆ, ಹಸುರುಟ್ಟ ಮದುಮಗಳಂತೆ ಭೂಮಿತಾಯಿಯು ಕಂಡಿರುವಳು. ಹಸುರಿನಲ್ಲಿ ಲೀನನಾದ ಕವಿಗೆ ರಸಾಸ್ವಾದನೆಯ ಔನ್ನತ್ಯದಿಂದಾಗಿ ಬೇರೆಬಣ್ಣಗಳೇ ಅಲ್ಲಿಕಾಣದ ಭಾವದ ಮೌಲ್ಯವು ಸ್ವಾರಸ್ಯಪೂರ್ಣವಾಗಿ ಈ ಪದ್ಯದಲ್ಲಿ ಮೂಡಿಬಂದಿದೆ.

41. ಕವಿ ಕುವೆಂಪು ಅವರ ಮೆಚ್ಚಿನ ಸ್ಥಳವಾದ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿ ಅವರಿಗುಂಟಾದ ಸೌಂದರ್ಯಾನುಭವ. ಪ್ರಕೃತಿ, ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ಪ್ರಸ್ತುತ 'ಹಸುರು' ಪದ್ಯವು ತೋರಿಸುತ್ತದೆ. ಸಸ್ಯ ಸಮೃದ್ಧಿಯ ಹಸುರಿನಲ್ಲಿ ತಲ್ಲೀನರಾಗಿರುವ ಕವಿ ಕುವೆಂಪು ಅವರ 'ಪ್ರಕೃತಿ ತನ್ಮಯತೆಗೂ', 'ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿಗೂ' ಸಮರ್ಥ ನಿದರ್ಶನವಾಗಿದೆ 'ಹಸುರು' ಪದ್ಯ.

ಹೊಸ ಹೂವಿನಿಂದ ಸೂಸಿ ಬರುವ ಕಂಪು ಹಸುರಾಗಿದೆ. ಎತ್ತೆತ್ತಲೂ ಬೀಸಿ ಬರುವ ಗಾಳಿಯ ತಂಪು ಕೂಡ ಹಸುರಾಗಿದೆ. ಗಿಡಗಂಟೆಯಲ್ಲಿ ಅಡಗಿ ಕೂತು ಹಾಡುತ್ತಿರುವ ಹಕ್ಕಿಯ ಕೊರಳಿನಿಂದ ಹೊರಟ ಗಾನದ ಇಂಪು ಹಸುರಾಗಿದೆ. ಅಲ್ಲದೆ ಇಡೀ ಭೂಮಿಯು ಉಸಿರಾಡುವ ಶ್ವಾಸವೆಲ್ಲಾ ಹಸುರುಮಯವಾಗಿದೆ. ಇಲ್ಲಿ ಹೂವು-ಗಾಳಿ, ಹಕ್ಕಿಯ ಗಾನಗಳಲ್ಲಿ ಬೇರೆ ಬೇರೆ ಅನುಭವವಿದ್ದರೂ ಕವಿಯ ಏಕತಾದೃಷ್ಟಿಯಲ್ಲಿ ಎಲ್ಲದರಲ್ಲೂ ಹಸುರೇ ಕಾಣುತ್ತದೆ. ಹಸುರು ಸಕಲೇಂದ್ರಿಯಗಳನ್ನೂ ವ್ಯಾಪಿಸಿದೆ ಎಂಬ ಕವಿಯ ಕಲ್ಪನೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

ಈ ಮೇಲಿನ ಪ್ರಸ್ತುತ ಪದ್ಯದಲ್ಲಿ ಭೂಮಿಯ ಮೇಲೆ ಎತ್ತೆತ್ತಲು ವಿವಿಧರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ್ದ ಕವಿಗೆ, ಹಸುರುಟ್ಟ ಮದುಮಗಳಂತೆ ಭೂಮಿತಾಯಿಯು ಕಂಡಿರುವಳು. ಹಸುರಿನಲ್ಲಿ ಲೀನನಾದ ಕವಿಗೆ ರಸಾಸ್ವಾದನೆಯ ಔನ್ನತ್ಯದಿಂದಾಗಿ ಬೇರೆಬಣ್ಣಗಳೇ ಅಲ್ಲಿ ಕಾಣದ ಭಾವದ ಮೌಲ್ಯವು ಸ್ವಾರಸ್ಯಪೂರ್ಣವಾಗಿ ಈ ಪದ್ಯದಲ್ಲಿ ಮೂಡಿಬಂದಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

42. ಕವಿ ಕುವೆಂಪುರವರು ತಮ್ಮ ಹಸುರು ಕವನದಲ್ಲಿ ಆಶ್ವೀಜ ಮಾಸದ ನವರಾತ್ರಿಯ ಹಬ್ಬದ ಜೊತೆಗೆ ಪಕೃತಿಯೂ ಹೇಗೆ ಹಸುರಿನಿಂದ ಕಂಗೊಳಿಸುತ್ತದೆ ಎಂಬುದನ್ನು ತುಂಬಾ ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ನೀಲವರ್ಣದ ಸಮುದ್ರದಂತಿರುವ ವನವೆಲ್ಲವೂ ಹಸುರಾಗಿದೆ. ಕವಿಯ ಆತ್ಮಕ್ಕೂ ಕೂಡ ಹಸುರು ಆವರಿಸಿದೆ. ನವರಾತ್ರಿಯಲ್ಲಿ ಹಸುರಾದ ಕವಿಯ ಹೃದಯಕ್ಕೆ ಆಗಸವು ಹಸುರಾಗಿ ಕಾಣುತ್ತದೆ. ಆಗಸದಲ್ಲಿರುವ ಮುಗಿಲು ಹಸುರಾಗಿ, ಬಯಲೆಲ್ಲ ಹಸುರಾಗಿ ಗೋಚರಿಸಿದೆ. ಸುತ್ತಲೂ ಹರಡಿರುವ ಮಲೆನಾಡು (ಕಾಡು) ಹಸುರಿನಿಂದ ಕೂಡಿದೆ. ಬೆಟ್ಟ- ಗುಡ್ಡ, ಕಣಿವೆಗಳೆಲ್ಲವೂ ಹಸುರಾಗಿವೆ. ಸಂಜೆಯ ಬಿಸಿಲು ಕೂಡ ಹಸುರಾಗಿದೆ. ಹೊಸ ಹೂವಿನ ಕಂಪಿಗೂ ಹಸುರು ಆವರಿಸಿದೆ. ಬೀಸುವ ತಂಪಾದ ಗಾಳಿಗೂ ಹಸುರು ವ್ಯಾಪಿಸಿದೆ. ಹಕ್ಕಿಯ ಕೊರಳಿಂದ ಬರುವ ಇಂಪಾದ ಧ್ವನಿ ಹಸುರಾಗಿದೆ. ಇಳೆಯ ಉಸಿರು(ಗಾಳಿ) ಕವಿಯ ದೇಹದಲ್ಲೂ ಸಂಚರಿಸಿ ಅದಕ್ಕೂ ಕೂಡ ಹಸುರು ವ್ಯಾಪಿಸಿದೆ. ಕಡಲಿಗೂ ಹಸಿರು ವ್ಯಾಪಿಸಿದೆ. ಭತ್ತದ ಗದ್ದೆ, ಅಡಿಕೆಯ ತೋಟ, ಗದ್ದೆಗೆ ಹಿಂಡು-ಹಿಂಡಾಗಿ ಬರುವ ಗಿಳಿಗಳ ಸಮೂಹ ಎಲ್ಲವೂ ಹಸುರಾಗಿವೆ. ಹಚ್ಚಹಸುರಿನ ಹುಲ್ಲಿನ ಹಾಸಿಗೆಯು ನಯವಾದ ಹಚ್ಚಹಸುರಿನ ಬಟ್ಟೆಯ ಜಮಖಾನೆಯನ್ನು ಹರಡಿ ಭೂಮಿ ತಾಯಿಯ

ಮೈಮುಚ್ಚಿರುವಂತೆ ಕಾಣುತ್ತಿದೆ. ಎತ್ತ ನೋಡಿದರತ್ತ ಕವಿಯ ಕಣ್ಣಿಗೆ ಹಚ್ಚಹಸುರು ಮತ್ತೇನೂ ಕಾಣದು. ಆದ್ದರಿಂದ ಕವಿಯ ಮನದಲ್ಲಿ ಸರ್ವವೂ ಹಸುರಿನ ಭಾವ ಮೂಡಿ ಒಡಲಿನಲ್ಲಿರುವ ನೆತ್ತರೂ ಹಸುರಾಗಿ ಕವಿಯಾತ್ಮಕ್ಕೂ ಹಸುರು ವ್ಯಾಪಿಸಿದೆ ಎಂದು ಹೇಳಬಹುದು.

43. ಹಸಿರೇ ಉಸಿರು ಎಂಬ ಮಾತಿದೆ. ಹಸುರು ಇಲ್ಲದೇ ಹೋದರೆ ಜೀವ ಸಂಕುಲವೇ ನಾಶವಾಗುತ್ತದೆ. ಜೀವಿಗಳು ಬದುಕಲು, ಅವುಗಳ ಸಂತತಿಯು ಮುಂದುವರೆಯುವಲ್ಲಿ ಹಸುರಿನ ಪಾತ್ರ ಬಹಳ ದೊಡ್ಡದು. ಜೀವ ಜಗತ್ತಿಗೆ ಅತ್ಯಗತ್ಯವಾದ ಆಮ್ಲಜನಕವು ದೊರೆಯುವುದು ಹಸುರಿನಿಂದ. ನಾವು ತಿನ್ನುವ ಆಹಾರದ ಮೂಲ ಹಸುರಾಗಿದೆ. ಆಧುನಿಕತೆ ಬೆಳೆದಂತೆಲ್ಲ ಇತ್ತೀಚಿನ ದಿನಗಳಲ್ಲಿ ಹಸುರು ಕಣ್ಮರೆಯಾಗುತ್ತ ಸಾಗುತ್ತಿದೆ. ನಗರಪ್ರದೇಶ, ವಾಹನ, ರಸ್ತೆ, ಹೀಗೆ ಭೂಮಿಯೂ ತನ್ನ ಹಸುರನ್ನು ಕಳೆದುಕೊಳ್ಳುತ್ತ ಸಾಗುತ್ತಿದೆ. ಪರಿಸರ ನಾಶ ಇಂದಿನ ಎಷ್ಟೋ ಕಾಯಿಲೆಗಳಿಗೆ ಕಾರಣವಾಗಿದೆ. ಬರಗಾಲ ಆವರಿಸುತ್ತಿದೆ. ಅನೇಕ ಜೀವ ಸಂಕುಲ ಅಳಿವಿನಂಚಿನಲ್ಲಿವೆ. ಕೆಲವು ಜೀವಿಗಳ ಸಂತತಿಯೇ ಅಪಾಯಕ್ಕೆ ಸಿಲುಕುತ್ತಿವೆ. ಆದ್ದರಿಂದ ಹಸಿರು ಇಳೆಯ ಉಸಿರಾಗಿದೆ. ಜೀವಿಗಳ ಉಸಿರು ಇರಬೇಕಾದರೆ ಹಸುರು ಬಹಳ ಮುಖ್ಯ. ಆದ್ದರಿಂದ ಭೂಮಿಯ ಮೇಲಿನ ಹಸುರನ್ನು ಕಾಪಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಆದ್ದರಿಂದ ನಾವೆಲ್ಲರು ಗಿಡ-ಮರಗಳನ್ನು ಬೆಳೆಸಿ, ಅರಣ್ಯ ನಾಶವನ್ನು ತಪ್ಪಿಸಿ ಅನೇಕ ಜೀವ ಸಂಕುಲದ ಉಳಿವಿಗೆ ಸಾಕ್ಷಿಯಾಗೋಣ.

44. ಹಬ್ಬದ ಜೊತೆಗೆ ಪಕೃತಿಯೂ ಹೇಗೆ ಹಸುರಿನಿಂದ ಕಂಗೊಳಿಸುತ್ತದೆ ಎಂಬುದನ್ನು ತುಂಬಾ ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ನೀಲವರ್ಣದ ಸಮುದ್ರದಂತಿರುವ ವನವೆಲ್ಲವೂ ಹಸುರಾಗಿದೆ. ಕವಿಯ ಆತ್ಮಕ್ಕೂ ಕೂಡ ಹಸುರು ಆವರಿಸಿದೆ. ನವರಾತ್ರಿಯಲ್ಲಿ ಹಸುರಾದ ಕವಿಯ ಹೃದಯಕ್ಕೆ ಆಗಸವು ಹಸುರಾಗಿ ಕಾಣುತ್ತದೆ. ಆಗಸದಲ್ಲಿರುವ ಮುಗಿಲು ಹಸುರಾಗಿ, ಬಯಲೆಲ್ಲ ಹಸುರಾಗಿ ಗೋಚರಿಸಿದೆ. ಸುತ್ತಲೂ ಹರಡಿರುವ ಮಲೆನಾಡು (ಕಾಡು) ಹಸುರಿನಿಂದ ಕೂಡಿವೆ. ಬೆಟ್ಟ- ಗುಡ್ಡ, ಕಣಿವೆಗಳೆಲ್ಲವೂ ಹಸುರಾಗಿವೆ. ಸಂಜೆಯ ಬಿಸಿಲು ಕೂಡ ಹಸುರಾಗಿದೆ. ಹೊಸ ಹೂವಿನ ಕಂಪಿಗೂ ಹಸುರು ಆವರಿಸಿದೆ. ಬೀಸುವ ತಂಪಾದ ಗಾಳಿಗೂ ಹಸುರು ವ್ಯಾಪಿಸಿದೆ. ಹಕ್ಕಿಯ ಕೊರಳಿಂದ ಬರುವ ಇಂಪಾದ ಧ್ವನಿ ಹಸುರಾಗಿದೆ. ಇಳೆಯ ಉಸಿರು(ಗಾಳಿ) ಕವಿಯ ದೇಹದಲ್ಲೂ ಸಂಚರಿಸಿ ಅದಕ್ಕೂ ಕೂಡ ಹಸುರು ವ್ಯಾಪಿಸಿದೆ. ಕಡಲಿಗೂ ಹಸಿರು ವ್ಯಾಪಿಸಿದೆ. ಭತ್ತದ ಗದ್ದೆ, ಅಡಿಕೆಯ ತೋಟ, ಗದ್ದೆಗೆ ಹಿಂಡು-ಹಿಂಡಾಗಿ ಬರುವ ಗಿಳಿಗಳ ಸಮೂಹ ಎಲ್ಲವೂ ಹಸುರಾಗಿವೆ. ಹಚ್ಚಹಸುರಿನ ಹುಲ್ಲಿನ ಹಾಸಿಗೆಯು ನಯವಾದ ಹಚ್ಚಹಸುರಿನ ಬಟ್ಟೆಯ ಜಮಖಾನೆಯನ್ನು ಹರಡಿ ಭೂಮಿ ತಾಯಿಯ ಮೈಮುಚ್ಚಿರುವಂತೆ ಕಾಣುತ್ತಿದೆ. ಎತ್ತ ನೋಡಿದರತ್ತ ಕವಿಯ ಕಣ್ಣಿಗೆ ಹಚ್ಚಹಸುರು ಕಾಣಿಸಿದೆ. ಆದ್ದರಿಂದ ಕವಿಯ ಮನದಲ್ಲಿ ಸರ್ವವು ಹಸುರಿನ ಭಾವ ಮೂಡಿ ಒಡಲಿನಲ್ಲಿರುವ ನೆತ್ತರೂ ಹಸುರಾಗಿ ಕವಿಯಾತ್ಮಕ್ಕೂ ಹಸುರು ವ್ಯಾಪಿಸಿದೆ ಎಂದು ಹೇಳಬಹುದು.

ಮಾದರಿ ಉತ್ತರಗಳು : ಪದ್ಯಪಾಠ 6. ಹಲಗಲಿ ಬೇಡರು

ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. ವಿಶ್ವಾಸ
2. ಸಕ್ಕರೆ
3. ಕಳುಹಿಸಿದ್ದಾರೆ
4. ಇಲ್ಲದಹಾಗೆ
5. ಮೇಲೆ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

6. ಕುಂಪಣಿ ಸರ್ಕಾರ ನಿಶ್ಶಸ್ತ್ರೀಕರಣದ ಆದೇಶ ಹೊರಡಿಸಿತು.
7. ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಈ ನಾಲ್ವರು ಹಲಗಲಿಯ ಪ್ರಮುಖರು.
8. ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.
9. 'ಹಲಗಲಿಯ ಭಂಟರ ಹತಾರ ಕದನ' ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ.
10. ಹಲಗಲಿ ಗ್ರಾಮವು ಮುಧೋಳ ಸಂಸ್ಥಾನ ದಲ್ಲಿದ್ದು ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.
11. ಹಲಗಲಿಯ ಗ್ರಾಮದ ಹೆಬ್ಬಾಗಿಲಿನ ಬಳಿ ನಿಂತು ಹೆಬಲಕ್(ಹೆನ್ರಿ ಹ್ಯಾವಲಾಕ್) ಸಾಹೇಬನು ಬುದ್ಧಿ ಮಾತನ್ನು ಹೇಳುತ್ತಾನೆ.
12. ಬ್ರಿಟಿಷ್ ಸರ್ಕಾರ ಭಾರತೀಯರ ಮೇಲೆ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ನಿಶ್ಶಸ್ತ್ರೀಕರಣದ ಆದೇಶ ಹೊರಡಿಸಿತು.
13. ಹಲಗಲಿಯ ಬೇಡರು ಕಾರಕೂನನ ಕಪಾಳಕ್ಕೆ ಹೊಡೆದು ನೆಲಕ್ಕೆ ಉರುಳಿಸಿದರು.
14. ಹೆಬಲಕ್(ಹೆನ್ರಿ ಹ್ಯಾವಲಾಕ್) ಸಾಹೇಬನನ್ನು ಜಡಗನು ಗುಂಡಿಕ್ಕಿ ಕೊಂದನು.
15. ಬ್ರಿಟಿಷ್ ಅಧಿಕಾರಿ ಕಾರಸಾಹೇಬನು(ಅಲೆಗ್ಜಾಂಡರ್ ವಿಲಿಯಂ ಕರೆ) ಹಲಗಲಿನ್ನು ಲೂಟಿ ಮಾಡಲು ಆದೇಶಿಸಿದನು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

16 ಕ್ರಿ. ಶ. ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು. ಶಸ್ತಾಸ್ತ್ರಗಳನ್ನು ನೀಡಿದರೆ ತಮ್ಮ ಮೂಲ ಕಸುಬಾದ ಬೇಟೆಗಾರಿಕೆಗೆ ತೊಂದರೆ ಎಂಬುದನ್ನು ಅರಿತು ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದ್ದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

17. ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು. ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

19. ನಿಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು. ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಮಾಡುವುದು :

20. "ಒಳಗಿನ ಮಂದಿ ಗುಂಡ ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಂಕಾರ.

ಸಮನ್ವಯ : ಉಪಮೇಯ : ಒಳಗಿನ ಮಂದಿ ಗುಂಡು ಹೊಡೆಯುವುದು
ಉಪಮಾನ : ಮುಂಗಾರಿನ ಸಿಡಿಲು ಸಿಡಿಯುವುದು
ಉಪಮಾವಾಚಕ : ಹಾಂಗ/ಹಾಗೆ
ಸಮಾನಧರ್ಮ : ಸ್ಪಷ್ಟವಾಗಿಲ್ಲ (ಕ್ಷಿಪ್ರತೆ/ವೇಗ)

ಇಲ್ಲಿ ಉಪಮೇಯವಾದ 'ಒಳಗಿನ ಮಂದಿ ಗುಂಡು ಹೊಡೆಯುವುದನ್ನು,' ಉಪಮಾನವಾದ 'ಮುಂಗಾರಿನಲ್ಲಿ ಸಿಡಿಲು ಸಿಡಿಯುವ ಕ್ರಿಯೆಗೆ' ಹೋಲಿಸಲಾಗಿದೆ. 'ಹಾಗೆ' ಎಂಬ ಉಪಮಾವಾಚಕ ಪದವಿದ್ದು, ಸಮಾನಧರ್ಮ ಲುಪ್ತವಾಗಿರುವುದರಿಂದ ಇದು ಉಪಮಾಲಂಕಾರದ (ಲುಪ್ತೋಪಮಾಲಂಕಾರದ) ಲಕ್ಷ್ಯವಾಗಿದೆ.

21. "ಸಿಡಿಲ ಸಿಡಿದ್ಹಾಂಗ ಗುಂಡ ಸುರಿದಾವ"

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಂಕಾರ.

ಸಮನ್ವಯ : ಉಪಮೇಯ : ಗುಂಡು ಸುರಿಯುವುದು
ಉಪಮಾನ : ಸಿಡಿಲು ಸಿಡಿಯುವುದು
ಉಪಮಾವಾಚಕ : ಹಾಂಗ/ಹಾಗೆ
ಸಮಾನಧರ್ಮ : ಸ್ಪಷ್ಟವಾಗಿಲ್ಲ (ಕ್ಷಿಪ್ರತೆ/ವೇಗ)

ಇಲ್ಲಿ ಉಪಮೇಯವಾದ 'ಗುಂಡು ಸುರಿಯುವುದನ್ನು' ಉಪಮಾನವಾದ 'ಮುಂಗಾರಿನಲ್ಲಿ ಸಿಡಿಲು ಸಿಡಿಯುವ ಕ್ರಿಯೆಗೆ' ಹೋಲಿಸಲಾಗಿದೆ. 'ಹಾಗೆ' ಎಂಬ ಉಪಮಾವಾಚಕ ಪದವಿದ್ದು, ಸಮಾನಧರ್ಮ ಲುಪ್ತವಾಗಿರುವುದರಿಂದ ಇದು ಉಪಮಾಲಂಕಾರದ (ಲುಪ್ತೋಪಮಾಲಂಕಾರದ) ಲಕ್ಷ್ಯವಾಗಿದೆ.

22. "ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಂಕಾರ.

ಸಮನ್ವಯ : ಉಪಮೇಯ : ನೀಚರಿಗೆ ಮಾಡುವ ಉಪಕಾರ
ಉಪಮಾನ : ಹಾವಿಗೆ ಎರೆದ ಹಾಲು
ಉಪಮಾವಾಚಕ : ಅಂತೆ
ಸಮಾನಧರ್ಮ : ಸ್ಪಷ್ಟವಾಗಿಲ್ಲ (ಅಪ್ರಯೋಜಕ)

ಇಲ್ಲಿ ಉಪಮೇಯವಾದ 'ನೀಚರಿಗೆ ಮಾಡುವ ಉಪಕಾರವನ್ನು' ಉಪಮಾನವಾದ 'ಹಾವಿಗೆ ಎರೆದ ಹಾಲಿಗೆ' ಹೋಲಿಸಲಾಗಿದೆ. 'ಅಂತೆ' ಎಂಬ ಉಪಮಾವಾಚಕ ಪದವಿದ್ದು, ಸಮಾನಧರ್ಮ ಲುಪ್ತವಾಗಿರುವುದರಿಂದ ಇದು ಉಪಮಾಲಂಕಾರದ (ಲುಪ್ತೋಪಮಾಲಂಕಾರದ) ಲಕ್ಷ್ಯವಾಗಿದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

23. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"

ಆಯ್ಕೆ : ಪ್ರಸ್ತುತ ಸಾಲನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕ್ರಿ. ಶ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ ಭಾರತೀಯರ ಮೇಲೆ 'ನಿಶ್ಯಸ್ತ್ರೀಕರಣದ' ಆದೇಶವನ್ನು ಹೊರಡಿಸಿತು. ಈ ಆದೇಶದ ಅನ್ವಯ ಬ್ರಿಟಿಷ್ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗಿತ್ತು. ಹೀಗಾಗಿ ಈ ಆದೇಶವನ್ನು ವಿರೋಧಿಸಿ ಭಾರತದಲ್ಲಿ ಅಲ್ಲಲ್ಲಿ ದಂಗೆಗಳಾದವು. ಅವುಗಳಲ್ಲಿ ಹಲಗಲಿಯ ಬೇಡರ ಹೋರಾಟವು ಪ್ರಮುಖವಾದುದು. ಹೀಗೆ ಕಂಪನಿ ಸರ್ಕಾರವು ಜನರಿಂದ ಬಲವಂತವಾಗಿ ಆಯುಧಗಳನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ಭಾರತೀಯರ ಮೇಲಿನ ಬ್ರಿಟಿಷರ ದಬ್ಬಾಳಿಕೆ ಮತ್ತು ದೌರ್ಜನ್ಯ ತಿಳಿಸುವ ಈ ಮಾತು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

24. "ಜೀವ ಸತ್ತು ಹೋಗುವುದು ಗೊತ್ತ" / "ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ"

ಆಯ್ಕೆ : ಪ್ರಸ್ತುತ ಸಾಲನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಬ್ರಿಟಿಷರು ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸುತ್ತಾರೆ. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಗ್ರಾಮದ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಹೋರಾಟ ಮಾಡಲು ನಿರ್ಧರಿಸುತ್ತಾರೆ. ಅಲ್ಲದೇ ತಮ್ಮ ಬಳಿಯಲ್ಲಿರುವ ಆಯುಧಗಳನ್ನು ನೀಡಿದರೆ ತಾವು ಬದುಕಿದ್ದು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಹೋರಾಡಲು ತೀರ್ಮಾನಿಸಿದ್ದು ಮತ್ತು ಅವರು ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು ಎಂಬುದು ಈ ಮೇಲಿನ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

25. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"

ಆಯ್ಕೆ : ಪ್ರಸ್ತುತ ಸಾಲನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಹಲಗಲಿಯ ಬೇಡರು 'ನಿಶ್ಶಸ್ತ್ರೀಕರಣದ' ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಏಳುತ್ತಾರೆ. ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಲ್ಲುತ್ತಾರೆ ಅಲ್ಲದೇ ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲಾವಣಿಕಾರನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮೇಲಿನ ಮಾತಿನಲ್ಲಿ ಕಾಣಬಹುದಾಗಿದೆ

26. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"

ಆಯ್ಕೆ : ಪ್ರಸ್ತುತ ಸಾಲನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕ್ರಿ. ಶ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ ಭಾರತೀಯರ ಮೇಲೆ 'ನಿಶ್ಶಸ್ತ್ರೀಕರಣದ' ಆದೇಶವನ್ನು ಹೊರಡಿಸಿತು. ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದ ಸಂದರ್ಭದಲ್ಲಿ ಹಲಗಲಿಯ ಬೇಡರು ಆದೇಶವನ್ನು ವಿರೋಧಿಸಿ ದಂಗೆ ಏಳುತ್ತಾರೆ. ದಂಗೆಯನ್ನು ಹತ್ತಿಕ್ಕಲು ಬಂದ ಬ್ರಿಟಿಷ್ ಅಧಿಕಾರಿಯನ್ನೇ ಹತ್ಯೆಗೈಯುತ್ತಾರೆ. ಇದರಿಂದ ಕೋಪಗೊಂಡ ಬ್ರಿಟಿಷ್ ಅಧಿಕಾರಿ 'ಕಾರಸಾಹೇಬನು' ಹಲಗಲಿ ಗ್ರಾಮಕ್ಕೆ ಮುತ್ತಿಗೆ ಹಾಕಿ ದ್ವಂಸ ಮಾಡಿ, ಗ್ರಾಮವು ಎಳ್ಳಷ್ಟು ಗುರ್ತು ಉಳಿಯದಂತೆ ಮಾಡಿದ ಕಥಾನಕ ಸಂದರ್ಭವನ್ನು ವರ್ಣಿಸುವ ಸಂದರ್ಭದಲ್ಲಿ ಲಾವಣಿಕಾರನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಬ್ರಿಟಿಷ್ ಅಧಿಕಾರಿಗಳ ದರ್ಪ, ದೌರ್ಜನ್ಯ, ತಿರುಗಿ ಬಿದ್ದವರ ಮೇಲೆ ಕೈಗೊಂಡ ಕ್ರಮ ಹಾಗೂ ಅದನ್ನು ವಿರೋಧಿಸಿ ಪ್ರತಿಭಟನೆ ಮಾಡಿದ ಹಲಗಲಿಯ ವೀರರ ಕೆಚ್ಚೆದೆ ಈ ಮೇಲಿನ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

27. "ಸಿಕ್ಕದ್ದು ತಗೊಂಡು ಸರದನಿಂತರೊ ಊರಿಗೆ ಕೊಳ್ಳಿ ಕೊಟ್ಟಾ"

ಆಯ್ಕೆ : ಪ್ರಸ್ತುತ ಸಾಲನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಹಲಗಲಿಯ ಬೇಡರ ಮೇಲೆ ವೀರ ಅಟ್ಟಹಾಸ ಪ್ರದರ್ಶಿಸಿದ ಬ್ರಿಟಿಷ್ ಸೈನಿಕರು ನಂತರ ಬೇಡರ ಕೃಷಿ ಉಪಕರಣಗಳಾದ ಕೊಡಲಿ, ಕೋರೆ, ಕುಡ, ಕಬ್ಬಿಣ, ಆಹಾರ ಪದಾರ್ಥಗಳಾದ ಮೊಸರು, ಬೆಣ್ಣಿ, ಹಾಲು, ಉಪ್ಪು, ಎಣ್ಣಿ, ಅರಿಷಿಣ, ಜೀರಗಿ, ಅಕ್ಕಿ, ಸಕ್ಕರೆ, ಬೆಲ್ಲ, ದಿನನಿತ್ಯ ಬಳಸುತ್ತಿದ್ದ ವಸ್ತುಗಳಾದ ಗಂಗಳ, ಚೆರಗಿ, ಮಂಗಳ ಸೂತ್ರ, ಬೀಸುವಕಲ್ಲು

ಹೀಗೆ ಸಿಕ್ಕ ಸಿಕ್ಕ ವಸ್ತುಗಳೆಲ್ಲವನ್ನು ದೋಚಿ ಹಲಗಲಿ ಗ್ರಾಮಕ್ಕೆ ಬೆಂಕಿಯನ್ನು ಹಚ್ಚಿದರು ಎಂದು ಹೇಳುವ ಸಂದರ್ಭದಲ್ಲಿ ಲಾವಣಿಕಾರನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸುವ ಬ್ರಿಟಿಷರ ಕ್ರೌರ್ಯದ ಪರಮಾವಧಿ ಕೈಗೆ ಸಿಕ್ಕ ವಸ್ತುಗಳೆಲ್ಲವನ್ನು ದೋಚುವ ನೀಚ ಕೃತ್ಯ ಮೇಲಿನ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

28. "ಬೆನ್ನಬೆನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ಹಂಗ"

ಆಯ್ಕೆ : ಪ್ರಸ್ತುತ ಸಾಲನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಪ್ರವಾಹೋಪಾದಿಯಲ್ಲಿ ಹೆಚ್ಚಿನ ಬ್ರಿಟಿಷ್ ಸೈನ್ಯ ಸನ್ನದ್ಧವಾಗಿ ಹಲಗಲಿಗೆ ಬಂದು ಬೇಡರನ್ನು ಬೆನ್ನು ಹತ್ತಿ, ತಿರು ತಿರುವಿ ಕಡಿದು ಹಾಕಿತು. ಅಲ್ಲದೇ ಸಿಕ್ಕವರನ್ನು ನಡುವೆ ಹಾಕಿಕೊಂಡು ಕರುಣೆ ತೋರದೆ ಗುಂಡು ಹಾರಿಸಿ ಕೊಂದು ಹಾಕಿತು. ಚಟೇಕಾರರು ಊರನ್ನು ಪಹರೆ ಕಾಯುವಾಗ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿದರು. ಆಗ ಗ್ರಾಮದ ಅಗಸಿಗೆ ಬಂದ ಬ್ರಿಟಿಷ್ ಅಧಿಕಾರಿ ಹೆಬಲಕನು ಬೇಡರಿಗೆ ಬುದ್ಧಿಮಾತನ್ನು ಹೇಳುತ್ತ, ಶರಣಾಗಲು ತಿಳಿಸುತ್ತಾನೆ. ಅಲ್ಲದೇ ನಿಮ್ಮ ಮಾತನ್ನು ಒಪ್ಪುತ್ತೇವೆ, ಸುಮ್ಮನೇ ಸತ್ತು ಹೋಗಬೇಡಿರಿ ಎನ್ನುತ್ತಾನೆ. ಆಗ ಹನುಮನು ನಿಮ್ಮ ಮಾತಿನ ಮೇಲೆ ನಮಗೆ ನಂಬಿಕೆ ಇಲ್ಲ ಎಂದು ಮುಂದೆ ಬಂದು ನಿಲ್ಲುತ್ತಾನೆ.

ಸ್ವಾರಸ್ಯ : ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮೇಲಿನ ಮಾತಿನಲ್ಲಿ ಕಾಣಬಹುದಾಗಿದೆ.

29. "ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ"

ಆಯ್ಕೆ : ಪ್ರಸ್ತುತ ಸಾಲನ್ನು ಡಾ. ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ ಲಾವಣಿಗೀತೆ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕ್ರಿ. ಶ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ ಭಾರತೀಯರ ಮೇಲೆ 'ನಿಶ್ಶಸ್ತ್ರೀಕರಣದ' ಆದೇಶವನ್ನು ಹೊರಡಿಸಿತು. ಈ ಆದೇಶದ ಅನ್ವಯ ಬ್ರಿಟಿಷ್ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗಿತ್ತು. ಹೀಗಾಗಿ ಈ ಆದೇಶವನ್ನು ವಿರೋಧಿಸಿ ಭಾರತದಲ್ಲಿ ಅಲ್ಲಲ್ಲಿ ದಂಗೆಗಳಾದವು. ಅವುಗಳಲ್ಲಿ ಹಲಗಲಿಯ ಬೇಡರ ಹೋರಾಟವು ಪ್ರಮುಖವಾದುದು. ಹೀಗೆ ಕಂಪನಿ ಸರ್ಕಾರವು ಜನರಿಂದ ಬಲವಂತವಾಗಿ ಆಯುಧಗಳನ್ನು ವಶಪಡಿಸಿಕೊಳ್ಳಲು ಆದೇಶ ಹೊರಡಿಸಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : ಭಾರತೀಯರ ಮೇಲಿನ ಬ್ರಿಟಿಷರ ದಬ್ಬಾಳಿಕೆ ಮತ್ತು ದೌರ್ಜನ್ಯ, ವಿದೇಶದಲ್ಲಿದ್ದುಕೊಂಡೇ ಅಧಿಕಾರವನ್ನು ಭಾರತೀಯರ ಮೇಲೆ ಚಲಾಯಿಸುವ ರೀತಿ ಮೇಲಿನ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :

30. ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ
ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ
ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

ಅಥವಾ

ಸಿಕ್ಕದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ
ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು
ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು
ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ

ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :

31. ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿಮುತ್ತು. ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ಮೂಲ ಪ್ರೇರಣೆ. ವಾಣಿಜ್ಯ ಮೂಲವನ್ನಿರಿಸಿಕೊಂಡು ಭಾರತಕ್ಕೆ ಆಗಮಿಸಿದ ಬ್ರಿಟಿಷರು ಸಿಪಾಯಿದಂಗೆಯ ಅನಂತರ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಸ್ವಾತಂತ್ರ್ಯ ಪ್ರಿಯರಾಗಿದ್ದ ಹಲಗಲಿಯ ಬೇಡರು ಕಾಯಿದೆಯನ್ನು ವಿರೋಧಿಸಿ ಹುತಾತ್ಮರಾದರು ಎಂಬ ಕಥಾನಕವೆ ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿ ಬರೆದ 'ಹಲಗಲಿ ಬೇಡರು' ಪದ್ಯಪಾಠವಾಗಿದೆ.

'ನಿಶ್ಶಸ್ತ್ರೀಕರಣ' ಶಾಸನದ ಪ್ರಕಾರ ಸರ್ಕಾರದ ಅನುಮತಿಯಿರದೆ ಭಾರತೀಯರು ಶಸ್ತಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಆಯುಧಗಳನ್ನು ಕೊಡಲೊಪ್ಪದ ಜನರ ಬಳಿ ಬಲವಂತವಾಗಿ ಕಿತ್ತುಕೊಳ್ಳಿ ಎಂದು ಬ್ರಿಟಿಷ್ 'ಈಸ್ಟ್ ಇಂಡಿಯಾ ಕಂಪನಿ' ವಿದೇಶದಿಂದಲೇ ಆದೇಶ ಹೊರಡಿಸಿತು. ಈ ಹುಕುಮನ್ನು ವಿರೋಧಿಸಿ ಹಲಗಲಿಯ ಬೇಡ ಜನಾಂಗ ಒಂದಾಗಿ ಹೋರಾಡಲು ತೀರ್ಮಾನಿಸಿದರು. ಅದರಲ್ಲೂ ಆ ಗ್ರಾಮದ ಪ್ರಮುಖ ಶೂರರಾದ ಪೂಜಾರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ನಾಲ್ಕು ಮಂದಿ ಒಂದಾಗಿ ನಮ್ಮ ಬಳಿಯಿರುವ ಜೀವನ ನಿರ್ವಹಣೆಗೆ ಅಗತ್ಯವಾಗಿರುವ ಆಯಧಗಳನ್ನು ಪ್ರಾಣ ಹೋದರೂ ಕೊಡಬಾರದು. ಆಯಧಗಳಿಲ್ಲದ ಜೀವನ ಇದ್ದು ಸತ್ತಂತೆ ಎಂದು ಭಾವಿಸಿದರು. ಅಲ್ಲದೆ ತಮ್ಮ ಹಲಗಲಿ ಗ್ರಾಮದ ಎಲ್ಲ ಜನರನ್ನು ಒಟ್ಟುಗೂಡಿಸಿ ತಮ್ಮ ನಿರ್ಧಾರ ತಿಳಿಸಿ, ತಾವು ನಿಮ್ಮೊಂದಿಗೆ ಇದ್ದೇವೆ. ಯಾವುದೇ ಕಾರಣಕ್ಕೂ ಆಯುಧಗಳನ್ನು ಕಂಪನಿ ಸರ್ಕಾರಕ್ಕೆ ಒಪ್ಪಿಸಬಾರದು, ಆಯುಧಗಳನ್ನು ಕೇಳಲು ಬಂದವರೊಂದಿಗೆ ಜಗಳ ತೆಗೆಯಿರಿ ಎಂದು ಹೇಳಿದರು.

ಪ್ರಸ್ತುತ ಪದ್ಯದಲ್ಲಿ ಭಾರತೀಯರನ್ನು ನಿಶ್ಶಸ್ತ್ರೀಕರಣಗೊಳಿಸಬೇಕೆಂಬ ಬ್ರಿಟಿಷ್ ಕುಂಪಣಿ ಸರ್ಕಾರದ ದರ್ಪ, ಭಾರತೀಯರ ಮೇಲಿನ ದೌರ್ಜನ್ಯ ಮತ್ತು ಹಲಗಲಿಯ ಬೇಡರು ತಮ್ಮ ಜೀವನಾಧಾರವಾಗಿದ್ದ ಆಯುಧಗಳನ್ನೇ ಪ್ರಾಣವೆಂದು ನಂಬಿದ್ದ ಭಾವ ಹಾಗೂ ಬೇಡರ ಶಕ್ತಿಯ ವರ್ಣನೆ ಅರ್ಥಪೂರ್ಣವಾಗಿ ಮೂಡಿ ಬಂದಿದೆ.

32. ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿಮುತ್ತು. ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೆ

ಮೂಲ ಪ್ರೇರಣೆ. ವಾಣಿಜ್ಯ ಮೂಲವನ್ನಿರಿಸಿಕೊಂಡು ಭಾರತಕ್ಕೆ ಆಗಮಿಸಿದ ಬ್ರಿಟಿಷರು ಸಿಪಾಯಿದಂಗೆಯ ಅನಂತರ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಸ್ವಾತಂತ್ರ್ಯ ಪ್ರಿಯರಾಗಿದ್ದ ಹಲಗಲಿಯ ಬೇಡರು ಕಾಯಿದೆಯನ್ನು ವಿರೋಧಿಸಿ ಹುತಾತ್ಮರಾದರು ಎಂಬ ಕಥಾನಕವೆ ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿ ಬರೆದ 'ಹಲಗಲಿ ಬೇಡರು' ಪದ್ಯಪಾಠವಾಗಿದೆ.

ನಿಶ್ಶಸ್ತ್ರೀಕರಣ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿರದೆ ಭಾರತೀಯರು ಶಸ್ತಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಆಯುಧಗಳನ್ನು ಕೊಡಲೊಪ್ಪದ ಜನರ ಬಳಿ ಬಲವಂತವಾಗಿ ಕಿತ್ತುಕೊಳ್ಳಿ ಎಂದು ಬ್ರಿಟಿಷ್ 'ಈಸ್ಟ್ ಇಂಡಿಯಾ ಕಂಪನಿ' ವಿದೇಶದಿಂದಲೆ ಆದೇಶ ಹೊರಡಿಸಿತು. ಈ ಹುಕುಮನ್ನು ವಿರೋಧಿಸಿ ಹಲಗಲಿಯ ಬೇಡ ಜನಾಂಗ ಒಂದಾಗಿ ಹೋರಾಡಲು ತೀರ್ಮಾನಿಸಿದರು. ಅದರಲ್ಲೂ ಆ ಗ್ರಾಮದ ಪ್ರಮುಖ ಶೂರರಾದ ಪೂಜಾರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ನಾಲ್ಕು ಮಂದಿ ಒಂದಾಗಿ ನಮ್ಮ ಬಳಿಯಿರುವ ಜೀವನ ನಿರ್ವಹಣೆಗೆ ಅಗತ್ಯವಾಗಿರುವ ಆಯಧಗಳನ್ನು ಪ್ರಾಣ ಹೋದರೂ ಕೊಡಬಾರದು. ಆಯಧಗಳಿಲ್ಲದ ಜೀವನ ಇದ್ದು ಸತ್ತಂತೆ ಎಂದು ಭಾವಿಸಿದರು. ಅಲ್ಲದೆ ತಮ್ಮ ಹಲಗಲಿ ಗ್ರಾಮದ ಎಲ್ಲ ಜನರನ್ನು ಒಟ್ಟುಗೂಡಿಸಿ ತಮ್ಮ ನಿರ್ಧಾರ ತಿಳಿಸಿ, ತಾವು ನಿಮ್ಮೊಂದಿಗೆ ಇದ್ದೇವೆ. ಯಾವುದೇ ಕಾರಣಕ್ಕೂ ಆಯುಧಗಳನ್ನು ಕಂಪನಿ ಸರ್ಕಾರಕ್ಕೆ ಒಪ್ಪಿಸಬಾರದು, ಆಯುಧಗಳನ್ನು ಕೇಳಲು ಬಂದವರೊಂದಿಗೆ ಜಗಳ ತೆಗೆಯಿರಿ ಎಂದು ಹೇಳಿದರು.

ಪ್ರಸ್ತುತ ಪದ್ಯದಲ್ಲಿ ಭಾರತೀಯರನ್ನು ನಿಶ್ಶಸ್ತ್ರೀಕರಣಗೊಳಿಸಬೇಕೆಂಬ ಬ್ರಿಟಿಷ್ ಕುಂಪಣಿ ಸರ್ಕಾರದ ದರ್ಪ, ಭಾರತೀಯರ ಮೇಲಿನ ದೌರ್ಜನ್ಯ ಮತ್ತು ಹಲಗಲಿಯ ಬೇಡರು ಜೀವನಾಧಾರವಾಗಿದ್ದ ಆಯುಧಗಳನ್ನೇ ಪ್ರಾಣವೆಂದು ನಂಬಿದ್ದ ಭಾವ ಹಾಗೂ ಬೇಡರ ಶಕ್ತಿಯ ವರ್ಣನೆ ಅರ್ಥಪೂರ್ಣವಾಗಿ ಮೂಡಿ ಬಂದಿದೆ.

33. ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿಮುತ್ತು. ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೆ ಮೂಲ ಪ್ರೇರಣೆ. ವಾಣಿಜ್ಯ ಮೂಲವನ್ನಿರಿಸಿಕೊಂಡು ಭಾರತಕ್ಕೆ ಆಗಮಿಸಿದ ಬ್ರಿಟಿಷರು ಸಿಪಾಯಿದಂಗೆಯ ಅನಂತರ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಸ್ವಾತಂತ್ರ್ಯ ಪ್ರಿಯರಾಗಿದ್ದ ಹಲಗಲಿಯ ಬೇಡರು ಕಾಯಿದೆಯನ್ನು ವಿರೋಧಿಸಿ ಹುತಾತ್ಮರಾದರು ಎಂಬ ಕಥಾನಕವೆ ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿ ಬರೆದ 'ಹಲಗಲಿ ಬೇಡರು' ಪದ್ಯಪಾಠವಾಗಿದೆ.

ಬ್ರಿಟಿಷ್ ಸಿಪಾಯಿಗಳನ್ನು ಸಾಯಿಸಿ ನೆಲಕ್ಕುರುಳಿಸಿದ ದುಃಖದ ಸುದ್ದಿ ಕೇಳಿದ ಸಾಹೇಬನು ಕ್ರೋಧಗೊಂಡು ತನ್ನ ಕೈಗಳನ್ನು ಹಿಚುಕಿಕೊಂಡು ಸೈನಿಕರಿಗೆ ಆದೇಶ ನೀಡಿದನು. ಆಗ ಬ್ರಿಟಿಷ್ ಅಶ್ವದಳ, ಕಾಲ್ದಳ ಹಲಗಲಿಯ ನೆಲವನ್ನು ಮುಟ್ಟಿತು. ಇವರ ಮೋಸ ನೋಡಿದ ಹಲಗಲಿಯ ಜನರು ಊರ ಒಳಗಿನಿಂದಲೆ ಮುಂಗಾರಿನ ಸಿಡಿಲು ಸಿಡಿದ ಹಾಗೆ ಗುಂಡಿನ ಸುರಿಮಳೆಯನ್ನು ಬ್ರಿಟಿಷ್ ಸೈನಿಕರ ಮೇಲೆ ಸುರಿಸಿದರು. ಇದರಿಂದ ಹೆದರಿದ ಊರ ಹೊರಗಿನ ಬ್ರಿಟಿಷ್ ಸೈನಿಕರು ಹಿಂದೆ ಸರಿದು ನಿಂತರು. ಅಲ್ಲದೇ ಇನ್ನೂ ಹೆಚ್ಚಿನ ಸೈನ್ಯ ಹಲಗಲಿಯ ಮೇಲೆ ದಾಳಿ ಮಾಡಲು ದಂಡು ಬೇಕೆಂದು ಪತ್ರ ಬರೆದು ತನ್ನ ಮೇಲಿನ ಅಧಿಕಾರಿಗೆ ಕಳುಹಿಸಿದರು. ಆಗ ಹೆಚ್ಚಿನ ಸೈನ್ಯ ಸನ್ನದ್ಧವಾಗಿ ಪ್ರವಾಹೋಪಾದಿಯಲ್ಲಿ ಹಲಗಲಿಗೆ ಬಂದಿತು.

ಪ್ರಸ್ತುತ ಪದ್ಯದಲ್ಲಿ ಬಿಟ್ರಿಷರಿಗೆ ಹೆದರದೆ ದಿಟ್ಟ ಉತ್ತರ ನೀಡಲು ಹಲಗಲಿಯ ಬೇಡರು ಹೋರಾಟಕ್ಕೆ ಮುಂದಾಗಿರುವ ಐಕ್ಯತಾ ಭಾವದ ಮೌಲ್ಯವು ವ್ಯಕ್ತಗೊಂಡಿದೆ

34. ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿಮುತ್ತು. ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೆ ಮೂಲ ಪ್ರೇರಣೆ. ವಾಣಿಜ್ಯ ಮೂಲವನ್ನಿರಿಸಿಕೊಂಡು ಭಾರತಕ್ಕೆ ಆಗಮಿಸಿದ ಬ್ರಿಟಿಷರು ಸಿಪಾಯಿದಂಗೆಯ ಅನಂತರ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಸ್ವಾತಂತ್ರ್ಯ ಪ್ರಿಯರಾಗಿದ್ದ ಹಲಗಲಿಯ ಬೇಡರು ಕಾಯಿದೆಯನ್ನು ವಿರೋಧಿಸಿ ಹುತಾತ್ಮರಾದರು ಎಂಬ ಕಥಾನಕವೆ ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿ ಬರೆದ 'ಹಲಗಲಿ ಬೇಡರು' ಪದ್ಯಪಾಠವಾಗಿದೆ.

ಪ್ರವಾಹೋಪಾದಿಯಲ್ಲಿ ಹೆಚ್ಚಿನ ಬ್ರಿಟಿಷ್ ಸೈನ್ಯ ಸನ್ನದ್ಧವಾಗಿ ಹಲಗಲಿಗೆ ಬಂದು ಬೇಡರನ್ನು ಬೆನ್ನು ಹತ್ತಿ, ತಿರುತಿರುವಿ ಕಡಿದು ಹಾಕಿತು. ಅಲ್ಲದೇ ಸಿಕ್ಕವರನ್ನು ನಡುವೆ ಹಾಕಿಕೊಂಡು ಕರುಣೆ ತೋರದೆ ಗುಂಡು ಹಾರಿಸಿ ಕೊಂದು ಹಾಕಿತು. ಚಟೇಕಾರರು ಊರನ್ನು ಪಹರೆ ಕಾಯುವಾಗ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿದರು. ಆಗ ಗ್ರಾಮದ ಅಗಸಿಗೆ ಬಂದ ಬ್ರಿಟಿಷ್ ಅಧಿಕಾರಿ ಹೆಬಲಕನು ಬೇಡರಿಗೆ ಬುದ್ಧಿಮಾತನ್ನು ಹೇಳುತ್ತ, ಶರಣಾಗಲು ತಿಳಿಸುತ್ತಾನೆ. ಅಲ್ಲದೆ ನಿಮ್ಮ ಮಾತನ್ನು ಒಪ್ಪುತ್ತೇವೆ, ಸುಮ್ಮನೆ ಸತ್ತು ಹೋಗಬೇಡಿರಿ ಎನ್ನುತ್ತಾನೆ. ಆಗ ಹನುಮನು ನಿಮ್ಮ ಮಾತಿನ ಮೇಲೆ ನಮಗೆ ನಂಬಿಕೆ ಇಲ್ಲ ಎಂದು ಮುಂದೆ ಬಂದು ನಿಲ್ಲುತ್ತಾನೆ.

ಪ್ರಸ್ತುತ ಪದ್ಯವು ಬಾರತೀಯರ ಮೇಲೆ ನಿಷ್ಕರುಣೆಯಿಂದ ನಡೆದುಕೊಂಡ ಬ್ರಿಟಿಷರ ದೌರ್ಜನ್ಯ ಹಾಗೂ ಕ್ರೂರತೆಯ ಪರಮಾವಧಿಯನ್ನು ವ್ಯಕ್ತಪಡಿಸುವುದು.

35. ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿಮುತ್ತು. ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೆ ಮೂಲ ಪ್ರೇರಣೆ. ವಾಣಿಜ್ಯ ಮೂಲವನ್ನಿರಿಸಿಕೊಂಡು ಭಾರತಕ್ಕೆ ಆಗಮಿಸಿದ ಬ್ರಿಟಿಷರು ಸಿಪಾಯಿದಂಗೆಯ ಅನಂತರ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಸ್ವಾತಂತ್ರ್ಯ ಪ್ರಿಯರಾಗಿದ್ದ ಹಲಗಲಿಯ ಬೇಡರು ಕಾಯಿದೆಯನ್ನು ವಿರೋಧಿಸಿ ಹುತಾತ್ಮರಾದರು ಎಂಬ ಕಥಾನಕವೆ ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿ ಬರೆದ 'ಹಲಗಲಿ ಬೇಡರು' ಪದ್ಯಪಾಠವಾಗಿದೆ.

ಹೆಬಲಕ್ ಅಧಿಕಾರಿಯ ಮಾತಿಗೆ ನಂಬಿಕೆ ಸಾಲದ ಹನುಮನು ಮುಂದೆ ಬಂದಾಗ ಜಡಗನು ಇವರು ಸಂಪೂರ್ಣ ದ್ರೋಹಿಗಳಾಗಿದ್ದಾರೆ. ವಿಶ್ವಾಸ ದ್ರೋಹಿಗಳಾಗಿರುವ ಇವರ ಮೇಲೆ ನಮಗೆ ನಂಬಿಕೆ ಸಾಲದು ಎನ್ನುತ್ತಾನೆ. ಅಲ್ಲದೆ ಒಳಸಂಚಿನಿಂದ ಮೋಸ ಮಾಡಿ ನಮ್ಮ ದೇಶವನ್ನು ಗೆಲ್ಲಲು ಬಂದಿರುವ ಇವರು ನಮಗೆ ಮುಂದೆ ತೊಂದರೆದಾಯಕರಾಗುವರು ಎಂದು ಹೆಬಲಕ್ ಸಾಹೇಬನ ಮೇಲೆ ಗುಂಡೊಂದನ್ನು ಹಾರಿಸುತ್ತಾನೆ. ಕ್ರೋಧಗೊಂಡ ಕಾರಸಾಹೇಬ ಕಲಾದಗಿಯಿಂದ ದಂಡು ಕಳುಹಿಸಿ ಹಲಗಲಿಯನ್ನು ಮುತ್ತಿ ದಂಗೆ ಎದ್ದವರನ್ನು ಬಗ್ಗು ಬಡಿಯಲು ಹೇಳಿದ್ದಲ್ಲದೆ ಊರನ್ನು ಲೂಟಿ ಮಾಡಲು ಆದೇಶಿಸುವನು. ಆಗ ಕ್ರೋಧಗೊಂಡ ಬ್ರಿಟಿಷ್ ಸೈನಿಕರು ಹಲಗಲಿಯ ಬೇಡರ ಮೇಲೆ ಸಿಡಿಲು ಸಿಡಿಯುವಂತೆ ಗುಂಡಿನ ಮಳೆಯನ್ನು ಸುರಿಸುತ್ತಾರೆ. ಆಗ ಹನುಮನು ಇವರನ್ನು ಕೆಡವಿ ನಾಶ ಮಾಡೋಣ ಬನ್ನಿ ಎಂದು ವೀರಾವೇಷದಿಂದ ಹೇಳುತ್ತಿರುವಾಗ ಮುನ್ನೂರು ಜನ ಸೈನಿಕರು ಅವನ ಮೇಲೆರಗಿ ಬರುತ್ತಾರೆ. ಭೀಮನು ಐನೂರು ಮಂದಿಯನ್ನು ಎದುರಿಸಿ ನಿಲ್ಲುತ್ತಾನೆ. ಬಾಲನು ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿ

ತನ್ನ ಕಸರತ್ತನ್ನು ಪ್ರದರ್ಶಿಸುತ್ತಾನೆ. ರಾಮನು ರಕ್ತದ ಕಾಲುವೆಯನ್ನೇ ಹರಿಸುತ್ತಾನೆ. ಹೀಗೆ ತುಂಬಿ ಬಂದ ಬ್ರಿಟಿಷರ ಸಾವಿರಾರು ಸೈನಿಕರಿಗೆ ಒಬ್ಬನು ಕಡಿದು ಹಾಕೋಣ ಬನ್ನಿ ಎಂದು ಕೂಗುತ್ತಾ ವೀರಾವೇಷದ ಹೋರಾಟ ಮಾಡುತ್ತ ನಾಲ್ವರು ಬೇಡರು ವೀರ ಮರಣವನ್ನಪ್ಪಿದರು.

ಪ್ರಸ್ತುತ ಪದ್ಯದಲ್ಲಿ ನಂಬಿಕೆಗೆ ಅನರ್ಹರಾದ ಬ್ರಿಟಿಷರ ಕ್ರೂರತನದ ಪರಮಾವಧಿ, ದಬ್ಬಾಳಿಕೆ ಹಾಗೂ ಹಲಗಲಿಯ ಶೂರರಾದ ಬೇಡರ ವೀರತನ. ಸ್ವಾತಂತ್ರ್ಯ ಪ್ರೇಮ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

36. ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರಹೊಮ್ಮಿದ ನುಡಿಮುತ್ತು. ಶಿಷ್ಟಸಾಹಿತ್ಯಕ್ಕೆ ಜನಪದ ಸಾಹಿತ್ಯವೆ ಮೂಲ ಪ್ರೇರಣೆ. ವಾಣಿಜ್ಯ ಮೂಲವನ್ನಿರಿಸಿಕೊಂಡು ಭಾರತಕ್ಕೆ ಆಗಮಿಸಿದ ಬ್ರಿಟಿಷರು ಸಿಪಾಯಿದಂಗೆಯ ಅನಂತರ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು. ಸ್ವಾತಂತ್ರ್ಯ ಪ್ರಿಯರಾಗಿದ್ದ ಹಲಗಲಿಯ ಬೇಡರು ಕಾಯಿದೆಯನ್ನು ವಿರೋಧಿಸಿ ಹುತಾತ್ಮರಾದರು ಎಂಬ ಕಥಾನಕವೆ ಬಿ. ಎಸ್. ಗದ್ದಗಿಮಠ ಅವರು ಸಂಪಾದಿಸಿ ಬರೆದ 'ಹಲಗಲಿ ಬೇಡರು' ಪದ್ಯಪಾಠವಾಗಿದೆ.

ಹಲಗಲಿಯ ಬೇಡರ ಮೇಲೆ ವೀರ ಅಟ್ಟಹಾಸ ಪ್ರದರ್ಶಿಸಿದ ಬ್ರಿಟಿಷ್ ಸೈನಿಕರು ನಂತರ ಬೇಡರ ಕೃಷಿ ಉಪಕರಣಗಳಾದ ಕೊಡಲಿ, ಕೋರೆ, ಕುಡ, ಕಬ್ಬಿಣ, ಆಹಾರ ಪದಾರ್ಥಗಳಾದ ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಷಿಣ, ಜೀರಗಿ, ಅಕ್ಕಿ, ಸಕ್ಕರೆ. ಬೆಲ್ಲ, ದಿನನಿತ್ಯ ಬಳಸುತ್ತಿದ್ದ ವಸ್ತುಗಳಾದ ಗಂಗಳ, ಚೆರಗಿ, ಮಂಗಳ ಸೂತ್ರ. ಬೀಸುವಕಲ್ಲು ಹೀಗೆ ಸಿಕ್ಕ ಸಿಕ್ಕ ವಸ್ತುಗಳೆಲ್ಲವನ್ನು ದೋಚಿದರು. ಅಲ್ಲದೆ ಹಲಗಲಿ ಊರಿಗೆ ಬೆಂಕಿ ಇಟ್ಟು ಸುಟ್ಟು ಬೂದಿ ಮಾಡಿದರು. ಇಂತಹ ಕರುಣಾಜನಕವಾದ ರಕ್ತರಂಜಿತ ಕಥೆಯನ್ನು ನನಗೆ ತಿಳಿದ ಹಾಗೆ ಕುರ್ತಕೋಟಿ ಕಲ್ಮೇಶನ ದಯದಿಂದ ಸ್ಮರಿಸಿರುವೆನು ಎಂದು ಲಾವಣಿಕಾರನು ಕೊನೆಯ ಮಾತುಗಳನ್ನು ನುಡಿಯುವನು.

ಪ್ರಸ್ತುತ ಪದ್ಯವು ಕಠೋರ ಹೃದಯಿಗಳಾದ ಬ್ರಿಟಿಷ್ ಸೈನಿಕರ ನಿಷ್ಕರುಣೆ ಹಾಗೂ ಹಲಗಲಿಯ ಮೇಲೆ ಹಿಂಸಾತ್ಮಕವಾಗಿ ದಾಳಿ ಮಾಡಿ ಲೂಟಿ ಮಾಡಿರುವ ರೀತಿ ಹಾಗೂ ದೌರ್ಜನ್ಯವನ್ನು ವಿವರಿಸುತ್ತದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

37. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಆಡಳಿತ ಸೂತ್ರ ಹಿಡಿದರು. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣ ಹುಕುಮನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿರದೆ ಭಾರತೀಯರು ಶಸ್ತಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಆಯುಧಗಳನ್ನು ಕೊಡಲೊಪ್ಪದ ಜನರ ಬಳಿ ಬಲವಂತವಾಗಿ ಕಿತ್ತುಕೊಳ್ಳಿ ಎಂದು ಬ್ರಿಟಿಷ್ 'ಈಸ್ಟ್ ಇಂಡಿಯಾ ಕಂಪನಿ' ವಿದೇಶದಿಂದಲೆ ಆದೇಶ ಹೊರಡಿಸಿತು. ಈ ಹುಕುಮನ್ನು ವಿರೋಧಿಸಿ ಹಲಗಲಿಯ ಬೇಡ ಜನಾಂಗ ಒಂದಾಗಿ ಹೋರಾಡಲು ತೀರ್ಮಾನಿಸಿದರು. ಅದರಲ್ಲೂ ಆ ಗ್ರಾಮದ ಪ್ರಮುಖ ಶೂರರಾದ ಪೂಜಾರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ನಾಲ್ಕು ಮಂದಿ ಒಂದಾಗಿ ನಮ್ಮ ಬಳಿಯಿರುವ ಜೀವನ ನಿರ್ವಹಣೆಗೆ ಅಗತ್ಯವಾಗಿರುವ ಆಯಧಗಳನ್ನು ಪ್ರಾಣ ಹೋದರೂ ಕೊಡಬಾರದು. ಆಯಧಗಳಿಲ್ಲದ ಜೀವನ ಇದ್ದು ಸತ್ತಂತೆ ಎಂದು ಭಾವಿಸಿದರು. ಅಲ್ಲದೇ ತಮ್ಮ ಹಲಗಲಿ

ಗ್ರಾಮದ ಎಲ್ಲ ಜನರನ್ನು ಒಟ್ಟು ಗೂಡಿಸಿ ತಮ್ಮ ನಿರ್ಧಾರ ತಿಳಿಸಿ, "ತಾವು ನಿಮ್ಮೊಂದಿಗೆ ಇದ್ದೇವೆ. ಯಾವುದೇ ಕಾರಣಕ್ಕೂ ಆಯುಧಗಳನ್ನು ಕಂಪನಿ ಸರ್ಕಾರಕ್ಕೆ ಒಪ್ಪಿಸಬಾರದು" ಎಂದು ಕಂಪನಿ ಸರ್ಕಾರದ ವಿರುದ್ಧ ದಂಗೆ ಎದ್ದರು. ಆ ಸಂದರ್ಭದಲ್ಲಿ ಆಯುಧಗಳನ್ನು ಬಲವಂತವಾಗಿ ಕಸಿದುಕೊಳ್ಳಲು ಬಂದ ಬ್ರಿಟಿಷ್ ಗುಮಾಸ್ತನ ಕಪಾಳಕ್ಕೆ ಹೊಡೆದರು. ಆಗ ಹೆಚ್ಚಿನ ಸೈನ್ಯದೊಂದಿಗೆ ಗ್ರಾಮದ ಅಗಸಿಗೆ ಬಂದ ಬ್ರಿಟಿಷ್ ಅಧಿಕಾರಿ ಹೆಬಲಕನು ಬೇಡರಿಗೆ ಬುದ್ಧಿ ಮಾತನ್ನು ಹೇಳುತ್ತ, ಶರಣಾಗಲು ತಿಳಿಸುತ್ತಾನೆ. ಜಡಗನು ವಿಶ್ವಾಸ ದ್ರೋಹಿಗಳಾಗಿರುವ ಇವರ ಮೇಲೆ ನಮಗೆ ನಂಬಿಕೆ ಸಾಲದು ಎಂದು ಹೆಬಲಕ್ ಸಾಹೇಬನ ಮೇಲೆ ಗುಂಡೊಂದನ್ನು ಹಾರಿಸಿ ಕೊಲ್ಲುತ್ತಾನೆ. ಇದರಿಂದ ಕ್ರೋಧಗೊಂಡ ಕಂಪನಿ ಸರ್ಕಾರದ ಮುಖ್ಯಸ್ಥ ಕಾರಸಾಹೇಬ ಕಲಾದಗಿಯಿಂದ ದಂಡು ಕಳುಹಿಸಿ ಹಲಗಲಿಯನ್ನು ಮುತ್ತಿ ದಂಗೆ ಎದ್ದವರನ್ನು ಬಗ್ಗುಬಡಿಯಲು ಹೇಳಿದ್ದಲ್ಲದೆ ಊರನ್ನು ಲೂಟಿ ಮಾಡಲು ಆದೇಶಿಸುವನು. ಆಗ ಕ್ರೋಧಗೊಂಡ ಬ್ರಿಟಿಷ್ ಸೈನಿಕರು ಹಲಗಲಿಯ ಬೇಡರ ಮೇಲೆ ಸಿಡಿಲು ಸಿಡಿಯುವಂತೆ ಗುಂಡಿನ ಮಳೆಯನ್ನು ಸುರಿಸುತ್ತಾರೆ. ಹಲಗಲಿಯ ಬೇಡರ ಮೇಲೆ ವೀರ ಅಟ್ಟಹಾಸ ಪ್ರದರ್ಶಿಸಿದ ಬ್ರಿಟಿಷ್ ಸೈನಿಕರು ನಂತರ ಬೇಡರ ಕೃಷಿ ಉಪಕರಣಗಳನ್ನು ಆಹಾರ ಪದಾರ್ಥಗಳನ್ನು ಮತ್ತು ದಿನನಿತ್ಯ ಬಳಸುತ್ತಿದ್ದ ವಸ್ತುಗಳೆಲ್ಲವನ್ನು ದೋಚಿದರು. ಅಲ್ಲದೇ ಹಲಗಲಿ ಊರಿಗೆ ಬೆಂಕಿ ಇಟ್ಟು ಸುಟ್ಟು ಬೂದಿ ಮಾಡಿದರು. ಹೀಗೆ ಹಲಗಲಿ ದಂಗೆಯನ್ನು ಸರ್ಕಾರ ನಿಯಂತ್ರಿಸಿತು.

38. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಆಡಳಿತ ಸೂತ್ರ ಹಿಡಿದರು. ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಹುಕುಮನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿರದೆ ಭಾರತೀಯರು ಶಸ್ತಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಈ ಹುಕುಮನ್ನು ವಿರೋಧಿಸಿ ಹಲಗಲಿಯ ಬೇಡ ಜನಾಂಗ ಒಂದಾಗಿ ಹೋರಾಡಲು ತೀರ್ಮಾನಿಸಿದರು. ಅದರಲ್ಲೂ ಆ ಗ್ರಾಮದ ಪ್ರಮುಖ ಶೂರರಾದ ಪೂಜಾರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ನಾಲ್ಕು ಮಂದಿ ಒಂದಾಗಿ ನಮ್ಮ ಬಳಿಯಿರುವ ಜೀವನ ನಿರ್ವಹಣೆಗೆ ಅಗತ್ಯವಾಗಿರುವ ಆಯಧಗಳನ್ನು ಪ್ರಾಣ ಹೋದರೂ ಕೊಡಬಾರದು. ಆಯಧಗಳಿಲ್ಲದ ಜೀವನ ಇದ್ದು ಸತ್ತಂತೆ ಎಂದು ಭಾವಿಸಿದರು. ಆ ಸಂದರ್ಭದಲ್ಲಿ ಆಯುಧಗಳನ್ನು ಬಲವಂತವಾಗಿ ಕಸಿದು ಕೊಳ್ಳಲು ಬಂದ ಬ್ರಿಟಿಷ್ ಗುಮಾಸ್ತನ ಕಪಾಳಕ್ಕೆ ಹೊಡೆದರು. ಇದರಿಂದ ಪ್ರವಾಹೋಪಾದಿಯಲ್ಲಿ ಹೆಚ್ಚಿನ ಬ್ರಿಟಿಷ್ ಸೈನ್ಯ ಸನ್ನದ್ಧವಾಗಿ ಹಲಗಲಿಗೆ ಬಂದು ಬೇಡರನ್ನು ಬೆನ್ನು ಹತ್ತಿ, ತಿರು ತಿರುವಿ ಕಡಿದು ಹಾಕಿತು. ಅಲ್ಲದೇ ಸಿಕ್ಕವರನ್ನು ನಡುವೆ ಹಾಕಿಕೊಂಡು ಕರುಣೆ ತೋರದೆ ಗುಂಡು ಹಾರಿಸಿ ಕೊಂದು ಹಾಕಿತು. ಆಗ ಗ್ರಾಮದ ಅಗಸಿಗೆ ಬಂದ ಬ್ರಿಟಿಷ್ ಅಧಿಕಾರಿ ಹೆಬಲಕನು ಬೇಡರಿಗೆ ಬುದ್ಧಿ ಮಾತನ್ನು ಹೇಳುತ್ತ, ಶರಣಾಗಲು ತಿಳಿಸುತ್ತಾನೆ. ಅಲ್ಲದೆ ನಿಮ್ಮ ಮಾತನ್ನು ಒಪ್ಪುತ್ತೇವೆ, ಸುಮ್ಮನೆ ಸತ್ತು ಹೋಗಬೇಡಿರಿ ಎನ್ನುತ್ತಾನೆ. ಜಡಗನು ವಿಶ್ವಾಸ ದ್ರೋಹಿಗಳಾಗಿರುವ ಇವರ ಮೇಲೆ ನಮಗೆ ನಂಬಿಕೆ ಸಾಲದು ಎನ್ನುತ್ತಾನೆ. ಅಲ್ಲದೇ ಒಳಸಂಚಿನಿಂದ ಮೋಸ ಮಾಡಿ ನಮ್ಮ ದೇಶವನ್ನು ಗೆಲ್ಲಲು ಬಂದಿರುವ ಇವರು ನಮಗೆ ಮುಂದೆ ತೊಂದರೆದಾಯಕರಾಗುವರು ಎಂದು ಹೆಬಲಕ್ ಸಾಹೇಬನ ಮೇಲೆ ಗುಂಡೊಂದನ್ನು ಹಾರಿಸುತ್ತಾನೆ. ಆ ಒಂದು ಗುಂಡಿಗೆ ಸಾಹೇಬನು ಸತ್ತು ಹೋಗುವನು. ಇದರಿಂದ ಕ್ರೋಧಗೊಂಡ ಕಾರಸಾಹೇಬ ಕಲಾದಗಿಯಿಂದ ದಂಡು ಕಳುಹಿಸಿ ಹಲಗಲಿಯನ್ನು ಮುತ್ತಿ ದಂಗೆ ಎದ್ದವರನ್ನು ಬಗ್ಗು ಬಡಿಯಲು ಹೇಳಿದ್ದಲ್ಲದೆ ಊರನ್ನು ಲೂಟಿ ಮಾಡಲು

ಆದೇಶಿಸುವನು. ಆಗ ಕ್ರೋಧಗೊಂಡ ಬ್ರಿಟಿಷ್ ಸೈನಿಕರು ಹಲಗಲಿಯ ಬೇಡರ ಮೇಲೆ ಸಿಡಿಲು ಸಿಡಿಯುವಂತೆ ಗುಂಡಿನ ಮಳೆಯನ್ನು ಸುರಿಸುತ್ತಾರೆ. ಹಲಗಲಿಯ ಬೇಡರ ಮೇಲೆ ವೀರ ಅಟ್ಟಹಾಸ ಪ್ರದರ್ಶಿಸಿದ ಬ್ರಿಟಿಷ್ ಸೈನಿಕರು ನಂತರ ಬೇಡರ ಕೃಷಿ ಉಪಕರಣಗಳನ್ನು, ಆಹಾರ ಪದಾರ್ಥಗಳನ್ನು ಮತ್ತು ದಿನನಿತ್ಯ ಬಳಸುತ್ತಿದ್ದ ವಸ್ತುಗಳೆಲ್ಲವನ್ನು ದೋಚಿದರು. ಅಲ್ಲದೆ ಹಲಗಲಿ ಊರಿಗೆ ಬೆಂಕಿ ಇಟ್ಟು ಸುಟ್ಟು ಬೂದಿ ಮಾಡಿದರು.

ಮಾದರಿ ಉತ್ತರಗಳು : ಪದ್ಯಪಾಠ 7. ವೀರಲವ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. ರಾಮನ ಯಜ್ಞದ ಕುದುರೆಯು ಭೂಲೋಕದಲ್ಲಿ ಸಂಚರಿಸುತ್ತಾ ವಾಲ್ಮೀಕಿಮುನಿಗಳ ಆಶ್ರಮಕ್ಕೆ ಬಂದಿತು.

2. ವಾಲ್ಮೀಕಿ ಮುನಿಗಳು ತೋಟದ ಕಾವಲಿಗೆ ಲವನನ್ನು ನೇಮಿಸಿ ಹೋಗಿದ್ದರು.

3. ವೀರಲವನು ಮುನಿಸುತರ ಜೊತೆಗೂಡಿ ಆಟವಾಡುತ್ತಿದ್ದನು.

4. ವಾಲ್ಮೀಕಿ ಋಷಿಗಳು ವರುಣನ ಲೋಕಕ್ಕೆ ಹೋಗಿದ್ದರು.

5. ಕುದುರೆಯನ್ನು ಲವನು ತನ್ನ ಉತ್ತರೀಯ(ಮೇಲು ಹೊದಿಕೆ)ದಿಂದ ಕಟ್ಟಿದನು.

6. ಕುದುರೆಯನ್ನು ಲವನು ಕದಳಿದ್ರುಮ(ಬಾಳೆಗಿಡ)ಕ್ಕೆ ಕಟ್ಟಿದನು.

7. ರಾಮನ ಯಜ್ಞಾಶ್ವವನ್ನು ಕಟ್ಟಿ ಹಾಕಿದವರು ಲವ.

8. ಅರಸರಿಗೆ ತಿಳಿದರೆ ಅವರು ತಮ್ಮನ್ನು ಹೊಡೆಯುತ್ತಾರೆ ಎಂದು ತಿಳಿದು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದ ಲವನ ಕಂಡು ಮುನಿಸುತರು ಹೆದರಿದರು.

9. ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶ್ರೀರಾಮನು ಸಹೋದರನಾದ ಶತ್ರುಘ್ನನನ್ನು ಕಳುಹಿಸುತ್ತಾನೆ.

10. ಶ್ರೀರಾಮನ ತಾಯಿಯ ಹೆಸರು ಕೌಸಲ್ಯೆ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

11. ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು.ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ಬಳಿಗೆ ಬಂದಿತು. ಆಶ್ರಮದ ತೋಟದಲ್ಲಿ ಚೆನ್ನಾಗಿ ಬೆಳೆದು ನಿಂತ ಹಸುರಾದ ಹುಲ್ಲನ್ನು ಕಂಡು ತಿನ್ನಲು ಕುದುರೆಯು ಒಳಹೊಕ್ಕಿತು.

12. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡದಲ್ಲಿ ಕೌಸಲ್ಯೆಯ ಮಗನಾದ ರಾಮನೊಬ್ಬನೇ ವೀರನು. ಇದು ಅವನ ಯಜ್ಞಕುದುರೆ. ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ" ಎಂದು ಬರೆಯಲಾಗಿತ್ತು.

13. ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ಅವರು ನಮ್ಮನ್ನು ಹೊಡೆಯವರು" ಎಂದು ಹೇಳಿದರು. ಆಗ ಲವನು ನಗುತ "ಬ್ರಾಹ್ಮಣರ ಮಕ್ಕಳಾದ ನೀವು ಹೆದರಿದರೆ, ಜಾನಕಿಯ ಮಗನಾದ ನಾನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

14. ಆಶ್ರಮದ ಉಪವನದಲ್ಲಿ ಪೂಜಿಸಲ್ಪಟ್ಟ ಸುಂದರ ಕುದುರೆಯನ್ನು ಕಂಡ ಲವನು "ಇದು ಯಾವ ಕಡೆಯ ಕುದುರೆ? ಹೂತೋಟವನ್ನು ಹೊಕ್ಕು ನುಗ್ಗುನುರಿಯಾಗುವಂತೆ ತುಳಿದು ಹಾಳುಗೆಡವಿದೆಯಲ್ಲ. ವಾಲ್ಮೀಕಿ ಮುನಿನಾಥನೇ ತೋಟವನ್ನು ಒಣಗದಂತೆ ಸದಾ ಕಾಪಾಡಿ

ಸಂರಕ್ಷಿಸಬೇಕೆಂದು ನನ್ನನ್ನು ತೋಟದ ಕಾವಲಿಗೆ ನೇಮಿಸಿ, ವರುಣನು ಕರೆಸಲಾಗಿ ವರುಣಲೋಕಕ್ಕೆ ಹೋಗಿರುವರು. ಪುನಃ ವರುಣನ ಲೋಕದಿಂದ ಬಂದು ವಾಲ್ಮೀಕಿ ಮುನಿ ನನ್ನ ಮೇಲೆ ಕೋಪಗೊಳ್ಳದಿರುವರೇ?" ಎಂದು ಯೋಚಿಸಿದನು.

15. ಕುದುರೆಯ ಹಣೆಯಲ್ಲಿ ಬರೆದ "ಶ್ರೀರಾಮನೊಬ್ಬನೇ ಇಡೀ ಭೂಮಂಡಲಕ್ಕೆ ಒಡೆಯನು" ಎಂಬ ಬರೆಹವನ್ನು ಓದಿ ಲವನು ಕೋಪಗೊಳ್ಳುತ್ತಾನೆ. ಶ್ರೀರಾಮನ ಅಹಂಕಾರವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲ ಜನರೂ ಬಂಜೆ ಎನ್ನುತ್ತಾರೆ. ಭುಜಬಲ ಪರಾಕ್ರಮಿಯಾದ ನಾನು ರಾಮನ ಕುದುರೆಯನ್ನು ಕಟ್ಟಿ ಹಾಕಬೇಕೆಂದು ನಿರ್ಧರಿಸಿ ಲವನು ಪ್ರತಿಜ್ಞೆಯನ್ನು ಕೈಗೊಂಡು ಊರಿದೇಳುತ್ತಾನೆ.

ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು:

16. ಲಕ್ಷ್ಮೀಶ : ನಡುಗನ್ನಡದ ಕವಿ ಲಕ್ಷ್ಮೀಶನು ಸಾ. ಶ. ಸುಮಾರು ೧೫೫೦ ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನಲ್ಲಿ ಜನಿಸಿದನು. ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳನ್ನು ಹೊಂದಿರುವ ಈತನು 'ಜೈಮಿನಿಭಾರತ'ವೆಂಬ ಪ್ರಸಿದ್ಧ ಕಾವ್ಯವನ್ನು ರಚಿಸಿರುವನು. ಲಕ್ಷ್ಮೀಶ ಕವಿಗೆ 'ಉಪಮಾಲೋಲ, ಕರ್ಣಾಟಕವಿಚೂತವನ ಚೈತ್ರ' ಎಂಬ ಬಿರುದುಗಳಿವೆ.

ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :

17.

ಸ	ಸ	ಸ	ಸ	
- U -	- - U	UUUUU	- - U	
ಉರ್ವಿಯೊಳ್	ಕೌಸಲ್ಯೆ	ಪಡೆದಕುವ	ರಂರಾಮ	= ೨೦

ಸ	ಸ	ಸ	ಸ	
- U -	- U -	UU- U	UUU U U	
ನೊರ್ವನೇ	ವೀರನಾ	ತನಯಜ್ಞ	ತುರಗವಿದು	= ೨೦

ಸ	ಸ	ಸ	ಸ	ಸ	ಸ	೨
- U UU	- U -	- U -	UU U -	- U -	UU U -	-
ನಿರ್ವಹಿಸ	ಲಾರ್ಪರಾ	ರಾದೊಡಂ	ತಡೆಯಲೆಂ	ದಿರ್ದಲೇ	ಖನವನೋ	ದಿ = ೩೨

ಛಂದಸ್ಸು : ಇದು ಮಾತ್ರಾಗಣ ಆಧಾರಿತ 'ವಾರ್ಧಕ ಷಟ್ಪದಿ'ಯ ಲಕ್ಷ್ಯವಾಗಿದೆ.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಮಾಡುವುದು :

18. "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"

ಅಲಂಕಾರ : ಅರ್ಥಾಂತರನ್ಯಾಸಾಲಂಕಾರ.

ಲಕ್ಷಣ : ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ.

ಸಮನ್ವಯ : ಉಪಮೇಯ (ವಿಶೇಷ ವಾಕ್ಯ) : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.

ಉಪಮಾನ (ಸಾಮಾನ್ಯ ವಾಕ್ಯ) : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

ಇಲ್ಲಿ ಉಪಮೇಯವಾದ 'ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು' ಎಂಬ ವಿಶೇಷ ವಾಕ್ಯವನ್ನು ಉಪಮಾನವಾದ 'ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?' ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಇದು 'ಅರ್ಥಾಂತರನ್ಯಾಲಂಕಾರ'ದ ಲಕ್ಷ್ಯವಾಗಿದೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

19. ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತಲೂ ಮಿಗಿಲು : ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. 'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಇದು ವಾಲ್ಮೀಕಿ ರಾಮಾಯಣದಲ್ಲಿ ಬರುವ ಒಂದು ಮಾತು. ಇದರ ಅನುವಾದವೆ ಮೇಲಿನ ಈ ಹೇಳಿಕೆ. ಇದರಲ್ಲಿ ತಾಯಿ ಮತ್ತು ತಾಯ್ನಾಡಿನ ಮಹತ್ತ್ವ ಅಡಗಿದೆ.

ಹೆತ್ತ ತಾಯಿ ಹೊತ್ತ ನಾಡು ಎರಡು ಒಂದೇ ನಮ್ಮನ್ನು ಹೆತ್ತು ಹೊತು ಸಾಕಿ ಸಲುಹಿದ ತಾಯಿಯ ಮಡಿಲು ಸ್ವರ್ಗಕ್ಕಿಂತಲೂ ಮಿಗಿಲಾದ ಸುಖವನ್ನು ನೀಡುತ್ತದೆ ಎನ್ನುವುದು ಅನುಭವಿಗಳ ಹೇಳಿಕೆ. ತಾಯಿ ಮಮತಾಮಯಿ. ಆಕೆಯ ಸ್ಥಾನವನ್ನು ಯಾರೂ ತುಂಬಲಾರರು. 'ಅವ್ವ ಹೊಟ್ಟೆ ನೋಡಿದಳು ಅತ್ತೆ ಬಟ್ಟೆ ನೋಡಿದಳು' ಎಂಬಂತೆ ಕರುಣಾಮಯಿ ತಾಯಿ ತನ್ನ ಸುಖವನ್ನೆಲ್ಲ ಮರೆತು ಆಹಾರ ನಿದ್ರೆಗಳನ್ನು ತೊರೆದು ಮಗುವಿನ ಲಾಲನೆ ಪಾಲನೆಯಲ್ಲಿಯೇ ಸುಖವನ್ನು ಕಾಣುತ್ತಾಳೆ. ತಾಯಿಯ ಒಡಲಿನಿಂದ ನಾವು ಮೊದಲ ಹೆಜ್ಜೆ ಇಡುವುದೇ ಭೂತಾಯಿಯ ಮೇಲೆ. ಅಂತೆಯೇ ಹೊತ್ತನಾಡು ನಮ್ಮನ್ನು ಜೀವನ ಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ನಮ್ಮ ಜೀವನಕ್ಕೆ ಅಗತ್ಯವಾದಂತಹ ಅನ್ನ, ನೀರು, ಬಟ್ಟೆ, ವಸತಿ, ಹಾಗೂ ಇನ್ನಿತರ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವಂತಹ ಜನ್ಮ ಭೂಮಿಯನ್ನು ತಾಯಿಗೆ ಹೋಲಿಸಿರುವುದು ಶ್ರೇಷ್ಠವಾಗಿದೆ. ತಾಯಿಯಂತೆಯೇ ನಾವು ಹುಟ್ಟಿದ ನಾಡು ಕೂಡ ಆ ನೆಲದಲ್ಲಿ ಆಡುತ್ತೇವೆ, ಬೆಳೆಯನ್ನು ಬೆಳೆಯುತ್ತೇವೆ, ಬೆಳೆದುದನ್ನು ತಿಂದು ಬದುಕುತ್ತೇವೆ. ತಾಯಿಯ ಮಡಿಲಿನಂತೆ ರೋಮಾಂಚನ ಸೆಳೆತ ಜನ್ಮಭೂಮಿಯೊಂದಿಗೆ ಇರುತ್ತದೆ. ತಾಯಿಯಂತೆ ನಾಡು ನಮ್ಮನ್ನು ಪೋಷಿಸುತ್ತದೆ. ಅದ್ದರಿಂದ ಜನ್ಮಭೂಮಿಯನ್ನು ಮರೆತವರು ತಾಯಿಯನ್ನು ಮರೆತಂತೆಯೇ ಸರಿ. ಆದುದರಿಂದ ಹೆತ್ತತಾಯಿ ಹೊತ್ತನಾಡಿನ ಋಣವನ್ನು ಮರೆಯದೆ ಅವರ ಹಿರಿಮೆಯನ್ನು ಎತ್ತಿಹಿಡಿಯಬೇಕಾದದ್ದು ಪ್ರತಿಯೊಬ್ಬನ ಆದ್ಯಕರ್ತವ್ಯವಾಗಿದೆ.

20 ಕಾಯಕವೇ ಕೈಲಾಸ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. ಅಂತಹ ಹಲವು ಪ್ರಸಿದ್ಧ ಗಾದೆಗಳಲ್ಲಿ ಕಾಯಕವೇ ಕೈಲಾಸ ಎಂಬುದು ಒಂದಾಗಿದೆ.

"ಹತ್ತು ಬೆರಳುಗಳನ್ನು ಸವೆಸಿ ಐದು ಬೆರಳುಗಳಿಂದ ಉಣ್ಣು" ಎಂಬ ಮಾತಿನಂತೆ ಕೆಲಸ ಅಥವಾ ಶ್ರಮ ಶಾಪವಲ್ಲ. ಅದು ದುಡಿಮೆ. ದುಡಿಮೆ ಮಾನವನಿಗೆ ದೇವರು ನೀಡಿದ ವರದಾನ. ಕೈ ಕೆಸರಾಗುವುದು ಕಷ್ಟಪಟ್ಟು ದುಡಿದಾಗ, ದುಡಿಮೆ ನಮಗೆ ಬೇಕಾದ ಸೌಕರ್ಯಗಳನ್ನು ಪಡೆಯಲು ಸಹಾಯ ನೀಡುತ್ತದೆ. ಆದ್ದರಿಂದ ನಾವು ಸುಖವನ್ನು

ಪಡೆಯಬಹುದು. ನಾವು ಮಾಡುವ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು. ಆ ಕೆಲಸದಲ್ಲಿ ದೇವರನ್ನು ಕಾಣಬೇಕು. ಕಷ್ಟಪಟ್ಟು ದುಡಿದರೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತದೆ ಎಂಬುದನ್ನು ಬಸವಣ್ಣನವರ ಈ ವಚನ ಪ್ರತಿಪಾದಿಸುತ್ತದೆ. ಕಾಯಕದಲ್ಲಿ ಕೈಲಾಸವನ್ನು ಅಂದರೆ ಶಿವನ ಸಾನಿಧ್ಯವನ್ನು ಕಾಣಬಹುದು ಎಂದು ಈ ಗಾದೆ ಮಾತು ಸೂಚಿಸುತ್ತದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

21. "ರಘೂದ್ವಹನ ಸೊಲ್ಗೇಳಿ ನಮಿಸಲ್"

ಆಯ್ಕೆ: ಪ್ರಸ್ತುತ ಸಾಲನ್ನು ಲಕ್ಷ್ಮೀಶನು ಬರೆದ 'ಜೈಮಿನಿಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ರಾವಣನವಧೆಯಿಂದ ಬ್ರಹ್ಮಹತ್ಯಾದೋಷ ಬಂದಿರುವುದನ್ನು ಪರಿಹರಿಸಿ ಕೊಳ್ಳುವುದಕ್ಕಾಗಿ ಮಹರ್ಷಿಗಳ ಆದೇಶದಂತೆ ಶ್ರೀರಾಮನು ಅಶ್ವಮೇಧಯಾಗವನ್ನು ಕೈಗೊಳ್ಳುತ್ತಾನೆ. ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ಶ್ರೀರಾಮನ ಅಶ್ವಮೇಧಯಾಗದ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ಭುಜಬಲ ಪರಾಕ್ರಮಿಗಳಾದ ರಾಜರೆಲ್ಲ ರಾಮನ ಆಜ್ಞೆಗೆ ಹೆದರಿ, ತಡೆಯದೆ, ಕುದುರೆಗೆ ಭವ್ಯ ಸ್ವಾಗತ ಹಾಗೂ ಗೌರವವನ್ನು ನೀಡಿ ನಮಸ್ಕರಿಸಿ ಮುಂದೆ ಸಂಚರಿಸಲು ಬಿಟ್ಟರು ಎಂದು ವರ್ಣಿಸುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟಿರುವಲ್ಲಿ ಶ್ರೀರಾಮನ ಹೆಸರಿಗಿದ್ದ ಗೌರವ, ಪರಾಕ್ರಮದ ಶ್ರೇಷ್ಠತೆಯು ಬಹು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

22. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

ಆಯ್ಕೆ : ಪ್ರಸ್ತುತ ಸಾಲನ್ನು ಲಕ್ಷ್ಮೀಶನು ಬರೆದ 'ಜೈಮಿನಿಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶ್ರೀರಾಮನ ಅಶ್ವಮೇಧಯಾಗದ ಯಜ್ಞಾಶ್ವವು ಭೂಮಂಡಲದಲ್ಲಿ ಸಂಚರಿಸುತ್ತ ವಾಲ್ಮೀಕಿ ಆಶ್ರಮದ ಬಳಿಗೆ ಬರುತ್ತದೆ. ನಂತರ ಆಶ್ರಮದ ತೋಟದಲ್ಲಿ ಚೆನ್ನಾಗಿ ಬೆಳೆದು ನಿಂತ ಹಸುರು ಹುಲ್ಲನ್ನು ತಿನ್ನಲು ಬಯಸಿ ಕುದುರೆಯು ಆಶ್ರಮವನ್ನು ಹೊಕ್ಕಾಗ, ತೋಟದಕಾವಲನ್ನು ತನ್ನ ಜೊತೆಗಾರರೊಂದಿಗೆ ಮಾಡುತ್ತಿದ್ದ ಲವನು ತನ್ನ ಆಶ್ರಮದ ತೋಟವನ್ನು ಧ್ವಂಸಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರೆಹವನ್ನು ಓದಿ ಅದನ್ನು ಕಟ್ಟಿ ಹಾಕಲು ನಿರ್ಧರಿಸುತ್ತಾನೆ. ಆ ಸಂದರ್ಭದಲ್ಲಿ ಲವನು ಈ ಮಾತನ್ನು ಹೇಳಿಕೊಳ್ಳುತ್ತಾನೆ.

ಸ್ವಾರಸ್ಯ : ಕ್ಷತ್ರಿಯನಾದ ತಾನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ, ತನ್ನ ವೀರತ್ವವನ್ನು ಪ್ರದರ್ಶಿಸಿರುವುದು, ತಾಯಿಯ ಮೇಲಿದ್ದ ಅಭಿಮಾನ ಲವನ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

23. "ಅರಸುಗಳ ವಾಜಿಯಂ ಬಿಡು"

ಆಯ್ಕೆ : ಪ್ರಸ್ತುತ ಸಾಲನ್ನು ಲಕ್ಷ್ಮೀಶನು ಬರೆದ 'ಜೈಮಿನಿಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವಾಲ್ಮೀಕಿ ಆಶ್ರಮದ ತೋಟದಲ್ಲಿ ಚೆನ್ನಾಗಿ ಬೆಳೆದು ನಿಂತ ಹಸುರು ಹುಲ್ಲನ್ನು ತಿನ್ನಲು ಬಯಸಿ ಶ್ರೀರಾಮನ ಯಜ್ಞಾಶ್ವವು ಆಶ್ರಮವನ್ನು ಹೊಕ್ಕಾಗ, ತೋಟದ ಕಾವಲನ್ನು

ತನ್ನ ಜೊತೆಗಾರರೊಂದಿಗೆ ಮಾಡುತ್ತಿದ್ದ ವೀರಲವನು ಆಶ್ರಮದ ತೋಟವನ್ನು ಧ್ವಂಸಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರೆಹವನ್ನು ಓದಿ ಅದನ್ನು ಕಟ್ಟಿಹಾಕಲು ನಿರ್ಧರಿಸಿ, ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯ ಗಿಡಕ್ಕೆ ಕಟ್ಟಿಹಾಕುತ್ತಾನೆ. ಆ ಸಂದರ್ಭದಲ್ಲಿ ಹೆದರಿದ ಮುನಿಪುತ್ರರು ಈ ಮಾತನ್ನು ಲವನಿಗೆ ಹೇಳುತ್ತಾರೆ.

ಸ್ವಾರಸ್ಯ : ಮುನಿಪುತ್ರರು ರಾಜನ ಯಜ್ಞಾಶ್ವವನ್ನು ಕಟ್ಟಿ ಹಾಕುವುದು ಅಪರಾಧ. ಅದರಿಂದ ಮುಂದೆ ತೊಂದರೆ ಉಂಟಾಗುತ್ತದೆ ತಿಳಿದು ಎಂದು ಭಯಗೊಂಡಿರುವುದು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತಗೊಂಡಿದೆ.

24. "ಜಾನಕಿಯ ಮಗನಿದಕೆ ಬೆದರುವನೆ"

ಆಯ್ಕೆ : ಪ್ರಸ್ತುತ ಸಾಲನ್ನು ಲಕ್ಷ್ಮೀಶನು ಬರೆದ 'ಜೈಮಿನಿಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವೀರಲವನು ಆಶ್ರಮದ ತೋಟವನ್ನು ಧ್ವಂಸಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರೆಹವನ್ನು ಓದಿ ಅದನ್ನು ಕಟ್ಟಿ ಹಾಕಲು ನಿರ್ಧರಿಸಿ, ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯ ಗಿಡಕ್ಕೆ ಕಟ್ಟಿ ಹಾಕುತ್ತಾನೆ. ಲವನು ಕುದುರೆಯನ್ನು ಕಟ್ಟಿಹಾಕಿರುವುದನ್ನು ಕಂಡು ಹೆದರಿದ ಲವನ ಸಂಗಡಿಗರಾದ ಮುನಿಪುತ್ರರು ಕುದುರೆಯನ್ನು ಬಿಟ್ಟುಬಿಡು ಎಂದು ಲವನಿಗೆ ಹೇಳುತ್ತಾರೆ. ಆ ಸಂದರ್ಭದಲ್ಲಿ ಈ ಮಾತನ್ನು ಲವನು ಮುನಿಪುತ್ರರಿಗೆ ಹೇಳುತ್ತಾನೆ.

ಸ್ವಾರಸ್ಯ : ಸೀತೆಯ ಮಗನಾದ ಲವನಲ್ಲಿ ಕ್ಷತ್ರಿಯ ಸಹಜವಾಗಿರುವ ಧೈರ್ಯ, ಕ್ಷಾತ್ರಗುಣ, ಚಿಕ್ಕವರು ಅಸಮರ್ಥರು ಎಂದು ಕೂಡದೆ ಹೋರಾಡುವ ಮನೋಭಾವ ಪ್ರಸ್ತುತ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

25. "ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ"

ಆಯ್ಕೆ : ಪ್ರಸ್ತುತ ಸಾಲನ್ನು ಲಕ್ಷ್ಮೀಶನು ಬರೆದ 'ಜೈಮಿನಿಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕುದುರೆಯ ನೆತ್ತಿಯಲ್ಲಿ ಎದ್ದು ಕಾಣುವ ಚಿನ್ನದ ಪಟ್ಟಿಯಲ್ಲಿನ ಬರೆಹವನ್ನು ನೋಡಿ ಅದರಲ್ಲಿ ಬರೆದ "ಭೂಮಂಡಲದಲ್ಲಿ ಕೌಸಲ್ಯೆಯು ಪಡೆದ ಕುಮಾರನು ರಾಮನು ಒಬ್ಬನೇ ಪರಾಕ್ರಮಿ. ಅವನ ಯಜ್ಞದ ಕುದುರೆಯು ಇದಾಗಿದೆ. ನಿಭಾಯಿಸುವ ಸಾಮರ್ಥ್ಯವುಳ್ಳವರು ಯಾರೇ ಆದರೂ ಕುದುರೆಯನ್ನು ಕಟ್ಟಿ ತಡೆಯಲಿ" ಎಂದು ಇದ್ದ ಬರೆಹವನ್ನು ಓದಿ ಲವನು ಕೋಪಗೊಳ್ಳುತ್ತಾನೆ. "ಶ್ರೀರಾಮನ ಅಹಂಕಾರವನ್ನು ಬಿಡಿಸದಿದ್ದರೆ ತನ್‌ನ ತಾಯಿಯನ್ನು ಎಲ್ಲ ಜನರೂ ಬಂಜೆ ಎನ್ನದಿರುವರೇ? ತನಗೆ ಇರುವ ತೋಳುಗಳು ಏತಕೆ?" ಎಂದು ತಿಳಿದ ಲವನು ಪ್ರತಿಜ್ಞೆಯನ್ನು ಕೈಗೊಳ್ಳುವ ಸಂದರ್ಭದಲ್ಲಿ ಈ ಮಾತು ಬರುತ್ತದೆ.

ಸ್ವಾರಸ್ಯ : ಶ್ರೀರಾಮನೇ ತನ್ನ ತಂದೆ ಎಂದು ತಿಳಿಯದ ಲವನು ಕುದುರೆಯನ್ನು ಕಟ್ಟುವ ಸನ್ನಿವೇಶ ಹಾಗೂ ಲವನು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ, ವೀರತೆಯಿಂದ ಕುದುರೆಯನ್ನು ಕಟ್ಟಿಹಾಕುವ ದಿಟ್ಟತನ, ಬಾಲ್ಯ ಸಹಜ ಸಾಹಸ ಪ್ರವೃತ್ತಿ, ರಾಮನ ಪರಾಕ್ರಮ ಇಡೀ ಭೂಲೋಕವೇ ಒಪ್ಪಿಕೊಂಡಿತ್ತು ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿರುವುದನ್ನು ಕಾಣಬಹುದು.

26. "ಪಾರ್ವರ ಮಕ್ಕಳಂಜಿದೊಡೆಜಾನಕಿಯಮಗನಿದಕೆ ಬೆದರುವನೆ" .

ಆಯ್ಕೆ : ಪ್ರಸ್ತುತ ಸಾಲನ್ನು ಲಕ್ಷ್ಮೀಶನು ಬರೆದ 'ಜೈಮಿನಿಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಮುಗ್ಧ ಬಾಲಕನಾದ ಲವನು ಅಲ್ಲಿಯೇ ಇರುವ ಬಾಳೆಯ ಗಿಡಕ್ಕೆ ಕುದುರೆಯನ್ನು ಕಟ್ಟಿ ಹಾಕುತ್ತಾನೆ. ಇದನ್ನು ಕಂಡ ಆತನ ಸಂಗಡಿಗರಾದ ಮುನಿಗಳ ಮಕ್ಕಳು ಅಧಿಕವಾಗಿ ಹೆದರಿ, ನಡುಗಿ "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು" ಎಂದು ಲವನಲ್ಲಿ ಬೇಡಿಕೊಳ್ಳುತ್ತಾರೆ. ಆಗ ನಗುತ ಲವನು ತನ್ನ ಸಂಗಡಿಗರನ್ನು ಕುರಿತು "ಬ್ರಾಹ್ಮಣರ ಮಕ್ಕಳು ಹೆದರಿದರೆ. ಜಾನಕಿಯ ಮಗನು ಇದಕ್ಕೆ ಹೆದರುವನೆ? ನೀವು ಹೋಗಿ" ಎಂದು ಹೇಳುತ್ತಾನೆ.

ಸ್ವಾರಸ್ಯ : ಜೀವನದಲ್ಲಿ ಕಷ್ಟ-ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕೆಂಬ ನೀತಿಯನ್ನು ಇಲ್ಲಿ ಲವನ ಬಾಲ್ಯಸಹಜ ಸಾಹಸಪ್ರವೃತ್ತಿಯನ್ನು ಇಲ್ಲಿ ಕಾಣಬಹುದು. ಕ್ಷತ್ರಿಯನಾದ ಲವನು ತಾನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ, ತನ್ನ ವೀರತ್ವವನ್ನು ಪ್ರದರ್ಶಿಸುವುದು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

27. "ಎತ್ತಣ ತುರಂಗವಿದು" (ಅಭಿವ್ಯಕ್ತಿ-ಕಠಿಣ)

ಆಯ್ಕೆ : ಪ್ರಸ್ತುತ ಸಾಲನ್ನು ಲಕ್ಷ್ಮೀಶನು ಬರೆದ 'ಜೈಮಿನಿಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವಾಲ್ಮೀಕಿಯ ನಿಜಾಶ್ರಮದ ಉಪಯೋಗದ ತೋಟದಲ್ಲಿ ಚೆನ್ನಾಗಿ ಬೆಳೆದು ನಿಂತ ಹುಲ್ಲುಗಳ ಹಸುರಿಗೆ ಬಯಸಿ, ಕುದುರೆಯು ಆಶ್ರಮದೊಳಕ್ಕೆ ಹೊಕ್ಕಾಗ, ವೀರಲವನು ಆ ತೋಟದ ಕಾವಲಿಗೆ ತನ್ನ ಜೊತೆಗಾರರ ಜೊತೆಗೂಡಿ ಆನಂದದಿಂದ ಆಟವಾಡುತ್ತಿರುತ್ತಾನೆ. ಧನುರ್ಧಾರಿಯಾದ ಲವನು ಉಪವನದದಲ್ಲಿ ಇರುವ ಪೂಜಿಸಲ್ಪಟ್ಟ ಉತ್ತಮ ಕುದುರೆಯನ್ನು ಕಾಣುತ್ತಾನೆ. ಆ ಸಂದರ್ಭದಲ್ಲಿ ಲವನು ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಧನುರ್ಧಾರಿಯಾದ ಲವನು ಉಪವನದದಲ್ಲಿ ಇದ್ದ ಪೂಜಿಸಲ್ಪಟ್ಟ ಉತ್ತಮ ಕುದುರೆಯನ್ನು ಕಂಡು ಆಕರ್ಷಿತನಾಗಿ ಅಚ್ಚರಿಗೊಂಡಿರುವುದು ಪ್ರಸ್ತುತ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

28. "ವರುಣನ ಲೋಕದಿಂ ಬಂದು ಮುಳಿದಪನೆ" (ಅಭಿವ್ಯಕ್ತಿ-ಕಠಿಣ)

ಆಯ್ಕೆ : ಪ್ರಸ್ತುತ ಸಾಲನ್ನು ಲಕ್ಷ್ಮೀಶನು ಬರೆದ 'ಜೈಮಿನಿಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಆಶ್ರಮದ ಉಪವನದಲ್ಲಿ ಪೂಜಿಸಲ್ಪಟ್ಟ ಸುಂದರ ಕುದುರೆಯನ್ನು ಕಂಡ ಲವನು "ಇದು ಯಾವ ಕಡೆಯ ಕುದುರೆ? ಹೂತೋಟವನ್ನು ಹೊಕ್ಕು ನುಗ್ಗುನುರಿಯಾಗುವಂತೆ ತುಳಿದು ಹಾಳುಗೆಡವಿದೆ ಅಲ್ಲ. ವಾಲ್ಮೀಕಿ ಮುನಿನಾಥನೇ ತೋಟವನ್ನು ಸದಾ ಕಾಪಾಡಿ ಸಂರಕ್ಷಿಸಬೇಕೆಂದು ನನ್ನನ್ನು ತೋಟದ ಕಾವಲಿಗೆ ನೇಮಿಸಿ, ವರುಣನು ಕರೆಸಲಾಗಿ ವರುಣಲೋಕಕ್ಕೆ ಹೋಗಿರುವರು. ಪುನಃ ವರುಣನ ಲೋಕದಿಂದ ಬಂದು ವಾಲ್ಮೀಕಿ ಮುನಿ ನನ್ನ ಮೇಲೆ ಕೋಪಗೊಳ್ಳದಿರುವರೇ?" ಎಂದು ಲವನು ತನ್ನಲ್ಲೇ ಪ್ರಶ್ನಿಸುತ್ತ ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ತೋಟ ಕಾಯುವ ಜವಾಬ್ದಾರಿಯನ್ನು ತನಗೆ ವಹಿಸಿರುವ ವೇಳೆ ಈ ಕುದುರೆಯು ತೋಟವನ್ನು ತುಳಿದು ನಾಶಪಡಿಸಿದೆ. ಈ ವಿಚಾರ ತಿಳಿದು ವಾಲ್ಮೀಕಿ ಮುನಿ ಕೋಪಗೊಂಡು

ಬೈಯುವರು ಎಂದು ಲವನು ಭಾವಿಸಿ ಭಯಗೊಂಡಿರುವುದು ಪ್ರಸ್ತುತ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

29. "ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ಬಿಗಿದು"

ಆಯ್ಕೆ : ಪ್ರಸ್ತುತ ಸಾಲನ್ನು ಲಕ್ಷ್ಮೀಶನು ಬರೆದ 'ಜೈಮಿನಿಭಾರತ' ಕೃತಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವೀರಲವನು ಆಶ್ರಮದ ತೋಟವನ್ನು ಪ್ರವೇಶಿಸಿದ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರೆಹವನ್ನು ಓದಿ ಕೋಪಗೊಳ್ಳುತ್ತಾನೆ. ಕುದುರೆಯನ್ನು ಕಟ್ಟಿ ಹಾಕಬೇಕೆಂದು ನಿರ್ಧರಿಸಿದ ನಂತರ ತನ್ನ ಮೇಲು ಹೊದಿಕೆಯನ್ನು ತೆಗೆದು ಹುರಿಮಾಡಿ ಕುದುರೆಯ ಕೊರಳಿಗೆ ಬಿಗಿದನು ಎಂದು ಕವಿ ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಕ್ಷತ್ರಿಯನಾದ ಲವನು ತಾನು ಬಾಲಕನಾದರೂ ಹೆದರದೆ ಧೈರ್ಯ, ತನ್ನ ವೀರತ್ವವನ್ನು ಪ್ರದರ್ಶಿಸುವುದು ಪ್ರಸ್ತುತ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :

30. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

ಅಥವಾ

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು.

ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :

31. ರಾಮಾಯಣ ಮಹಾಕಾವ್ಯದಲ್ಲಿ ಬರುವ ಕುಶಲವರ ಕತೆ ಸರಳವೂ ಸುಂದರವೂ ಆಗಿದೆ. ಶ್ರೀರಾಮನು ಕೈಗೊಂಡ ಅಶ್ವಮೇಧಯಾಗದ ಕುದುರೆಯನ್ನು ತನ್ನ ತಂದೆ ಶ್ರೀರಾಮನದು ಎಂದು ತಿಳಿಯದ ಲವನ ಬಾಲ ಸಹಜ ಕುತೂಹಲದಿಂದ ಕಟ್ಟುತ್ತಾನೆ. ಆ ಸಂದರ್ಭದ ಕಾವ್ಯದ ಸೊಬಗನ್ನು ಪರಿಚಯಿಸುವುದು ಕವಿ ಲಕ್ಷ್ಮೀಶನು ಬರೆದ 'ವೀರಲವ' ಪದ್ಯದ ಆಶಯವಾಗಿದೆ.

ಸೀತೆಯ ಅಗಲುವಿಕೆಯಿಂದ ಶ್ರೀರಾಮನು ಮಾನಸಿಕವಾಗಿ ದುಃಖಕ್ಕೀಡಾಗುತ್ತಾನೆ. ರಾವಣನ ವಧೆಯಿಂದ ಬ್ರಹ್ಮಹತ್ಯಾದೋಷ ಬಂದಿರುವುದನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಮಹರ್ಷಿಗಳ ಆದೇಶದಂತೆ ರಾಮ ಅಶ್ವಮೇಧವನ್ನು

ಕೈಗೊಳ್ಳುತ್ತಾನೆ. ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸುತ್ತಾನೆ. ರಾಮನ ಆಜ್ಞೆಯನ್ನು ಕೇಳಿ, ಭುಜಬಲ ಪರಾಕ್ರಮಿಗಳಾದ ರಾಜರು ಹೆದರಿ, ತಡೆಯದೆ, ನಮಸ್ಕರಿಸಿ ಕುದುರೆಯನ್ನು ಮುಂದೆ ಕಳುಹಿಸುತ್ತಾರೆ. ಹೀಗೆ ಭೂಮಿಯಲ್ಲಿ ಸಂಚರಿಸುತ್ತ ಯಜ್ಞದ ಉತ್ತಮವಾದ ಕುದುರೆ ವಾಲ್ಮೀಕಿಯ ನಿಜಾಶ್ರಮದ ಬಳಿಗೆ ಬರುತ್ತದೆ. ವಾಲ್ಮೀಕಿಯ ನಿಜಾಶ್ರಮದ ಉಪಯೋಗದ ತೋಟದಲ್ಲಿ ಚೆನ್ನಾಗಿ ಬೆಳೆದು ನಿಂತ ಹುಲ್ಲುಗಳ ಹಸುರಿಗೆ ಬಯಸಿ, ಕುದುರೆಯು ಆಶ್ರಮದ ತೋಟವನ್ನು ಹೊಕ್ಕಾಗ, ವೀರಲವನು ಆ ತೋಟದ ಕಾವಲಿಗೆ ತನ್ನ ಜೊತೆಗಾರರ ಜೊತೆಗೂಡಿ ಆನಂದದಿಂದ ಆಟವಾಡುತ್ತಿರುತ್ತಾನೆ. ಧನುರ್ಧಾರಿಯಾದ ಲವನು ಉಪವನದದಲ್ಲಿ ಇರುವ ಪೂಜಿಸಲ್ಪಟ್ಟ ಉತ್ತಮ ಕುದುರೆಯನ್ನು ಕಾಣುತ್ತಾನೆ.

ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟಿರುವಲ್ಲಿ ಶ್ರೀರಾಮನ ಪರಾಕ್ರಮದ ಶ್ರೇಷ್ಠತೆ ಹಾಗೂ ವಾಲ್ಮೀಕಿ ಮುನಿಯ ಆಶ್ರಮದ ಸುಂದರ ಪರಿಸರದಲ್ಲಿನ ಹಸುರನ್ನು ತಿನ್ನಲು ಬಯಸಿದ ಪೂಜಿಸಲ್ಪಟ್ಟ ಕುದುರೆಯನ್ನು ಲವನು ಕಂಡ ಬಗೆ ಮೌಲ್ಯಯುತವಾಗಿ ಮೂಡಿಬಂದಿದೆ.

32. ರಾಮಾಯಣ ಮಹಾಕಾವ್ಯದಲ್ಲಿ ಬರುವ ಕುಶಲವರ ಕತೆ ಸರಳವೂ ಸುಂದರವೂ ಆಗಿದೆ. ಶ್ರೀರಾಮನು ಕೈಗೊಂಡ ಅಶ್ವಮೇಧಯಾಗದ ಕುದುರೆಯನ್ನು ತನ್ನ ತಂದೆ ಶ್ರೀರಾಮನದು ಎಂದು ತಿಳಿಯದ ಲವನ ಬಾಲ ಸಹಜ ಕುತೂಹಲದಿಂದ ಕಟ್ಟುತ್ತಾನೆ. ಆ ಸಂದರ್ಭದ ಕಾವ್ಯದ ಸೊಬಗನ್ನು ಪರಿಚಯಿಸುವುದು ಕವಿ ಲಕ್ಷ್ಮೀಶನು ಬರೆದ 'ವೀರಲವ' ಪದ್ಯದ ಆಶಯವಾಗಿದೆ.

ಆಶ್ರಮದ ಉಪವನದಲ್ಲಿ ಪೂಜಿಸಲ್ಪಟ್ಟ ಸುಂದರ ಕುದುರೆಯನ್ನು ಕಂಡ ಲವನು "ಇದು ಯಾವ ಕಡೆಯ ಕುದುರೆ? ಹೂತೋಟವನ್ನು ಹೊಕ್ಕು ನುಗ್ಗುನುರಿಯಾಗುವಂತೆ ತುಳಿದು ಹಾಳುಗೆಡವಿದೆ ಅಲ್ಲ. ವಾಲ್ಮೀಕಿ ಮುನಿನಾಥನೇ ತೋಟವನ್ನು ಒಣಗದಂತೆ ಸದಾ ಕಾಪಾಡಿ ಸಂರಕ್ಷಿಸಬೇಕೆಂದು ನನ್ನನ್ನು ತೋಟದ ಕಾವಲಿಗೆ ನೇಮಿಸಿ, ವರುಣನು ಕರೆಸಲಾಗಿ ವರುಣಲೋಕಕ್ಕೆ ಹೋಗಿರುವರು. ಪುನಃ ವರುಣನ ಲೋಕದಿಂದ ಬಂದು ವಾಲ್ಮೀಕಿ ಮುನಿ ನನ್ನ ಮೇಲೆ ಕೋಪಗೊಳ್ಳದಿರುವನೆ?" ಎಂದು ಕೊಂಡು ಲವನು ಕುದುರೆಯು ಇರುವ ಕಡೆಗೆ ನಡೆದು ಬಂದನು. ನಂತರ ಕುದುರೆಯ ನೆತ್ತಿಯಲ್ಲಿ ಎದ್ದು ಕಾಣುವ ಚಿನ್ನದ ಪಟ್ಟಿಯಲ್ಲಿನ ಬರೆಹವನ್ನು ನೋಡಿ ಅದನ್ನು ಓದಿಕೊಳ್ಳುತ್ತಿದ್ದನು.

ತನಗೆ ತೋಟದ ರಕ್ಷಣೆಯನ್ನು ಮಾಡಬೇಕೆಂದು ಗುರು ವಾಲ್ಮೀಕಿಯು ಹೇಳಿ ಹೋದ ಸಂದರ್ಭದಲ್ಲಿ, ಈ ಕುದುರೆಯು ತೋಟವನ್ನು ತುಳಿದು ನಾಶಪಡಿಸಿದೆ. ಈ ವಿಚಾರ ತಿಳಿದು ವಾಲ್ಮೀಕಿ ಮುನಿ ಕೋಪಗೊಂಡು ಬೈಯುವರು. ಆದ್ದರಿಂದ ಕುದುರೆಯನ್ನು ಕಟ್ಟಿ ಹಾಕಬೇಕೆಂದು ಲವನು ವೀರತೆಯಿಂದ ಕುದುರೆಯ ಬಳಿಗೆ ಬಿಲ್ಲೊಂಡು ಬಂದಿರುತ್ತಾನೆ. ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ ಲವನಲ್ಲಿ ವ್ಯಕ್ತಗೊಂಡಿರುವುದು ಸ್ವಾರಸ್ಯಪೂರ್ಣವಾಗಿ ಇಲ್ಲಿ ಮೂಡಿಬಂದಿದೆ.

33. ರಾಮಾಯಣ ಮಹಾಕಾವ್ಯದಲ್ಲಿ ಬರುವ ಕುಶಲವರ ಕತೆ ಸರಳವೂ ಸುಂದರವೂ ಆಗಿದೆ. ಶ್ರೀರಾಮನು ಕೈಗೊಂಡ ಅಶ್ವಮೇಧಯಾಗದ ಕುದುರೆಯನ್ನು ತನ್ನ ತಂದೆ ಶ್ರೀರಾಮನದು ಎಂದು ತಿಳಿಯದ ಲವನ ಬಾಲ ಸಹಜ ಕುತೂಹಲದಿಂದ ಕಟ್ಟುತ್ತಾನೆ. ಆ ಸಂದರ್ಭದ

ಕಾವ್ಯದ ಸೊಬಗನ್ನು ಪರಿಚಯಿಸುವುದು ಕವಿ ಲಕ್ಷ್ಮೀಶನು ಬರೆದ 'ವೀರಲವ' ಪದ್ಯದ ಆಶಯವಾಗಿದೆ.

ಕುದುರೆಯ ನೆತ್ತಿಯಲ್ಲಿ ಎದ್ದು ಕಾಣುವ ಚಿನ್ನದ ಪಟ್ಟಿಯಲ್ಲಿನ ಬರೆಹವನ್ನು ನೋಡಿ ಅದರಲ್ಲಿ ಬರೆದ "ಭೂಮಂಡಲದಲ್ಲಿ ಕೌಸಲ್ಯೆಯಲ್ಲಿ ರಾಮನು ಒಬ್ಬನೇ ಪರಾಕ್ರಮಿ. ಅವನ ಯಜ್ಞದ ಕುದುರೆಯು ಇದಾಗಿದೆ. ನಿಭಾಯಿಸುವ ಸಾಮರ್ಥ್ಯವುಳ್ಳವರು ಯಾರೇ ಆದರೂ ಕುದುರೆಯನ್ನು ಕಟ್ಟಿ ತಡೆಯಲಿ" ಎಂದಿದ್ದ ಬರೆಹವನ್ನು ಓದಿ ಲವನು ಕೋಪಗೊಳ್ಳುತ್ತಾನೆ. "ಶ್ರೀರಾಮನ ಅಹಂಕಾರವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲ ಜನರೂ ಬಂಜೆ ಎನ್ನದಿರುವರೇ? ತನಗೆ ಇರುವ ತೋಳುಗಳು ಇವು ಏತಕೆ?" ಎಂದು ಲವನು ಪ್ರತಿಜ್ಞೆಯನ್ನು ಕೈಗೊಂಡು ಉರಿದೆದ್ದನು.

ಶ್ರೀರಾಮನೇ ತನ್ನ ತಂದೆ ಎಂದು ತಿಳಿಯದ ಲವನು ಕುದುರೆಯನ್ನು ಕಟ್ಟುವ ಸನ್ನಿವೇಶ ಹಾಗೂ ಲವನು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ, ವೀರತೆಯಿಂದ ಕುದುರೆಯನ್ನು ಕಟ್ಟಿಹಾಕುವ ದಿಟ್ಟತನ ಚಿಕ್ಕವರು ಅಸಮರ್ಥರು ಎಂದು ಕೂರದೆ ಬಾಲ್ಯಸಹಜ ಸಾಹಸ ಪ್ರವೃತ್ತಿ ಇಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿರುವುದನ್ನು ಕಾಣಬಹುದು.

34. ರಾಮಾಯಣ ಮಹಾಕಾವ್ಯದಲ್ಲಿ ಬರುವ ಕುಶಲವರ ಕತೆ ಸರಳವೂ ಸುಂದರವೂ ಆಗಿದೆ. ಶ್ರೀರಾಮನು ಕೈಗೊಂಡ ಅಶ್ವಮೇಧಯಾಗದ ಕುದುರೆಯನ್ನು ತನ್ನ ತಂದೆ ಶ್ರೀರಾಮನದು ಎಂದು ತಿಳಿಯದ ಲವನು ಬಾಲ ಸಹಜ ಕುತೂಹಲದಿಂದ ಕಟ್ಟುತ್ತಾನೆ. ಆ ಸಂದರ್ಭದ ಕಾವ್ಯದ ಸೊಬಗನ್ನು ಪರಿಚಯಿಸುವುದು ಕವಿ ಲಕ್ಷ್ಮೀಶನು ಬರೆದ 'ವೀರಲವ' ಪದ್ಯದ ಆಶಯವಾಗಿದೆ.

ತೋಟವನ್ನು ಪ್ರವೇಶಿಸಿದ ಕುದುರೆಯ ಹಣೆಯ ಮೇಲಿನ ಪಟ್ಟದ ಲಿಖಿತವನ್ನು ಓದಿಕೊಂಡ ವೀರಲವನು ಕೋಪಗೊಂಡು ತನ್ನ ಮೇಲು ಹೊದಿಕೆಯನ್ನು ತೆಗೆದು ಹುರಿಮಾಡಿ ಕುದುರೆಯ ಕೊರಳಿಗೆ ಬಿಗಿಯುತ್ತಾನೆ. ಮುಗ್ಧ ಬಾಲಕನಾದ ಲವನು ನಂತರ ಅಲ್ಲಿಯೇ ಇರುವ ಬಾಳೆಯ ಗಿಡಕ್ಕೆ ಕುದುರೆಯನ್ನು ಕಟ್ಟಿ ಹಾಕುತ್ತಾನೆ. ಇದನ್ನು ಕಂಡ ಆತನ ಸಂಗಡಿಗರಾದ ಮುನಿಗಳ ಮಕ್ಕಳು ಅಧಿಕವಾಗಿ ಹೆದರಿ, ನಡುಗಿ "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು" ಎಂದು ಲವನಲ್ಲಿ ಬೇಡಿಕೊಳ್ಳುತ್ತಾರೆ. ಆಗ ನಗುತ ಲವನು ತನ್ನ ಸಂಗಡಿಗರನ್ನು ಕುರಿತು "ಬ್ರಾಹ್ಮಣರ ಮಕ್ಕಳು ಹೆದರಿದರೆ. ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಹೇಳುತ್ತಾನೆ. ಅಲ್ಲದೇ ಶೌರ್ಯದಿಂದ ಬಿಲ್ಲಿನ ಹೆದೆಯನ್ನು ಬಿಗಿದು, ಸವರಿ ಧನುಷ್ಟಂಕಾರ ಮಾಡಿ ಯುದ್ಧಮಾಡಲು ಸನ್ನದ್ಧನಾಗಿ ನಿಲ್ಲುತ್ತಾನೆ.

ಶ್ರೀರಾಮನೇ ತನ್ನ ತಂದೆ ಎಂದು ತಿಳಿಯದ ಲವ ಕುದುರೆಯನ್ನು ಕಟ್ಟುವ ಸನ್ನಿವೇಶ ಹಾಗೂ ಲವನು ಹುಟ್ಟಿದ್ದು ಋಷ್ಯಾಶ್ರಮದಲ್ಲಾದರೂ ಸಹಜ ಕ್ಷಾತ್ರಗುಣ, ವೀರತೆಯಿಂದ ಮತ್ತು ಮುಗ್ಧತೆಯಿಂದ ಕುದುರೆಯನ್ನು ಕಟ್ಟಿಹಾಕುವ ರೀತಿ ಮನೋಜ್ಞವಾಗಿ ಪ್ರಸ್ತುತ ಪದ್ಯದಲ್ಲಿ ಮೂಡಿಬಂದಿದೆ. ಜೀವನದಲ್ಲಿ ಕಷ್ಟ-ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲ್ಯಸಹಜ ಸಾಹಸ ಪ್ರವೃತ್ತಿಯನ್ನು ಇಲ್ಲಿ ಕಾಣಬಹುದು. ಕ್ಷತ್ರಿಯನಾದ ಲವನು ತಾನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ, ತನ್ನ ವೀರತ್ವವನ್ನು ಪ್ರದರ್ಶಿಸುವುದು ಸಾ್ವರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

35. ರಾಮನ ಅಶ್ವಮೇಧಯಾಗದ ಕುದುರೆ ದೇಶದೇಶಗಳಲ್ಲಿ ಸಂಚರಿಸುತ್ತದೆ. ಶ್ರೀರಾಮನ ಯಾಗದ ಕುದುರೆ ಎಂದು ತಿಳಿದು ರಾಜ ಮಹಾರಾಜರುಗಳು ಅದನ್ನು ಕಟ್ಟಿ ಹಾಕದೆ ನಮಸ್ಕರಿಸಿ ಕಳುಹಿಸುತ್ತಾರೆ. ಹೀಗೆ ಭೂಮಂಡಲದಲ್ಲೆಲ್ಲಾ ಸಂಚರಿಸುತ್ತಾ ಬಂದ ಕುದುರೆ ವಾಲ್ಮೀಕಿ ಆಶ್ರಮದ ಉಪವನದ ಹುಲ್ಲನ್ನು ಕಂಡು ಆಕರ್ಷಿತವಾಗಿ ತಿನ್ನಲು ಬಯಸಿ ಉದ್ಯಾನವನ್ನು ಪ್ರವೇಶಿಸಿತು. ಅಲ್ಲಿದ್ದ ಹೂವಿನ ಗಿಡಗಳನ್ನು ಚೆನ್ನಾಗಿ ತುಳಿದು ಹುಲ್ಲನ್ನು ತಿನ್ನಲಾರಂಭಿಸಿತು. ಉದ್ಯಾನವನದ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಲವನು ಕುದುರೆಯನ್ನು ಕಟ್ಟಿಹಾಕಲು ಬಂದಾಗ ಅದರ ಹಣೆಯಲ್ಲಿದ್ದ ಲೇಖನವನ್ನು ಓದುತ್ತಾನೆ. "ಈ ಭೂಮಿಯಲ್ಲಿ ಕೌಸಲ್ಯೆಯ ಮಗ ರಾಮನೊಬ್ಬನೇ ವೀರನು. ಅವನ ಯಾಗದ ಕುದುರೆಯಿದು. ಇದನ್ನು ಕಟ್ಟಿಹಾಕುವ ವೀರರು ಯಾರಾದರೂ ಇದ್ದರೆ ಕಟ್ಟಿಹಾಕಬಹುದು." ಈ ಮಾತುಗಳಿಂದ ಲವನು ಕೋಪಗೊಳ್ಳುತ್ತಾನೆ. ಕೌಸಲ್ಯೆಯ ಮಗ ರಾಮನು ಮಾತ್ರ ವೀರನೇ? ಜಾನಕಿಯ ಮಗನಾದ ನಾನು ವೀರನಲ್ಲವೇ? ತಾನೀಗ ಕುದುರೆಯನ್ನು ಕಟ್ಟಿಹಾಕದಿದ್ದರೆ ಲೋಕದ ಜನರು ತನ್ನ ಮಾತೆಯಾದ ಜಾನಕಿಯನ್ನು ಬಂಜೆಯೆನ್ನದೆ ಇರುವರೇ? ಎಂದು ತನ್ನ ಉತ್ತರೀಯದಿಂದ ಆ ಕುದುರೆಯನ್ನು ಬಾಳೆಗಿಡಕ್ಕೆ ಕಟ್ಟಿಹಾಕಲು ಮುಂದಾಗುತ್ತಾನೆ. ಆಗ ಅಲ್ಲಿದ್ದ ತಪಸ್ವಿ ಪುತ್ರರು ಅದು ಅರಸನ ಕುದುರೆ ಅದನ್ನು ಕಟ್ಟಿಹಾಕಿದರೆ ನಮ್ಮನ್ನು ಹೊಡೆಯುವರು ಎಂದು ಬಾಲಸಹಜ ಭಯದಿಂದ ಹೇಳಿದಾಗ, "ಋಷಿಯ ಮಕ್ಕಳಾದ ನೀವು ಅಂಜಿದರೆ ಕ್ಷತ್ರಿಯ ಕುಲಜನಾದ ನಾನು ಹೆದರುವುದೇ?" ಎಂದು ಆ ಕುದುರೆಯನ್ನು ಕಟ್ಟಿಹಾಕುತ್ತಾನೆ.

36. ಬಾಲಕನಾದ ಲವನಲ್ಲಿದ್ದ ಕ್ಷತ್ರಿಯ ಸಹಜವಾದ ವರ್ತನೆ, ಧೈರ್ಯ, ಸಾಹಸ ಪ್ರವೃತ್ತಿ, ಯಾವುದೇ ಕಾರ್ಯದಲ್ಲಿ ಎದೆಗುಂದದೆ ಮುನ್ನುಗ್ಗುವ ನಾಯಕತ್ವದ ಗುಣಗಳನ್ನು ಸಹಜ ಸುಂದರವಾಗಿ ವರ್ಣಿಸಿದ್ದಾನೆ. ವಾಲ್ಮೀಕಿ ಮುನಿಗಳು ತನಗೆ ಉದ್ಯಾನವನದ ರಕ್ಷಣೆಯ ಜವಾಬ್ದಾರಿಯನ್ನು ಕೊಟ್ಟಿರುವುದರಿಂದ ಬಾಲಕ ಲವ ಅದರ ಆರೈಕೆಯನ್ನು ನಿಷ್ಠೆಯಿಂದ ಮಾಡುತ್ತಿದ್ದನು. ಶ್ರೀರಾಮನ ಯಾಗದ ಕುದುರೆ ಬಂದು ಉದ್ಯಾನವನದ ಹೂಗಿಡಗಳನ್ನು ನುಗ್ಗು ನುರಿಯಾಗುವಂತೆ ತುಳಿಯುತ್ತಿರುವುದನ್ನು ಕಂಡು ಆತನಿಗೆ ಕೋಪ ತಡೆಯಲಾಗಲಿಲ್ಲ. ಯಾವುದೀ ಕುದುರೆ ನಮ್ಮ ಉದ್ಯಾನವನಕ್ಕೆ ಬಂದಿದೆಯಲ್ಲಾ ಎಂದು ಆತ ಅದರ ಹತ್ತಿರ ಹೋಗುತ್ತಾನೆ. ಅದರ ಹಣೆಯ ಪಟ್ಟಿಯಲ್ಲಿದ್ದ ಲೇಖನ ಆತನ ಕ್ಷಾತ್ರರಕ್ತ ಮತ್ತಷ್ಟು ಕುದಿಯುವಂತೆ ಮಾಡುತ್ತದೆ. ಕೌಸಲ್ಯಾ ಪುತ್ರನಾದ ರಾಮನೊಬ್ಬನೇ ವೀರನಂತೆ ಜಾನಕಿಯ ಮಗನಾದ ನಾನು ವೀರನಲ್ಲವೇ? ಎನ್ನುವಲ್ಲಿ ಕ್ಷತ್ರಿಯ ಪುತ್ರಿ ಜಾನಕಿಯ ಮಗನಾದ ಲವನಲ್ಲಿರುವ ಕ್ಷಾತ್ರ ತೇಜಸ್ಸು ಹೊಮ್ಮಿ ರಾಮನ ಗರ್ವವನ್ನು ಬಿಡಿಸದಿದ್ದರೆ ನನಗೆ ಇರುವ ತೋಳುಗಳು ಏತಕ್ಕೆಂದು ವೀರಾವೇಷದಿಂದ ಕುದುರೆಯನ್ನು ಕಟ್ಟಿಹಾಕಲು ಮುಂದಾಗುತ್ತಾನೆ. ಶಾಂತಿಪ್ರಿಯರಾದ ಮುನಿಕುಮಾರರು ಬೇಡ ಅರಸರ ಕುದುರೆ ಎಂದು ಭಯಭೀತರಾದರೆ, ಮುನಿಸುತರ ಮಕ್ಕಳು ಹೆದರಿದರೆ ಜಾನಕಿಯ ಮಗನಿದಕೆ ಬೆದರುವನೇ? ಎಂದು ತನ್ನಲ್ಲಿ ರಕ್ತಗತವಾಗಿ ಬಂದಿರುವ ಧೈರ್ಯ, ಶೌರ್ಯ ಬಾಲಸಹಜ ಸಾಹಸ ಪ್ರವೃತ್ತಿಯನ್ನು ಮೆರೆಯುತ್ತಾನೆ. ಹೀಗೆ ಲವನ ಕ್ಷಾತ್ರಗುಣ ಪದ್ಯದುದ್ದಕ್ಕೂ ಅರ್ಥಪೂರ್ಣವಾಗಿ ಮೂಡಿಬಂದಿದೆ.

ಮಾದರಿ ಉತ್ತರಗಳು : ಪದ್ಯಪಾಠ 8. ಕೆಮ್ಮನೆ ಮೀಸೆವೊತ್ತೆನೇ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. ದ್ರೋಣನು ಪರಶುರಾಮರಲ್ಲಿಗೆ ದ್ರವ್ಯವನ್ನು (ಸಂಪತ್ತನ್ನು) ಬೇಡುವುದಕ್ಕಾಗಿ ಬಂದನು.

2. ಪರಶುರಾಮನು ದ್ರೋಣನಿಗೆ ವರುಣ, ವಾಯುವ್ಯ, ಆಗ್ನೇಯ, ಇಂದ್ರಾದಿ ಎಂಬ ಪ್ರಧಾನ ಅಸ್ತ್ರಗಳನ್ನು ಕೊಟ್ಟನು.

3. ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನು.

4. ದ್ರೋಣಾಚಾರ್ಯರನ್ನು ಕುಂಭಸಂಭವ ಎಂದು ಕರೆಯುತ್ತಾರೆ.

5. ಅಂತಹವನನ್ನು ನಾನು ತಿಳಿದಿಲ್ಲ; ಅವನನ್ನು ಹೊರಕ್ಕೆ ತಳ್ಳು ಎಂದು ದ್ರುಪದನು ಪಡಿಯರನಿಗೆ (ದ್ವಾರಪಾಲಕನಿಗೆ) ಹೇಳಿದನು.

6. ದ್ರೋಣನ ಮಗನಾದ ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದರು.

7. ದ್ರೋಣನು ಪರಶುರಾಮನ ಬಳಿ ಬಂದಾಗ ಪರಶುರಾಮನು ವಲ್ಕಲಾವೃತ ಕಟಿತಟನುಮಾಗಿ, ಜಟಾಕಲಾಪನುಮಾಗಿ ತಪೋವನಕ್ಕೆ ಹೋಗುವ ವೇಷವನ್ನು ಧರಿಸಿದ್ದನು.

8. ಭಾರ್ಗವ ಎಂದರೆ ಪರಶುರಾಮ.

9. ಪರಶುರಾಮನು ದ್ರೋಣನಿಗೆ ಮಣ್ಣಿನ ಮಡಿಕೆಯಲ್ಲಿ ಅರ್ಘ್ಯ ನೀಡಿದನು.

10. ಪರಶುರಾಮನು ಅವನಿಯನ್ನು ತನ್ನ ಗುರುವಿಗೆ(ಗುರು ಕಶ್ಯಪನಿಗೆ) ದಾನ ಮಾಡಿದ್ದನು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

11. ಗುರುದ್ರೋಣನಿಗೆ ಬಡತನ ಬಂದಾಗ ತನ್ನ ಮಗನಾದ ಅಶ್ವತ್ಥಾಮನ ಜೊತೆಗೂಡಿ ದೇಶದೇಶಗಳಲ್ಲೆಲ್ಲ ಸುತ್ತಿ ದಾನಕಾರ್ಯದಲ್ಲಿ ಇರುವ ಪರಶುರಾಮನ ಬಳಿಗೆ ಸಂಪತ್ತನ್ನು ಬೇಡಲು ಬರುತ್ತಾನೆ. ಆ ಸಂದರ್ಭದಲ್ಲಿ ನಾರುಮಡಿಯಿಂದ ಕೂಡಿದ ನಡುವನ್ನುಳ್ಳವನೂ, ಜಟಾಸಮೂಹದಿಂದ ಕೂಡಿದವನಾಗಿ ತಪೋವನಕ್ಕೆ ಹೋಗುವ ಪರಶುರಾಮನು ತನ್ನಲ್ಲಿದ್ದ ಸಂಪತ್ತನ್ನೆಲ್ಲ ಬೇಡಿ ಬಂದದವರಿಗೆ ದಾನ ಮಾಡಿದ್ದರಿಂದ ಆತನ ಬಳಿ ಬಿಲ್ಲುಬಾಣಗಳಲ್ಲದೆ ಬೇರೆನೂ ಇರಲಿಲ್ಲ. ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನಿಗೆ ತನ್ನ ಬಳಿ ಚಿನ್ನದ ಪಾತ್ರೆಗಳಿಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

12. ದ್ರುಪದನು ದ್ರೋಣರಿಗೆ ನೀನು ಯಾರೆಂದು ನನಗೆ ತಿಳಿದಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ಮರ್ಮಭೇದಕವಾಗುವಂತೆ ಹೀಯಾಳಿಸಿದನು.

13. ದ್ರೋಣನು ದ್ರುಪದನನ್ನು ಕುರಿತು ಎಲೋ ದುಷ್ಟನೇ, "ನೊಣಕ್ಕೆ ಕಸವೇ ಶ್ರೇಷ್ಠವಾದುದು" ಎನ್ನುವ ಗಾದೆಯ ಮಾತಿನಂತೆ ನಿನ್ನ ಯೋಗ್ಯತೆ ನನ್ನವರೆಗೂ ಬರಲು ಸಾಧ್ಯವೇ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ನಾನು ಕೊಲ್ಲಲಾರೆ. ಈ ಸಭಾಮಂಡಲದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ?" ಎಂದು ಪ್ರತಿಜ್ಞೆಗೈಯುತ್ತಾನೆ.

14. ಪರಶುರಾಮನು ದ್ರೋಣನಿಗೆ ಈಗ ಇದೊಂದು ಬಿಲ್ಲು ಹಾಗೂ ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಯಾವ ಆಸ್ತಿಯೂ ನನ್ನ ಬಳಿ ಇಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ ಚೆನ್ನಾಗಿ ಯೋಚಿಸಿ ಹೇಳು ಎಂದು ಹೇಳಿದನು. ಆಗ ದ್ರೋಣನು ನನಗೆ ವಿದ್ಯಾಧನವೇ ಧನವಾಗಿದೆ. ಆದುದರಿಂದ ದಿವ್ಯವಾದ ಅಸ್ತ್ರಗಳನ್ನು ದಯಪಾಲಿಸಬೇಕೆಂದು ಪರಶುರಾಮನಲ್ಲಿ ಕೇಳುತ್ತಾನೆ. ಪರಶುರಾಮನು ವರುಣ, ವಾಯುವ್ಯ, ಆಗ್ನೇಯ, ಇಂದ್ರಾದಿ ಮೊದಲಾದ ಪ್ರಧಾನ ಅಸ್ತ್ರಗಳನ್ನು ದ್ರೋಣನಿಗೆ ದಯಪಾಲಿಸುತ್ತಾನೆ.

15. ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತು ತೊದಲುವುದು, ಮುಖದಲ್ಲಿ ವಕ್ರಚೇಷ್ಟೆಯುಂಟಾಗುವುದು ಒಂದು, ಮಾತುಗಳು ನಾಚಿಕೆಗೆ ಅವಕಾಶವಿಲ್ಲದಿರುವುದು, ಮಾತುಗಳು ಬಾಂಧವ್ಯವನ್ನು ಮರೆಯುವಂತೆ ಮಾಡುವುದು ಹೀಗೆ ಐಶ್ವರ್ಯವು ಬರಲು ಹೆಂಡ ಕುಡಿದವರ ರೀತಿಯುಂಟಾಗುತ್ತದೆಯಾದ್ದರಿಂದ ಐಶ್ವರ್ಯವು ಮಧ್ಯದೊಡನೆ ಹುಟ್ಟಿತು ಎಂಬುದನ್ನು ಸ್ಪಷ್ಟವಾಗಿ, ನಿಸ್ಸಂಶಯವಾಗಿ ಈಗ ತಿಳಿದುಕೊಂಡೆನು ಎಂದನು.

16. ಭಾರ್ಗವನು ದ್ರೋಣನಿಗೆ ಅರ್ಘ್ಯಮೆತ್ತಿ ಪೂಜಿಸಿದ ನಂತರ ದ್ರೋಣನನ್ನು ಕುರಿತು "ನನ್ನಲ್ಲಿದ್ದ ಸಂಪತ್ತನ್ನೆಲ್ಲಾ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ ಕೊಟ್ಟೆನು. ಈಗ ನನ್ನ ಕೈಯಲ್ಲಿ್ಲ ಒಂದಡಕೆಯೂ ಇಲ್ಲ. ಬೇಡಲು ಬಂದಿರುವವನು ವೇದಪಾರಂಗತನಾದವನು. ಅವನನ್ನು ಹೇಗೆ ಸಂತೋಷಪಡಿಸಲಿ? ಎಲೈ ದ್ರೋಣನೆ ಈಗ ಇದೊಂದು ಬಿಲ್ಲು ಹಾಗೂ ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ಬೇರೆ ಯಾವ ಆಸ್ತಿಯೂ ಇಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು" ಎಂದು ಹೇಳಿದನು.

ಕವಿಗಳ/ಸಾಹಿತಿಗಳ ಜನ್ಮಸ್ಥಳ,ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :

17. ಪಂಪ : ಆದಿಕವಿ ಪಂಪನು ಸಾ. ಶ. ೯೦೨ ರಲ್ಲಿ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದನು. ಇವನು 'ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ(ಪಂಪ ಭಾರತ)' ಎಂಬ ಪ್ರಮುಖ ಕೃತಿಗಳನ್ನು ರಚಿಸಿದ್ದಾನೆ. ಈತನಿಗೆ 'ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾಗುಣಾರ್ಣವ' ಎಂಬ ಬಿರುದುಗಳು ಇವೆ.

ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :

18.

ಳ	ಳ	ಳ	
- -	U - U	UU -	
ಅಂತೆಂ	ಬನಾರ್ಗೆ	ಪಿರಿದುಂ	= ೧೨

ಳ	ಳ	ಳ	ಳ	ಳ	
- UU	- -	U - U	- -	U U -	
ಭ್ರಾಂತುದ	ಲೇಂದ್ರೋ	ಣನೆಂಬ	ನೇಂಪಾ	ರ್ವನೆಪೇ	= ೨೦

ಛಂದಸ್ಸು : ಇದು ಮಾತ್ರಾಗಣ ಆಧಾರಿತ 'ಕಂದಪದ್ಯ'ದ ಲಕ್ಷ್ಯವಾಗಿದೆ.

19.

ನ	ಜ	ಭ	ಜ	ಜ	ಜ	ರ
UUU	U - U	-U U	U- U	U - U	U - U	- U -
ಖಳನೊ	ಳವಿಂಗೆ	ಕುಪ್ಪೆವ	ರಮೆಂಬ	ವೊಲಾಂಬ	ರಮುಂಟೆ	ನಿನ್ನದೊಂ

ಛಂದಸ್ಸು : ಇದು ಅಕ್ಷರಗಣ ಆಧಾರಿತ 'ಚಂಪಕಮಾಲಾವೃತ್ತ'ದ ಲಕ್ಷ್ಯವಾಗಿದೆ.

20.

ಭ	ರ	ನ	ಭ	ಭ	ರ	ಲ. ಗು.
- UU	- U -	UUU	- UU	- U U	- U -	U -
ಚಾಗದ	ಭೋಗದ	ಕ್ಕರದ	ಗೇಯದ	ಗೊಟ್ಟಿಯ	ಲಂಪಿನಿಂ	ಪುಗಂ

ಛಂದಸ್ಸು : ಇದು ಅಕ್ಷರಗಣ ಆಧಾರಿತ 'ಉತ್ಪಲಮಾಲಾವೃತ್ತ'ದ ಲಕ್ಷ್ಯವಾಗಿದೆ..

21.

ಮ	ರ	ಭ	ನ	ಯ	ಯ	ಯ
- - -	- U -	- UU	UUU	U - -	U - -	U - -
ಸೂಳ್ಯೆಸೆ	ಚ್ಚೆಚ್ಚುಬಿ	ಲ್ಲಂರಥ	ದಕುದು	ರೆಯಂಸೂ	ತನಂಖಂ	ಡಿಸುತ್ತಾ

ಛಂದಸ್ಸು : ಇದು ಅಕ್ಷರಗಣ ಆಧಾರಿತ 'ಸ್ರಗ್ಧರಾವೃತ್ತ'ದ ಲಕ್ಷ್ಯವಾಗಿದೆ.

22.

ಸ	ತ	ತ	ನ	ಸ	ರ	ರ	ಗು
U U -	- - U	- - U	U U U	U U -	- U -	- U -	-
ಇದುಚ	ಕ್ರವ್ಯೂಹ	ಮೀವ್ಯೂಹ	ಮನೊಡೆ	ವದಟಂ	ಪಾರ್ಥನಂ	ತಾತನುಂ	ಗೆಂ

ಛಂದಸ್ಸು : ಇದು ಅಕ್ಷರಗಣ ಆಧಾರಿತ 'ಮಹಾಸ್ರಗ್ಧರಾವೃತ್ತ'ದ ಲಕ್ಷ್ಯವಾಗಿದೆ..

23.

ಮ	ಸ	ಜ	ಸ	ತ	ತ	ಗು.
- - -	U U -	U - U	U U -	- - U	- - U	-
ಮಾತಂಗಾ	ಸುರವೈ	ರಿಯಲ್ಲಿ	ಪಡೆದುಂ	ಬಿಲ್ಲಂಧ	ನುರ್ವಿದ್ಯೆ	ಗಂ

ಛಂದಸ್ಸು : ಇದು ಅಕ್ಷರಗಣ ಆಧಾರಿತ 'ಶಾರ್ದೂಲವಿಕ್ರೀಡಿತವೃತ್ತ'ದ ಲಕ್ಷ್ಯವಾಗಿದೆ.

24.

ಸ	ಭ	ರ	ನ	ಮ	ಯ	ಲ. ಗು.
U U -	- UU	- U -	U UU	- - -	U - -	U -
ಕೆರೆಯಂ	ಕಟ್ಟಿಸು	ಬಾವಿಯಂ	ಸವೆಸು	ದೇವಾಗಾ	ರಮಂಮಾ	ಡಿ ಸಂ

ಛಂದಸ್ಸು : ಇದು ಅಕ್ಷರಗಣ ಆಧಾರಿತ 'ಮತ್ತೇಭವಿಕ್ರೀಡಿತವೃತ್ತ'ದ ಲಕ್ಷ್ಯವಾಗಿದೆ.

ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು :

25. "ಖಳನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂದಳವು"

ಅಲಂಕಾರ : ಉಪಮಾಲಂಕಾರ

ಲಕ್ಷಣ : ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸುವ ಅಲಂಕಾರ ಉಪಮಾಲಂಕಾರ.

ಸಮನ್ವಯ : ಉಪಮೇಯ : ನಿನ್ನದೊಂದಳವು
ಉಪಮಾನ : ನೊಳವಿಂಗೆ ಕುಪ್ಪೆ ವರಂ
ಉಪಮಾ ವಾಚಕ : ವೊಲ್
ಸಮಾನಧರ್ಮ : ಸ್ಪಷ್ಟವಾಗಿಲ್ಲ (ಅಜ್ಞಾನ, ಸಂಕುಚಿತತೆ)

ಇಲ್ಲಿ ಉಪಮೇಯವಾದ 'ನಿನ್ನದೊಂದಳವನ್ನು (ದ್ರುಪದನ ಯೋಗ್ಯತೆಯನ್ನು)' ಉಪಮಾನವಾದ 'ನೊಳವಿಂಗೆ ಕುಪ್ಪೆ ವರಂ (ಕಸದ ತಿಪ್ಪೆಯನ್ನೇ ಶ್ರೇಷ್ಠವೆಂದು ಭಾವಿಸಿದ ನೊಣ)' ಎಂಬುದಕ್ಕೆ ಹೋಲಿಸಲಾಗಿದೆ. 'ವೊಲ್' ಎಂಬ ಉಪಮಾವಾಚಕದ ಲುಪ್ತವಾದ (ಸಂಕುಚಿತತೆ) ಸಾಧಾರಣ ಧರ್ಮವನ್ನು ಹೇಳಿರುವುದರಿಂದ ಇದು ಉಪಮಾಲಂಕಾರ (ಲುಪ್ತೋಪಮಾಲಂಕಾರ) ದ ಲಕ್ಷ್ಯವಾಗಿದೆ.

ಗಾದೆಯನ್ನು ವಿಸ್ತರಿಸಿ ಬರೆಯುವುದು :

26. ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ : ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಸತ್ಯ ಸದಾ ಜೀವಂತವಾದುದು; ಸುಳ್ಳು ಎಂದು ಸುಖವನ್ನು ಕೊಡಲಾರದು ಎನ್ನುವುದು ಈ ಮೇಲಿನ ಗಾದೆಯ ಅರ್ಥ.

ಸತ್ಯ ಶಾಶ್ವತವಾದದ್ದು ಆ ದೃಷ್ಟಿಯಿಂದಲೆ ನಮ್ಮ ರಾಷ್ಟ್ರೀಯ ಲಾಂಛನದಲ್ಲಿ (ಅಶೋಕಚಕ್ರ) 'ಸತ್ಯಮೇವ ಜಯತೆ'ಎಂಬ ಬರೆಹ ಕಲ್ಪಾಂತರ ಸ್ಥಾಯಿಯಾಗಿ ರಾರಾಜಿಸುತ್ತದೆ. 'ಸತ್ಯಕ್ಕೆ ಜಯ' 'ಸತ್ಯವಂತರಿಗೆ ಎಂದಿದ್ದರೂ ಜಯವಿದ್ದೇ ಇದೆ' ಎಂದು ಎಲ್ಲಾ ಧರ್ಮಗಳಿಂದ ತಿಳಿದು ಬಂದಿದೆ. ಸತ್ಯ ಹರಿಶ್ಚಂದ್ರ ಜೀವನವೆಲ್ಲ ಸತ್ಯಕ್ಕಾಗಿ ಹೋರಾಡಿ ಶಾಶ್ವತವಾದ ಕೀರ್ತಿಯನ್ನು ಪಡೆದನು. ಗಾಂಧೀಜಿ, ಸ್ವಾಮಿ ವಿವೇಕಾನಂದ ಮೊದಲಾದ ಮಹಾತ್ಮರು ಸತ್ಯ ಜೀವನವನ್ನು ನಡೆಸಿದರು. ಸತ್ಯವನ್ನೆ ನುಡಿಯಿರಿ, ಪ್ರಿಯವಾದದ್ದನ್ನೆ ಹೇಳಿರಿ ಎಂಬ ನೀತಿವಾಕ್ಯವು ಸತ್ಯ ನಿತ್ಯವೆಂಬುದನ್ನು ಸಾರುತ್ತದೆ.

ಸುಳ್ಳು ಕ್ಷಣಿಕ. ಅದು ಶಾಶ್ವತ ಸುಖ ನೀಡುವುದಿಲ್ಲ. ಸುಳ್ಳಿನ ಒಡನಾಟ ಕೆಸರೊಳಗೆ ಮುಳ್ಳು ತುಳಿದಂತೆ. ಸುಳ್ಳು ಹೇಳಿ ಆ ಸುಳ್ಳು ಬಯಲಾದಾಗ ಮನುಷ್ಯನು ತನ್ನ ಗೌರವ ಅಂತಸ್ತು, ನಂಬಿಕೆ ಕಳೆದುಕೊಳ್ಳುವುದರ ಜೊತೆಗೆ ಮಾನಸಿಕವಾಗಿ ನೆಮ್ಮದಿಯನ್ನು ಹಾಳುಮಾಡಿಕೊಳ್ಳ ಬೇಕಾಗುತ್ತದೆ. ಸುಳ್ಳು ಒಂದು ಬಲೆ ಇದ್ದಹಾಗೆ ಅದರಲ್ಲಿ ಸಿಕ್ಕಿಬಿದ್ದರೆ ಹೊರಬರುವುದು ಕಷ್ಟ. ಆದುದರಿಂದ ಸುಳ್ಳಿನ ತೊಡಕಿನಲ್ಲಿ ಸಿಕ್ಕಿ ದಾಸರಾಗಿ ಜೀವನವನ್ನು ಹಾಳುಮಾಡಿಕೊಳ್ಳುವ ಬದಲು ಸತ್ಯವೆಂಬ ಬೆಳಕಿನ ಹಾದಿಯಲ್ಲಿ ನಡೆದು ಜೀವನ ಸಾರ್ಥಕಗೊಳಿಸಿಕೊಳ್ಳಬೇಕು. ಸತ್ಯವೇ ಬೆಳಕು, ಸುಳ್ಳೇ ಕತ್ತಲು, ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಎಂಬ ಮಾತನ್ನು ಎಂದಿಗೂ ಯಾರು ಮರೆಯಬಾರದು.

27. ಮನಸ್ಸಿದ್ದರೆ ಮಾರ್ಗ : ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು ಇವುಗಳಿಂದ ಜೀವನದ ಮೌಲ್ಯ ಹೆಚ್ಚುತ್ತದೆ. ಆದ್ದರಿಂದಲೇ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' 'ಗಾದೆಗಳನ್ನು ವೇದಗಳಿಗೆ ಸಮಾನ' ಎಂದು ಹೇಳುವರು. 'ಮನಸ್ಸಿದ್ದರೆ ಮಾರ್ಗ' ಎಂಬ ಈ ಮಾತಿನಲ್ಲಿ ಮಾನವನ ಅಂತರಾಳದಲ್ಲಿರುವ ಅಪಾರವಾದ ಶಕ್ತಿಯನ್ನು ಕೇಂದ್ರೀಕರಿಸಿ, ಗುರಿಯನ್ನು ಮುಟ್ಟುವ ಗುಟ್ಟು ಅಡಗಿದೆ.

ಮಾನವನ ಚೈತನ್ಯಕ್ಕೆ, ಬುದ್ಧಿಶಕ್ತಿಗೆ ಮಿತಿಯಿಲ್ಲ. ಸಕಾರಾತ್ಮಕ ಭಾವದಿಂದ ನಾವು ಕಾರ್ಯೋನ್ಮುಖರಾಗಬೇಕು. ನಾವು ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡಲು ಆಸಕ್ತಿ ಇರಬೇಕು. ಹಾಗೆ ಆಸಕ್ತಿ ಮೂಡಲು ಆ ಕೆಲಸದ ಬಗ್ಗೆ ನಮಗೆ ಪ್ರೀತಿ ಇರಬೇಕು. ಹಾಗೆ ಆ ಕೆಲಸದಲ್ಲಿ ಪ್ರೀತಿ ಇದ್ದಾಗ ಸಹಜವಾಗಿಯೆ ಆ ಕೆಲಸ ಯಶಸ್ವಿಯಾಗುತ್ತದೆ. ವಿದ್ಯಾರ್ಥಿಯಾದವನು ಯಶಸ್ಸು ಪಡೆಯಬೇಕು ಎಂಬ ಮನಸ್ಸಿನಿಂದ ಕಾರ್ಯಪ್ರವೃತ್ತನಾದರೆ ಅವನ ಗುರಿ ತಲುಪುವ ಮಾರ್ಗ ಕಾಣುವುದು.

ಒಂದು ಚಿತ್ರಗೀತೆಯ ಸಾಲು ಹೀಗಿದೆ- "ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ" ನನ್ನ ಕೈಯಲ್ಲಿ ಆಗುವುದಿಲ್ಲ ಎಂದು ಯೋಚಿಸುವುದರಿಂದ ಯಾವ ಕೆಲಸವೂ ಸಾಧ್ಯವಾಗುವುದಿಲ್ಲ. "Where there'sa will, there'sway" ಎಂಬ ಆಂಗ್ಲ ಗಾದೆಯಂತೆ ನಮ್ಮಲ್ಲಿ ಯಾವುದನ್ನೆ ಆಗಲಿ ಮಾಡಬೇಕು ಎನ್ನುವ ಉತ್ಕಟ ಆಕಾಂಕ್ಷೆ ಹುಟ್ಟಿಬಿಟ್ಟರೆ ಬಿಕ್ಕ ದಾರಿ ತಾನಾಗಿಯೇ ತೆರೆದುಕೊಳ್ಳುತ್ತದೆ. ಮಾಡಿಯೇ ತೀರುತ್ತೇನೆ ಎಂಬ ಮನಸ್ಸು ಎಂಥ ಕೆಲಸವನ್ನಾದರೂ ಸಾಧ್ಯಗೊಳಿಸುತ್ತದೆ ಎಂದು ಈ ಗಾದೆ ಸೂಚಿಸುತ್ತದೆ.

ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :

28. "ಈಗಳೊಂದಡಕೆಯುಮಿಲ್ಲ ಕೈಯೊಳ್"

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶದೇಶಗಳಲ್ಲೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದು ಸಹಾಯ ಯಾಚಿಸಿದ ಸಂದರ್ಭದಲ್ಲಿ ಪರಶುರಾಮನು ನನ್ನ ಪದಾರ್ಥಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟೆನು. ಈಗ ನನ್ನಲ್ಲಿ ನಿನಗೆ ನೀಡಲು ಒಂದಡಕೆಯೂ ಇಲ್ಲ ಎಂದು ದ್ರೋಣನಿಗೆ ಹೇಳುತ್ತಾನೆ .

ಸ್ವಾರಸ್ಯ : ವೇದಪಾರಂಗತನಾದ ದ್ರೋಣನು ತನ್ನ ಬಳಿ ಬಂದು ಸಹಾಯ ಯಾಚಿಸಿದಾಗ ಪರಶುರಾಮನು ಯಾವುದೇ ಮುಚ್ಚುಮರೆ ಇಲ್ಲದೆ ತನ್ನ ನಿಜ ಸ್ಥಿತಿಯನ್ನು ಹೇಳಿಕೊಳ್ಳುವುದು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತವಾಗಿದೆ.

29. "ವಿದ್ಯಾಧನಮೆ ಧಮನಪ್ಪುದು"

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದ್ರೋಣನು ತನ್ನ ಬಳಿ ಬಂದು ಸಹಾಯ ಯಾಚಿಸಿದಾಗ ಪರಶುರಾಮನು ಎಲೈ ದ್ರೋಣನೆ ಈಗ ನನ್ನಲ್ಲಿ ಇದೊಂದು ಬಿಲ್ಲು ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ಬೇರೆ ಯಾವುದೇ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು ಎಂದ ಸಂದರ್ಭದಲ್ಲಿ, ದ್ರೋಣನು ನನಗೆ ವಿದ್ಯಾಧನವೇ ಧನವಾಗಿರುವುದರಿಂದ ಆ ದಿವ್ಯಾಸ್ತ್ರಗಳನ್ನು ದಯಪಾಲಿಸಬೇಕು ಎಂದು ಹೇಳುತ್ತಾನೆ.

ಸ್ವಾರಸ್ಯ : 'ವಿದ್ಯಾಧನವೇ ನಿಜವಾದ ಸಂಪತ್ತು' ಎಂದು ಹೇಳುವ ಮೂಲಕ ದ್ರೋಣನು ವಿದ್ಯೆಯ ಮಹತ್ತ್ವವನ್ನು ತಿಳಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ

30. "ಎಂತು ನಾಣಿಲಿಗರಪ್ಪರೆ ಮಾನಸರ್"

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದ್ರೋಣನು ದ್ರುಪದನ ಬಳಿಗೆ ಹೋಗಿ ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ? ಎಂದಾಗ, ದ್ರುಪದನು ನನಗೆ ನಿನ್ನ ಪರಿಚಯವಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ಹೀಯಾಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ತನ್ನ ಸಹಪಾಠಿಯಾಗಿದ್ದ ಆತ್ಮೀಯ ಸ್ನೇಹಿತ ಒಬ್ಬ ಬಡವನೆಂಬ ಕಾರಣಕ್ಕೆ 'ನೀನಾರೋ ನನಗೆ ತಿಳಿದಿಲ್ಲ' ಎಂದು ಹೇಳುವ ದ್ರುಪದನ ಅಹಂಕಾರ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

31. "ನೊಳವಿಂಗೆ ಕುಪ್ಪೆವರಂ"

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದ್ರುಪದನು ಹೀಯಾಳಿಸಿದಾಗ ಕೋಪಗೊಂಡ ದ್ರೋಣನು ದ್ರುಪದನನ್ನು ಕುರಿತು, ಎಲೋ ದುಷ್ಟನೇ, 'ನೊಣಕ್ಕೆ ಕಸದ ತಿಪ್ಪೆಯೇ ಶ್ರೇಷ್ಠವಾದುದು' ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ, ಪರಾಕ್ರಮ ನನ್ನವರೆಗೂ ಬರುವುದುಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ, ಈ ಸಭಾವಲಯದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನಿರಾಯಾಸವಾಗಿ, ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ?" ಎಂದು ಶಪಥ ಮಾಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : 'ನೊಣಕ್ಕೆ ಕಸವೇ ಶ್ರೇಷ್ಠ' ಎಂಬಂತೆ ವ್ಯಕ್ತಿಯ ಯೋಗ್ಯತೆಗೆ ತಕ್ಕಂತೆ ಗುಣ-ನಡತೆ ಅಭಿರುಚಿಗಳಿರುತ್ತವೆ ಎಂಬುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

32. "ಜಲಕ್ಕನೀಗಳಱೆದೆಂಸಿರಿಕಳ್ಳೊಡವುಟ್ಟಿತೆಂಬುದಂ"

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ತನ್ನ ಬಳಿ ಸಹಾಯ ಕೇಳಲು ಬಂದ ದ್ರೋಣನನ್ನು ಕುರಿತು ದ್ರುಪದನು, ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗಿರುತ್ತಾರೆಯೇ? ಎಂದು ಹೀಯಾಳಿಸಿದ ಸಂದರ್ಭದಲ್ಲಿ, ದ್ರೋಣನು ಐಶ್ವರ್ಯವೆಂಬ ಮದವೇರಿದರೆ ಮಾತಿನಲ್ಲಿ ಮುಖದಲ್ಲಿ ವಕ್ರತೆಯುಂಟಾಗುತ್ತದೆ; ಸಂಬಂಧವನ್ನು ಐಶ್ವರ್ಯವು ಕಳ್ಳಿನೊಡನೆ(ಹೆಂಡದೊಡನೆ) ಹುಟ್ಟಿತು ಎಂಬುದನ್ನು ಈಗ ನಾನು ತಕ್ಷಣವೇ ಸ್ಪಷ್ಟವಾಗಿ ಮರೆಯುವಂತೆ ಮಾಡುವುದು ಎಂಬುದನ್ನು ತಿಳಿದೆನು ಎಂದು ದ್ರೋಣನ ಹೇಳಿದ ಮಾತಾಗಿದೆ.

ಸ್ವಾರಸ್ಯ : ಸಮುದ್ರ ಮಥನ ಕಾಲದಲ್ಲಿ ಐಶ್ವರ್ಯ(ಲಕ್ಷ್ಮಿ) ಮತ್ತು ಕಳ್ಳು(ಸುರಪಾನ) ಇವರಡೂ ಹುಟ್ಟಿದವು, ಆ ಘಟನೆಯನ್ನು ದ್ರೋಣನ ಮೂಲಕ ಮಹಾಕವಿ ಪಂಪನು 'ದ್ರುಪದನ ಐಶ್ವರ್ಯ ಮದಕ್ಕೆ' ಅನ್ವಯಮಾಡಿ ಹೇಳಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

33. "ನೂಂಕಂತಪ್ಪನನಱೆಯೆನೆಂದು ಸಭೆಯೊಳ್ ನುಡಿದಂ"

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂಧರ್ಭ : ದ್ರೋಣನು ಸಹಾಯವನ್ನು ನಿರೀಕ್ಷಿಸಿ ಬಾಲ್ಯದ ಸ್ನೇಹಿತ ದ್ರುಪದನಲ್ಲಿಗೆ ಬರುತ್ತಾನೆ. ದ್ರುಪದನ ಅರಮನೆಯ ಬಾಗಿಲಲ್ಲಿ ನಿಂತು ಬಾಗಿಲು ಕಾಯುವ ದ್ವಾರಪಾಲಕನನ್ನು ಕರೆದು "ನಿಮ್ಮ ಜೊತೆಯಲ್ಲಿ ಆಟವಾಡಿದ ಸ್ನೇಹಿತನಾದ ದ್ರೋಣನೆಂಬ ಬ್ರಾಹ್ಮಣನು ಬಂದಿದ್ದಾನೆಂದು ನಿಮ್ಮ ರಾಜನಿಗೆ ತಿಳಿಯಪಡಿಸು" ಎನ್ನವನು. ಅವನು ಆ ರೀತಿಯಲ್ಲಿಯೆ? ಬಂದು ತಿಳಿಸುವನು. ಆಗ ದ್ರುಪದನು "ಹಾಗೆ ಹೇಳುತ್ತಿರುವ ಅವನು ಯಾರು? ಇದು ವಿಶೇಷವಾದ ಭ್ರಮೆಯಲ್ಲವೆ? ದ್ರೋಣನೆಂಬುವವನು ಬ್ರಾಹ್ಮಣನೇ? ಆ ಬ್ರಾಹ್ಮಣನಾದವನು ಹೇಗೆ ನನಗೆ ಸ್ನೇಹಿತನಾಗಲು ಸಾಧ್ಯ? ಹೇಳು. ಅಂತಹವನನ್ನು ನಾನು ತಿಳಿದಿಲ್ಲ; ಅವನನ್ನು ಹೊರಕ್ಕೆ ತಳ್ಳು" ಎಂದು ಸಭಾಮಧ್ಯದಲ್ಲಿ ಅಹಂಕಾರದಿಂದ ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಈ ಮಾತಿನಲ್ಲಿ ತಿರಸ್ಕಾರದ ಉದಾಸೀನ, ಗರ್ವ, ಸ್ನೇಹಿತನಲ್ಲಿ ಅನಾದರ ಭಾವ, ಅಸಹನೆ ಸ್ವಪ್ರತಿಷ್ಠೆ ಹಾಗೂ ದ್ರುಪದನ ಗರ್ವದ ಪರಾಕಾಷ್ಠೆಯನ್ನು ಬಹು ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

34. "ಅರಿಯಿರೆ ನೀಮುಮಾಮುಮೊಡನೋದಿದೆವೆಂಬುದನಣ್ಣ"

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಬೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದ್ರುಪದನು ಅಧಿಕಾರದ ಮದದಿಂದ ಪಡಿಯರನಿಗೆ ದ್ರೋಣನೆಂಬುವನನ್ನು ನಾನು ತಿಳಿದಿಲ್ಲ. ಅವನನ್ನು ಹೊರಕ್ಕೆ ತಳ್ಳು ಎಂದು ಸಭಾಮಧ್ಯದಲ್ಲಿ ಅಹಂಕಾರದಿಂದ ಮಾತನಾಡಿದನು. ಪಡಿಯರನಿಂದ ದ್ರುಪದನು ಆಡಿದ ಮಾತುಗಳನ್ನು ಕೇಳಿ ತಿಳಿದ ದ್ರೋಣನು ಬಲತ್ಕಾರದಿಂದ ಅರಮನೆಯ ಸಭಾಂಗಣದ ಒಳಬಂದು ದ್ರುಪದನಿಗೆ ಈ ಮೇಲಿನಂತೆ ಪ್ರಶ್ನಿಸಿದ ಮಾತಿದು.

ಸ್ವಾರಸ್ಯ : ತನ್ನ ಮುಖವನ್ನು ನೋಡಿದರೇ ಮತ್ತು ಬಾಲ್ಯದ ನೆನಪು ಮಾಡಿದರೇ ದ್ರುಪದನು ತನ್ನನ್ನು ಗುರುತಿಸಬಹುದೆಂದು ದ್ರೋಣನು ಅತ್ಯಂತ ವಿನಯ ಪೂರ್ವಕವಾಗಿ ಪ್ರಶ್ನಿಸಿರುವುದು ಸ್ವಾರಸ್ಯಪೂರ್ಣವಾಗಿ ಇಲ್ಲಿ ಮೂಡಿಬಂದಿದೆ.

35. "ದ್ರುಪದಂ ಕಡುಸಿಗ್ಗು ಮಾಡಿದಂ"

ಆಯ್ಕೆ : ಪ್ರಸ್ತುತ ಸಾಲನ್ನು ಪಂಪನು ಬರೆದ 'ವಿಕ್ರಮಾರ್ಜುನ ವಿಜಯಂ' ಕೃತಿಯಿಂದ ಆಯ್ದ 'ಕೆಮ್ಮನೆ ಬೀಸೆವೊತ್ತೆನೇ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದ್ರೋಣನು ಬಲತ್ಕಾರದಿಂದ ಅರಮನೆಯ ಸಭಾಂಗಣದ ಒಳಬಂದು ರಾಜ ದ್ರುಪದನ್ನು ಕುರಿತು, ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ? ಎಂದಾಗ, ದ್ರುಪದನು ದ್ರೋಣನನ್ನು ಕುರಿತು, ನಿನ್ನನ್ನು ನಾನು ತಿಳಿದಿಲ್ಲ(ನೀನು ನನಗೆ ಅಪರಿಚಿತನು) ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ಮರ್ಮಭೇದಕವಾಗುವಂತೆ ಹೀಯಾಳಿಸುವಾಗ ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಐಶ್ವರ್ಯವು ಬಂದಾಗ ವ್ಯಕ್ತಿ ಅಹಂಕಾರದಿಂದ, ಕುರುಡನಾಗಿ ಸಂಬಂಧಗಳನ್ನೆಲ್ಲಾ ಮರೆಯತ್ತಾನೆ ಹಾಗೂ ಮೃಗವಾಗಿ ವರ್ತಿಸುತ್ತಾನೆ. ಅಧಿಕಾರದ ಮದಾಂಧತೆಯು ಹೇಗೆ ವ್ಯಕ್ತಿಯ ವ್ಯಕ್ತಿತ್ವ ಬದಲಿಸುವುದೆಂಬುದು ಅರ್ಥಪೂರ್ಣವಾಗಿ ಪ್ರಸ್ತುತ ದ್ರುಪದನ ಮಾತಿನಲ್ಲಿ ಮೂಡಿಬಂದಿದೆ.

ಪದ್ಯಭಾಗ ಪೂರ್ಣ ಮಾಡುವದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) :

36. ಅಂತೆಂನಾರ್ಗೆ ಪಿರಿದುಂ
ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ
ಳೆಂತೆನಗೆ ಕೆಳೆಯನೇ ನೂಂ
ಕಂತಪ್ಪನನರಿಯನೆಂದು ಸಭೆಯೊಳ್ ನುಡಿದಂ

ಅಥವಾ

ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೂಂ
ದಡೆಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ
ಬಡಿಸುವೆನಿನ್ನಿದೊಂದು ಧನವಿರ್ದುದು ದಿವ್ಯಶರಾಳಿಯಿರ್ದುದಿ
ಲ್ಲೊಡಮೆ ಸಮಂತು ಪೇಳವರೊಳಾವುದನೀವುದೊ ಕುಂಭಸಂಭವಂ

ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :

37. ದ್ರೋಣನು ಸಹಾಯ ಅರಸಿ ಬಾಲ್ಯದ ಸ್ನೇಹಿತನಾದ ದ್ರುಪದ ರಾಜನ ಬಳಿಗೆ ಬಂದಾಗ ಅಧಿಕಾರದ ಮದವೇರಿದ ದ್ರುಪದನು ದ್ರೋಣನಿಗೆ ಅವಮಾನ ಮಾಡಿ ಹೊರಗಟ್ಟಲು ಸೇವಕರಿಗೆ ಹೇಳಿದಾಗ, ದ್ರೋಣನು ಶಪಥಗೈಯುವ ಸನ್ನಿವೇಶ ಕವಿ ಪಂಪನು ಬರೆದ 'ಕೆಮ್ಮನೆ ಮೀಸೆವೊತ್ತೆನೇ' ಪದ್ಯದಲ್ಲಿ ಮನೋಜ್ಞವಾಗಿ ಮೂಡಿ ಬಂದಿದೆ.

ಗುರು ದ್ರೋಣನಿಗೆ ಬಡತನ ಬಂದಾಗ ತನ್ನ ಮಗನಾದ ಅಶ್ವತ್ಥಾಮನ ಜೊತೆಗೂಡಿ ದೇಶ ದೇಶಗಳಲ್ಲೆಲ್ಲ ಸುತ್ತಿ ದಾನ ಕಾರ್ಯದಲ್ಲಿ ಇರುವ ಪರುಶುರಾಮನ ಬಳಿಗೆ ಸಂಪತ್ತನ್ನು ಬೇಡಲು ಬರುತ್ತಾರೆ. ಆ ಸಂದರ್ಭದಲ್ಲಿ ನಾರುಮುಡಿಯಿಂದ ಕೂಡಿದ ನಡುವನ್ನುಳ್ಳವನೂ, ಜಟಾ ಸಮೂಹದಿಂದ ಕೂಡಿದವನಾಗಿ ತಪೋವನಕ್ಕೆ ಹೋಗುವ ಪರುಶುರಾಮನು ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನಿಗೆ ತನ್ನ ಬಳಿ ಚಿನ್ನದ ಪಾತ್ರೆಗಳಿಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು. ಈಗಾಗಲೇ ತನ್ನ ಬಳಿ ಇರುವ ಎಲ್ಲಾ ಸಂಪತ್ತನ್ನು ದಾನ ಮಾಡಿ ಬರಿಗೈಯಲ್ಲಿರುವ ಪರಶುರಾಮನು ದ್ರೋಣನನ್ನು ಕುರಿತು ನನ್ನಲ್ಲಿದ್ದ ಸಂಪತ್ತನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ ಕೊಟ್ಟೆನು. ಈಗ ನನ್ನ ಕೈಯಲ್ಲಿ ಒಂದಡಕೆಯು ಇಲ್ಲ. ಬೇಡಲು ಬಂದಿರುವನು ವೇದ ಪಾರಂಗತನಾದವನು. ಅವನನ್ನು ಹೇಗೆ ಸಂತೋಷಪಡಿಸಲಿ? ಎಂದು ಯೋಚಿಸಿ ದ್ರೋಣನಿಗೆ ಈಗ ಇದೊಂದು ಬಿಲ್ಲು ಹಾಗೂ ದಿವ್ಯಾಸ್ತ್ರಗಳ ಸಮೂಹವು ಮಾತ್ರ ನನ್ನಲ್ಲಿದೆ. ಬೇರೆ ಯಾವ ಆಸ್ತಿಯೂ ಇಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು ಎಂದು ಹೇಳುತ್ತಾನೆ.

ಪರಶುರಾಮನು ಜಗತ್ತನ್ನು ಗೆದ್ದರೂ ಸಹ ಆತನಿಗೆ ಸನ್ಯಾಸತ್ವವೇ ಮುಖ್ಯವಾದುದರಿಂದ ಯಾವುದಕ್ಕೂ ಆಸೆ ಪಡದೆ ಬರಿಗೈಯಲ್ಲಿ ಬದುಕುತ್ತಿರುವುದು, ಹಾಗೆಯೇ ತನ್ನಲ್ಲಿರುವ ಕೇವಲ ದಿವ್ಯ ಶರಾಳಿಗಳನ್ನು ಸಹ ದ್ರೋಣನಿಗೆ ನೀಡಲು ಬಯಸಿರುವಲ್ಲಿ ಪರಶುರಾಮನ ಶ್ರೇಷ್ಠತೆ, ವ್ಯಕ್ತಿತ್ವ ಅತಿಥಿ ಸತ್ಕರಿಸುವ ಪರಿ ಈ ಪದ್ಯದಲ್ಲಿ ಮೌಲ್ಯಯುತಯಾಗಿ ಮೂಡಿಬಂದಿದೆ.

ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :

38. ದ್ರುಪದನು ಅಂತಹವನನ್ನು ನಾನು ತಿಳಿದಿಲ್ಲ ; ಅವನನ್ನು ಹೊರಕ್ಕೆ ತಳ್ಳು ಎಂದು ದ್ವಾರಪಾಲಕನಿಗೆ ಹೇಳಿದಾಗ ದ್ರೋಣನು ಬಲವಂತವಾಗಿ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದನ್ನು ತಿಳಿದಿಲ್ಲವೇ? ಎನ್ನುತ್ತಾನೆ. ಆಗ ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂಬ ಮಾತುಗಳಿಂದ ದ್ರೋಣನಿಗೆ ಮರ್ಮಭೇದಕ ವಾಗುವಂತೆ ಹೀಯಾಳಿಸಿದನು. ಹಾಗೆ ಮಾಡಿದುದಲ್ಲದೆ ದ್ರುಪದನು ಈ ನಾಚಿಕೆಗೆಟ್ಟ ಬ್ರಾಹ್ಮಣನನ್ನು ಎಳೆದು ಹೊರಗೆ ನೂಕಿರಿ ಎನ್ನುವನು. ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತು ತೊದಲುವುದು, ಮುಖದಲ್ಲಿ ವಕ್ರಚೇಷ್ಟೆಯುಂಟಾಗುವುದು; ಮಾತುಗಳು ನಾಚಿಕೆಯಿಲ್ಲದಾಗುವುವು ಸಂಬಂಧವನ್ನು ಮರೆಯುವಂತೆ ಮಾಡುವುದು; ಆದುದರಿಂದ ಐಶ್ವರ್ಯವು ಕಳ್ಳಿನೊಡನೆ (ಹೆಂಡದೊಡನೆ) ಹುಟ್ಟಿತು ಎಂಬುದನ್ನು ನಿಸ್ಸಂಶಯವಾಗಿ ತಟ್ಟನೆ ಈಗ ನಾನು ವಿಶದವಾಗಿ ತಿಳಿದೆನು.

ದುಷ್ಟನೇ 'ನೊಣಕ್ಕೆ ಕಸವೇ ಶ್ರೇಷ್ಠವಾದುದು' ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ, ಪರಾಕ್ರಮ ನನ್ನವರೆಗೂ ಬರುವುದುಂಟೆ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾವಲಯದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನಿರಾಯಾಸವಾಗಿ, ನೀನು ಗಾಬರಿಪಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ? ಎನ್ನುವ ದ್ರೋಣನು ಶಪಥಗೈಯುತ್ತಾನೆ.

39. ದ್ರೋಣ ಮತ್ತು ದ್ರುಪದರಿಬ್ಬರೂ ಯಜ್ಞಸೇನನೆಂಬ ಗುರುವಿನಲ್ಲಿ ಸಹಪಾಠಿಗಳಾಗಿ ವಿದ್ಯಾಭ್ಯಾಸ ಮಾಡಿದರು. ದ್ರುಪದನು ತಾನು ದೊರೆಯಾದಾಗ ತನ್ನ ಬಳಿಕ ಬಂದರೆ ಸಹಾಯಮಾಡುವುದಾಗಿ ದ್ರೋಣನಿಗೆ ಹೇಳಿದನು. ಇಬ್ಬರ ವಿದ್ಯಾಭ್ಯಾಸ ಮುಗಿದ ನಂತರ ದ್ರುಪದನು ಛತ್ರಾವತಿಯಲ್ಲಿ ರಾಜನಾಗಿ ಆಳುತ್ತಿದ್ದನು. ಆ ಸಮಯದಲ್ಲಿ ದ್ರೋಣನಿಗೆ ಬಹಳ ಬಡತನ ಉಂಟಾಯಿತು. ಆಗ ಅವನು ದ್ರುಪದನು ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಆಡಿದ್ದ ಮಾತುಗಳನ್ನು ಜ್ಞಾಪಿಸಿಕೊಂಡು ಸಹಾಯವನ್ನು ನಿರೀಕ್ಷಿಸಿ ದ್ರುಪದನಲ್ಲಿಗೆ ಬಂದನು. ಆದರೆ ದ್ರುಪದನಿಗೆ ಅಧಿಕಾರದ ಮದ ಆವರಿಸಿತ್ತು. ದ್ರೋಣ ತನ್‌ನ ಸಹಪಾಠಿ ಎಂದು ಗುರುತಿಸದಾದನು. ದ್ರೋಣನು ದ್ರುಪದನರಮನೆಯ ಬಾಗಿಲಲ್ಲಿ ನಿಂತು ಬಾಗಿಲು ಕಾಯುವವನನ್ನು ಕರೆದು ನಿಮ್ಮ ಜೊತೆಯಲ್ಲಾಟವಾಡಿದ ಸ್ನೇಹಿತನಾದ ದ್ರೋಣನೆಂಬ ಬ್ರಾಹ್ಮಣನು ಬಂದಿದ್ದಾನೆಂದು ನಿಮ್ಮ ರಾಜನಿಗೆ ತಿಳಿಯಪಡಿಸು ಎಂದು ಹೇಳಿ ಕಳುಹಿಸಿದಾಗ ದ್ರುಪದನು ಅವನಾರೋ ನನಗೆ ತಿಳಿದಿಲ್ಲ. ಅವನನ್ನು ಹೊರಕ್ಕೆ ತಳ್ಳು ಎಂದು ಆದೇಶಿಸಿದನು. ಆದರೆ ದ್ರೋಣನು ಬಲವಂತವಾಗಿ ಒಳಕ್ಕೆ ನುಗ್ಗಿ ಬಂದು ದ್ರುಪದನಿಗೆ ತಮ್ಮಿಬ್ಬರೂ ಸಹಪಾಠಿಗಳಾಗಿದ್ದ ಸಂದರ್ಭವನ್ನು ಹೇಳಿದಾಗ ದ್ರುಪದನು ನೀನಾರೋ ನನಗೆ ತಿಳಿದಿಲ್ಲ. ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂದು ಹೀಯಾಳಿಸಿ ಮಾತನಾಡಿದ್ದನ್ನು ಕೇಳಿ ಕೋಪಗೊಂಡ ದ್ರೋಣನು ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲದೆ ಬಿಡುತ್ತಿದ್ದೇನೆ. ಈ ಸಭಾವಲಯದಲ್ಲಿ ನನ್ನನ್ನು ಹೀಯಾಳಿಸಿದ ನಿನ್ನನ್ನು ನನ್ನ ಶಿಷ್ಯರಿಂದ ನೀನು ಬೆಚ್ಚುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ? ಎಂದು ಶಪಥ ಮಾಡಿದನು.

40. ದ್ರೋಣರು ದ್ರವ್ಯಾರ್ಥಿಯಾಗಿ ಭಾರ್ಗವರ ಆಶ್ರಮಕ್ಕೆ ಬಂದಾಗ ತನ್ನ ಮಗನಾದ ಅಶ್ವತ್ಥಾಮನ ಜೊತೆಗೂಡಿ ದೇಶ ದೇಶಗಳಲ್ಲೆಲ್ಲ ಸುತ್ತಿ ದಾನ ಕಾರ್ಯದಲ್ಲಿ ಇರುವ ಪುರುಶುರಾಮನ ಬಳಿಗೆ ಸಂಪತ್ತನ್ನು ಬೇಡಲು ಬರುತ್ತಾನೆ. ಆ ಸಂದರ್ಭದಲ್ಲಿ ನಾರು ಮಡಿಯಿಂದ ಕೂಡಿದ ನಡುವನ್ನುಳ್ಳವನೂ, ಜಟಾಸಮೂಹದಿಂದ ಕೂಡಿದವನಾಗಿ ತಪೋವನಕ್ಕೆ ಹೋಗುವ ಪರಶುರಾಮನು ದ್ರವ್ಯವನ್ನು ಬೇಡುವದಕ್ಕಾಗಿ ಬಂದ ದ್ರೋಣನಿಗೆ ತನ್ನ ಬಳಿ ಚಿನ್ನದ ಪಾತ್ರೆಗಳಿಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು. ಈಗಾಗಲೇ ತನ್ನ ಬಳಿಯಿರುವ ಎಲ್ಲಾ ಸಂಪತ್ತನ್ನು ದಾನ ಮಾಡಿ ಬರಿಗೈಯಲ್ಲಿರುವ ಪರಶುರಾಮನು ದ್ರೋಣನನ್ನು ಕುರಿತು, ನನ್ನಲ್ಲಿದ್ದ ಸಂಪತ್ತನ್ನೆಲ್ಲಾ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುವಿಗೆ ಕೊಟ್ಟೆನು. ಈಗ ನನ್ನ ಕೈಯಲ್ಲಿ ಒಂದಡಕೆಯೂ ಇಲ್ಲ. ಬೇಡಲು ಬಂದಿರುವವನು ವೇದಪಾರಂಗತನಾದವನು. ಅವನನ್ನು ಹೇಗೆ ಸಂತೋಷಪಡಿಸಲಿ? ಎಲೈ ದ್ರೋಣನೇ ಈಗ ಇದೊಂದು ಬಿಲ್ಲು ಹಾಗೂ ಇದೊಂದು ದಿವ್ಯಾಸ್ತ್ರಗಳ ಸಮೂಹವು ಇದೆ. ಬೇರೆ ಯಾವ ಆಸ್ತಿಯು ಇಲ್ಲ. ಇವುಗಳಲ್ಲಿ ನಿನಗೆ

ಯಾವುದನ್ನು ಕೊಡಲಿ? ಚೆನ್ನಾಗಿ ಯೋಚಿಸಿ ಹೇಳು ಎಂದು ಹೇಳುತ್ತಾನೆ. ದ್ರೋಣನು ನನಗೆ ವಿದ್ಯಾಧನವೇ ಧನವಾಗಿದೆ. ಆದುದರಿಂದ ದಿವ್ಯವಾದ ಅಸ್ತ್ರಗಳನ್ನು ದಯಪಾಲಿಸಬೇಕೆಂದು ಪರಶುರಾಮನಲ್ಲಿ ಕೇಳುತ್ತಾನೆ. ಪರಶುರಾಮನು ವಾರುಣ, ವಾಯುವ್ಯ, ಆಗ್ನೇಯ, ಇಂದ್ರಾದಿ ಮೊದಲಾದ ಪ್ರಧಾನ ಅಸ್ತ್ರಗಳನ್ನು ದ್ರೋಣನಿಗೆ ದಯಪಾಲಿಸುತ್ತಾನೆ. ಹೀಗೆ ಸಹಾಯ ಅರಸಿ ಬಂದ ದ್ರೋಣರನ್ನು ಪರಶುರಾಮನು ಸತ್ಕರಿಸಿ ಬೀಳ್ಕೊಟ್ಟನು.

41-42. ವಿದ್ಯಾರ್ಥಿ ಸ್ವಂತಿಕೆಯಾಗಿ ಬರೆಯುವುದು.

ಪ್ರಬಂಧ ಬರೆವಣಿಗೆ :

43. ಗ್ರಾಮ ಸ್ವರಾಜ್ಯ :

ಪೀಠಿಕೆ : 'ಗ್ರಾಮಗಳ ಅಭಿವೃದ್ಧಿಯೇ ಭಾರತದ ಅಭಿವೃದ್ಧಿ' ಎಂಬುದು ಮಹಾತ್ಮ ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಭಾರತ ಹಳ್ಳಿಗಳ ಕೃಷಿಪ್ರಧಾನ ದೇಶ. ಸರ್ಕಾರದ ಯೋಜನೆಗಳು ಪ್ರತಿ ಹಳ್ಳಿಗೆ ತಲುಪಬೇಕು ಮತ್ತು ಜಾರಿಗೆ ಬರಬೇಕು, ಹೀಗಾಗಬೇಕಾದರೆ ಗ್ರಾಮದ ಜನರೇ ತಮ್ಮ ಗ್ರಾಮಕ್ಕೆ ಬೇಕಾದ ಯೋಜನೆ ರೂಪಿಸಬೇಕು. ಮತ್ತು ಸರ್ಕಾರದ ನೆರವಿನಿಂದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು. ಸ್ವರಾಜ್ಯವೆಂದರೆ ಸ್ವತಂತ್ರ, ಪ್ರತಿ ಗ್ರಾಮವೂ ತನ್ನದೆ ಆದ ಸ್ವತಂತ್ರ ಆಡಳಿತ ವ್ಯವಸ್ಥೆಯನ್ನು ಹೊಂದುವುದು. ಒಟ್ಟಾರೆ ಸ್ಥಳೀಯ ಗ್ರಾಮಸ್ಥರೆ ನಡೆಸುವ ಆಡಳಿತ ವ್ಯವಸ್ಥೆಯೆಂದರೆ ಗ್ರಾಮ ಸ್ವರಾಜ್ಯ.

ವಿಷಯ ನಿರೂಪಣೆ : ಅಧಿಕಾರ ವಿಕೇಂದ್ರೀಕರಣದ ಮಹತ್ತ್ವದ ಹೆಜ್ಜೆಯೆಂದರೆ ಗ್ರಾಮ ಸ್ವರಾಜ್ಯ. ಈ ಸಂಬಂಧ ಪಂಚಾಯತ್ ರಾಜ್ಯ ಮಸೂದೆ ಮಹತ್ತ್ವ ಪಡೆದಿದೆ. ಕೇಂದ್ರ ರಾಜ್ಯ ಸರ್ಕಾರಗಳು ಗ್ರಾಮ ಸ್ವರಾಜ್ಯಕ್ಕೆ ಹೆಚ್ಚಿನ ಅಧಿಕಾರ ನೀಡಿದೆ. ಐದುಜನ ಪಂಚರು ನಡೆಸುವ ಪಂಚಾಯಿತಿ ವ್ಯವಸ್ಥೆ ರಾಮಾಯಣ ಮಹಾಭಾರತ ಕಾಲದಿಂದಲೂ ಕಂಡುಬರುತ್ತದೆ. ಇದರಿಂದಲೇ ಗ್ರಾಮದ ಅಭಿವೃದ್ಧಿಯಾಗುತ್ತಿತ್ತು. ಇದೇ ಆಗಿನ ಕಾಲದ ನ್ಯಾಯಾಂಗ ವ್ಯವಸ್ಥೆ ಕೂಡ ಆಗಿತ್ತು. ಬ್ರಿಟಿಷರು ಎಲ್ಲಾ ಅಧಿಕಾರ ತಮ್ಮಲ್ಲಿಟ್ಟುಕೊಳ್ಳಲು ಗ್ರಾಮ ಸ್ವರಾಜ್ಯದ ಅಧಿಕಾರ ಕಿತ್ತುಕೊಂಡರು. ಹೀಗಾಗಿ ಇದರ ಮಹತ್ತ್ವ ಬಹುಮಟ್ಟಿಗೆ ಕಡಿಮೆಯಾಯಿತು. ಭಾರತ ಸ್ವತಂತ್ರ ಪಡೆದ ನಂತರ ಕೇಂದ್ರಿಕೃತ ಆಡಳಿತಕ್ಕಿಂತ ವಿಕೇಂದ್ರಿಕೃತ ಆಡಳಿತಕ್ಕೆ ಆದ್ಯತೆ ನೀಡಲಾಯಿತು, ಗ್ರಾಮ ಸ್ವರಾಜ್ಯ ಮತ್ತೆ ಹೊಸ ಅಧಿಕಾರಗಳೊಂದಿಗೆ ಅಸ್ತಿತ್ವಕ್ಕೆ ಬಂದಿತು. ಸ್ಥಳೀಯರು ತಮ್ಮ ಗ್ರಾಮಕ್ಕೆ ಬೇಕಾದ ನೀರು ಸರಬುರಾಜು, ಶಿಕ್ಷಣ, ಆರೋಗ್ಯ, ರಸ್ತೆ, ವಿದ್ಯುತ್, ಗ್ರಾಮ ನೈರ್ಮಲ್ಯ ಇತ್ಯಾದಿ ಅಗತ್ಯಗಳನ್ನು ಸರ್ಕಾರದ ಮೂಲಕ ಸೌಲಭ್ಯಗಳನ್ನು ಪಡೆಯುತ್ತಾರೆ. ಗ್ರಾಮ ಪಂಚಾಯಿತಿ ಸದಸ್ಯರೆಲ್ಲರೂ ಸ್ಥಳೀಯರಾದ್ದರಿಂದ ಭ್ರಷ್ಟಾಚಾರವಿಲ್ಲದೆ ಗ್ರಾಮದ ಕಾಳಜಿಯಿಂದ ಕಾರ್ಯ ಮಾಡುತ್ತಾರೆ. ನಮ್ಮ ಗ್ರಾಮ ನಮ್ಮ ಗೌರವ ಎಂಬ ಭಾವನೆಯಿಂದ ಎಲ್ಲರ ಸಹಕಾರ ಸಿಗುತ್ತದೆ. ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರು ಗ್ರಾಮದ ಜನರಿಂದಲೇ ಚುನಾವಣೆಯಲ್ಲಿ ಆಯ್ಕೆಯಾಗುವುದರಿಂದ ಜನಕಲ್ಯಾಣದ ಕೆಲಸ ಮಾಡಬೇಕಾಗುತ್ತದೆ. ಹೀಗಾಗಿ ಸಹಜವಾಗಿಯೇ ಗ್ರಾಮ ಸ್ವರಾಜ್ಯದಿಂದ ಗ್ರಾಮೀಣಾಭಿವೃದ್ಧಿಯಾಗುತ್ತದೆ.

ಉಪಸಂಹಾರ : ಗ್ರಾಮ ಸ್ವರಾಜ್ಯದ ಗಾಂಧೀಜಿ ಕನಸು ಸಾಕಾರಗೊಳ್ಳುತ್ತಿದೆ. ಗ್ರಾಮ ಸ್ವರಾಜ್ಯದಲ್ಲಿ ಸರ್ಕಾರದ ಹಣದೊಂದಿಗೆ ಸ್ಥಳೀಯರ ಸಂಪನ್ಮೂಲವು ಸೇರಿ ತ್ವರಿತಗತಿಯಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತದೆ. ಹಳ್ಳಿಹಳ್ಳಿ ಸೇರಿ ದೇಶವೆಂಬಂತೆ ಗ್ರಾಮದ ಉದ್ಧಾರವೇ ದೇಶೋದ್ಧಾರ ಎಂಬುದು ನನ್ನ ಅನಿಸಿಕೆ.

44. ಸ್ವಚ್ಛ ಭಾರತ ಅಭಿಯಾನ :

ಪೀಠಿಕೆ : 'ಪರಿಶುದ್ಧ ಹೃದಯದಲ್ಲಿ ದೇವರು ನೆಲೆಸುವನು' ಎಂದು ಎಲ್ಲಾ ಧರ್ಮಗಳು ಸಾರಿ ಹೇಳುತ್ತವೆ. ಹೃದಯ ಮನಸ್ಸುಗಳು ಶುದ್ಧವಾದಂತೆ ದೇಹ ಮತ್ತು ಪರಿಸರ ಶುದ್ಧವಾಗಿರಬೇಕು. ಸ್ವಚ್ಛತೆಯು ವ್ಯಕ್ತಿ, ಮನೆ, ರಸ್ತೆ, ಊರು, ನಾಡು, ದೇಶ ಹೀಗೆ ಹಂತಹಂತವಾಗಿ ಅನುಷ್ಠಾನಗೊಳ್ಳಬೇಕು. ಸ್ವಚ್ಛತೆ ಕಾರ್ಯಕ್ರಮ ಸಾರ್ವಜನಿಕರಿಂದ ಜನಾಂದೋಲನದಂತೆ ಆಚರಣೆಯಾದಾಗ ಅದು ಸ್ವಚ್ಛತಾ ಅಭಿಯಾನ.

ವಿಷಯ ನಿರೂಪಣೆ : ಭಾರತದಲ್ಲಿ ಅರಸರ ಕಾಲದಿಂದಲೂ ಸ್ವಚ್ಛತೆಗೆ ಆದ್ಯತೆ ನೀಡುತ್ತಿರುವುದು ಕಂಡು ಬರುತ್ತದೆ. ಜನಸಂಖ್ಯೆ ಹೆಚ್ಚಿದಂತೆ ಮಾಲಿನ್ಯ ಹೆಚ್ಚಿ ಅದೊಂದು ಕಳಂಕವಾಗುತ್ತಾ ಬಂದಿತು. ಗಾಂಧೀಜಿಯವರು ಸ್ವಾತಂತ್ರ ಹೋರಾಟದೊಂದಿಗೆ ಸ್ವಚ್ಛತೆಯ ಜಾಗೃತಿ ಮೂಡಿಸಿದರು. ಸ್ವತಃ ಹರಿಜನ ಕೇರಿಗಳ ರಸ್ತೆಯ ಕಸ ಗುಡಿಸಿ ಮಾದರಿಯಾದರು. ಸ್ವತಂತ್ರ ಭಾರತದ ಸರ್ಕಾರಗಳು ಸ್ವಚ್ಛತೆಗಾಗಿ ಸಾಕಷ್ಟು ಯೋಜನೆಗಳನ್ನು ತಂದರು. ೨೦೧೪ ಅಕ್ಟೋಬರ್ ೨ ರಂದು ಸ್ವಚ್ಛಭಾರತ ಅಭಿಯಾನ ಮಹಾಜಾಗೃತಿಯನ್ನು ಉಂಟುಮಾಡಿತು. ಭಾರತದ ಪ್ರಧಾನಿಯವರು ರಾಜಘಾಟ್ ರಸ್ತೆಯಲ್ಲಿ ಕಸಗುಡಿಸುವುದರ ಮೂಲಕ ಇದಕ್ಕೆ ಚಾಲನೆ ನೀಡಿದರು. ೨೦೧೪ ರಂದ ೨೦೧೯ರ ವರೆಗೆ ಈ ಯೋಜನೆ ಜಾರಿಗೊಂಡಿದೆ. ೨೦೧೯ ಅಕ್ಟೋಬರ್ ೨ಕ್ಕೆ ಗಾಂಧೀಜಿಯವರ ೧೫೦ನೆಯ ಜನ್ಮದಿನ ಸಂದರ್ಭದಲ್ಲಿ ಸ್ವಚ್ಛಭಾರತವನ್ನು ಗಾಂಧೀಜಿಯವರಿಗೆ ಕೊಡುಗೆಯಾಗಿ ನೀಡುವ ಗುರಿ ಹೊಂದಿದೆ.

ಬಯಲು ಶೌಚಾಲಯ ಮುಕ್ತ ಭಾರತಕ್ಕಾಗಿ ಕೋಟ್ಯಂತರ ಶೌಚಾಲಯ ನಿರ್ಮಾಣ ಮಾಡಲಾಗುತ್ತಿದೆ. ತ್ಯಾಜ್ಯ ನಿರ್ವಹಣೆಗೆ ಕ್ರಮಕೈಗೊಳ್ಳಲಾಗುತ್ತಿದೆ. ತ್ಯಾಜ್ಯ ವಸ್ತುಗಳ ಪುನರ್ಬಳಕೆಗೆ ಆದ್ಯತೆ ನೀಡಲಾಗುತ್ತಿದೆ. ಕೊಳಗೇರಿಗಳನ್ನು ನವೀಕರಣಗೊಳಿಸಲಾಗುತ್ತಿದೆ. ರಸ್ತೆ, ಊರು, ಪಟ್ಟಣ, ಪ್ರಾರ್ಥನಾ ಸ್ಥಳ, ಶಾಲೆ, ಕಾರ್ಖಾನೆ ಹೀಗೆ ಎಲ್ಲಾ ಪ್ರದೇಶಗಳು ನಿರ್ಮಲಗೊಳ್ಳಬೇಕಿವೆ. ಸರ್ಕಾರದ ಜೊತೆಯಲ್ಲಿ ಸಾರ್ವಜನಿಕರೂ ಪಾಲ್ಗೊಂಡಾಗ ಯೋಜನೆಯು ನಿಶ್ಚಿತ ಗುರಿಯನ್ನು ತಲುಪುತ್ತದೆ.

ಯುವಕರು ಮತ್ತು ವಿದ್ಯಾರ್ಥಿಗಳು ಸ್ವಚ್ಛ ಭಾರತ ಅಭಿಯಾನದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಬಹುದಾಗಿದೆ. ಮೊದಲು ಸ್ವಶುಚಿತ್ವ ಹೊಂದಿರಬೇಕು. ಮನೆಯ ಪರಿಸರ ಶುಚಿಯಾಗಿಸಬೇಕು. ಶಾಲಾಕಾಲೇಜುಗಳ ಕೊಠಡಿ, ಗ್ರಂಥಾಲಯ, ಪ್ರಯೋಗಾಲಯ, ನೀರಿನ ಪ್ರದೇಶ, ಆಟದ ಮೈದಾನ, ಕೈದೋಟಗಳನ್ನು ಸ್ವಚ್ಛ ಮಾಡುತ್ತಿರಬೇಕು. ತಾವು ಶೌಚಾಲಯ ಬಳಸಿದಾಗ ಮತ್ತೊಬ್ಬರು ಬಳಸಲು ಯೋಗ್ಯವಾಗಿರುವಂತೆ ನೋಡಿಕೊಳ್ಳಬೇಕು. ಸ್ವಚ್ಛತೆಯ ಸ್ಪರ್ಧೆಗಳಲ್ಲಿ ಮತ್ತು ಜಾಗೃತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು.

ಉಪಸಂಹಾರ : ಸ್ವಚ್ಛತೆ ಎಲ್ಲಿದೆಯೋ ಅಲ್ಲಿದೆ ಆರೋಗ್ಯ. ಸ್ವಚ್ಛತೆ ಆಂದೋಲನದಿಂದ ಜನರ ಆರೋಗ್ಯ ಉತ್ತಮವಾಗುವುದರ ಜೊತೆಗೆ ದೇಶದ ಸೌಂದರ್ಯ ಹೆಚ್ಚುವುದು. ಪ್ರವಾಸೋದ್ಯಮ ಉತ್ತಮವಾಗುವುದು. ವಿಶ್ವ ಮಟ್ಟದಲ್ಲಿ ಭಾರತದ ಗೌರವ ಹೆಚ್ಚಾಗುವುದು. ಗಾಂಧೀಜಿಯವರು ಕಂಡ ಸ್ವಚ್ಛಭಾರತ ಕನಸನ್ನು ನನಸಾಗಿಸುವುದು ಎಲ್ಲ ಭಾರತೀಯರ ಜವಾಬ್ದಾರಿಯಾಗಿದೆ. ವಾರದಲ್ಲಿ ಕನಿಷ್ಠ ಎರಡು ಗಂಟೆ ಸ್ವಚ್ಛತೆಗೆ ಮೀಸಲಿಡೋಣ ಎಂದು ಪ್ರಾರ್ಥಿಸುವೆ.

ಪಠ್ಯಪೂರಕ ಅಧ್ಯಯನ 1. ವಸಂತ ಮುಖ ತೋರಲಿಲ್ಲ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ.

2. ಪುಟ್ಟ ಪೋರಿಯ ಅಮ್ಮ ಗುಡಿಸಿಲಿನಲ್ಲಿ ಗೂರುತ್ತಾ ಮಲಗಿದ್ದಾಳೆ.

3. ಸುಣ್ಣ ಕಾಣದೆ ಗೋಡೆಗಳು ಮುಖ ಮುಚ್ಚಿಕೊಂಡಿವೆ.

4. ಒಡೆಯನ ಅಂಗಳದಲ್ಲಿದ್ದ ಮಾವಿನ ಮರಗಳು ಮೈತುಂಬಿ ನಿಂತಿವೆ.

5. ಕಮ್ಮಾರ, ಕುಂಬಾರ, ನೇಕಾರ ಮತ್ತು ಕೇರಿಯ ಮಾರ ಇವರಾರಿಗೂ ವಸಂತಮುಖ ತೋರಲಿಲ್ಲ.

6. ಇಳೆಯು ಕಡಲುಕ್ಕಿ ಹರಿಯುವ ಹಾಗೆ ಸಂಭ್ರಮಿಸುತ್ತಿದೆ.

7. ಕೋಗಿಲೆಗಳು ಮನದುಂಬಿ ಹಾಡುತ್ತಿವೆ.

8. ಮುಗುಳುನಗೆ ಮಲ್ಲಿಗೆ ಹೂವಲ್ಲಿ ಬೀರಿತ್ತು.

9. ಪುಟ್ಟ ಪೋರಿ ತಾನು ತೊಟ್ಟಿರುವ ಹರಿದ ಚಿಂದಿ ಬಟ್ಟೆಗಳ ಕಂಡು ವಸಂತ ಮರುಗಿದನು ಎಂದು ತಳಿಸುತ್ತಾಳೆ.

10. ಪುಟ್ಟ ಪೋರಿಯ ಅಮ್ಮನ ತೂತು ಬಿದ್ದ ಸೀರೆಯಲ್ಲಿ ಬಾಲರವಿ ಸೊರಗಿದ್ದಾನೆ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

11. ವಸಂತಮಾಸದ ಆಗಮನದ ಸಂದರ್ಭದಲ್ಲಿ ಮನೆಯೊಡೆಯನ ಅಂಗಳದಲ್ಲಿದ್ದ ಮಾವಿನ ಮರಗಳೆಲ್ಲವೂ ಚಿಗುರಿ ಮೈತುಂಬಿ ಬೆಳೆದು ನಿಂತಿವೆ. ಹಕ್ಕಿಗಳು ಸಂತಸದಿಂದ ರೆಕ್ಕೆ ಬಿಚ್ಚಿ ಹಾರುತ್ತಿವೆ. ಎಳೆಯ ಚಿಗುರನ್ನು ತಿಂದ ಕೋಗಿಲೆಗಳು ಪ್ರಕೃತಿ ಸೌಂದರ್ಯವನ್ನು ಮೈದುಂಬಿ ಇಂಪಾಗಿ ಹಾಡುತ್ತಿವೆ. ಇಡೀ ಇಳೆಯಲ್ಲಿ ಕಡಲುಗಳು ತುಂಬಿ ಉಕ್ಕಿ ಹರಿಯುವ ರೀತಿಯಾದ ಸಂಭ್ರಮವನ್ನು ಕಾಣಬಹುದಾಗಿದೆ. ಹೀಗೆ ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.

12. ಕತ್ತಲೆ ಗವ್ವೆನ್ನುವ ಗುಡಿಸಲಿನಲ್ಲಿ ಪುಟ್ಟ ಪೋರಿಯ ಅಮ್ಮ ಗೂರುತ್ತಾ ಮಲಗಿದ್ದಾಳೆ. ತೂತು ಬಿದ್ದ ಸೀರೆಯಲ್ಲಿ ಬಾಲ ರವಿ ಸೊರಗಿದ್ದಾನೆ. ಸುಣ್ಣ ಕಾಣದ ಗೋಡೆಗಳು ಮುಖ ಮುಚ್ಚಿಕೊಂಡಿವೆ. ಹೀಗೆ ಇಡೀ ಗುಡಿಸಲೊಳಗೆ ಕತ್ತಲೆ ಆವರಿಸಿ ಗವ್ವೆನ್ನುತ್ತಿದ್ದುದರಿಂದ ಒಳಗೆ ಬರಲು ವಸಂತನಿಗೂ ಹೆದರಿಕೆಯಾಯಿತು.

13. ಒಡೆಯನ ಮನೆಯ ಬಾಗಿಲಲ್ಲಿನ ಮಾವಿನೆಲೆಯ ತೋರಣ, ಮಲ್ಲಿಗೆ ಹೂವಿನ ಸುವಾಸನೆಯೊಂದಿಗೆ ಬೀರುವ ಸಂತಸದ ವಾತಾವರಣ ಹಾಗೂ ಮನೆಯ ಮುಂದೆ ಬಣ್ಣ ಬಣ್ಣದ ರಂಗೋಲಿ ಇವೆಲ್ಲವುಗಳ ಮಧ್ಯೆ ಬಾಲರವಿಯು ಥಳಥಳಿಸುವುದನ್ನು ಕಂಡು ಪುಟ್ಟಿ.ಯು ಮೂಕವಿಸ್ಮಿತಳಾಗಿರುವಳು.

14. ಪ್ರಸ್ತುತ ಕವನದಲ್ಲಿ "ಕಮ್ಮಾರನ ಕುಲುಮೆ ಉರಿಯಲಿಲ್ಲ. ಕುಂಬಾರನ ತಿಗುರಿ(ಚಕ್ರ) ತಿರುಗಲಿಲ್ಲ ನೇಕಾರನ ಮಗ್ಗ ಉಸಿರಾಡಲಿಲ್ಲ. ಕೇರಿಯ ಮಾರನ ಒಲೆ ಹೊತ್ತಲಿಲ್ಲ. ಇವರಾರಿಗೂ ವಸಂತ ಮುಖ ತೋರಲಿಲ್ಲ" ಎಂದು ಕವಯತ್ರಿ ಹೇಳಿರುವಲ್ಲಿ ಬಡವರ, ಶ್ರಮಿಕರ ಬದುಕು ಇನ್ನೂ ಹಸನಾಗಿಲ್ಲ. ಅವರಿಗೆ ಒಳ್ಳೆಯ ದಿನಗಳು ಬರದೆ ಹಾಗೆಯೇ

ಬಡವರಾಗಿಯೇ ಇದ್ದು, ಅವರು ಶೋಷಣೆಯಿಂದ ಮುಕ್ತಿಹೊಂದಿಲ್ಲ. ಅವರ ಶ್ರಮಕ್ಕೆ ತಕ್ಕ ಫಲವಿಲ್ಲ ಎಂದು ಶ್ರಮಿಕರ ಬದುಕನ್ನು ಕುರಿತು ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಸಾಮಾಜಿಕ ನ್ಯಾಯ ದೊರೆತು, ಶೋಷಣೆ ಮುಕ್ತ ಸಮಾಜವಾದರೆ ಮಾತ್ರ ಸರ್ವರ ಏಳಿಗೆ ಸಾಧ್ಯ.

ಪಠ್ಯಪೂರಕ ಅಧ್ಯಯನ 2. ಭಗತ್‌ಸಿಂಗ್

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. ಸಂಜೆ ತಡವಾಗಿ ಬಾಲಕ ಭಗತ್‌ಸಿಂಗ್ ಮನೆಯೊಳಗೆ ಕಾಲಿಟ್ಟಾಗ ಅವನ ತಂಗಿ ವೀರಾಜಿ ಬಂದ.....ವೀರಾಜಿ ಬಂದ.....ಎಂದು ಕೂಗಿಕೊಂಡಳು.

2. ಬಾಲಕ ಭಗತ್‌ಸಿಂಗ್‌ನಿಗೆ ಅವನ ತಂಗಿ ತಿನ್ನಲು ಹಣ್ಣುಗಳನ್ನು ಕೊಟ್ಟಳು.

3. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರು ಲೆಫ್ಟಿನಂಟ್ ಗರ್ವನರ್ ಜನರಲ್ ಡಯರ್.

4. ಭಗತ್‌ಸಿಂಗನ ತಂದೆ ಕಿಶನ್‌ಸಿಂಗ್, ತಾಯಿ ವಿದ್ಯಾವತಿ.

5. ಭಗತ್‌ಸಿಂಗ್‌ನ ಜನ್ಮಸ್ಥಳ ಪಂಜಾಬಿನ ಲಾಯಲಪುರ ಜಿಲ್ಲೆಯ ಬಂಗಾ ಗ್ರಾಮ.

6. "ಇಂಕ್ವಿಲಾಲ್ ಜಿಂದಾಬಾದ್" ಘೋಷಣೆಯನ್ನು ಭಗತ್‌ಸಿಂಗ್ ಹುಟ್ಟು ಹಾಕಿದರು.

7. ಭಗತ್‌ಸಿಂಗ್ ಬ್ರಿಟಿಷರ ವಿರುದ್ಧ ಸೇಡು ತೀರಿಸಿಕೊಂಡಿದ್ದಕ್ಕೆ ದೊರೆತ ಫಲ ಮರಣದಂಡನೆ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

8. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ ಇದು ಬಹಳ ಪೂಜ್ಯನೀಯವಾದ ಮಣ್ಣು, ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ ಎಂದು ಹೇಳುತ್ತಾನೆ. ನಂತರ ಪವಿತ್ರವಾದ ಮಣ್ಣಿನ ಡಬ್ಬವನ್ನು ಮನೆಯ ಸ್ವಚ್ಛ ಜಾಗದಲ್ಲಿರಿಸಿ ಹೂಗಳನ್ನು ಇರಿಸಿ ನಮಸ್ಕರಿಸಿ ಪೂಜಿಸತೊಡಗಿದನು.

9. ಜಲಿಯನ್ ವಾಲಾಬಾಗ್ ಮಾರಣಹೋಮ ಭಗತ್‌ಸಿಂಗ್‌ನ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿತ್ತು. ಒಂದಲ್ಲ ಒಂದು ದಿನ ಈ ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನನ್ನಾದರೂ ಮಾಡಿಯೇ ತೀರುತ್ತೇನೆಂದೂ, ಆಗ ಕ್ರೂರ ಬ್ರಿಟಿಷ್ ಆಳ್ವಿಕೆ ಅಂತ್ಯವಾಗುತ್ತದೆ ಎಂದು ತಿಳಿದಿದ್ದ ಭಗತ್‌ಸಿಂಗ್ ಮುಂದೆ ಕ್ರಾಂತಿಕಾರಿಗಳ ಸಹಕಾರದಿಂದ ಮಾತೃಭೂಮಿಯನ್ನು ಗುಲಾಮಗಿರಿಯ ಸಂಕೋಲೆಯಿಂದ ಬಿಡಿಸಲು ಸ್ವಾತಂತ್ರ್ಯ ಹೋರಾಟದ ಪಥದಲ್ಲಿ ಮುನ್ನಡೆಯುವ ನಿರ್ಧಾರವನ್ನು ತೆಗೆದುಕೊಂಡನು.

10. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದ ಸ್ಥಳಕ್ಕೆ ಹೋಗಿದ್ದ ಬಾಲಕ ಭಗತ್‌ಸಿಂಗ್, ಭಕ್ತಿಯಿಂದ ತಲೆಬಾಗಿ ರಕ್ತದಿಂದ ತೊಯ್ದ ಒಂದು ಚಿಟಿಕೆ ಮಣ್ಣನ್ನು ತೆಗೆದು ತನ್ನ ಹಣೆಯ ಮೇಲೆ ತಿಲಕವನ್ನಿಟ್ಟುಕೊಂಡು ಕಣ್ಮುಚ್ಚಿ ಭಕ್ತಿಯಿಂದ ಕೈ ಮುಗಿದು, ಹುತಾತ್ಮರಿಗೆ ಗೌರವ ಸಲ್ಲಿಸಿ, ಪೂಜ್ಯನೀಯ ಆ ಮಣ್ಣನ್ನು ತನ್ನ ಊಟದ ಡಬ್ಬದಲ್ಲಿ ಮನೆಗೆ ತಂದನು. ಅದು ತನಗೆ ದೊರೆತ ಪಾರಿತೋಷಕವೆಂಬಂತೆ ತಿಳಿದಿದ್ದನು.

11. ಎಲ್ಲಾ ಮಕ್ಕಳು ಸಂಜೆ ಶಾಲೆಯಿಂದ ಬಂದಿದ್ದರು. ಆದರೆ ಹನ್ನೆರಡು ವರ್ಷದ ಬಾಲಕ ಭಗತ್‌ಸಿಂಗ್ ಮಾತ್ರ ಮನೆಗೆ ಬಂದಿರಲಿಲ್ಲ. ಅವನ ತಂದೆ ತಾಯಿಯರಿಗೆ, ಕುಟುಂಬದ ಇತರ ಸದಸ್ಯರಿಗೆ ಬಹಳ ಆತಂಕವಾಯಿತು. ಸಂಜೆ ತಡವಾಗಿ ಮನೆಗೆ ಬಂದ ಭಗತ್‌ಸಿಂಗ್‌ನನ್ನು ಕಂಡ ಅವನ ತಂಗಿ ಸಂತೋಷದಿಂದ ವೀರಾಜಿ ಬಂದ ಎಂದು ಕೂಗಿಕೊಂಡಳು. ಕತ್ತಲಾದರೂ ಮಗ ಮನೆಗೆ ಬರದೇ ಇದ್ದುದರಿಂದ ಆತಂಕಗೊಂಡಿದ್ದ ಆತನ ತಾಯಿಗೆ ಮಗನನ್ನು ಕಂಡು ಸಂತೋಷವಾಯಿತು. ಓಡಿ ಬಂದು ಮಗನನ್ನು ಅಪ್ಪಿದಳು. ಆಕೆಯ ಕಣ್ಣುಗಳಿಂದ ನೀರು ಧಾರಾಕಾರವಾಗಿ ಸುರಿಯಿತು.

12. ಭಗತ್‌ಸಿಂಗ್ ಕ್ರಾಂತಿಕಾರಿಗಳ ಸಹಕಾರದಿಂದ ಮಾತೃಭೂಮಿಯನ್ನು ಗುಲಾಮಗಿರಿಯ ಸಂಕೋಲೆಯಿಂದ ಬಿಡಿಸಲು ಸ್ವಾತಂತ್ರ್ಯ ಹೋರಾಟದ ಪಥದಲ್ಲಿ ಮುನ್ನಡೆದನು. 'ಇಂಕ್ವಿಲಾಬ್ ಜಿಂದಾಬಾದ್' ಎಂಬ ಘೋಷಣೆಯೊಂದಿಗೆ ಸ್ವಾತಂತ್ರ್ಯಕ್ಕೋಸ್ಕರ ತನ್ನ ಜೀವವನ್ನೆ ಅರ್ಪಿಸಿ ಮರಣ ದಂಡನೆಗೆ ಈಡಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಗುರಿಯನ್ನು ತೋರಿಸಿಕೊಟ್ಟು ಪ್ರಾಣಾರ್ಪಣೆ ಮಾಡಿದ ಭಗತ್‌ಸಿಂಗ್ ತನ್ನ ತ್ಯಾಗ ಬಲಿದಾನದಿಂದ ಅಮರನಾದನು.

ಪಠ್ಯಪೂರಕ ಅಧ್ಯಯನ 3. ಉದಾತ್ತ ಚಿಂತನೆಗಳು

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. ಕ್ರಿಯಾಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು.

2. 'ಅನ್‌ಟು ದಿಸ್ ಲಾಸ್ಟ್' ಕೃತಿಯನ್ನು ಬರೆದವರು ರಸ್ಕಿನ್.

3. ನಚಿಕೇತನು ಯಮರಾಜನನ್ನು ಸಂದರ್ಶಿಸಿ ಧೈರ್ಯದಿಂದ ಪ್ರಶ್ನಿಸಿದನು

4. 'ಸರ್ವೋದಯ' ಹೆಸರಿನಿಂದ 'ಅನ್‌ಟು ದಿಸ್ ಲಾಸ್ಟ್' ಕೃತಿ ಗುಜರಾತಿ ಭಾಷೆಗೆ ಅನುವಾದಗೊಂಡಿತು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

5. ರಾಜಕೀಯ ಸ್ವಾತಂತ್ರ್ಯ ಇರುವುದು ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ. ಸರಕಾರ, ಇರುವುದೇ ಜನರಿಗೆ ಜೀವನ, ಸ್ವಾತಂತ್ರ್ಯ, ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಸಲುವಾಗಿ. ವಾಸ್ತವವಾಗಿ ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆ ತತ್ವದಿಂದ ಅನುಗಮನ ಮಾಡಿದ ತತ್ತ್ವವಾಗಿದೆ. ಏಕೆಂದರೆ ರಾಜಕೀಯವಾದ ಸಮಸ್ತ ಅಧಿಕಾರವೂ ಜನತೆಯಿಂದ ಬರುತ್ತದೆ. ತಮ್ಮ ಸಾರ್ವಜನಿಕವಾದ ಹಾಗೂ ಖಾಸಗಿಯಾದ ಜೀವನವನ್ನು ನಿರ್ದೇಶಿಸುವ, ನಿಯಂತ್ರಿಸುವ ಸಾಮರ್ಥ್ಯವನ್ನು ಅವರು ತಾವೇ ಹೊಂದಿರುತ್ತಾರೆಯೇ ಹೊರತು ಬೇರೆ ಯಾರು ಅಲ್ಲವೆಂದು ಅರ್ಥವಾಗುತ್ತದೆ.

6. ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಆವಶ್ಯಕ ಅಂಶವಲ್ಲವೆಂಬ ಭಾವನೆ ಗಾಂಧೀಜಿಯವರು ಇಂಗ್ಲೆಂಡ್‌ಗೆ ಹೋಗುವವರೆಗೆ ಅವರಲ್ಲಿ ಇತ್ತು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ, ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು

ಪೋಣಿಸಿದಂತಿದ್ದ ಸುಂದರ ಬರೆವಣಿಗೆ ನೋಡಿ, ಅವರಿಗೆ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾಯಿತು. ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅವರು ಅರಿತರು. ತಮ್ಮ ಉದಾಹರಣೆಯಿಂದ ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ ಎಂಬುದು ಗಾಂಧೀಜಿಯವರದು ಅಂದವಾದ ಬರೆವಣಿಗೆಯ ಬಗ್ಗೆ ಅಭಿಪ್ರಾಯವಾಗಿತ್ತು.

7. ಗಾಂಧೀಜಿಯವರ ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿದುದು 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕ. ಗಾಂಧೀಜಿಯವರು ರಸ್ಕಿನ್‌ನ "ಅನ್‌ಟು ದಿಸ್ ಲಾಸ್ಟ್" ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದಾಗ ಕೆಳಗಿಳಿಸಲು ಅವರಿಗೆ ಸಾಧ್ಯವಾಗಲಿಲ್ಲ. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡ ಅವರು ಆ ಪುಸ್ತಕವನ್ನು ಸರ್ವೋದಯವೆಂಬ ಹೆಸರಿನಿಂದ ಗುಜರಾತಿ (ಭಾಷೆ)ಗೆ ಅನುವಾದ ಮಾಡಿದರು. ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ. ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ. ಶ್ರಮ ಜೀವಿಯ ಜೀವನ, ಉಳುವವನ ಅಥವಾ ಕೈಕಸುಬುಗಾರನ ಜೀವನವೇ ಯೋಗ್ಯ ಜೀವನ ಎಂಬ ಸಿದ್ಧಾಂತಗಳನ್ನು ಗಾಂಧೀಜಿಯವರು ಅನ್‌ಟು ದಿಸ್ ಲಾಸ್ಟ್ ಪುಸ್ತಕದಿಂದ ಅರಿತರು.

8. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗಬೇಕಾದರೆ; ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿ. ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಆದರೆ ಅವರಿಗೆ ಮತ್ತೊಂದು ಅವಶ್ಯಕತೆ ಇದೆ. ಅದು ಸಂಸ್ಕೃತಿ. ನಾವು ಅವರಿಗೆ ಈ ಸಂಸ್ಕೃತಿ ಯನ್ನು ಕೊಡುವ ತನಕ ಅವರ ಪ್ರಗತಿ ಸ್ಥಿರವಾಗಲಾರದು. ಅಂದರೆ ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಕೇವಲ ಜ್ಞಾನರಾಶಿಗೆ ಅದನ್ನು ಎದುರಿಸುವ ಶಕ್ತಿ ಇಲ್ಲ. ಸಂಸ್ಕೃತಿಯು ರಕ್ತದಲ್ಲಿ ಹರಿಯಬೇಕು. ಆಗ ಮಾತ್ರ ದೇಶದ ಪ್ರಗತಿ ಸ್ಥಿರವಾಗುವುದು. ಇದು ವಿವೇಕಾನಂದರ ದೃಷ್ಟಿಯಾಗಿದೆ.

9. ನಮ್ಮ ದೇಶದ ಮತ್ತು ಇಡೀ ಜಗತ್ತಿನ ಕಲ್ಯಾಣ ನಮ್ಮ ಮೇಲೆ ನಿಂತಿದೆ ಎಂದು ಭಾವಿಸಿಕೊಂಡು ನಾವು ಕಾರ್ಯೋನ್ಮುಖರಾಗಬೇಕು. ವೇದಾಂತದ ಸಂದೇಶವನ್ನು ಪ್ರತಿ ಮನೆಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಬೇಕು. ನಾವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ನಾವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದೆವು ಎಂಬ ತೃಪ್ತಿ ದೊರಕುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ.

10. ಗಾಂಧೀಜಿಯವರು ತಿಳಿದಂತೆ `ಅನ್‌ಟು ದಿಸ್ ಲಾಸ್ಟ್' ಗ್ರಂಥದ ಸಿದ್ಧಾಂತಗಳು :

(ಗ) ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ.

(ಬ) ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ.

(ಖ) ಶ್ರಮಜೀವಿಯ ಜೀವನ, ಉಳುವವನ ಅಥವಾ ಕೈಕಸುಬುಗಾರನ ಜೀವನವೇ ಯೋಗ್ಯ ಜೀವನ.

ಪಠ್ಯಪೂರಕ ಅಧ್ಯಯನ 4. ವಚನಗಳು

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. ಅಕ್ಕಮಹಾದೇವಿಯ ವಚನಗಳ ಅಂಕಿತ ಚೆನ್ನಮಲ್ಲಿಕಾರ್ಜುನ.

2. ಚೆನ್ನಮಲ್ಲಿಕಾರ್ಜುನ ಅಕ್ಕಮಹಾದೇವಿಯ ವಚನಗಳ ಅಂಕಿತವಾಗಿದೆ.

3. ಸುವರ್ಣವನ್ನು ತಂದು ಕಡಿದು ಒರೆದರೆ ಬೆಂದು ಕಳಂಕ ಹಿಡಿಯುವುದಿಲ್ಲ.

4. ಅಕ್ಕಮಹಾದೇವಿಯು ತಾನು ಹಿಂದೆ ಮಾಡಿದ ದೋಷಗಳನ್ನು ತಂದು ಮುಂದಿಟ್ಟರೆ ನಿಮಗೆ ಹಾನಿ ಎಂದಿದ್ದಾಳೆ.

5. ಅರಿಯದವರೊಡನೆ ಸಂಗ ಮಾಡಿದರೆ ಕಲ್ಲು ಹೊಡೆದು ಕಿಡಿಯ ತೆಗೆದು ಕೊಂಡಂತೆ ಆಗುತ್ತದೆ.

6. ಅರಿತವರೊಡನೆ ಸಂಗ ಮಾಡಿದರೆ ಮೊಸರನ್ನು ಕಡೆದು ಬೆಣ್ಣೆಯನ್ನು ಪಡೆದಂತೆ ಪ್ರಯೋಜನಕಾರಿಯಾಗಿರುತ್ತದೆ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

7. ಚಂದನವನ್ನು ಕಡಿದು,ಕೊರೆದು, ತೇದರೂ ನೊಂದು ಅದು ತನ್ನ ಸುವಾಸನೆ ಬಿಡದು. ಸುವರ್ಣವನ್ನು ಕಡಿದು, ಅರೆದು, ಬೇಯಿಸಿದರೂ ಕಳಂಕ ಹೊಂದುವುದಿಲ್ಲ. ಕಬ್ಬನ್ನು ಸಂದು ಸಂದು ಕಡಿದು ಗಾಣದಲ್ಲಿಟ್ಟು ಅರೆದು ಪಾಕ ಮಾಡಿ, ಅದು ಸಕ್ಕರೆಯಾದ ಮೇಲೆ ತಾನು ನೊಂದಿದ್ದ ಕಾರಣ ಸಿಹಿ ಬಿಡುವುದಿಲ್ಲ. ಹಾಗೆ ನನ್ನ ಹೀನತೆ ತಿಳಿಸಿ ಕೊಂದರೂ ನಾನು ನಿನ್ನಲ್ಲಿ ಶರಣಾಗುವುದನ್ನು ಬಿಡುವುದಿಲ್ಲ ಎಂದು ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ವ್ಯಕ್ತವಾಗಿದೆ.

8. ಜಗತ್ತಿನಲ್ಲಿ ಅರಿತವರು ಮತ್ತು ಅರಿಯದವರು ಇರುತ್ತಾರೆ. ಅರಿಯವದವರೊಡನೆ ಸಂಗ ಮಾಡಿದರೆ ಕಲ್ಲನ್ನು ಹೊಡೆದು ಬೆಂಕಿಯನ್ನು ಪಡೆದಂತೆ ಅಪ್ರಯೋಜನಕಾರಿಯಾಗಿರುತ್ತದೆ. ಅರಿತವರೊಡನೆ ಸಂಗ ಮಾಡಿದರೆ ಮೊಸರನ್ನು ಕಡೆದು ಬೆಣ್ಣೆಯನ್ನು ಪಡೆದಂತೆ ಪ್ರಯೋಜನಕಾರಿಯಾಗಿರುತ್ತದೆ. ಇವು ಅರಿಯದವರ ಮತ್ತು ಬಲ್ಲವರ ಸಂಗದ ಪರಿಣಾಮಗಳು ಶರಣರ ಸಂಗವನ್ನು ಮಾಡಿದರೆ ಕರ್ಪೂರದ ಗಿರಿಯನ್ನು ಉರಿಯಕೊಂಬಂತೆ ಎನ್ನುವುದು ಅಕ್ಕಮಹಾದೇವಿಯವರ ಅಭಿಪ್ರಾಯವಾಗಿದೆ.

ಪಠ್ಯಪೂರಕ ಅಧ್ಯಯನ 5. ನಾನು ಪ್ರಾಸ ಬಿಟ್ಟ ಕತೆ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. 'ಬಿಲ್ಲಹಬ್ಬ'ವನ್ನು ರಚಿಸಿದವರು ಮೂಲ್ಕಿಯ ವಾಸುದೇವಪ್ರಭು.

2. ಹಾಡುಕಿವಿಗೆ ಬಿದ್ದಾಗ ಪೈಗಳು ನೆಟ್ಟಗೆ ಹೋದವರು ಅಭ್ಯಾಸದ ಪುಸ್ತಕವನ್ನು ಹಿಡಿದು ಏಕಾಂಕ ನಾಟಕ ಎನ್ನ ಬಹುದಾದ ನಾಟಕವನ್ನು ಇಳಿಹೊತ್ತಿನೊಳಗೆ ಬರೆದು ಮುಗಿಸಿದರು.

3. ಮಂಗಳೂರಿನ ಬಾಸೆಲ್ ಮಿಶನ್‌ರವರು ಶಬ್ದಮಣಿ ದರ್ಪಣದಿಂದಲೂ, ಛಂದೋಂಬುದಿಯಿಂದಲೂ ಸಂಗ್ರಹಿಸಿ ಪ್ರಕಟಿಸಿದ (೧೮೪೯) 'ಹಳಗನ್ನಡ ವ್ಯಾಕರಣ

ಸೂತ್ರಗಳು' ಎಂಬ ಪುಸ್ತಕವನ್ನು, ಅದರಲ್ಲಿ ಮುಖ್ಯತಃ ಛಂದೋ ಲಕ್ಷಣ ಪ್ರಕರಣವನ್ನು, ಕನ್ನಡ ಜೈಮಿನಿಭಾರತ, ಗದುಗಿನ ಭಾರತ, ಶಬರ ಶಂಕರ ವಿಲಾಸವೇ ಮೊದಲಾದ ಮಹಾಕಾವ್ಯಗಳನ್ನು ಲೇಖಕರು ಓದಿದರು.

4. ಲೇಖಕರು ೧೮೯೯ ರಲ್ಲಿ ಶೇಕ್ಸ್ ಪಿಯರ್ "ಟ್ವೆಲ್‌ನೈಟ್"ಎಂಬ ನಾಟಕದ ಮೊದಲನೆಯ ಅಂಕದಿಂದ ಕೆಲವು ನೋಟಗಳನ್ನು ವೃತ್ತ-ಕಂದಗಳಲ್ಲಿ ಭಾಷಾಂತರಗೊಳಿಸಿ, ಅವನ್ನು ಶ್ರೀನಂದಳಿಕೆ ಲಕ್ಷ್ಮೀನಾರಾಣಪ್ಪನವರಿಗೆ ಕಳಿಸಿಕೊಟ್ಟಾಗ ಅವರು ಮುಂದುವರಿಸಿ ಎಂದು ಹೇಳಿ ಕಳುಹಿಸಿದರು.

5. ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಲೇಖಕರು ರವೀಂದ್ರನಾಥ ಠಾಕೂರರ 'ಅಯಿ ಭುವನ ಮನೋಮೋಹಿನಿ' ಕನ್ನಡಿಸಿ ಬರೆದರು.

6. ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೇಸರು ಮಕರಾಕ್ಷನ ಕಾಳಗ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

7. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಿದ್ದರು,ಮತ್ತೊಂದು ಕಡೆ ಮಂಡಿಗೆಗಳನ್ನು ಮಡುಚುತ್ತಿದ್ದರು, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಿದ್ದರು. ಹೀಗೆ ಇನ್ನೂ ಮುಂತಾದ ಸಿದ್ಧತೆಗಳಾಗುತ್ತಿದ್ದವು.

8. ಪೈಗಳು ಬರೋಡಾ ರಾಜ್ಯದ ನವಸಾರಿಯಲ್ಲಿದ್ದಾಗ ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪತಗೈಯುತ್ತಿದ್ದಾಗ ಆಗೋದು ಹೋಗೋದು ದೇವರ ಇಚ್ಛೆ, ಹೂಡೋದು ಬಿತ್ತೋದು ನನ್ನ ಇಚ್ಛೆ ಹಾಗಾಗಿ ಮೀನ ಮೇಷ ನೋಡದೆ ಪ್ರಾಸವನ್ನು ಈಗಲೇ ತೊರೆಯುವುದು ಉತ್ತಮ ಎಂದುಕೊಂಡು ತಕ್ಷಣ ರವೀಂದ್ರನಾಥ ಠಾಕೂರರ ಭಾರತಲಕ್ಷ್ಮೀ, ವಿದಾಯ ಎಂಬ ಬಂಗಾಳಿ ಕವಿತೆಗಳನ್ನು, ಶೇಖ್ ಮಹಮ್ಮದ್ ಇಕ್ಬಾಲರ ಹಿಂದೂಸ್ಥಾನ ಹಮಾರಾ ಎಂಬ ಉರ್ದು ಗೀತವನ್ನು ಕನ್ನಡಿಸಿದರು. ನಂತರ ತಮ್ಮ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಅವನ್ನು ಪ್ರಕಟಿಸಿದರು.

9. ಪೈಗಳಿಗೆ ಪ್ರಾಸವನ್ನು ಬಿಟ್ಟು ಬರೆಯಬೇಕೆಂದು ಪದೇ ಪದೇ ಸ್ಫುರಿಸುತ್ತಿತ್ತು. ಆದರೆ ಚೇಳಿನ ಮಂತ್ರ ಬಾರದೆ ಹಾವಿನ ಗುದ್ದಿನಲ್ಲಿ ಕೈಹಾಕಲಾರದೆ, ಆ ಬಗ್ಗೆ ಬಲ್ಲವರು ಬೆನ್ನು ತಟ್ಟಿದಲ್ಲದೆ ಹಾಗೆ ಬರೆಯಲಿಕ್ಕೆ ಮನಸ್ಸು ಅಳುಕುತ್ತಿತ್ತು. ಕೈ ತೋರಿಸಿ ಅವಲಕ್ಷಣ ಎನಿಸಿಕೊಳ್ಳುವುದಕ್ಕಿಂತ ಸುಮ್ಮನಿರುವುದು ಒಳ್ಳೆಯದು ಎನಿಸುತ್ತಿತ್ತು. ತಮ್ಮ ಕವಿತೆಯನ್ನು ಕುರಿತು ಯಾರೊಂದಿಗೂ ಕೇಳಬಾರದು, ಯಾರು ಏನೆಂದರೂ ಮಾಡುವುದನ್ನು ಬಿಡಬಾರದು, ಉತ್ತ ಮೇಲಲ್ಲವೆ ಬಿತ್ತುವ ಯೋಚನೆ? ತಕ್ಕಷ್ಟು ಬರೆದ ಮೇಲಲ್ಲವೇ ಪ್ರಾಸದ ಗೋಜು? ಆ ತನಕ ತಣ್ಣಗಿರುವುದೇ ಲೇಸೆಂದು ಪ್ರಾಸ ಇಟ್ಟೇ ಬರೆಯುತ್ತ ಹೋದರು.

ಪಠ್ಯಪೂರಕ ಅಧ್ಯಯನ 6. ಶುಕನಾಸನ ಉಪದೇಶ

ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) :

1. ಗುರುವಾಣಿ ಮೂರ್ಖರ ಕಿವಿಗೆ ಹೊರೆ ಎನಿಸುತ್ತದೆ.

2. ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು ಅಹಂಕಾರದಿಂದ ಅವರ ಕಿವಿ ಕಿವುಡಾಗಿ ಬಿಡುತ್ತದೆ. ಇಂತವರ ಕಿವಿಗೆ ಉಪದೇಶವು ನಾಟುವುದಿಲ್ಲ.

3. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತು ಕ್ಷುದ್ರವಾಗಿ ಕಾಣಿಸುತ್ತದೆ.

4. ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ, ಮನಸ್ಸಿನ ಕೊಳೆಯನ್ನೆಲ್ಲ ಹಿತವಚನ ತೊಳೆದು ಬಿಡುತ್ತದೆ.

5. ದುಡ್ಡು ದುರಭಿಮಾನದ ತವರಾಗಿದೆ.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

6. ಸಜ್ಜನರಿಗೆ ಗುರುವಚನ ಎನ್ನುವುದು ಕಿವಿಗೆ ಒಂದು ಆಭರಣ. ಅದರಿಂದ ಅವರ ಶ್ರೀಮುಖ ಇನ್ನಷ್ಟು ಶ್ರೀಮಂತವಾಗುತ್ತದೆ. ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ, ಬಗೆಯ ಕೊಳೆಯನ್ನೆಲ್ಲ ಹಿತವಚನ ತೊಳೆದುಬಿಡುತ್ತದೆ. ಆಗ ಬಾಳಿನಲ್ಲಿ ಒಂದು ಸಂಯಮ, ಒಂದು ಪಕ್ವತೆ, ಒಂದು ಶಾಂತಿ ಕಾಣಿಸಿಕೊಳ್ಳುತ್ತದೆ. ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ' ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ.

7. ರಾಜರ ಪ್ರಕೃತಿಯು ಅಹಂಕಾರದ ದಾಹ ಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಇದು ಎಲ್ಲ ದುಡ್ಡಿನ ಮಹಿಮೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುದು ಒಂದು ವಿಷ. ಅದರ ಅಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿ ಮಂಕಾಗಿ ಬಿಡುತ್ತದೆ.

ಹೆಚ್ಚುವರಿ ಪ್ರಬಂಧಗಳು :

1. ಶಾಲೆಯಲ್ಲಿ ಮೌಲ್ಯ ಶಿಕ್ಷಣ :

ಪೀಠಿಕೆ : "ವಿದ್ಯೆಯೇ ಸರ್ವಸ್ವ" ಎನ್ನುವ ಮಾತಿನಂತೆ ಶಿಕ್ಷಣವು ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವ ಪ್ರಬಲ ಸಾಧನವಾಗಿದೆ. ಕೇವಲ ಪುಸ್ತಕದ ಜ್ಞಾನ ಅಥವಾ ಅಂಕಗಳನ್ನು ಗಳಿಸುವುದು ಮಾತ್ರ ಶಿಕ್ಷಣವಲ್ಲ; ವ್ಯಕ್ತಿಯಲ್ಲಿ ನೈತಿಕತೆ, ಶಿಸ್ತು ಮತ್ತು ಮಾನವೀಯ ಗುಣಗಳನ್ನು ಬೆಳೆಸುವುದೇ ನಿಜವಾದ ಶಿಕ್ಷಣ. ಇದನ್ನು ನಾವು 'ಮೌಲ್ಯ ಶಿಕ್ಷಣ' ಎಂದು ಕರೆಯುತ್ತೇವೆ. ಶಾಲೆಗಳು ಕೇವಲ ಅಕ್ಷರ ಕಲಿಯುವ ಕೇಂದ್ರಗಳಾಗದೆ, ಬದುಕಿನ ಸಂಸ್ಕಾರವನ್ನು ಕಲಿಸುವ ದೇಗುಲಗಳಾಗಬೇಕು.

ವಿಷಯ ವಿವರಣೆ : ಇಂದಿನ ಆಧುನಿಕ ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ಮಾನವೀಯ ಮೌಲ್ಯಗಳು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿವೆ. ಸಮಾಜದಲ್ಲಿ ಅಶಾಂತಿ, ಭ್ರಷ್ಟಾಚಾರ ಮತ್ತು ಹಿಂಸೆ ಹೆಚ್ಚಾಗುತ್ತಿರುವ ಈ ಸಮಯದಲ್ಲಿ ಮೌಲ್ಯ ಶಿಕ್ಷಣದ ಅಗತ್ಯತೆ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸತ್ಯ, ಪ್ರಾಮಾಣಿಕತೆ, ಅಹಿಂಸೆ, ಸಹನೆ, ಸಮಾನತೆ ಮತ್ತು ಪರಸ್ಪರ ಗೌರವ ನೀಡುವಂತಹ ಜೀವನ ಮೌಲ್ಯಗಳನ್ನು ಬೋಧಿಸಬೇಕು. ಮಕ್ಕಳು ದೇಶದ ಭವಿಷ್ಯದ ಪ್ರಜೆಗಳು. ಅವರಲ್ಲಿ ಬಾಲ್ಯದಿಂದಲೇ ಉತ್ತಮ ಗುಣಗಳನ್ನು ಬಿತ್ತಿದರೆ, ಅವರು ಮುಂದೆ ಸುಸಂಸ್ಕೃತ ನಾಗರಿಕರಾಗಿ ಬೆಳೆಯಲು ಸಾಧ್ಯವಾಗುತ್ತದೆ. ಶಾಲೆಗಳಲ್ಲಿ ದಿನನಿತ್ಯದ ಪ್ರಾರ್ಥನಾ ಸಭೆಗಳು, ಮಹಾಪುರುಷರ ಜೀವನ ಚರಿತ್ರೆಗಳ ಪರಿಚಯ, ನೈತಿಕ ಕಥೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಮೌಲ್ಯಗಳನ್ನು ಕಲಿಸಬಹುದು. ಇದರಲ್ಲಿ ಶಿಕ್ಷಕರ ಪಾತ್ರ ಅತ್ಯಂತ ದೊಡ್ಡದು. ಶಿಕ್ಷಕರು ತಮ್ಮ ನಡೆ-ನುಡಿಗಳಲ್ಲಿ ಆದರ್ಶ ಪ್ರಾಯರಾಗಿದ್ದಾಗ, ವಿದ್ಯಾರ್ಥಿಗಳು ಅವರನ್ನು ನೋಡಿ ಉತ್ತಮ ಹಾದಿಯನ್ನು ತುಳಿಯುತ್ತಾರೆ. ಕೇವಲ ಹಣ ಗಳಿಸುವುದೇ ಜೀವನದ ಅಂತಿಮ ಗುರಿಯಾಗಬಾರದು, ಬದಲಾಗಿ ಸಮಾಜದ ಹಿತವನ್ನು ಬಯಸುವ ಗುಣ ಬೆಳೆಯಬೇಕು.

ಉಪಸಂಹಾರ : ಒಂದು ರಾಷ್ಟ್ರದ ಪ್ರಗತಿಯು ಅಲ್ಲಿನ ಕಟ್ಟಡಗಳ ಮೇಲೆ ಅಥವಾ ತಂತ್ರಜ್ಞಾನದ ಮೇಲೆ ಮಾತ್ರ ನಿಂತಿಲ್ಲ, ಬದಲಾಗಿ ಅಲ್ಲಿನ ಪ್ರಜೆಗಳ ನೈತಿಕ ಚಾರಿತ್ರ್ಯದ ಮೇಲೆ ನಿಂತಿದೆ. ಮೌಲ್ಯ ಶಿಕ್ಷಣವು ವಿದ್ಯಾರ್ಥಿಗಳ ಬೌದ್ಧಿಕ ವಿಕಸನದ ಜೊತೆಗೆ ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಹೀಗಾಗಿ ಪ್ರತಿಯೊಂದು ಶಾಲೆಯಲ್ಲೂ ಪಠ್ಯದ ಜೊತೆಗೆ ನೈತಿಕ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಆಗ ಮಾತ್ರ ನಾವು ಸುಂದರ ಮತ್ತು ಶಾಂತಿಯುತ ಸಮಾಜವನ್ನು ನಿರ್ಮಿಸಲು ಸಾಧ್ಯ.

2. ಶಾಲೆಯಲ್ಲಿನ ವಿವಿಧ ಸಂಘಗಳ ಚಟುವಟಿಕೆಗಳು :

ಪೀಠಿಕೆ : "ಶಿಕ್ಷಣವು ಕೇವಲ ಅಕ್ಷರ ಜ್ಞಾನವಲ್ಲ, ಅದು ವ್ಯಕ್ತಿತ್ವದ ವಿಕಸನ." ಶಾಲೆಯಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಕೇವಲ ಪಠ್ಯ ಬೋಧನೆ ಸಾಲದು. ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಹೊರತರಲು, ನಾಯಕತ್ವ ಗುಣ ಬೆಳೆಸಲು ಮತ್ತು ಸಾಮಾಜಿಕ ಪ್ರಜ್ಞೆ ಮೂಡಿಸಲು ಶಾಲಾ ಸಂಘಗಳು ಅತ್ಯಗತ್ಯ. ಈ ಸಂಘಗಳು ಶಾಲಾ ಜೀವನಕ್ಕೆ ಚೈತನ್ಯ ನೀಡುವ ಶಕ್ತಿ ಕೇಂದ್ರಗಳಾಗಿವೆ.

ವಿಷಯ ನಿರೂಪಣೆ : ವಿವಿಧ ಸಂಘಗಳು ಮತ್ತು ಕಾರ್ಯವೈಖರಿ : ಶಾಲೆಯಲ್ಲಿ ವಿಷಯಕ್ಕೆ ಅನುಗುಣವಾಗಿ ಹಲವು ಸಂಘಗಳನ್ನು ರಚಿಸಲಾಗುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ :

ಸಾಹಿತ್ಯ ಸಂಘ : ಇದು ವಿದ್ಯಾರ್ಥಿಗಳ ಭಾಷಾ ಜ್ಞಾನವನ್ನು ಹೆಚ್ಚಿಸುತ್ತದೆ. ಚರ್ಚಾ ಸ್ಪರ್ಧೆ, ಪ್ರಬಂಧ ಬರವಣಿಗೆ ಮತ್ತು ಕವನ ವಾಚನದ ಮೂಲಕ ವಿದ್ಯಾರ್ಥಿಗಳು ತಮ್ಮ ಅಭಿವ್ಯಕ್ತಿ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳುತ್ತಾರೆ.
ವಿಜ್ಞಾನ ಸಂಘ : ''ಪ್ರಯೋಗವೇ ಜ್ಞಾನದ ತಾಯಿ. ವಿಜ್ಞಾನ ಸಂಘವು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುತ್ತದೆ. ವಿಜ್ಞಾನ ಮಾದರಿಗಳ ತಯಾರಿಕೆ ಮತ್ತು ರಸಪ್ರಶ್ನೆಗಳು ಇಲ್ಲಿನ ಪ್ರಮುಖ ಚಟುವಟಿಕೆಗಳು.
ಪರಿಸರ ಸಂಘ (Eco-Club): ಇಂದಿನ ಜಾಗತಿಕ ತಾಪಮಾನದ ದಿನಗಳಲ್ಲಿ ಪರಿಸರ ಸಂಘದ ಪಾತ್ರ ದೊಡ್ಡದು. ಶಾಲಾ ಆವರಣದಲ್ಲಿ ಗಿಡ ನೆಡುವುದು, ಪ್ಲಾಸ್ಟಿಕ್ ಮುಕ್ತ ಅಭಿಯಾನ ಮತ್ತು ಸ್ವಚ್ಛತಾ ಕಾರ್ಯಕ್ರಮಗಳನ್ನು ಇದು ಹಮ್ಮಿಕೊಳ್ಳುತ್ತದೆ.
ಕ್ರೀಡಾ ಸಂಘ : 'ಆರೋಗ್ಯವೇ ಭಾಗ್ಯ' ಎಂಬಂತೆ, ವಿದ್ಯಾರ್ಥಿಗಳ ದೈಹಿಕ ಸದೃಢತೆಗಾಗಿ ಕ್ರೀಡಾ ಸಂಘವು ವಿವಿಧ ಆಟೋಟಗಳನ್ನು ಮತ್ತು ವಾರ್ಷಿಕ ಕ್ರೀಡಾಕೂಟವನ್ನು ಆಯೋಜಿಸುತ್ತದೆ.
ಸಾಂಸ್ಕೃತಿಕ ಸಂಘ : ಇದು ನಮ್ಮ ಕಲೆ ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತದೆ. ಸಂಗೀತ, ನೃತ್ಯ, ನಾಟಕ ಮತ್ತು ಜಾನಪದ ಕಲೆಗಳ ಮೂಲಕ ವಿದ್ಯಾರ್ಥಿಗಳು ಮನರಂಜನೆಯೊಂದಿಗೆ ಕಲಾ ಪ್ರೌಢಿಮೆಯನ್ನು ಮೆರೆಯುತ್ತಾರೆ.
ಸಂಘಗಳ ಚಟುವಟಿಕೆಗಳ ಮಹತ್ವ :
1. ನಾಯಕತ್ವದ ಗುಣ : ಸಂಘದ ಪದಾಧಿಕಾರಿಗಳಾಗಿ ಕೆಲಸ ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಜವಾಬ್ದಾರಿ ಮತ್ತು ನಾಯಕತ್ವದ ಗುಣಗಳು ಬೆಳೆಯುತ್ತವೆ.
2. ಸೃಜನಶೀಲತೆ : ತರಗತಿಯ ಹೊರಗಿನ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಹೊಸ ರೀತಿಯಲ್ಲಿ ಯೋಚಿಸಲು ಪ್ರೇರೇಪಿಸುತ್ತವೆ.
3. ತಂಡದ ಕೆಲಸ (Team Work) : ಎಲ್ಲರೊಂದಿಗೆ ಸೇರಿ ಕೆಲಸ ಮಾಡುವುದರಿಂದ ಸಹಕಾರ ಮತ್ತು ಹೊಂದಾಣಿಕೆಯ ಗುಣ ಬೆಳೆಯುತ್ತದೆ.
4. ವೇದಿಕೆಯ ಭಯ ನಿವಾರಣೆ: ಸಾರ್ವಜನಿಕವಾಗಿ ಪ್ರದರ್ಶನ ನೀಡುವುದರಿಂದ ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚುತ್ತದೆ.
ಉಪಸಂಹಾರ : ಶಾಲಾ ಸಂಘಗಳು ವಿದ್ಯಾರ್ಥಿಗಳನ್ನು ಕೇವಲ 'ಅಂಕ ಗಳಿಸುವ ಯಂತ್ರ'ಗಳನ್ನಾಗಿ ಮಾಡದೆ, ಸಮಾಜದ ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತವೆ. ಪಠ್ಯದ ಜೊತೆಗೆ ಇಂತಹ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು ವಿದ್ಯಾರ್ಥಿಯ ಬೌದ್ಧಿಕ ಮತ್ತು ಮಾನಸಿಕ ವಿಕಸನಕ್ಕೆ ನಾಂದಿಯಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಯಾವುದಾದರೊಂದು ಸಂಘದ ಭಾಗವಾಗಿ ತನ್ನ ಪ್ರತಿಭೆಯನ್ನು ವೃದ್ಧಿಸಿಕೊಳ್ಳಬೇಕು.

3. ಕನ್ನಡ ಭಾಷಾಭಿವೃದ್ಧಿಯ ಮಾರ್ಗಗಳು :

ಪೀಠಿಕೆ : "ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ" ಎಂಬ ಮಾತು ಎಷ್ಟು ಸತ್ಯವೋ, ಆ ಉಸಿರನ್ನು ಉಳಿಸಿಕೊಳ್ಳುವ ಜವಾಬ್ದಾರಿ ಅಷ್ಟೇ ಮುಖ್ಯವಾದುದು. ಸಾವಿರಾರು ವರ್ಷಗಳ ಇತಿಹಾಸವಿರುವ, 'ಶಾಸ್ತ್ರೀಯ ಭಾಷೆ' ಎಂಬ ಹೆಗ್ಗಳಿಕೆಯಿರುವ ಕನ್ನಡದ ಅಭಿವೃದ್ಧಿ ಕೇವಲ ಸರ್ಕಾರದಿಂದ ಮಾತ್ರವಲ್ಲ, ಪ್ರತಿ ಕನ್ನಡಿಗನಿಂದಲೂ ಸಾಧ್ಯ. ಕನ್ನಡವು ಕೇವಲ ಒಂದು ಭಾಷೆಯಲ್ಲ, ಅದು ಎಂಟು ಜ್ಞಾನಪೀಠ ಪುರಸ್ಕೃತಿಗಳನ್ನು ಮುಡಿಗೇರಿಸಿಕೊಂಡಿರುವ ಸಾಂಸ್ಕೃತಿಕ ಶಕ್ತಿ. ಜಾಗತೀಕರಣದ ಈ ಕಾಲದಲ್ಲಿ ಇಂಗ್ಲಿಷ್ ಅಬ್ಬರದ ನಡುವೆ ಕನ್ನಡವನ್ನು

ಉಳಿಸಿ ಬೆಳೆಸುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ. ಭಾಷೆಯು ಬೆಳೆಯುವುದು ಅದು ಜ್ಞಾನದ ಮತ್ತು ಬದುಕಿನ ಭಾಷೆಯಾದಾಗ ಮಾತ್ರ.

ವಿಷಯ ನಿರೂಪಣೆ : ಕನ್ನಡ ಭಾಷೆ ಅಭಿವೃದ್ಧಿ ಹೊಂದಬೇಕಾದರೆ ಮೊದಲು ಕನ್ನಡವನ್ನು ಬಳಸಬೇಕು. ಜೊತೆಗೆ ಈ ಕೆಳಗಿನ ಸುಧಾರಣೆಗಳ ಮೂಲಕ ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸಬಹುದು.

1. ಶಿಕ್ಷಣ ಮತ್ತು ಪಠ್ಯಕ್ರಮದ ಸುಧಾರಣೆ : ಕೇವಲ ಸಾಹಿತ್ಯದ ಕನ್ನಡ ಕಲಿಸಿದರೆ ಸಾಲದು. ವಿಜ್ಞಾನ, ಗಣಿತ ಮತ್ತು ತಂತ್ರಜ್ಞಾನದ ವಿಷಯಗಳನ್ನು ಕನ್ನಡದಲ್ಲಿಸರಳವಾಗಿ ಬೋಧಿಸುವಂತಾಗಬೇಕು. ಪ್ರಾದೇಶಿಕ ಭಾಷೆಯಲ್ಲಿ ಕಲಿತರೆ ವಿಷಯಗಳು ಬೇಗ ಅರ್ಥವಾಗುತ್ತವೆ ಎಂದು ಮನೋವಿಜ್ಞಾನ ಹೇಳುತ್ತದೆ. ಹಾಗಾಗಿ, ತಾಂತ್ರಿಕ ಶಿಕ್ಷಣದ ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ತರುವುದು ಅತ್ಯಂತ ಅವಶ್ಯಕ.

2. ಆಡಳಿತ ಮತ್ತು ನ್ಯಾಯಾಂಗದಲ್ಲಿ ಬಳಕೆ : ಸರ್ಕಾರಿ ಕಚೇರಿಗಳಲ್ಲಿ ಕಡತಗಳು ಕನ್ನಡದಲ್ಲೇ ಇರಬೇಕು. ಜನಸಾಮಾನ್ಯರಿಗೆ ನ್ಯಾಯಾಲಯದ ತೀರ್ಪುಗಳು ತಮ್ಮದೇ ಭಾಷೆಯಲ್ಲಿ ಲಭ್ಯವಾದರೆ ವ್ಯವಸ್ಥೆಯ ಮೇಲೆ ನಂಬಿಕೆ ಹೆಚ್ಚುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಂತಹ ಸಂಸ್ಥೆಗಳು ಜಾರಿಗೆ ತರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

3. ಡಿಜಿಟಲ್ ಲೋಕದಲ್ಲಿ ಕನ್ನಡದ ಹೆಜ್ಜೆಗುರುತು : ಇಂದು ಮಾಹಿತಿ ತಂತ್ರಜ್ಞಾನದ ಯುಗ. ಕನ್ನಡ ಸಾಹಿತ್ಯವನ್ನು ಡಿಜಿಟಲೀಕರಣಗೊಳಿಸುವುದು, ಕನ್ನಡದ ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಗೂಗಲ್ ಟ್ರಾನ್ಸ್‌ಲೇಟ್ ನಂತಹ ತಂತ್ರಜ್ಞಾನಗಳಲ್ಲಿ ಕನ್ನಡದ ನಿಖರತೆಯನ್ನು ಹೆಚ್ಚಿಸುವುದು ಇಂದಿನ ಅಗತ್ಯವಾಗಿದೆ. ಯುವಜನರು ವಿಕಿಪೀಡಿಯಾದಲ್ಲಿ ಕನ್ನಡದ ಲೇಖನಗಳನ್ನು ಹೆಚ್ಚಾಗಿ ಬರೆಯಬೇಕು.

4. ಆರ್ಥಿಕತೆ ಮತ್ತು ಉದ್ಯೋಗದೊಂದಿಗೆ ಜೋಡಣೆ : "ಕನ್ನಡ ಕಲಿತರೆ ಕೆಲಸ ಸಿಗುತ್ತದೆ" ಎಂಬ ವಾತಾವರಣ ನಿರ್ಮಾಣವಾಗಬೇಕು. ಕರ್ನಾಟಕದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಸರೋಜಿನಿ ಮಹಿಷಿ ವರದಿಯಂತಹ ಶಿಫಾರಸುಗಳ ಬಗ್ಗೆ ಗಂಭೀರ ಚರ್ಚೆ ಮತ್ತು ಕ್ರಮಗಳು ನಡೆಯಬೇಕು. ಬ್ಯಾಂಕಿಂಗ್ ಪರೀಕ್ಷೆಗಳನ್ನು ಕನ್ನಡದಲ್ಲೇ ಬರೆಯಲು ಅವಕಾಶವಿರಬೇಕು.

5. ಅನ್ಯಭಾಷಿಕರನ್ನು ಒಳಗೊಳ್ಳುವುದು : ಕರ್ನಾಟಕಕ್ಕೆ ಬರುವ ಅನ್ಯಭಾಷಿಕರಿಗೆ ಕನ್ನಡವನ್ನು ಕಲಿಸುವ ಸರಳ ಮಾರ್ಗಗಳನ್ನು ಕಂಡುಕೊಳ್ಳಬೇಕು. ಅವರನ್ನು ದ್ವೇಷಿಸುವ ಬದಲು, ಪ್ರೀತಿಯಿಂದ ಕನ್ನಡ ಕಲಿಸುವ 'ಕನ್ನಡ ಕಲಿಕೆ' ಕೇಂದ್ರಗಳು ಹೆಚ್ಚಾಗಬೇಕು. ಸಿನಿಮಾ ಮತ್ತು ಮಾಧ್ಯಮಗಳು ಈ ನಿಟ್ಟಿನಲ್ಲಿ ದೊಡ್ಡ ಪಾತ್ರ ವಹಿಸಬಲ್ಲವು.

6. ಸಂಶೋಧನೆ ಮತ್ತು ಆವಿಷ್ಕಾರ : ಹಳೆಗನ್ನಡದ ಕಾವ್ಯಗಳ ಮರುಚಿಂತನೆ ಮತ್ತು ಹೊಸಗನ್ನಡದ ಪ್ರಯೋಗಶೀಲ ಬರಹಗಳಿಗೆ ಪ್ರೋತ್ಸಾಹ ನೀಡಬೇಕು. ವಿಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಕನ್ನಡದ ಪದಕೋಶವನ್ನು ಶ್ರೀಮಂತಗೊಳಿಸಬೇಕು.

ಉಪಸಂಹಾರ : ಭಾಷೆಯು ನದಿಯಂತೆ, ಅದು ಹರಿಯುತ್ತಿರಬೇಕು. ಹೊಸ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ, ತನ್ನ ಮೂಲವನ್ನು ಉಳಿಸಿಕೊಳ್ಳಬೇಕು. ಸರ್ಕಾರಿ ಸವಲತ್ತುಗಳಿಗಿಂತ ಹೆಚ್ಚಾಗಿ, ಕನ್ನಡಿಗರು ತಮ್ಮ ಮನೆಗಳಲ್ಲಿ ಮಕ್ಕಳೊಂದಿಗೆ ಕನ್ನಡ ಮಾತನಾಡಿದಾಗ ಮಾತ್ರ ಭಾಷೆ ಜೀವಂತವಾಗಿರುತ್ತದೆ. "ಕನ್ನಡ ಉಳಿಸಿ" ಎನ್ನುವುದಕ್ಕಿಂತ "ಕನ್ನಡ ಬಳಸಿ" ಎಂಬ ಮಂತ್ರವೇ ಭಾಷಾಭಿವೃದ್ಧಿಯ ಗುರಿ.

4. ಕನ್ನಡ ಭಾಷೆಯ ಬೆಳೆವಣಿಗೆ ಮತ್ತು ಸವಾಲುಗಳು :

ಪೀಠಿಕೆ : ಕನ್ನಡವು ಭಾರತದ ಅತ್ಯಂತ ಪ್ರಾಚೀನ ಹಾಗೂ ಶ್ರೀಮಂತ ಭಾಷೆಗಳಲ್ಲಿ ಒಂದಾಗಿದೆ. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡಕ್ಕೆ 'ಶಾಸ್ತ್ರೀಯ ಸ್ಥಾನಮಾನ' ಲಭಿಸಿದೆ. ಕನ್ನಡವು ಕೇವಲ ಸಂವಹನ ಮಾಧ್ಯಮವಾಗಿರದೆ, ಕನ್ನಡಿಗರ ಬದುಕು, ಸಂಸ್ಕೃತಿ ಮತ್ತು ಭಾವನೆಗಳ ಪ್ರತೀಕವಾಗಿದೆ.

ವಿಷಯ ನಿರೂಪಣೆ : ಕನ್ನಡ ಭಾಷೆಯು ಕಾಲಘಟ್ಟಕ್ಕೆ ತಕ್ಕಂತೆ ಅದ್ಭುತವಾಗಿ ಬೆಳೆದು ಬಂದಿದೆ. ಪಂಪ, ರನ್ನ, ಕುಮಾರವ್ಯಾಸರಿಂದ ಹಿಡಿದು ಕುವೆಂಪು, ಬೇಂದ್ರೆ, ಕಾರಂತರವರೆಗೆ ಕನ್ನಡ ಸಾಹಿತ್ಯವು ಜಗತ್ತಿನ ಶ್ರೇಷ್ಠ ಸಾಹಿತ್ಯಗಳಲ್ಲಿ ಒಂದೆನಿಸಿದೆ. ಭಾರತದಲ್ಲೇ ಎರಡನೇ ಅತಿ ಹೆಚ್ಚು (ಆ) 'ಜ್ಞಾನಪೀಠ ಪ್ರಶಸ್ತಿ'ಗಳನ್ನು ಪಡೆದ ಹೆಗ್ಗಳಿಕೆ ಕನ್ನಡದ್ದು. ಕರ್ನಾಟಕದ ಆಡಳಿತ ಭಾಷೆಯಾಗಿ ಕನ್ನಡ ಬಳಕೆಯಲ್ಲಿದೆ. ಪತ್ರಿಕೋದ್ಯಮ, ಟಿವಿ ವಾಹಿನಿಗಳು ಮತ್ತು ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಕನ್ನಡದ ಬಳಕೆ ಹೆಚ್ಚಾಗಿದೆ. ಕಂಪ್ಯೂಟರ್ ಮತ್ತು ಮೊಬೈಲ್‌ಗಳಲ್ಲಿ ಕನ್ನಡವನ್ನು ಸುಲಭವಾಗಿ ಟೈಪ್ ಮಾಡುವ ತಂತ್ರಜ್ಞಾನ ಬಂದಿರುವುದರಿಂದ ಡಿಜಿಟಲ್ ಜಗತ್ತಿನಲ್ಲಿಯೂ ಕನ್ನಡ ಬೆಳೆಯುತ್ತಿದೆ. ವಿಕಿಪೀಡಿಯಾ, ಗೂಗಲ್ ಟ್ರಾನ್ಸ್‌ಲೇಟ್ ನಂತಹ ವೇದಿಕೆಗಳಲ್ಲಿ ಕನ್ನಡ ಲಭ್ಯವಿದೆ. ಇತ್ತೀಚಿನ ದಿನಗಳಲ್ಲಿ ಕನ್ನಡ ಚಲನಚಿತ್ರಗಳು (ಉದಾ: ಕೆಜಿಎಫ್, ಕಾಂತಾರ) ವಿಶ್ವಮಟ್ಟದಲ್ಲಿ ಸದ್ದು ಮಾಡುತ್ತಿರುವುದು ಭಾಷೆಯ ಬೆಳವಣಿಗೆಗೆ ಪೂರಕವಾಗಿದೆ.

ಹೀಗಿದ್ದರೂ ಹಲವು ಸಾಧನೆಗಳ ನಡುವೆಯೂ ಪ್ರಸ್ತುತ ದಿನಗಳಲ್ಲಿ ಕನ್ನಡ ಭಾಷೆ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಇಂಗ್ಲಿಷ್ ವ್ಯಾಮೋಹದಿಂದ, ಜಾಗತೀಕರಣದ ಪ್ರಭಾವದಿಂದ ಪೋಷಕರು ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಸೇರಿಸಲು ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಇದರಿಂದ ಕನ್ನಡ ಕಲಿಯುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಕಾರ್ಪೊರೇಟ್ ಜಗತ್ತು ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಇಂಗ್ಲಿಷ್ ಭಾಷೆಯ ಪ್ರಾಬಲ್ಯ ಹೆಚ್ಚಿದೆ. "ಕನ್ನಡ ಕಲಿತರೆ ಕೆಲಸ ಸಿಗುತ್ತದೆಯೇ?" ಎಂಬ ಪ್ರಶ್ನೆ ಯುವಜನತೆಯನ್ನು ಕಾಡುತ್ತಿದೆ. ಬೆಂಗಳೂರಿನಲ್ಲಿ ಪರಭಾಷಾ ಹಾವಳಿ ಹೆಚ್ಚಾಗಿದೆ. ರಾಜಧಾನಿ ಬೆಂಗಳೂರನಲ್ಲಿ ಕನ್ನಡಕ್ಕಿಂತ ಇತರೆ ಭಾಷೆಗಳ ಬಳಕೆ ಹೆಚ್ಚಾಗುತ್ತಿದೆ. ಇದು ಕನ್ನಡಿಗರಲ್ಲಿ ಆತಂಕ ಮೂಡಿಸಿದೆ. ಇಂದಿನ ಯುವ ಪೀಳಿಗೆಯಲ್ಲಿ ಕನ್ನಡ ಪುಸ್ತಕಗಳು, ದಿನಪತ್ರಿಕೆಗಳನ್ನು ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಮೊಬೈಲ್ ಸಂಸ್ಕೃತಿಯಿಂದಾಗಿ ಶುದ್ಧ ಕನ್ನಡದ ಬಳಕೆ ಕ್ಷೀಣಿಸುತ್ತಿದೆ ಆದರೂ ಸವಾಲುಗಳನ್ನು ಎದುರಿಸಲು ಹಲವು ಪರಿಹಾರೋಪಾಯಗಳನ್ನು ಕಂಡು ಕೊಳ್ಳಬಹುದು. ಕನಿಷ್ಠ ಪ್ರಾಥಮಿಕ ಹಂತದವರೆಗಾದರೂ ಕನ್ನಡ ಮಾಧ್ಯಮ ಅಥವಾ ಕನ್ನಡವನ್ನು ಕಡ್ಡಾಯ ವಿಷಯವನ್ನಾಗಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಕೃತಕ ಬುದ್ಧಿಮತ್ತೆ ಮತ್ತು ಆಧುನಿಕ ತಂತ್ರಜ್ಞಾನಗಳಲ್ಲಿ ಕನ್ನಡದ ಬಳಕೆಯನ್ನು ಇನ್ನಷ್ಟು ಹೆಚ್ಚಿಸಬೇಕು. ಕನ್ನಡ ಬಲ್ಲವರಿಗೆ ಸರ್ಕಾರಿ ಹಾಗೂ ಖಾಸಗಿ ವಲಯದ ಉದ್ಯೋಗಗಳಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು. ನಾವು ಮನೆಯಲ್ಲಿ ಮಕ್ಕಳೊಂದಿಗೆ ಕನ್ನಡದಲ್ಲೇ ಮಾತನಾಡಬೇಕು ಮತ್ತು ಕನ್ನಡ ಪುಸ್ತಕಗಳನ್ನು ಉಡುಗೊರೆಯಾಗಿ ನೀಡುವ ಸಂಸ್ಕೃತಿಯನ್ನು ಬೆಳೆಸಬೇಕು.

ಉಪಸಂಹಾರ : 'ಕನ್ನಡ ಎನೆ ಕುಣಿದಾಡುವುದೆನ್ನೆದೆ, ಕನ್ನಡ ಎನೆ ಕಿವಿ ನಿಮಿರುವುದು" ಎಂಬ ಕವಿವಾಣಿಯಂತೆ. ಪ್ರತಿಯೊಬ್ಬ ಕನ್ನಡಿಗನೂ ತನ್ನ ಭಾಷೆಯ ಬಗ್ಗೆ ಅಭಿಮಾನ ಹೊಂದಿರಬೇಕು. ಕನ್ನಡವನ್ನು ಉಳಿಸಿ ಬೆಳೆಸುವುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ,

ಅದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ. ಅನ್ಯ ಭಾಷೆಗಳನ್ನು ಕಲಿಯೋಣ. ಆದರೆ ಕನ್ನಡವನ್ನು ಮರೆಯದಿರೋಣ.

5. ಶಾಲಾ ಸಂಸತ್ತು ಚುನಾವಣಾ ಪ್ರಕ್ರಿಯೆ ಹಾಗೂ ಮಹತ್ವ :

ಪೀಠಿಕೆ : 'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಪ್ರಜೆಗಳೇ ಪ್ರಭುಗಳಾಗುವ ವ್ಯವಸ್ಥೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವ ನಿಟ್ಟಿನಲ್ಲಿ, ಸಂಸದೀಯ ವ್ಯವಸ್ಥೆಯ ಬಗೆಗೆ ಅರಿವು ಮೂಡಿಸುವಲ್ಲಿ ಶಾಲಾ ಸಂಸತ್ತು ಬಹಳ ಮುಖ್ಯವಾದದ್ದು. ಭಾರತ ದೇಶದ ಆಡಳಿತ ವ್ಯವಸ್ಥೆ ಸಂಸತ್ತಿನಿಂದ ನಡೆಯುತ್ತದೆ. ಅದೇ ಮಾದರಿಯಂತೆ ಶಾಲಾ ಕಾಲೇಜುಗಳಲ್ಲಿ ಶಾಲಾ ಸಂಸತ್ತನ್ನು ರಚನೆ ಮಾಡಿ ಸಂಸತ್ತಿನ ಕಾರ್ಯಕಲಾಪಗಳಂತೆ ಕಾರ್ಯಕ್ರಮಗಳನ್ನು ನಡೆಸಿ ವಿದ್ಯಾರ್ಥಿಗಳಲ್ಲಿ ತಿಳಿವಳಿಕೆ ಮೂಡಿಸಲಾಗುತ್ತದೆ.

ವಿಷಯ ನಿರೂಪಣೆ : ಪ್ರಜಾಪ್ರಭುತ್ವದ ತತ್ತ್ವಗಳನ್ನು, ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ನಿಟ್ಟಿನಲ್ಲಿ ಶಾಲಾಸಂಸತ್ತು ಮಹತ್ತ್ವದ ಪಾತ್ರ ವಹಿಸುತ್ತದೆ. ಚುನಾವಣಾ ಪ್ರಕ್ರಿಯೆ ನಡೆಯುವಂತೆ ಶಾಲೆಗಳಲ್ಲಿಯೂ ವಿದ್ಯಾರ್ಥಿ ಅಭ್ಯರ್ಥಿಗಳನ್ನು ಚುನಾವಣೆಗೆ ನಿಲ್ಲಿಸುವುದು, ವಿದ್ಯಾರ್ಥಿಗಳಿಂದ ಮತದಾನ ಮಾಡಿಸುವುದು, ಎಣಿಕೆ ಪ್ರಕ್ರಿಯೆ, ಫಲಿತಾಂಶ ಘೋಷಣೆ ಈ ರೀತಿಯಾಗಿ ಪ್ರಕ್ರಿಯೆಗಳನ್ನು ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಮತದಾನದ ಅರಿವು. ಮಹತ್ತ್ವ ಮತ್ತು ದೇಶದ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಮಹತ್ತ್ವ ಗೊತ್ತಾಗುತ್ತದೆ. ದೇಶದ ಸಂಸತ್ತಿನಲ್ಲಿ ಸಂಸದರು ಇರುವಂತೆ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಚುನಾವಣೆಯ ಮಾದರಿಯಂತೆ ಚುನಾಯಿಸಿ ವಿವಿಧ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಗುತ್ತದೆ. ಶಿಸ್ತು ಕಾಪಾಡುವುದು. ಶಾಲಾ ಸ್ವಚ್ಛತೆ ನಿರ್ವಹಣೆ, ಗ್ರಂಥಾಲಯ ನಿರ್ವಹಣೆ ಮುಂತಾದ ಕಾರ್ಯಗಳನ್ನು ನೀಡಿ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ.

ಉಪಸಂಹಾರ : ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸಲು, ನಾಯಕತ್ವದ ಗುಣಗಳನ್ನು ರೂಢಿಸಲು ಸಹಕಾರಿಯಾಗುವುದು. ಆಡಳಿತದ ವೈಖರಿಯನ್ನು ಅರಿಯಲು ಜವಾಬ್ದಾರಿಗಳನ್ನು ಅರಿಯಲು ಅಣಕು ಸಂಸತ್ತು ಮಾಡುವುದರ ಮೂಲಕ ವಿದ್ಯಾರ್ಥಿಗಳ ಅರಿವು ಮೂಡಿಸಲು ಸಹಕಾರಿಯಾಗುತ್ತದೆ.

6. ಭಾವೈಕ್ಯವನ್ನು ಬೆಳೆಸುವಲ್ಲಿ ಕ್ರೀಡೆಗಳ ಪಾತ್ರ :

ಪೀಠಿಕೆ : ಕ್ರೀಡೆಗಳು ಮಾನವ ಸಮಾಜದಲ್ಲಿ ಭಾವೈಕ್ಯತೆಯ ಅತ್ಯಂತ ಶಕ್ತಿಶಾಲಿ ಸಾಧನಗಳಲ್ಲಿ ಒಂದಾಗಿದೆ. ಒಂದೇ ತಂಡದಲ್ಲಿ ಆಡುವಾಗ ಆಟಗಾರರು ಜಾತಿ, ಧರ್ಮ, ಭಾಷೆ, ಪ್ರದೇಶ ಎಂಬ ಗೋಡೆಗಳನ್ನು ಮರೆತು ಒಗ್ಗೂಡುತ್ತಾರೆ. ಕ್ರಿಕೆಟ್, ಫುಟ್‌ಬಾಲ್, ಹಾಕಿ ಇತ್ಯಾದಿ ತಂಡ ಕ್ರೀಡೆಗಳು ಸಹಕಾರ ಮತ್ತು ಪರಸ್ಪರ ಅವಲಂಬನೆಯನ್ನು ಬೆಳೆಸುತ್ತವೆ.

ವಿಷಯ ನಿರೂಪಣೆ : ಭಾರತದಲ್ಲಿ ಕ್ರಿಕೆಟ್ ಒಂದು ರಾಷ್ಟ್ರೀಯ ಭಾವೈಕ್ಯತೆಯ ಪ್ರತೀಕವಾಗಿ ಬೆಳೆದಿದೆ. ೧೯೮೩ರ ವಿಶ್ವಕಪ್ ಗೆಲುವು ದೇಶದ ಎಲ್ಲ ಭಾಗದ ಜನರನ್ನು ಒಟ್ಟಾಗಿ ಸಂಭ್ರಮಿಸುವಂತೆ ಮಾಡಿತು. ಕ್ರೀಡಾಂಗಣದಲ್ಲಿ ಒಬ್ಬರ ಗೆಲುವು ಎಲ್ಲರ ಗೆಲುವಾಗಿ ಪರಿವರ್ತನೆಯಾಗುತ್ತದೆ. ಒಲಿಂಪಿಕ್ ಕ್ರೀಡಾಕೂಟವು ವಿಶ್ವದ ಎಲ್ಲ ದೇಶಗಳನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುತ್ತದೆ. ಒಲಿಂಪಿಕ್ ಧ್ವಜದ ಕೆಳಗೆ ಎಲ್ಲ ರಾಷ್ಟ್ರಗಳು ಸಮಾನತೆಯಿಂದ ನಿಲ್ಲುತ್ತವೆ. ಕ್ರೀಡೆಗಳು ಯುದ್ಧ ಮತ್ತು ದ್ವೇಷಕ್ಕಿಂತ ಶಾಂತಿ ಮತ್ತು

ಸೌಹಾರ್ದವನ್ನು ಉತ್ತೇಜಿಸುತ್ತವೆ. ದಕ್ಷಿಣ ಆಫ್ರಿಕಾದಲ್ಲಿ ನಡೆದ ವಿಶ್ವಕಪ್ (೧೯೯೫) ಜನಾಂಗೀಯ ಭಾವೈಕ್ಯತೆಗೆ ದೊಡ್ಡ ಪ್ರೇರಣೆಯಾಯಿತು. ನೆಲ್ಸನ್ ಮಂಡೇಲಾ ಅವರು ತಂಡದ ಜರ್ಸಿ ಧರಿಸಿ, ಎಲ್ಲ ಜನಾಂಗದವರನ್ನು ಒಗ್ಗೂಡಿಸಿದರು. ಕ್ರೀಡೆಗಳು ಮಕ್ಕಳಲ್ಲಿ ಸಹಿಷ್ಣುತೆ ಮತ್ತು ಗೌರವದ ಮನೋಭಾವವನ್ನು ಬೆಳೆಸುತ್ತವೆ. ಶಾಲಾ ಮಟ್ಟದ ಕ್ರೀಡಾಕೂಟಗಳು ವಿವಿಧ ಸಮುದಾಯದ ಮಕ್ಕಳ ನಡುವೆ ಸ್ನೇಹವನ್ನು ಬೆಳೆಸುತ್ತವೆ. ಗ್ರಾಮೀಣ ಮತ್ತು ನಗರ ಮಕ್ಕಳು ಒಟ್ಟಿಗೆ ಆಡುವಾಗ ಸಾಮಾಜಿಕ ಅಂತರ ಕಡಿಮೆಯಾಗುತ್ತದೆ. ಮಹಿಳಾ ಕ್ರೀಡಾಪಟುಗಳ ಉನ್ನತಿಯಿಂದ ಲಿಂಗ ಸಮಾನತೆಯ ಸಂದೇಶವೂ ಹರಡುತ್ತದೆ. ಪಿ.ಟಿ. ಉಷಾ, ಸೈನಾ ನೆಹ್ವಾಲ್, ಪಿ.ವಿ. ಸಿಂಧು ಇವರು ದೇಶದ ಎಲ್ಲ ಹುಡುಗಿಯರಿಗೆ ಸ್ಫೂರ್ತಿಯಾದರು. ಕ್ರೀಡೆಗಳು ಒತ್ತಡ, ಕೋಪ, ಆತಂಕವನ್ನು ಕಡಿಮೆ ಮಾಡಿ ಮಾನಸಿಕ ಆರೋಗ್ಯವನ್ನು ಸುಧಾರಿಸುತ್ತವೆ. ಆಟದ ಮೂಲಕ ಜನರು ಒಬ್ಬರಿಗೊಬ್ಬರು ತಿಳಿದುಕೊಂಡು ಪರಸ್ಪರ ಗೌರವ ಹೊಂದುತ್ತಾರೆ. ಭಾರತ-ಪಾಕಿಸ್ತಾನ ಕ್ರಿಕೆಟ್ ಪಂದ್ಯಗಳು ಎರಡು ದೇಶಗಳ ಜನರನ್ನು ಭಾವನಾತ್ಮಕವಾಗಿ ಸಂಧಿಸುತ್ತವೆ. ಕ್ರೀಡಾ ಆಟಗಾರರ ನಡುವಿನ ಗೆಲುವಿನ ಸಂಭ್ರಮ ಮತ್ತು ಸೋಲಿನ ದುಃಖವನ್ನು ಅಭಿಮಾನಿಗಳು ಒಟ್ಟಿಗೆ ಹಂಚಿಕೊಳ್ಳುತ್ತಾರೆ. ಪ್ಯಾರಾ ಒಲಿಂಪಿಕ್ ಕ್ರೀಡೆಗಳು ಅಂಗವಿಕಲರಿಗೂ ಸಮಾನ ಅವಕಾಶ ಮತ್ತು ಗೌರವ ತರುತ್ತವೆ. ದೇವೇಂದ್ರ ಜಾಜರಿಯಾ, ಮುರಳಿ ಕಾರ್ತಿಕ್ ಇವರಂತಹವರು ಎಲ್ಲರಿಗೂ ಸ್ಫೂರ್ತಿಯ ಮೂರ್ತಿಗಳು.

ಉಪಸಂಹಾರ : ಕ್ರೀಡೆಗಳು ರಾಷ್ಟ್ರೀಯ ಹಬ್ಬಗಳಂತೆ ಎಲ್ಲರನ್ನು ಒಂದುಗೂಡಿಸುತ್ತವೆ. ಆಟದ ಮೈದಾನದಲ್ಲಿ ಎಲ್ಲರೂ ಸಮಾನರು, ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ. ಆದ್ದರಿಂದ ಕ್ರೀಡೆಗಳು ಕೇವಲ ದೈಹಿಕ ಆರೋಗ್ಯಕ್ಕಲ್ಲ, ಭಾವೈಕ್ಯ ಮತ್ತು ಮಾನವೀಯತೆಯ ಸೇತುವೆಯಾಗಿವೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

7. ಹೆಣ್ಣು ಮಕ್ಕಳಿಗೆ ಸರ್ಕಾರದ ಸೌಲಭ್ಯಗಳು :

ಪೀಠಿಕೆ : "ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೆ ತತ್ರ ದೇವತಾ" (ಎಲ್ಲಿ ಹೆಣ್ಣು ಪೂಜಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ವಾಸವಾಗಿರುತ್ತಾರೆ) ಎಂಬ ಸಂಸ್ಕೃತಿ ನಮ್ಮದು. ಒಂದು ದೇಶದ ಅಭಿವೃದ್ಧಿಯು ಆ ದೇಶದ ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಸಬಲೀಕರಣವನ್ನು ಅವಲಂಬಿಸಿದೆ. ಹೆಣ್ಣು ಮಕ್ಕಳು ಸಮಾಜದಲ್ಲಿ ಸ್ವಾಭಿಮಾನದಿಂದ ಬದುಕಲು, ಉತ್ತಮ ಶಿಕ್ಷಣ ಪಡೆಯಲು ಮತ್ತು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ.

ವಿಷಯ ನಿರೂಪಣೆ : ಹೆಣ್ಣು ಮಕ್ಕಳಿಗೆ ಸರ್ಕಾರಗಳು ಹಲವು ಯೋಜನೆಗಳನ್ನು ಜಾರಿಗೆ ತಂದಿವೆ. ಉದಾಹರಣೆಗೆ

ಅ) ಬೇಟಿ ಬಚಾವೋ, ಬೇಟಿ ಪಢಾವೋ (ಹೆಣ್ಣು ಮಕ್ಕಳನ್ನು ಉಳಿಸಿ. ಹೆಣ್ಣು ಮಕ್ಕಳನ್ನು ಓದಿಸಿ): ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯುವುದು ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶ. ಸಮಾಜದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಇರುವ ಕೆಳರಮೆಯನ್ನು ಹೋಗಲಾಡಿಸಿ. ಅವರಿಗೂ ಸಮಾನ ಅವಕಾಶ ನೀಡಬೇಕೆಂದು ಇದು ಸಾರುತ್ತದೆ.

ಆ)ಸುಕನ್ಯಾ ಸಮೃದ್ಧಿ ಯೋಜನೆ : ಇದು ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ರೂಪಿಸಿದ ಒಂದು ಉಳಿತಾಯ ಯೋಜನೆ. ೧೦ ವರ್ಷದೊಳಗಿನ ಹೆಣ್ಣು ಮಕ್ಕಳ ಹೆಸರಿನಲ್ಲಿ ಅಂಚೆ ಕಛೇರಿ ಅಥವಾ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಬಹುದು. ಇದಕ್ಕೆ ಸರ್ಕಾರವು ಹೆಚ್ಚಿನ ಬಡ್ಡಿ

ದರವನ್ನು ನೀಡುತ್ತದೆ. ಈ ಹಣವು ಹೆಣ್ಣು ಮಗಳ ಉನ್ನತ ಶಿಕ್ಷಣಕ್ಕೆ ಅಥವಾ ಮದುವೆಗೆ ಉಪಯೋಗಕ್ಕೆ ಬರುತ್ತದೆ.

ಇ) ಭಾಗ್ಯಲಕ್ಷ್ಮಿ ಯೋಜನೆ : ಬಡತನ ರೇಖೆಗಿಂತ ಕೆಳಗಿರುವ (BPL) ಕುಟುಂಬದಲ್ಲಿ ಹೆಣ್ಣು ಮಗು ಹುಟ್ಟಿದಾಗ ಕರ್ನಾಟಕ ಸರ್ಕಾರವು ಆ ಮಗುವಿನ ಹೆಸರಿನಲ್ಲಿ ನಿಗದಿತ ಮೊತ್ತದ ಬಾಂಡ್ (Bond) ಅನ್ನು ನೀಡುತ್ತದೆ. ಮಗುವಿಗೆ ೧೮ ವರ್ಷ ತುಂಬಿದ ನಂತರ ಈ ಹಣವು ಬಡ್ಡಿ ಸಹಿತ ಕೈ ಸೇರುತ್ತದೆ. ಇದರಿಂದ ಬಾಲ್ಯ ವಿವಾಹ ತಡೆಯಲು ಮತ್ತು ಶಿಕ್ಷಣ ಮುಂದುವರೆಸಲು ಸಹಾಯವಾಗುತ್ತದೆ.

ಸರ್ಕಾರಿ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಶಾಲೆಗೆ ಹೋಗಲು ತೊಂದರೆಯಾಗಬಾರದೆಂದು ಲನೇ ತರಗತಿಯ ವಿದ್ಯಾರ್ಥಿನಿಯರಿಗೆ ಉಚಿತ ಸೈಕಲ್ ನೀಡಲಾಗುತ್ತದೆ. ವಿವಿಧ ಹಂತದ ಶಿಕ್ಷಣಕ್ಕಾಗಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗದ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಶಿಕ್ಷಣದಿಂದ ವಂಚಿತರಾದ ಹೆಣ್ಣು ಮಕ್ಕಳಿಗಾಗಿ ವಸತಿ ಸಹಿತ ಶಾಲೆಗಳನ್ನು ತೆರೆಯಲಾಗಿದೆ. ಇದರಿಂದ ಹೆಣ್ಣು ಮಕ್ಕಳ ಸಾಕ್ಷರತಾ ಪ್ರಮಾಣ ಹೆಚ್ಚಾಗುತ್ತದೆ. ಬಾಲ್ಯ ವಿವಾಹವನ್ನು ತಡೆಗಟ್ಟಲು ಸಾಧ್ಯವಾಗುತ್ತಿದೆ. ಆರ್ಥಿಕವಾಗಿ ಹೆಣ್ಣು ಮಕ್ಕಳು ಸ್ವಾವಲಂಬಿಗಳಾಗಲು ಅವಕಾಶ ಸಿಗುತ್ತದೆ. ಸಮಾಜದಲ್ಲಿ ಲಿಂಗ ಅಸಮಾನತೆ ಕಡಿಮೆಯಾಗುತ್ತದೆ.

ಉಪಸಂಹಾರ : "ಹೆಣ್ಣು ಸಂಸಾರದ ಕಣ್ಣು" ಸರ್ಕಾರವು ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಅನೇಕ ಸೌಲಭ್ಯಗಳನ್ನು ನೀಡಿದೆ. ಆದರೆ ಕೇವಲ ಯೋಜನೆಗಳಿಂದ ಬದಲಾವಣೆ ಸಾಧ್ಯವಿಲ್ಲ. ಪೋಷಕರು ಈ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಂಡು, ತಮ್ಮ ಹೆಣ್ಣು ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಬೇಕು. ಆಗ ಮಾತ್ರ ಸಮಾಧಾನಕರ ಮತ್ತು ಸಮೃದ್ಧ ಭಾರತವನ್ನು ಕಟ್ಟಲು ಸಾಧ್ಯ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

ಮಾರ್ಚ್ / ಏಪ್ರಿಲ್ 2026 ರ ಪರೀಕ್ಷೆ -1

10 ನೆಯ ತರಗತಿ ವಿಷಯ : ಪ್ರಥಮ ಭಾಷೆ – ಕನ್ನಡ 100 -ಅಂಕಗಳು

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : (6 x 1 = 6)

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ:
(ಎ) ೯ (ಬಿ) ೨೫ (ಸಿ) ೩೪ (ಡಿ) ೨

2. 'ವಧೂಪೇತ' ಪದವು ಈ ಸಂಧಿಗೆ ಸೇರಿದೆ:
(ಎ) ಲೋಪ ಸಂಧಿ (ಬಿ) ಸವರ್ಣದೀರ್ಘ ಸಂಧಿ (ಸಿ) ವೃದ್ಧಿ ಸಂಧಿ (ಡಿ) ಗುಣ ಸಂಧಿ

3. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಬಳಸುವ ಲೇಖನ ಚಿಹ್ನೆ:
(ಎ) ಪ್ರಶ್ನಾರ್ಥಕ (ಬಿ) ಭಾವಸೂಚಕ (ಸಿ) ವಾಕ್ಯವೇಷ್ಟನ (ಡಿ) ಆವರಣ

4. ವರ್ತಮಾನ ಕಾಲಸೂಚಕ ಪ್ರತ್ಯಯವಿದು:
(ಎ) ದ (ಬಿ) ಉವ (ಸಿ) ಎ (ಡಿ) ಉತ್ತ

5. ದ್ವಿತೀಯಾ ವಿಭಕ್ತಿಯ ಕಾರಕಾರ್ಥವಿದು:
(ಎ) ಕರ್ಮಾರ್ಥ (ಬಿ) ಕರ್ತೃರ್ಥ (ಸಿ) ಸಂಪ್ರದಾನ (ಡಿ) ಅಧಿಕರಣ

6. 'ಮಾದ್ರಮಾಗಧಯಾದವರು' ಪದವು ಈ ಸಮಾಸಕ್ಕೆ ಸೇರಿದೆ:
(ಎ) ತತ್ಪುರುಷ (ಬಿ) ದ್ವಂದ್ವ (ಸಿ) ಕ್ರಿಯಾ (ಡಿ) ಬಹುವ್ರೀಹಿ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : (4 x 1 = 4)

7. ಅಮೃತ : ಅಮರ್ದು :: ಕಾರ್ಯ : ----------

8. ಅಷ್ಟು : ಪರಿಮಾಣವಾಚಕ :: ಹನ್ನೆರಡು : ----------

9. ಹಾಲ್ವೇನು : ಜೋಡುನುಡಿ :: ತುತ್ತತುದಿ :----------

10. ನಿನಗಾಗಿ : ತದ್ಧಿತಾಂತಾವ್ಯಯ :: ಪೆರ್ಮೆ : ----------

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : (7 x 1=7)

11. ಕನ್ನಡಕ್ಕೆ ಪರ್ಷಿಯನ್ ಶಬ್ದಗಳು ಯಾವಾಗ ಬಂದವು ?

12. ಹುಲಿಗೆ ಪರಮಾನಂದವಾಗಲು ಕಾರಣವೇನು ?

13. ಲಂಡನ್ ನಗರದಲ್ಲಿ ಪ್ರಸಿದ್ಧಿ ಪಡೆದ ಸಿಂಪಿಗಳ ಹೆಸರೇನು ?

14. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿಯಿಲ್ಲ ಎಂದು ಹೇಳಲು ಕಾರಣವೇನು ?

15. ಹಲಗಲಿ ಗ್ರಾಮ ಎಲ್ಲಿದೆ ?

16. ಪರಶುರಾಮನು ದ್ರೋಣನಿಗೆ ಯಾವುದರಲ್ಲಿ ಅವ್ಯಯವನ್ನು ನೀಡಿದನು ?

17. ಪುಟ್ಟ ಪೋರಿಯ ಅಮ್ಮನ ತೂತುಬಿದ್ದ ಸೀರೆಯಲ್ಲಿ ಯಾರು ಸೊರಗಿದ್ದಾರೆ ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :
(10 x 2 =20)

18. ಲಿಪಿಯ ಜಾಡು ಹೇಗೆ ಆರಂಭಗೊಂಡಿತು ?

19. ವಿಶ್ವೇಶ್ವರಯ್ಯನವರ ವಿದ್ಯಾಭ್ಯಾಸವನ್ನು ಕುರಿತು ಬರೆಯಿರಿ.

20. ಪೂಲವರ್ಥ್ ಅಂಗಡಿಯಲ್ಲಿ ಸಿಗುವ ವಸ್ತುಗಳನ್ನು ಹೆಸರಿಸಿ.

21. ಅಗ್ನಿಭೂತಿ ವಾಯುಭೂತಿಯರು ಸೂರ್ಯಮಿತ್ರನಿಂದ ಕಲಿತ ವಿದ್ಯೆಗಳಾವುವು ?

22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?

23. ಹಲಗಲಿಗೆ ದಂಡು ಬರಲು ಕಾರಣವೇನು ?

24. ಬಾಲಕ ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಸ್ಥಳದಲ್ಲಿನ ಮಣ್ಣನ್ನು ಸಂಗ್ರಹಿಸಿದ ಬಗೆಯನ್ನು ಬರೆಯಿರಿ.

25. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವನ್ನು ತಿಳಿಸಿ.

26. ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಭಿಪ್ರಾಯವನ್ನು ಅಕ್ಕಮಹಾದೇವಿ ತನ್ನ ವಚನದಲ್ಲಿ ಹೇಗೆ ವ್ಯಕ್ತಪಡಿಸಿದ್ದಾಳೆ ?

27. ರಾಜರ ಪ್ರಕೃತಿ ಹೇಗಿರುತ್ತದೆ ?

V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : **(2 x 3 = 6)**

28. ಎ. ಎನ್. ಮೂರ್ತಿರಾವ್

29. ರನ್ನ

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : **(1 x 3 = 3)**

30. ನೆನೆಯದಿರಣ್ಣ ಭಾರತದೊಳಿಂ ಪೆರಾರುಮನೊಂದೆ ಚಿತ್ತದಿಂ

VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : **(1 x 3 = 3)**

31. "ಸೀತೆಯ ಮುಖಕಮಲ ಅರಳಿತು"

VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : **(1x3= 3)**

32. ಮಾತೇ ಮುತ್ತು, ಮಾತೇ ಮೃತ್ಯು.

ಅಥವಾ

ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.

IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : **(6 x 3 = 18)**

33."ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು."

34. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."

35. "ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ."

36. "ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ"

37. "ಹಸುರಾದುದು ಕವಿಯಾತ್ಮಂ"

38. "ದ್ರುಪದಂ ಕಡುಸಿಗ್ಗು ಮಾಡಿದಂ"

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : (1 x 4 = 4)

39. ಕಲುಷಿತವಾದೀ.....

.....

.....

..,..... ಮುಟ್ಟೋಣ

ಅಥವಾ

ಮತಗಳೆಲ್ಲವೂ.....

.....

.....

..... ಬಿತ್ತೋಣ

XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : (1 x 4 = 4)

40. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ
ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬಿಪಂ ಕರೆಸಲಾಗಿ
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : (2 x 4 = 8)

41. ಶಬರಿ ಹಾಗೂ ಶ್ರೀರಾಮನ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

ಅಥವಾ

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿರುವ ಬಗೆಯನ್ನು ವಿವರಿಸಿ.

42. ಕೃಷ್ಣನು ಭೇದತಂತ್ರವನ್ನು ಬಳಸಿ ಕರ್ಣನಿಗೆ ಒಡ್ಡಿದ ಆಮಿಷಗಳನ್ನು ಸಂಗ್ರಹಿಸಿ ಬರೆಯಿರಿ.

ಅಥವಾ

ಕೃಷ್ಣನಿಂದ ಜನ್ಮರಹಸ್ಯವನ್ನು ಕೇಳಿ ಪಾಂಡವರಿಗೆ ಅಪಾಯವಾಗದಂತೆ ನಿರ್ಧಾರ ಕೈಗೊಳ್ಳುವ ಕರ್ಣನ ಮನಸ್ಥಿತಿಯನ್ನು ಕುರಿತು ಬರೆಯಿರಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (1x4= 4) (2+2)

43. ಭಾರತೀಯ ಸಂಗೀತ ಸಾಮ್ರಾಜ್ಯದಲ್ಲಿ ಸಾಮ್ರಾಜ್ಞಿಯಾಗಿ ಮಹಾನ್ ಪ್ರಖ್ಯಾತಿಗಳಿಸಿದವರು ಎಂ.ಎಸ್. ಸುಬ್ಬುಲಕ್ಷ್ಮಿ. ರಾಜ್ಯಸಭಾ ಸದಸ್ಯರಾಗಿ ಎಂದು ಭಾರತ ಘನ ಸರ್ಕಾರದಿಂದ ಕೋರಿಕೆ ಬಂದಾಗ, "ನನಗೆ ಸಂಗೀತ ಕ್ಷೇತ್ರದಲ್ಲಿ ಮಾತ್ರ ತಿಳಿವಳಿಕೆ, ಜ್ಞಾನ, ವಿದ್ಯೆ ಇದೆಯೆಂದು ಭಾವಿಸಿದ್ದೇನೆ. ನನಗಿಂತ ಓದಿದವರು, ಅನುಭವವುಳ್ಳವರು ಆ ಸ್ಥಳದಲ್ಲಿದ್ದರೆ ಅವರಿಂದ ನಮ್ಮ ದೇಶದ ಜನರಿಗೆ ಉತ್ತಮ ಸೇವೆ ದೊರಕಬಹುದು. ಜನರ ಮನಸ್ಸಿನಲ್ಲಿ ನನಗೆ ಸ್ಥಾನ ಸಿಕ್ಕಿದೆ. ಅವರ ಪ್ರೀತಿ

ದೊರಕಿದೆ. ಈ ಪ್ರೀತಿ ಮತ್ತು ಗೌರವಗಳಿಗಿಂತ ರಾಜ್ಯಸಭೆಯ ಸ್ಥಾನ ಹೆಚ್ಚಿನದಲ್ಲ" ಎಂದು ಭಾರತ ಸರ್ಕಾರಕ್ಕೆ ಪತ್ರ ಬರೆದು ಸುಲಭವಾಗಿ ತಿರಸ್ಕರಿಸಿದ ಅಪರೂಪದ ವ್ಯಕ್ತಿ ಭಾರತರತ್ನ ಪ್ರಶಸ್ತಿ ಪುರಸ್ಕೃತ ಮಹಿಳೆ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ ಸದಾಶಿವಂ.

ಎಂ.ಎಸ್. ಸುಬ್ಬುಲಕ್ಷ್ಮಿ ಅವರು ಕ್ರಿ.ಶ. ೧೯೧೬ ನೇ ಸೆಪ್ಟೆಂಬರ್ ೧೬ ರಂದು ತಮಿಳುನಾಡಿನ ಮಧುರೈ ನಗರದಲ್ಲಿ ಜನಿಸಿದರು. ತಂದೆ ಸಂಗೀತ ಪ್ರೇಮಿಯಾಗಿದ್ದ ಸುಬ್ರಹ್ಮಣ್ಯ ಅಯ್ಯರ್. ತಾಯಿ ಪ್ರಖ್ಯಾತ ವೀಣಾವಾದಕಿ ಷಣ್ಮುಖವಡಿವು. ಸುಬ್ಬುಲಕ್ಷ್ಮಿಯವರು ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಶಿಕ್ಷಕಿಯೊಬ್ಬರು ಆಕೆಯನ್ನು ಹೊಡೆದರು. ಸೂಕ್ಷ್ಮ ಪ್ರಕೃತಿಯ ಹುಡುಗಿ ಪ್ರಜ್ಞೆ ತಪ್ಪಿ ಬಿದ್ದಳು. ಬೇಗನೆ ಪ್ರಜ್ಞೆ ಬಂತು. ಆದರೆ ಕೆಮ್ಮು ಬರಲು ಪ್ರಾರಂಭವಾಯಿತು. ನಂತರ ಪಡೆದ ಚಿಕಿತ್ಸೆಯಿಂದ ಗುಣವಾದಳು. ಇದನ್ನು ಗಂಭೀರವಾಗಿ ಭಾವಿಸಿದ ತಾಯಿ ಷಣ್ಮುಖವಡಿವುರವರು ತಮ್ಮ ಮಗಳಾದ ಸುಬ್ಬುಲಕ್ಷ್ಮಿರವರ ಶಾಲಾ ಶಿಕ್ಷಣವನ್ನು ಅಲ್ಲಿಗೆ ಮೊಟಕುಗೊಳಿಸಿದರು.

ಸುಬ್ಬುಲಕ್ಷ್ಮಿಯವರಿಗೆ ಸಂಗೀತದಲ್ಲಿ ತಮ್ಮ ತಾಯಿಯೇ ಪ್ರಥಮ ಗುರು. ತಾಯಿಯು ರೂಢಿಯಲ್ಲಿರುವ ಸಂಗೀತದ ಅಭ್ಯಾಸಗಳನ್ನು ವಿವರಿಸುತ್ತಿದ್ದರು. ಸುಬ್ಬುಲಕ್ಷ್ಮಿ ಮತ್ತು ಆಕೆಯ ತಂಗಿಯಾದ ವಡಿವಾಂಬಾಳ್ ಮುಂದಿನದನ್ನು ಕೇಳಿ ತಾವೇ ಅಭ್ಯಾಸ ಮಾಡುತ್ತಿದ್ದರು. ಹಾಡುಗಾರಿಕೆಗೆ ಹೇಳಿ ಮಾಡಿಸಿದಂತಿದ್ದ ಸುಮಧುರ ಕಂಠವಿರುವ ಸುಬ್ಬುಲಕ್ಷ್ಮಿ ಯಾವುದನ್ನೇ ಹಾಡಿದರೂ ಎಂಥವರೂ ತಲೆದೂಗುವಂತಿರುತ್ತಿತ್ತು. ಮಗಳಲ್ಲಿ ಕಂಡುಬರುತ್ತಿದ್ದ ಸಂಗೀತದ ಬಗೆಗಿನ ಆಸಕ್ತಿ ಹಾಗೂ ಶ್ರದ್ಧೆಯನ್ನು ಕಂಡು ಬಹಳವಾಗಿ ಸಂತೋಷ ಪಡುತ್ತಿದ್ದ ತಾಯಿ, ಆಕೆಗೆ ಸಂಗೀತದಲ್ಲಿ ವಿಶೇಷ ಶಿಕ್ಷಣ ನೀಡಲು ಮುಂದಾದರು.

ಪ್ರಶ್ನೆಗಳು: ಅ) ಸುಬ್ಬುಲಕ್ಷ್ಮಿಯವರು ಶಾಲೆಯನ್ನು ಬಿಡಲು ಕಾರಣವೇನು ?

ಆ) ರಾಜ್ಯ ಸಭಾ ಸದಸ್ಯರಾಗಿ ಎಂಬ ಕೋರಿಕೆ ಬಂದಾಗ ಸುಬ್ಬುಲಕ್ಷ್ಮಿಯವರ ಪ್ರತಿಕ್ರಿಯೆಯನ್ನು ತಿಳಿಸಿ.

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **(1 x 5 = 5)**

44. ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ನೇಹಾ' ಎಂದು ಭಾವಿಸಿಕೊಂಡು, ಜಿಲ್ಲೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕೇಂದ್ರವನ್ನು ಸ್ಥಾಪಿಸುವಂತೆ ಕೋರಿ, ಮಾನ್ಯ ಶಿಕ್ಷಣ ಸಚಿವರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ದಿಗಂತ್' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ಗ್ರಂಥಸಪ್ತಾಹ ಕಾರ್ಯಕ್ರಮವನ್ನು ಕುರಿತು, ಬಳ್ಳಾರಿಯಲ್ಲಿ ವಾಸವಾಗಿರುವ 'ಶ್ರೀನಿವಾಸ್' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : (1 x 5 = 5)

45. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ. **ಅಥವಾ**

ಹೆಣ್ಣುಮಕ್ಕಳಿಗೆ ಸರ್ಕಾರದ ಸೌಲಭ್ಯಗಳು.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

ಮೇ 2026 ರ ವಾರ್ಷಿಕ ಪರೀಕ್ಷೆ -2 – ಪ್ರಥಮ ಭಾಷೆ ಕನ್ನಡ - ಪ್ರಶ್ನೆ ಪತ್ರಿಕೆ

ದಿನಾಂಕ : 18/05/2026 **ಅಂಕಗಳು : 100**

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6x1=6

1. ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳು

ಎ) ಅಲ್ಪಪ್ರಾಣಗಳು ಬಿ) ಮಹಾಪ್ರಾಣಗಳು

ಸಿ) ಅನುನಾಸಿಕಗಳು ಡಿ) ಯೋಗವಾಹಗಳು

2. 'ಕಡುವೆಳ್ಪು' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಲೋಪ ಸಂಧಿ ಬಿ) ಸವರ್ಣದೀರ್ಘ ಸಂಧಿ

ಸಿ) ಆದೇಶ ಸಂಧಿ ಡಿ) ಗುಣಸಂಧಿ

3. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

ಎ) ಉದ್ಧರಣ ಬಿ) ವಾಕ್ಯವೇಷ್ಟನ

ಸಿ) ಆವರಣ ಡಿ) ವಿವರಣಾತ್ಮಕ

4. 'ಬರೆ' ಧಾತುವಿನ ವಿಧ್ಯರ್ಥಕ ರೂಪ

ಎ) ಬರೆಯನು ಬಿ) ಬರೆಯಳು

ಸಿ) ಬರೆಯರು ಡಿ) ಬರೆಯಲಿ

5. ಚತುರ್ಥೀ ವಿಭಕ್ತಿಯ ಕಾರಕಾರ್ಥವಿದು

ಎ) ಸಂಪ್ರದಾನ ಬಿ) ಅಪಾದಾನ

ಸಿ) ಸಂಬಂಧ ಡಿ) ಅಧಿಕರಣ

6. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಸೇರಿದೆ

ಎ) ದ್ವಿಗು ಸಮಾಸ ಬಿ) ತತ್ಪುರುಷ ಸಮಾಸ

ಸಿ) ಕ್ರಿಯಾಸಮಾಸ ಡಿ) ಗಮಕಸಮಾಸ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4x1=4

7. ವೈಶಾಖ : ಬೇಸಗೆ :: ದ್ಯೂತ : .....

8. ಪರ್ವತ : ರೂಢನಾಮ :: ವಿಜ್ಞಾನಿ : .....

9. ಮ್ಯಾಗ : ಮೇಲೆ :: ಸಕ್ಕಾರಿ : .....

10. ಬಳೆಗಾರ : ತದ್ಧಿತಾಂತನಾಮ :: ಚೆಲುವಿಕೆ : .....

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 7x1=7

11. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ?

12. ಹುಲಿಗೆ ಪರಮಾನಂದವಾಗಲು ಕಾರಣವೇನು ?

13. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಒಣಿ ಯಾವುದು ?

14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು ?

15. ಕುಂಪಣಿ ಸರಕಾರ ಯಾವ ಆದೇಶವನ್ನು ಹೊರಡಿಸಿತು ?

16. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು ?

17. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10x2=20

18. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳಾವುವು ?

19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಯಾವ ಕ್ಷೇತ್ರಗಳು ಆಡಳಿತ ಕ್ಷೇತ್ರಗಳಾವುವು?

20. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವವು ?

21. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತಿರ್ಮಾನಿಸಿದ್ದೇಕೆ ?

22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?

23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

24. ಭಗತ್ ಸಿಂಗ್ ನ ತಾಯಿಯ ಕಣ್ಣುಗಳಿಂದ ಧಾರಾಕಾರಾವಾಗಿ ನೀರು ಸುರಿಯಲು ಕಾರಣವೇನು ?

25. 'ಅನ್ ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ?

26. ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಭಿಪ್ರಾಯವನ್ನು ಅಕ್ಕಮಹಾದೇವಿ ತನ್ನ ವಚನದಲ್ಲಿ ಹೇಗೆ ವ್ಯಕ್ತಪಡಿಸಿದ್ದಾಳೆ ?

27. ರಾಜರ ಪ್ರಕೃತಿ ಹೇಗಿರುತ್ತದೆ ?

V. ಕೆಳಗಿನ ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2x3=6

28. ದೇವನೂರ ಮಹಾದೇವ

29. ಪಂಪ

VI. ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ್ನು ಹೆಸರಿಸುವುದು : 1x3=3

30. ಗಗನವಬುಧಿಗೆ ಸರಿ ಸರೋವರ
ಜಗಕೆ ಹಿತವನು ಶಕ್ರ ಮನುಜಾ
ದಿಗಳ ಮಾತಾರೂಪು ಗೋವುಗಳಿದು ನಿಧಾನ ಮತ ||

VII. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು : 1x3=3

31. " ಗಿಜುಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು "

VI**II**. **ಗಾದೆಯನ್ನುವಿಸ್ತರಿಸಿಬರೆಯುವುದು** : **1x3=3**

32. ತಾಳಿದವನು ಬಾಳಿಯಾನು.

ಅಥವಾ

ಬೆಳೆಯುವ ಸಿರಿ ಮೊಳಕೆಯಲ್ಲಿ.

IX. ಸಂದರ್ಭವನ್ನುಸ್ವಾರಸ್ಯದೊಂದಿಗೆಬರೆಯುವುದು : 6x3=18

33. "ಹುಲಿ ಈಗ ಎಷ್ಟು ಹಸಿದಿರಬೇಕು"

34. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."

35. "ಅಮ್ಮಾ ನಾನೊರ್ವ ಡಾಕ್ಟರ್, ನಾನು ಆಕೆಯನ್ನು ಪರೀಕ್ಷಿಸಲೇ?"

36. "ರೆಕ್ಕೆಗಳೆರಡೂ ಪಕ್ಕದಲುಂಟು".

37. "ಪಾಂಡವರೊಳಿರಿದು ಛಲಮನೆ ಮಡರೆವೆಂ".

38. "ಹಸುರು ಗದ್ದೆಯಾ ಬಯಲು;"

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1x4=4

39. ಕಲುಷಿತವಾದೀ .....

.....

.....

.....ಮುಟ್ಟೋಣ

ಅಥವಾ

ಮತಗಳೆಲ್ಲವೂ.....

.....

.....

.....ಬಿತ್ತೋಣ

XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1x4=4

40. ಎತ್ತಣ ತುರುಂಗವಿದು ಪೊಕ್ಕು ಪೂದೋಟಮಂ
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ
ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಜಿಪಂ ಕರೆಸಲಾಗಿ
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತ ಹಯನೆಡೆಗೆ ನಡೆತಂದು ನೋಡಲ್ಕುದರ
ನೆತ್ತಿಯೊಳ್ ನೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು

XII. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2x4=8

41. ಶ್ರೀರಾಮನ ಆಗಮನದಿಂದ ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಅಥವಾ

ಮತಂಗಾಶ್ರಮದ ಬಳಿ ರಾಲಕ್ಷ್ಮಣರು ಸೀತೆಗಾಗಿ ದುಃಖಿಸಿದ ಪರಿ ಹಾಗೂ ಪರಸ್ಪರರು ಸಮಧಾನ ಮಾಡಿಕೊಂಡ ಬಗೆಯನ್ನು ಸಂಗ್ರಹಿಸಿ ಬರೆಯಿರಿ.

42. ಕರ್ಣನ ಶ್ರೀಕೃಷ್ಣನು ಒಡ್ಡಿದ ಆಮಿಷಗಳನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

ಅಥವಾ

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ಕವಿ ಕುಮಾರವ್ಯಾಸ " ಕೌರವೇಂದ್ರನ ಕೊಂದೆ ನೀನು" ಪದ್ಯದಲ್ಲಿ ಹೇಗೆ ಚಿತ್ರಿಸಿದ್ದಾನೆ ? ವಿವರಿಸಿರಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1x4=4

43. ಮಾನವ ಸೇವೆಯೇ ಮಾಧವನ ಸೇವೆ ಎಂಬುದಾಗಿ ತಿಳಿದಿರುವ ಅಂಗವಿಕಲರ , ಅನಾಥರ, ರೋಗಿಗಳ ಅದರಲ್ಲಿಯೂ ಮುಖ್ಯವಾಗಿ ಕುಷ್ಠರೋಗಿಗಳ ಚಿಕಿತ್ಸೆ, ಶುಶ್ರೂಷೆಯಲ್ಲಿ ತೃಪ್ತಿ ಕಾಣುತ್ತಿರುವ ಮಹಾನ್ ಸೇವಕರು ಬಾಬಾ ಆಮ್ಟೆಯವರು. ಇವರು ಮಹಾತ್ಮ ಗಾಂಧೀಜಿಯವರ ನಿಶ್ವಾರ್ಥ ಮನೋಭಾವ ಸೇವಾ ಬದುಕಿನಿಂದ ಬಹಳ ಪ್ರಭಾವಿತರಾದರು. ಅವರ ನಾಯಕತ್ವದಲ್ಲಿ ತೀವ್ರ ರೀತಿಯಲ್ಲಿ ನಡೆಯುತ್ತಿದ್ದ

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸದುದ್ದೇಶದಿಂದ ಕಾಂಗ್ರೆಸ್ ಪಕ್ಷವನ್ನು ಸೇರಿದರು ೧೯೪೨ ರ' ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಖಾದಿ ಧರಿಸಿದರು. ತಮ್ಮ ಪಾಲಿನ ಆಸ್ತಿಯನ್ನು ಬಡವರಿಗೆ ಹಂಚಿದರು. ತಮ್ಮ ವಕೀಲಿ ವೃತ್ತಿಯನ್ನು ಸ್ವಯಂ ಇಚ್ಛೆಯಿಂದ ಬಿಟ್ಟುಕೊಟ್ಟರು. ಸಮಾಜ ಸೇವಾ ಕಾರ್ಯದಲ್ಲಿ ತಮ್ಮನ್ನು ತಾವು ಬಹಳವಾಗಿ ತೊಡಸಿಕೊಂಡರು.

ಆ ಕಾಲದಲ್ಲಿ ಕುಷ್ಠರೋಗದ ಬಗ್ಗೆ ಕಳಪೆ ಭವನೆ ಇತ್ತು. ಅದು ದೈವೀಶಾಪದಿಂದ ಬರುತ್ತದೆ. ಅದರಿಂದ ಮುಕ್ತಿಯೇ ಇಲ್ಲ. ಅದು ಎಂದೆಂದಿಗೂ ವಾಸಿಯಾಗದ ಖಾಯಿಲೆ. ಅವರ ಸಂಪರ್ಕಕ್ಕೆ ಬರುವ ಆರೋಗ್ಯವಂತರಿಗೂ ಆ ಖಾಯಿಲೆ ಅಂಟುತ್ತದೆ.ಇವೇ ಮೊದಲಾದವು ಜನರ ಮನಸ್ಸಿನಲ್ಲಿ ಗಾಢವಾಗಿ ಬೇರೂರಿದ್ದವು. ಕುಷ್ಠರೋಗಿಗಳನ್ನುಜನರುಅಸಹ್ಯರೀತಿಯಲ್ಲಿತುಂಬಾತಿರಸ್ಕಾರದಿಂದ ನೋಡುತ್ತಿದ್ದರು. ಈ ಭಯಂಕರ ರೋಗದಿಂದ ನರಳಿ ಸಾಯುವುದನ್ನು ಕಣ್ಣಾರೆ ಕಂಡ ಬಾಬಾ ಆಮ್ಟೆಯರ ಹೃದಯ ಕರಗಿ ನೀರಾಯಿತು. ' ಆನಂದ ವನ' ಎಂಬ ಹೆಸರಿನಿಂದ ಕರೆಯಲ್ಪಡುವ ಒಂದು ಗುಡಿಸಲು ಕಟ್ಟಿ ಅಲ್ಲಿಯೇ ತಮ್ಮ ಸಂಸಾರ ಸಮೇತ ಕುಷ್ಠರೋಗಿಗಳ ಚಿಕಿತ್ಸೆ, ಶುಶ್ರೂಷೆ ನಡೆಸಲು ಪ್ರಾರಂಭಿಸಿದರು. ಕುಷ್ಟರೋಗದ ಬಗ್ಗೆ, ಅದಕ್ಕೆ ಸಂಬಂಧಿಸಿದ ಚಿಕಿತ್ಸೆ ಹಾಗೂ ಶುಶ್ರೂಷೆಗಳ ಬಗ್ಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ತಿಳಿದುಕೊಳ್ಳಲು ಕಲ್ಕತ್ತೆಯ ತರಬೇತಿ ಶಾಲೆಯನ್ನು ಸೇರಿ ಆ ಬಗ್ಗೆ ವಿಶೇಷ ತರಬೇತಿ ಪಡೆದರು. ವಾಪಾಸ್ಸಾದ ನಂತರ 'ಮಹಾರೋಗಿ ಸೇವಾ ಸಮಿತಿ'ಯನ್ನು ಸ್ಥಾಪಿಸಿ ಕುಷ್ಠರೋಗಿಗಳ ಚಿಕಿತ್ಸೆ, ಶುಶ್ರೂಷೆಯನ್ನು ತುಂಬಾ ವ್ಯವಸ್ಥಿತವಾಗಿ ಆರಂಭಿಸಿದರು.

ಪ್ರಶ್ನೆಗಳು : ಅ) ಬಾಬಾ ಆಮ್ಟೆ ಅವರು ಕುಷ್ಠರೋಗಿಗಳ ಚಿಕಿತ್ಸೆ ಹಾಗೂ ಶುಶ್ರೂಷೆಗೆ ಕೈಗೊಂಡ ಕ್ರಮಗಳಾವುವು?

ಆ) ಬಾಬಾ ಆಮ್ಟೆ ಅವರು ಮಹಾತ್ಮ ಗಾಂಧೀಜಿಯವರಿಂದರಿಂದ ಪ್ರಭಾವಿತರಾದ ಬಗೆಯನ್ನು ತಿಳಿಸಿ.

XIV. ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1x5=5

44. ನಿಮ್ಮನ್ನು ರಾಮನಗರದ ವಿವೇಕಾನಂದ ಬಡಾವಣೆಯಲ್ಲಿ ವಾಸವಿರುವ 'ಮೋಹಿಷ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಗೆ ಸಾರ್ವಜನಿಕ ಶೌಚಾಲಯವನ್ನು ನಿರ್ಮಾಣ ಮಾಡಿ ಕೊಡುವಂತೆ ಕೋರಿ, ನಗರಸಭೆಯ ಅಧ್ಯಕ್ಷರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮಂಡ್ಯದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ನೇಹಾ'ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಕುರಿತು, ಮೈಸೂರಿನ ಕುವೆಂಪುನಗರದಲ್ಲಿ ವಾಸವಾಗಿರುವ 'ಜ್ಯೋತಿ' ಎಂಬ ಹೆಸರಿನ ತಾಯಿಗೆ ಪತ್ರವನ್ನು ಬರೆಯಿರಿ.

XV. ಕೆಳಗಿನ ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1x5=5

45. ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ.

ಅಥವಾ

ಶಾಲೆಯಲ್ಲಿ ಭಾಷಾ ಸಂಘದ ಕಾರ್ಯ ಚಟುವಟಿಕೆಗಳು.